ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ನವೆಂಬರ್ 19, 2008 ರೂ. 12/-



ನುತಾ ಶ್ರೀನಿವಾಸ್

ಶ್ರೀಧರ ಗುಡ್ಡದ ಮಾಯಾಂಗನೆ



ರವಿಗೆ ಈಶ್ವರಪ್ಪ ಗೂಸಾ



ಬಾಗಲಕೋಟೆ ತುಘಲಕ್ DYSP ನಾಯಕ್



KMF ಹಾಲಿಗೆ ಯಡ್ಡಿ ವಿಷ



ಪೇಜಾವರರಿಗೆ ಸವಾಲ್


ಒಬಾಮಾ ಬಗಲಲ್ಲಿ ಹಿಂದೂತ್ವವಾದಿ ಸೋನಲ್ ಶಾ



ಮೊನ್ನೆಯ ಅಮೆರಿಕದ ಚುನಾವಣೆಯಲ್ಲಿ ಜಯಭೇರಿ ಬಾರಿಸಿ ಇತಿಹಾಸವನ್ನು ಸೃಷ್ಟಿಸಿದ ಬರಾಕ್ ಒಬಾಮಾ ಉದಾರ ರಾಜಕೀಯ ನಿಲುವುಗಳನ್ನು ಹೊಂದಿರುವ ವ್ಯಕ್ತಿ. ಆದರೆ ಅವರು ತಮ್ಮ ಸಂಕ್ರಮಣ ತಂಡಕ್ಕೆ ನೇಮಕ ಮಾಡಿರುವ ಭಾರತೀಯ ಮೂಲದ ಸೋನಲ್ ಶಾ ಎಂಬ ಆರ್ಥಿಕ ತಜ್ಞೆ ಮಾತ್ರ ಅಪ್ಪಟ ಹಿಂದೂತ್ವವಾದಿ ಎಂಬ ವಿಷಯ ಈಗ ಎಲ್ಲರನ್ನೂ ಅಚ್ಚರಿಗೊಳಿಸಿದೆ.

ಸೋನಲ್‌ಳ ತಂದೆ ರಮೇಶ್ ಅಮೆರಿಕದ ಟೆಕ್ಸಾಸ್ ರಾಜ್ಯದಲ್ಲಿ ಕಳೆದ ನಾಲ್ಕು ದಶಕಗಳಿಂದ ನೆಲೆಸಿದ್ದರೂ ಆ ಕುಟುಂಬ ವಿಶ್ವ ಹಿಂದೂ ಪರಿಷತ್‌ನಂತಹ ಅಪ್ಪಟ ಕೋಮುವಾದಿ ಸಂಘಟನೆಯೊಂದಿಗೆ ಗಳಸ್ಯ-ಕಂಠಸ್ಯ ಸಂಬಂಧ ಹೊಂದಿದೆ.

ಉದಾಹರಣೆಗೆ ರಮೇಶ್ ಶಾ ವೃತ್ತಿಯಲ್ಲಿ ಮೆಕಾನಿಕ್ ಇಂಜಿನಿಯರ್ ಆಗಿದ್ದರೂ ಆತ ವಿಶ್ವ ಹಿಂದೂ ಪರಿಷತ್ತಿನ ಆಡಳಿತ ಸಮಿತಿಯ ಸದಸ್ಯ. ಅಷ್ಟೇ ಅಲ್ಲ, ಭಾರತೀಯ ಜನತಾ ಪಕ್ಷದ



ಸಾಗರೋತ್ತರ ಸ್ನೇಹಿತರು ಎಂಬ ಸಂಘಟನೆಯ ಉಪಾಧ್ಯಕ್ಷ ಕೂಡ. 2004ರಲ್ಲಿ ನಡೆದ ಚುನಾವಣೆಯಲ್ಲಿ ರಮೇಶ್ ಶಾ ಎಲ್.ಕೆ. ಅಡ್ವಾಣಿ ಪರವಾಗಿ ಗಾಂಧಿನಗರ ಮತಕ್ಷೇತ್ರದಲ್ಲಿ ಪ್ರಚಾರಾಂದೋಲನ ನಡೆಸಿದ್ದನಲ್ಲದೆ, ಅಡ್ವಾಣಿಯ 'ಭಾರತ ಉದಯ ಯಾತ್ರೆ' ಎಂಬ ದೇಶಾದ್ಯಂತ ನಡೆದ ಯಾತ್ರೆಯಲ್ಲೂ ಸಾಕಷ್ಟು ಮಟ್ಟಿಗೆ ಭಾಗವಹಿಸಿದ್ದ.

ರಮೇಶನ ಮಗಳಾದ ಸೋನಲ್ ಕೂಡ ಕಡಿಮೆ ಏನಲ್ಲ. ಚಿಕಾಗೋ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿದ ಈಕೆ ಹಲವಾರು ವರ್ಷಗಳ ಕಾಲ ವಿಶ್ವ ಹಿಂದೂ ಪರಿಷತ್ತಿನ ಅಮೆರಿಕ ಘಟಕದ ರಾಷ್ಟ್ರೀಯ ಸಂಯೋಜಕಳಾಗಿದ್ದಳು. ಜೊತೆಗೆ ಬಿಜೆಪಿಯ ಸಾಗರೋತ್ತರ ಸ್ನೇಹಿತರ ಸಂಘಟನೆಯ ಸಕ್ರಿಯ ಸದಸ್ಯೆ ಕೂಡ ಆಗಿದ್ದಳು.

ಇದೆಲ್ಲಕ್ಕಿಂತ ಆಘಾತಕಾರಿ ವಿಷಯ ಯಾವುದೆಂದರೆ, ಸಂಘಪರಿವಾರದ ಮತ್ತೊಂದು ಅಪಾಯಕಾರಿ ಸಂಘಟನೆಯಾದ ವನವಾಸಿ ಕಲ್ಯಾಣ ಪರಿಷತ್‌ನೊಂದಿಗೆ ಇವತ್ತಿಗೂ ಈಕೆಗಿರುವ ನಂಟು. ಈಗ ಎಲ್ಲರಿಗೂ ಗೊತ್ತಿರುವಂತೆ ಈ ವನವಾಸಿ ಕಲ್ಯಾಣ ಪರಿಷತ್ ತನ್ನ ಏಕಲ್ ವಿದ್ಯಾಲಯ ಸಂಸ್ಥೆಯ ಮೂಲಕ ಆದಿವಾಸಿ ಮಕ್ಕಳಿಗೆ ಶಾಲೆಗಳನ್ನು ನಡೆಸುತ್ತಿದೆ ಎಂದು ಹೇಳಿಕೊಂಡರೂ ವಾಸ್ತವವಾಗಿ ಅದು ಕ್ರಿಶ್ಚಿಯನ್ ಧರ್ಮವನ್ನು ಸೇರಿರುವ ಆದಿವಾಸಿಗಳನ್ನು ಬಲವಂತವಾಗಿ ಹಿಂದೂ ಧರ್ಮಕ್ಕೆ 'ಮತಾಂತರಿಸುವ' ಕಾರ್ಯದಲ್ಲಿಯೇ ಹೆಚ್ಚು ತೊಡಗಿದೆ.

ಸೋನಲ್ ತನ್ನ ಸಹೋದರ ಆನಂದ್‌ನೊಂದಿಗೆ ಸೇರಿಕೊಂಡು 'ಇಂಡಿಕಾರ್ಪ್ಸ್' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದ್ದಾಳೆ. ಹೇಗಿದ್ದರೂ ಭಾರತವನ್ನು ತ್ಯಜಿಸಿ ಅಮೆರಿಕದಲ್ಲಿ ಐಷಾರಾಮಿ ಬದುಕನ್ನು ನಡೆಸುತ್ತಿರುವ ಅನಿವಾಸಿ ಭಾರತೀಯರಿಗೆ ಪಾಪ ತಮ್ಮ ಭಾರತ ಮಾತೆಗೆ ಸೇವೆ ಸಲ್ಲಿಸುವ ಹೆಬ್ಬಯಕೆ ಇದ್ದೇ ಇರುತ್ತದೆ. ಇದನ್ನೇ ಬಂಡವಾಳ ಮಾಡಿಕೊಂಡು ಸೋನಲ್‌ಳ ಇಂಡಿಕಾರ್ಪ್ಸ್ ಅವರಿಂದ ಹಣವನ್ನೆತ್ತಿ ವನವಾಸಿ ಕಲ್ಯಾಣ ಪರಿಷತ್ತಿಗೆ ಕಳುಹಿಸುತ್ತದೆ. ಅಷ್ಟೇ ಅಲ್ಲ, ಆಸಕ್ತಿ ಹೊಂದಿರುವ ಅನಿವಾಸಿ ಭಾರತೀಯರು ಇಲ್ಲಿಗೆ ಬಂದು ಏಕಲ್ ವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸಲು ಅನುವು ಮಾಡಿಕೊಡುತ್ತದೆ. ವನವಾಸಿ ಕಲ್ಯಾಣ ಪರಿಷತ್ ಬಹಿರಂಗವಾಗಿ ಘೋಷಿಸಿಕೊಂಡಿರುವ ಪ್ರಕಾರ ಈ ಏಕಲ್ ವಿದ್ಯಾಲಯಗಳ ಮೂಲ ಉದ್ದೇಶ ಆದಿವಾಸಿ ಮಕ್ಕಳಲ್ಲಿ "ಹಿಂದೂ ಸಂಸ್ಕೃತಿ"ಯನ್ನೇ ಬಿತ್ತುವುದಾಗಿದೆ.

ಸೋನಲ್ ಶಾಳ ಇಂಡಿಕಾರ್ಪ್ಸ್ ಸಂಘಟನೆ ಬಗ್ಗೆ ಅಲ್ಲಿನ ಪ್ರಗತಿಪರ ಭಾರತೀಯರು ಬಹಳಷ್ಟು ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಅವರುಗಳಲ್ಲಿ ವಿಜಯ್ ಪ್ರಸಾದ್ ಎಂಬುವವರೂ ಒಬ್ಬರು. ಇವರು ಒಂದು ಸಭೆಯಲ್ಲಿ ಹಿಂದೂತ್ವವಾದಿ ಸಂಘಟನೆಗಳೊಂದಿಗೆ ಸೋನಲ್‌ಶಾಳ ನಂಟನ್ನು ಪ್ರಶ್ನಿಸಿದ್ದರಲ್ಲದೆ, ಆಕೆಯ ಇಂಡಿಕಾರ್ಪ್ಸ್ ಬಗ್ಗೆಯೂ ಎಚ್ಚರದಿಂದಿರಬೇಕು ಎಂದು ಹೇಳಿದ್ದರು. ಇದರಿಂದಾಗಿ ಪ್ರಸಾದ್ ಮತ್ತು ಸೋನಾಲ್ ನಡುವೆ ದೊಡ್ಡ ಜಗಳವೇ ನಡೆದಿತ್ತಾದರೂ ಆಕೆ ಪ್ರಸಾದರ ಸಂಶಯಗಳನ್ನು ನಿವಾರಿಸುವಂತಹ ಯಾವುದೇ ಪದಗಳನ್ನು ನುಡಿದಿರಲಿಲ್ಲ.

ಈ ಸೋನಲ್ ಶಾ ಚೆಡ್ಡಿಗಳಿಗೆ ಎಷ್ಟು ಆಪ್ತಳೆಂದರೆ 2004ರಲ್ಲಿ ಗುಜರಾತ್ ರಾಜ್ಯ ಸರಕಾರ ಅವಳಿಗೆ "ಗುಜರಾತಿನ ಹೆಮ್ಮೆ" ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಆಕೆ ಆ ಪ್ರಶಸ್ತಿಯನ್ನು ಸ್ವೀಕರಿಸಲು ಭಾರತಕ್ಕೆ ಬಾರದಿದ್ದಾಗ ಅವಳ ಸಹೋದರ ಆಕೆಯ ಪರವಾಗಿ ಅದನ್ನು ಅಂದಿನ ಪ್ರಧಾನಿ ವಾಜಪೇಯಿ ಅವರಿಂದ, ನರಹಂತಕ ನರೇಂದ್ರ ಮೋದಿಯ ಸಾನಿಧ್ಯದಲ್ಲಿ ಸ್ವೀಕರಿಸಿದ್ದ.

ಅಂದಹಾಗೆ ಓಬಾಮಾ ತಂಡದಲ್ಲಿ ಈ ಸೋನಲ್ ಶಾಳಿಗೆ ಸ್ಥಾನ ಸಿಕ್ಕಿರುವುದರಿಂದ ಮೋದಿಯ ಹಿಂಬಾಲಕರು ಸಂತೋಷಗೊಂಡಿದ್ದಾರೆ. ಗುಜರಾತಿನ ಕೋಮುಗಲಭೆ ಮತ್ತು ಅನ್ಯಧರ್ಮಿಯರ ಮೇಲೆ ಮೋದಿ ನಡೆಸಿದ್ದ ಮಾರಣಹೋಮದಿಂದ ಅಮೆರಿಕ ಸರ್ಕಾರ ಈ ಹಿಂದೆ ಆತನಿಗೆ ವೀಸಾ ನಿರಾಕರಿಸಿತ್ತು. ಆದರೆ ಈ ಸೋನಾಲ್ ಶಾಳೆ ಅಧ್ಯಕ್ಷನ ತಂಡದಲ್ಲಿರುವುದರಿಂದ ಮೋದಿಗೆ ಅಮೆರಿಕ ವೀಸಾ ಸಿಗುತ್ತದೆ ಎಂಬ ಆಶೆ ಅವರದ್ದು. ■



"ನಾನು ನಿಮಗೆಂದು ಡ್ಯಾನ್ಸ್ ಮಾಡಿದ್ದೇನೆ, ಫೈಟ್ ಮಾಡಿದ್ದೇನೆ. ನಿಮ್ಮನ್ನೆಂದೂ ನಾನು ಬಿಟ್ಟಿರಲಾರೆ."

-ತಮಿಳು ಸೂಪರ್ ಸ್ಟಾರ್ ರಜನೀಕಾಂತ್, ದೇವರು ಆದೇಶಿಸಿದರೆ ರಾಜಕೀಯವನ್ನು ಪ್ರವೇಶಿಸುವುದಾಗಿ ತಮ್ಮ ಅಭಿಮಾನಿಗಳಿಗೆ ಹೇಳುವಾಗ.

"ನನಗೆ ಕರ್ನಾಟಕದಲ್ಲಿ ಮೈಸೂರು ಪೇಟ ಕೊಡುತ್ತಿದ್ದರು. ಈಗ ಕಿರೀಟವನ್ನೇ ನೀಡಿದ್ದಾರೆ."

-ಹಂಪಿ ಉತ್ಸವದಲ್ಲಿ ಭಾಗವಹಿಸಿದ್ದ ಎಲ್.ಕೆ. ಅಡ್ವಾಣಿ.

"ನರೇಂದ್ರ ಮೋದಿ ಹಿಂದೂ ವಿರೋಧಿ. ಆತ ಅಲ್ಪಸಂಖ್ಯಾತರನ್ನು ಓಲೈಸುತ್ತಿದ್ದಾನೆ."


-ಗುಜರಾತಿನ ವಿಶ್ವಹಿಂದೂ ಪರಿಷತ್

"ಸಾಧ್ವಿ ಪ್ರಗ್ನಾಳ ಪರಿಚಯ ನನಗಿಲ್ಲ, ಆದರೆ ಆಕೆ ಹಿಂದೂ ಆಗಿರುವುದರಿಂದ ಅವಳು ಭಯೋತ್ಪಾದಕಿ ಆಗಿರುವ ಸಾಧ್ಯತೆಗಳಿಲ್ಲ."

-ಪ್ರವೀಣ್ ತೊಗಾಡಿಯಾ, ವಿಶ್ವಹಿಂದೂ ಪರಿಷತ್ ನಾಯಕ

ಅಭಿನವ ಭಾರತ ಎಂಬ ಹಿಂದೂತ್ವವಾದಿ ಸಂಘಟನೆ ಬಗ್ಗೆ ಕಳೆದ ವಾರ 'ಕಂಡಹಾಗೆ' ಅಂಕಣದಲ್ಲಿ ಗೌರಿ ಬರೆದಿದ್ದರು. ಆ ಸಂಘಟನೆಯ ಅಧ್ಯಕ್ಷೆ ಹಿಮಾಣಿ ಸಾವರ್ಕರ್ (ಈಕೆ ಮಹಾತ್ಮಾ ಗಾಂಧಿಯನ್ನು ಕೊಂದಿದ್ದ ನಾಥೂರಾಮ್ ಗೋಡ್ಸೆಯ ಅಣ್ಣ ಗೋಪಾಲ್ ಗೋಡ್ಸೆಯ ಮಗಳು ಮತ್ತು ಗಾಂಧಿ ಕೊಲೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ ವಿ.ಡಿ. ಸಾವರ್ಕರ್‌ನ ಸಹೋದರರ ಸೊಸೆ ಕೂಡ ಹೌದು) ಎಂಬ ಮಹಿಳೆ ಎಂತಹ ಮೂಲಭೂತವಾದಿ ಎಂದೂ ಆ ಅಂಕಣದಲ್ಲಿ ದಾಖಲಿಸಲಾಗಿತ್ತು.

ಈ ಹಿಮಾಣಿ ಸಾವರ್ಕರ್ ಇತ್ತೀಚೆಗೆ ಔಟ್‌ಲುಕ್ ಪತ್ರಿಕೆಗೆ ಸಂದರ್ಶನ ನೀಡಿ ತನ್ನ ಅಂತರಾಳದಲ್ಲಿ ಹುದುಗಿರುವ ದ್ವೇಷವನ್ನು ಕಾರಿಕೊಂಡಿದ್ದಾಳೆ. ಆ ಸಂದರ್ಶನದ ಹಲವು ಸಾಲುಗಳನ್ನು ಇಲ್ಲಿ ನೀಡುತ್ತಿದ್ದೇವೆ:



ಹಿಮಾಣಿ

"ಸಮೀರ್ ಕುಲಕರ್ಣಿ (ಮಾಲೆಗಾಂವ್ ಬಾಂಬ್ ಸ್ಫೋಟದಲ್ಲಿ ಶಂಕಿತ ಮತ್ತು ಬಂಧನಕ್ಕೊಳಗಾಗಿರುವವರೆಲ್ಲಾ ಉಗ್ರ) ದೇಶಪ್ರೇಮಿಗಳು. ಆದರೆ ಅವರನ್ನು ಆರೋಪಿಗಳೆಂದು ಹೇಳುವ ಮೂಲಕ ಸರ್ಕಾರ ಹಿಂದೂಗಳನ್ನು ನಿಶ್ಯಕ್ತರನ್ನಾಗಿಸಲು ಪ್ರಯತ್ನಿಸುತ್ತಿದೆ. ನಮ್ಮ ದೇಶ ಮೃದುವಾಗುತ್ತಿದೆ... ಏನು?! ಇಲ್ಲಿ ಎಲ್ಲರೂ ಬಳೆಗಳನ್ನು ತೊಡಬೇಕೆ?

ಮುಸಲ್ಮಾನರಿಗೆ ಈ ದೇಶದಲ್ಲಿ ನ್ಯಾಯ ಸಿಗುತ್ತಿಲ್ಲ ಅನ್ನಿಸಿದರೆ, ಜಗತ್ತಿನಲ್ಲಿ ಅದೆಷ್ಟೋ ಮುಸಲ್ಮಾನ ದೇಶಗಳಿವೆ, ಅವರೆಲ್ಲ ಅಲ್ಲಿ ಹೋಗಿ ಬದುಕಲಿ.


ನಮ್ಮದು ಹಿಂದೂ ರಾಷ್ಟ್ರ ಎಂದು ಘೋಷಿಸಬೇಕು. ಇಲ್ಲಿ ಹಿಂದೂ ಅಲ್ಲದವರು ಎರಡನೆ ದರ್ಜೆಯ ಪ್ರಜೆಗಳಾಗಿ ಜೀವಿಸಬೇಕು."

ಇವಳನ್ನು ಮಹಿಳೆ ಎಂದು ಪರಿಗಣಿಸುವುದಾದರೂ ಹೇಗೆ?

Quote-Unquote

"ಓಬಾಮಾರ ದಿಗ್ವಿಜಯದ ನಂತರ ಪ್ರತಿ ದೇಶದಲ್ಲೂ ತಮ್ಮ ಮುಂದಿನ ಒಬಾಮಾ ಯಾರಾಗಬಹುದು ಎಂಬ ಕುತೂಹಲ ವ್ಯಕ್ತವಾಗಿದೆ. ಹಾಗೆಯೇ ಭಾರತದಲ್ಲಿ ನಮ್ಮ ಒಬಾಮಾ ಓರ್ವ ಮುಸಲ್ಮಾನನಾಗಿರಬಹುದೇ ಅಥವಾ ದಲಿತನಾಗಿರಬಹುದೇ ಎಂಬ ಜಿಜ್ಞಾಸೆಯೂ ಪ್ರಾರಂಭವಾಗಿದೆ.

ಜಾತಿ ಮತ್ತು ಧರ್ಮ ಎಂಬ ಆಯ್ಕೆ ಎದುರಾದಾಗ ಧರ್ಮ ಗೆಲ್ಲುವುದು ಕಷ್ಟ.



ಒಬಾಮ

ದೇಶದ ವಿಭಜನೆ ಹಳೆ ತಲೆಮಾರಿನವರಲ್ಲಿ ಮುಸಲ್ಮಾನರೆಂದರೆ ಪಾಕಿಸ್ತಾನಿಗಳು ಎಂಬ ಭಾವನೆ ಬಿತ್ತಿದ್ದರೆ, ಇತ್ತೀಚಿನ ವರ್ಷಗಳಲ್ಲಿ ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್‌ನ ಕ್ರಿಯೆಗಳಿಂದಾಗಿ ಮತ್ತು ದೆಹಲಿ ಹಾಗೂ ಅಹಮದಾಬಾದಿನಲ್ಲಿ ಸಂಭವಿಸಿದ ಬಾಂಬ್ ಸ್ಫೋಟಗಳಿಂದಾಗಿ ಮುಸಲ್ಮಾನರ ಬಗ್ಗೆ ಹೊಸ ಪೀಳಿಗೆಯ ಹಿಂದೂಗಳಲ್ಲಿ ಪೂರ್ವಾಗ್ರಹಗಳನ್ನು ಬಿತ್ತಿದೆ. ಮೂಡಿವೆ. ಇದೆಲ್ಲದರಿಂದಾಗಿ ಮುಸಲ್ಮಾನರು ಬೇರೆಯವರು ಎಂಬ ಪರಿಕಲ್ಪನೆ ಮೂಡಿದೆ. ಆದರೆ ದಲಿತರು ಸಾವಿರಾರು ವರ್ಷಗಳಿಂದ ನೂರಾರು ಶೋಷಣೆಗಳಿಗೆ ಗುರಿಯಾಗಿದ್ದರೂ ಅವರನ್ನು 'ಹಿಂದೂ'ಗಳೆಂದೇ ಪರಿಗಣಿಸಲಾಗಿದೆ. ಅದಕ್ಕೆ ತಕ್ಕಂತೆ ದಲಿತರಿಗೆ ಮೀಸಲಾತಿ ನೀಡಲಾಗಿದೆಯಲ್ಲದೆ, ಜಾತಿನಿಂದನೆ ಕಾನೂನುಗಳನ್ನೂ ರೂಪಿಸಲಾಗಿದೆ.

ಆದರೆ ಮುಸಲ್ಮಾನರ ಪರಿಸ್ಥಿತಿ ಹಾಗಿಲ್ಲ. ನಾವು ಅದೆಷ್ಟೇ ಮುಸಲ್ಮಾನ ರಾಷ್ಟ್ರಪತಿ, ರಾಜ್ಯಪಾಲ, ವಿವಿಧ ಸಮಿತಿಗಳ ಅಧ್ಯಕ್ಷರನ್ನು ಪ್ರದರ್ಶಿಸಿದರೂ ಅವರೆಲ್ಲ ಬರೀ ಟ್ರೋಫಿಗಳೇ.

ಮುಂದೊಂದು ದಿನ ಭಾರತದಲ್ಲೂ ಓರ್ವ ಒಬಾಮಾ ಜನಿಸಬೇಕಿದ್ದರೆ ನಾವು ನಮ್ಮ ಮುಸಲ್ಮಾನರನ್ನು ಹೇಗೆ ನಡೆಸಿಕೊಳ್ಳುತ್ತೇವೆ ಎಂಬುದು ಮುಖ್ಯ. ದಲಿತರ ರಕ್ಷಣೆಗೆ ಕಾಯ್ದೆಗಳನ್ನು ರೂಪಿಸಿರುವಂತೆ ಮುಸಲ್ಮಾನರ ರಕ್ಷಣೆಗೂ ರೂಪಿಸಬೇಕಿದೆ.

ಆದ್ದರಿಂದ ಭಾರತದ ಒಬಾಮಾ ಯಾರು ಎಂದು ಕೇಳಿಕೊಳ್ಳುವ ಮುನ್ನ ಮುಸಲ್ಮಾನರಿಗೆ ಇಲ್ಲಿ ಪರಿಪೂರ್ಣ ಪೌರತ್ವ ನೀಡಲಾಗಿದೆಯೇ ಎಂದು ನೋಡಿಕೊಳ್ಳಬೇಕಿದೆ. ಆಗ ಮಾತ್ರ ಇಲ್ಲಿನ ಮುಸಲ್ಮಾನರಲ್ಲಿ ಆತ್ಮವಿಶ್ವಾಸ ಮೂಡುತ್ತದಲ್ಲದೆ, ಹಿಂದೂಗಳನ್ನು ಕೂಡ ಉತ್ತಮ ನಾಗರಿಕರನ್ನಾಗಿಸುತ್ತದೆ."


-ದಿಪಂಕರ್ ಗುಪ್ತಾ, ಸಮಾಜ ಶಾಸ್ತ್ರಜ್ಞ

ಹೆಂಡದ ದೊರೆ ವಿಜಯ್ ಮಲ್ಯ ಜನತಾ ಪಾರ್ಟಿ ಎಂಬ ಪಕ್ಷದ ಅಧ್ಯಕ್ಷ ಕೂಡ ಆಗಿರುವುದನ್ನು ಕರ್ನಾಟಕದ ಜನರೇ ಮರೆತಿದ್ದಾರೆ. ಆದರೆ ಇದರ ಬಗ್ಗೆ ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರದ ಜನರ ಗಮನವನ್ನು ಇತ್ತೀಚೆಗೆ ಸೆಳೆದಿದ್ದಾರೆ. ಏನಾಗಿದೆ ಎಂದರೆ ಸದ್ಯದಲ್ಲೇ ಆ ರಾಜ್ಯದಲ್ಲಿ ನಡೆಯಲಿರುವ ಚುನಾವಣೆಗೆ "ಸೂಕ್ತ ಅಭ್ಯರ್ಥಿಗಳು ತಮ್ಮ ಪಕ್ಷದ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಬಹುದು" ಎಂದು ಮಲ್ಯನ ಜನತಾ ಪಾರ್ಟಿ ಮತ್ತು ಮಾಯಾವತಿಯ ಬಿಎಸ್‌ಪಿ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ನೀಡಿದ್ದವು. ಇಂತಹ ಜಾಹೀರಾತುಗಳನ್ನು ನೀಡುವ ದರ್ದು ಈ ಪಕ್ಷಗಳಿಗಿದ್ದರೆ ಆ ರಾಜ್ಯದಲ್ಲಿ ಅವುಗಳಿಗೆ ಜನ ಬೆಂಬಲ ಇಲ್ಲ ಎಂದೇ ಅರ್ಥ ಅಲ್ಲವೇ?

ಆದರೆ ಅಚ್ಚರಿ ಮೂಡಿಸುವ ಸಂಗತಿ ಯಾವುದೆಂದರೆ, ನವೆಂಬರ್ 17 ರಂದು ಮೊದಲ ಹಂತದಲ್ಲಿ ಚುನಾವಣೆಗೆ ಹೋಗುತ್ತಿರುವ ಹತ್ತು ಮತಕ್ಷೇತ್ರಗಳಿಗೆ ನೂರಕ್ಕಿಂತಲೂ ಹೆಚ್ಚು ಜನ ಅರ್ಜಿ ಸಲ್ಲಿಸಿದ್ದು, ಇದನ್ನು ನೋಡಿ, ಈ ಪಕ್ಷಗಳಿಗೆ ಅಲ್ಲಿ ಪ್ರಸ್ತುತತೆ ಇದೆಯೇ ಎಂದು ವಿಚಾರಿಸಿದವರಿಗೆ ಅದಕ್ಕಿಂತಲೂ ದೊಡ್ಡ ಅಚ್ಚರಿ ಕಾದಿತ್ತು.

ಅದೇನೆಂದರೆ ಎರಡೂ ಪಕ್ಷಗಳು ತಮ್ಮ ಅಭ್ಯರ್ಥಿಗಳಿಗೆ- ಅವರು ಗೆದ್ದರೂ ಸೈ, ಸೋತರು ಸೈ, ಹಣ ಮತ್ತು ಕಾರ್ ನೀಡುವ ಭರವಸೆ ಕೊಟ್ಟಿವೆ. ಇದರೊಂದಿಗೆ ಹೇಗಿದ್ದರೂ ಸರ್ಕಾರ ಪ್ರತಿ ಅಭ್ಯರ್ಥಿಗೆ ರಕ್ಷಣಾ ವ್ಯವಸ್ಥೆ ಮಾಡುತ್ತದಲ್ಲದೆ, ಚುನಾವಣಾ ಪ್ರಕ್ರಿಯೆ ಮುಗಿಯುವವರೆಗೆ ಶಾಸಕರ ಭವನದಲ್ಲಿ ಪುಕ್ಕಟೆಯಾಗಿ ರೂಮ್‌ಗಳನ್ನು ನೀಡಲಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಚುನಾವಣೆಯಲ್ಲಿ ಸ್ಪರ್ಧಿಸುವ ಎಲ್ಲಾ ಅಭ್ಯರ್ಥಿಗಳು ಬರುವ ಆರು ವರ್ಷಗಳ ಕಾಲ-ಅವರು ಸೋತರೂ ಪರವಾಗಿಲ್ಲ-ಸುರಕ್ಷತಾ ಹೆಸರಿನಲ್ಲಿ ನಡೆಸುವ ತಪಾಸಣೆಗಳಿಗೆ ಮುಕ್ತಿ ನೀಡಲಿದೆ.

ಈಗ ಅರ್ಥವಾಯಿತೇ ಜಮ್ಮು ಮತ್ತು ಕಾಶ್ಮೀರದಲ್ಲಿ ಮಲ್ಯ-ಮಾಯಾವತಿ ಪಕ್ಷದ ಅಭ್ಯರ್ಥಿಯಾಗಲು ಅಷ್ಟೊಂದು ಆಸಕ್ತಿ ಯಾಕೆ ಎಂದು?!



ವಿಜಯ್ ಮಲ್ಯ

ಲಂಕೇಶ್

ಒಬಾಮಾ ಹಿಂದಿನ ಕಪ್ಪು ಇತಿಹಾಸ



ಕಂಡಹಾಗೆ

■ಗೌರಿ ಲಂಕೇಶ್

ಬರಾಕ್ ಒಬಾಮಾ ಇತಿಹಾಸವನ್ನು ಸೃಷ್ಟಿಸಿದ್ದಾರೆ. ಕರಿಯನಾಗಿದ್ದರೂ ಎಲ್ಲ ಸಮುದಾಯಗಳ ಬೆಂಬಲ ಪಡೆದು ಅಧ್ಯಕ್ಷ ಚುನಾವಣೆಯಲ್ಲಿ ಗೆದ್ದಿರುವ ಒಬಾಮಾ ...ರ ಕಡೆಗಳಲ್ಲೂ ಹೊಸ ಗಾಳಿ ಬೀಸುವಂತೆ, ಹೊಸ ...ಗಳು ಅರಳುವಂತೆ ಮಾಡಿದ್ದಾರೆ.

ಅಮೆರಿಕಾ ದೇಶದಲ್ಲಿ ಕರಿಯರ ಜನಸಂಖ್ಯೆ ಪ್ರಮಾಣ ಶೇ. 12 ರಷ್ಟು ಮಾತ್ರ ಇದ್ದು ಅವರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿ ನಮ್ಮಲ್ಲಿನ ದಲಿತರಿಗಿಂತ ಭಿನ್ನವಾಗಿಲ್ಲ. ಕೇವಲ 34 ವರ್ಷಗಳ ಹಿಂದೆ ಅವರಿಗೆ ಮತದಾನದ ಹಕ್ಕು ನೀಡಲಾಗಿದ್ದು... ಇವತ್ತು ಅದೇ ಸಮುದಾಯದ ವ್ಯಕ್ತಿ ಜಗತ್ತಿನ ಅತಿಪ್ರತಿಷ್ಠಿತ ಹುದ್ದೆಯನ್ನು ಅಲಂಕರಿಸುತ್ತಾನೆಂದರೆ ಅದು ಸಾಮಾನ್ಯ ಮಾತಲ್ಲ.


ಒಬಾಮಾರ ಇವತ್ತಿನ ಯಶಸ್ಸಿನ ಹಿಂದೆ ಸುಮಾರು ...ನೂರು ವರ್ಷಗಳ ರಕ್ತಸಿಕ್ತ ಇತಿಹಾಸವಿದೆ, ಸಾವಿರಾರು ಜನರ ಬಲಿದಾನವಿದೆ, ನೂರಾರು ಹೋರಾಟಗಳಿವೆ, ಸಾವಿರಾರು ಬಂಡಾಯಗಳಿವೆ..... ಅವರೆಲ್ಲರ ಲಕ್ಷಾಂತರ ಕನಸುಗಳು ಇವತ್ತು ಒಬಾಮಾ ಗೆಲುವಿನಲ್ಲಿ ನನಸಾಗಿದೆ.


ಆಫ್ರಿಕಾ ಮೂಲದ ಕರಿಯರು ಅಮೆರಿಕಾ ದೇಶದ ...ಡಕಟ್ಟು ಜನರೂ ಅಲ್ಲ, ಅಲ್ಲಿನ ಐಷಾರಾಮಿ ಬದುಕನ್ನು ಅರಿಸಿ ಸ್ವಯಂ ಇಚ್ಛೆಯಿಂದ ಯುರೋಪಿನಿಂದ ಹೋದವರೂ ಅಲ್ಲ. ಬದಲಾಗಿ ಅಲ್ಲಿನ ಹೊಲಗಳಲ್ಲಿ ...ದುಡಿಸಿಕೊಳ್ಳಲೆಂದು ಬಲವಂತವಾಗಿ ತಂದ ಜೀತದಾಳುಗಳು ಅವರು. 1619 ರಲ್ಲಿ ಆಫ್ರಿಕಾ ಖಂಡದಿಂದ ಕರಿಯರನ್ನು ಹಡಗುಗಳಲ್ಲಿ ತಂದು ಅಮೆರಿಕಾದ ಭೂಮಾಲೀಕರಿಗೆ ಯುರೋಪಿಯನ್ನರು ಮಾರಲಾರಂಭಿಸಿದರು.

ಮೊದಮೊದಲು ಹಲವು ವರ್ಷಗಳ ಕಾಲ ಅವರನ್ನು ದುಡಿಸಿಕೊಂಡ ನಂತರ ಅವರಿಗೆ ಬಿಡುಗಡೆ ನೀಡಲಾಗುತ್ತಿತ್ತು. ಆದರೆ ಈ ಪ್ರಕ್ರಿಯೆಯಿಂದಾಗಿ ಮೂಲಭೂತ ಸೌಕರ್ಯಗಳ ಮೇಲೆ ಒತ್ತಡ ಹೆಚ್ಚಾಯಿತಲ್ಲದೆ, ಹೊಸ ಕೂಲಿಗಳನ್ನು ತರುವುದು ಕಷ್ಟವಾಗುತ್ತಿತ್ತು. ...ಗ ಅಮೆರಿಕದ ಹಲವಾರು ರಾಜ್ಯಗಳು ಕಾನೂನುಗಳನ್ನು ಜಾರಿಗೆ ತಂದು ಆಫ್ರಿಕನ್ನರನ್ನು ತಲೆತಲೆಮಾರುಗಳ ಕಾಲ ಜೀತದಾಳುಗಳಾಗಿಯೇ ಉಳಿಯುವಂತೆ ಮಾಡಿದವು.

18 ನೇ ಶತಮಾನದಲ್ಲಿ ಬ್ರಿಟನ್ನಿನ ದಬ್ಬಾಳಿಕೆ ಮತ್ತು ನಿರಂಕುಶ ಪ್ರಭುತ್ವದ ವಿರುದ್ಧ ಅಮೆರಿಕ ಸಿಡಿದೆದ್ದಾಗ, ಜೀತದಾಳುಗಳನ್ನು ಇಟ್ಟುಕೊಂಡಿರುವವರೇ ಸ್ವಾತಂತ್ರ್ಯಕ್ಕೆಂದು ಕೇಳುತ್ತಿದ್ದ ಹಿಂದಿನ ಆಘಾಡಭೂತವನ್ನು ...ವರು ಟೀಕಿಸಿದ್ದರು. ವಿಪರ್ಯಾಸವೆಂದರೆ, ಬ್ರಿಟನ್ನಿನಿಂದ ಸ್ವತಂತ್ರ್ಯ ಘೋಷಿಸಿದ 'ಡಿಕ್ಲರೇಷನ್ ಆಫ್ ಇಂಡಿಪೆಂಡೆನ್ಸ್' ...ಬ ದಾಖಲೆಗೆ ಸಹಿ ಹಾಕಿದ, ಆ ಮೂಲಕ ಮಾನವಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಹೊಸ ವ್ಯಾಖ್ಯಾನಗಳನ್ನು ನೀಡಿದ ಅಂದಿನ ಅಮೆರಿಕಾದ ಅಧ್ಯಕ್ಷ ಥಾಮಸ್ ಜೆಫರ್ಸನ್ ಸ್ವತಃ ಇನ್ನೂರು ಜೀತದಾಳುಗಳ ಮಾಲೀಕನಾಗಿದ್ದ!

ಅಷ್ಟೊತ್ತಿಗಾಗಲೇ ಗುಲಾಮಗಿರಿಯಿಂದ ಸ್ವಾತಂತ್ರ್ಯಕ್ಕೆಂದು ಕೋರುತ್ತಿದ್ದ ಕರಿಯರು ಇದರಿಂದ ವಿಚಲಿತರಾಗಲಿಲ್ಲ. ಬದಲಾಗಿ ಅಮೆರಿದ ಕ್ರಾಂತಿಯಲ್ಲಿ ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದರು. ಅಷ್ಟೇ ಅಲ್ಲ ಈ ಕ್ರಾಂತಿಯ ಭಾಗವಾಗಿ ಬಾಸ್ಟನ್ ನಗರದಲ್ಲಿ ನಡೆದ ಹತ್ಯಾಕಾಂಡದಲ್ಲಿ ಮೊದಲು ಬಲಿಯಾಗಿದ್ದು ಕ್ರಿಸ್ಪಸ್ ಅಟ್ಟುಕ್ಸ್ ಎಂಬ ಕರಿಯ ...ಕ. ಬಿಳಿಯ ಸೈನಿಕರೊಂದಿಗೆ ಹೆಗಲಿಗೆ ಹೆಗಲು





ಕೊಟ್ಟು ಸುಮಾರು ಐದು ಸಾವಿರ ಕರಿಯರು ಯುದ್ಧದಲ್ಲಿ ಹೋರಾಡಿದ್ದರು. ಆದರೆ ಜಾರ್ಜ್ ವಾಷಿಂಗ್ಟನ್ ಎಂಬಾತ 1775 ರಲ್ಲಿ ಯುದ್ಧದ ನೇತೃತ್ವವನ್ನು ವಹಿಸಿಕೊಂಡ ನಂತರ ಕರಿಯರನ್ನು ತನ್ನ ಸೈನ್ಯಕ್ಕೆ ಸೇರ್ಪಡೆಗೊಳಿಸುವುದನ್ನು ನಿಲ್ಲಿಸಿದ.

ಆದರೆ ಬ್ರಿಟಿಷರು ಮತ್ತು ಅವರ ಪರವಾಗಿದ್ದ ಲಾಯಲಿಸ್ಟ್‌ಗಳು ತಮ್ಮೊಂದಿಗೆ ಯುದ್ಧ ಮಾಡುವ ಕರಿಯರಿಗೆ ಯುದ್ಧದ ನಂತರ ಬಿಡುಗಡೆ ನೀಡುವುದಾಗಿ ಭರವಸೆ ನೀಡಿದರು. ಆಗ ಕನಿಷ್ಠ 25,000 ಕರಿಯರು ಬ್ರಿಟಿಷರೊಂದಿಗೆ ಕೈಜೋಡಿಸಿದರು. ಆದರೆ ಆ ಯುದ್ಧದಲ್ಲಿ ಅಮೆರಿಕನ್ನರು ಗೆದ್ದು, ಬ್ರಿಟಿಷರೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ತಮ್ಮ ಆಸ್ತಿಪಾಸ್ತಿಗಳನ್ನು ವಾಪಸ್ಸು ಪಡೆದರಲ್ಲದೆ, ತಮ್ಮ ಹಿಡಿತದಿಂದ ತಪ್ಪಿಸಿಕೊಂಡಿದ್ದ ಗುಲಾಮರನ್ನೂ ಮತ್ತೆ ಪಡೆದರು.

ಅಮೆರಿಕಕ್ಕೆ ಸ್ವಾತಂತ್ರ ಬಂದ ನಂತರ ಹಂತಹಂತವಾಗಿ ಕರಿಯರನ್ನು ಮೂಲೆಗುಂಪು ಮಾಡಲಾಯಿತು. ಅವರನ್ನು ಶಿಕ್ಷಣ ವಲಯದಿಂದ ಮೊದಲು ಹೊರಗಿಡಲಾಯಿತು. ಆನಂತರ ಅವರಿಗೆ ಪ್ರತ್ಯೇಕ ಸಾರ್ವಜನಿಕ ಸ್ಥಳಗಳನ್ನು ನಿಗದಿಪಡಿಸಲಾಯಿತು. ಬಿಳಿಯರು ನಡೆಸುತ್ತಿದ್ದ ಅಂಗಡಿಗಳಿಗೆ, ಹೋಟೆಲ್‌ಗಳಿಗೆ, ವ್ಯವಹಾರಗಳಿಗೆ ಕರಿಯರ ಪ್ರವೇಶವನ್ನೇ ನಿರ್ಬಂಧಿಸಲಾಯಿತು. 1808 ರಲ್ಲಿ ಅಮೆರಿಕ ಸರ್ಕಾರವು ಗುಲಾಮರನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿತಾದರೂ ತನ್ನ ದೇಶದಲ್ಲೇ ಇದ್ದ ಕರಿಯರ ಶೋಷಣೆಯನ್ನು ಮಾತ್ರ ಮುಂದುವರೆಸಿತು.

ಆದರೆ ಅದರ ನಡುವೆಯೂ ಕರಿಯರು ಸ್ವಾವಲಂಬಿಗಳಾಗಿ ಬದುಕಲು ಯತ್ನಿಸಿದರು. ತಮ್ಮ ಮಕ್ಕಳಿಗೆಂದು ತಮ್ಮದೇ ಶಾಲೆಗಳನ್ನು ತೆರೆದರು, ತಮ್ಮದೇ ಆದ ಚರ್ಚ್‌ಗಳನ್ನು ಸ್ಥಾಪಿಸಿಕೊಂಡರು. ಕರಿಯರ ಅಂಗಡಿಗಳು, ಚಿಕ್ಕಪುಟ್ಟ ಪತ್ರಿಕೆಗಳು ಪ್ರಾರಂಭವಾದವು.

ಅವರ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿದ್ದು ಅಮೆರಿಕದ ಆಂತರಿಕ ಯುದ್ಧ ಅಂತ್ಯಗೊಂಡ ನಂತರ. 1865 ರಲ್ಲಿ ಅಂದಿನ ಅಧ್ಯಕ್ಷ ಅಬ್ರಹಾಂ ಲಿಂಕನ್ ಸಂವಿಧಾನದಲ್ಲಿ ತಿದ್ದುಪಡಿ ತಂದು ಗುಲಾಮರನ್ನು ಇಟ್ಟುಕೊಂಡಿರುವುದನ್ನು ನಿಷೇಧಿಸಿದರು. 1868 ರಲ್ಲಿ ಕರಿಯರಿಗೆ ಪೌರತ್ವ ನೀಡಲಾಯಿತು. 1870 ರಲ್ಲಿ ಕರಿಯ ಪುರುಷರಿಗೆ ಮತದಾನದ ಹಕ್ಕನ್ನು ನೀಡಲಾಯಿತು.

ಆದರೆ ಇದನ್ನು ಬಹಳಷ್ಟು ಬಿಳಿಯರು ಒಪ್ಪಿಕೊಳ್ಳಲಿಲ್ಲ. ಅಷ್ಟೇ ಅಲ್ಲ, ಕರಿಯ ಪುರುಷರು ತಮ್ಮ ಮತ ಚಲಾಯಿಸದಂತೆ, ಆ ಮೂಲಕ ರಾಜಕೀಯ ರಂಗದಲ್ಲಿ ತಮ್ಮ ಅಸ್ತಿತ್ವವನ್ನು ಸಾಬೀತುಪಡಿಸದಂತೆ ವಿವಿಧ ರಾಜ್ಯಗಳಲ್ಲಿ ಹೊಸ ಕಾನೂನುಗಳನ್ನು ರಚಿಸಿಕೊಂಡರು. ಉದಾಹರಣೆಗೆ ಮತದಾನ ಚಲಾಯಿಸಲು ತೆರಿಗೆ ಪತ್ರ, ವಿಳಾಸ ಪತ್ರ, ಕೊನೆಗೆ ಸಾಕ್ಷರತಾ ಪತ್ರಗಳೂ ಬೇಕೆಂದು ಕಾನೂನು ಮಾಡಿದರು. ಇಂತಹ ಕ್ರಮಗಳ ವಿರುದ್ಧ ದನಿ ಎತ್ತಿದ ಕರಿಯರನ್ನು ಅಪಾರ ಸಂಖ್ಯೆಯಲ್ಲಿ ಬಿಳಿಯರ ಗೂಂಡಾಪಡೆಗಳು ಕೊಂದು ಹಾಕಿದವು.

ಅದರಲ್ಲೂ ಅಮೆರಿಕಾದ ದಕ್ಷಿಣ ಪ್ರಾಂತ್ಯದಲ್ಲಿರುವ ರಾಜ್ಯಗಳು ಕರಿಯರ ದಮನದಲ್ಲಿ ದಾಖಲೆಗಳನ್ನೇ ಸೃಷ್ಟಿಸಿದವು. ಸಾರಿಗೆ ವ್ಯವಸ್ಥೆ ಶಾಲೆ, ಹೋಟೆಲ್ ಮತ್ತು ಇತರೆ ಸಾರ್ವಜನಿಕ ಸ್ಥಳಗಳಿಂದ ಕರಿಯರನ್ನು ಹೊರಗಿಟ್ಟಿದ್ದಲ್ಲದೆ, ಶಾಲಾ ಮಕ್ಕಳಿಗೆ ಕರಿಯರು ಅಯೋಗ್ಯರು ಎಂದೇ ಪಾಠ ಹೇಳಿಕೊಡುತ್ತಿದ್ದರು. ಅಬ್ರಹಾಂ ಲಿಂಕನ್‌ನಿಂದಾಗಿ ಕರಿಯರು ಗುಲಾಮಗಿರಿಯಿಂದ ಮುಕ್ತಿ ಪಡೆದಿದ್ದರೂ ದಶಕಗಳ ಕಾಲ ಅವರು ರೈತ ಕೂಲಿಗಳಾಗಿ, ಮನೆ ಕೆಲಸದವರಾಗಿ, ಜವಾನರಾಗಿ ದುಡಿಯುತ್ತಾ ಬಡತನದಲ್ಲೇ ಬದುಕುತ್ತಿದ್ದರು.

ಈ ಮಧ್ಯೆ ಬಿಳಿಯರ ಪರಮಾಧಿಕಾರವನ್ನು ಸ್ಥಾಪಿಸುವ ಉದ್ದೇಶದಿಂದ ಕು ಕ್ಲಕ್ಸ್ ಕ್ಲಾನ್ ಎಂಬ ಭಯೋತ್ಪಾದಕ ಸಂಘಟನೆ ಜನ್ಮವೆತ್ತಿ ಕರಿಯರ ಮೇಲೆ ವ್ಯವಸ್ಥಿತ ದಾಳಿ ಪ್ರಾರಂಭಿಸಿತ್ತು. ಆಗ ನಡೆದ ಸ್ಫೋಟಗಳು, ಗಲಭೆಗಳು ಮತ್ತು ಜೀವಂತವಾಗಿ ಕೊಚ್ಚಿ ಹಾಕಿದ ಪ್ರಕರಣಗಳಲ್ಲಿ ಸಾವಿರಾರು ಕರಿಯರು ಮಡಿದರು. ಕೆಲ ವರ್ಷಗಳ ನಂತರ ಕು ಕ್ಲಕ್ಸ್ ಕ್ಲಾನ್ ಅನ್ನು ನಿಷೇಧಿಸಲಾಯಿತಾದರೂ ಅದರ ಜಾಗದಲ್ಲಿ ವೈಟ್ ಲೀಗ್ ಮತ್ತು ರೆಡ್ ಶರ್ಟ್‌ದಂತಹ ಸಂಘಟನೆಗಳು ಹುಟ್ಟಿಕೊಂಡವು. ಆ ಸಂಘಟನೆಗಳ ಸಾವಿರಾರು ಸದಸ್ಯರು ನೂರಾರು ಕೊಲೆ ಪ್ರಕರಣಗಳಲ್ಲಿ ಭಾಗಿಯಾಗಿದ್ದರೂ, ಕೇವಲ 50 ಜನರನ್ನು ಬಂಧಿಸಿ ಅವರಲ್ಲಿ ನಾಲ್ವರಿಗೆ ಮಾತ್ರ ಶಿಕ್ಷೆ ವಿಧಿಸಲಾಗಿತ್ತು.

ಇದೆಲ್ಲ ದಕ್ಷಿಣ ಪ್ರಾಂತ್ಯಗಳಲ್ಲೇ ಹೆಚ್ಚಾಗಿದ್ದು 20 ನೇ ಶತಮಾನದ ಆರಂಭದಲ್ಲಿ ಕರಿಯರು ಉತ್ತರ ರಾಜ್ಯಗಳಿಗೆ ಅಪಾರ ಸಂಖ್ಯೆಯಲ್ಲಿ ವಲಸೆ ಹೋಗಲಾರಂಭಿಸಿದರು. ಒಂದು ಅಂದಾಜಿನ ಪ್ರಕಾರ ಅಂದು ಸುಮಾರು ಐವತ್ತು ಲಕ್ಷ ಕರಿಯರು ದಕ್ಷಿಣ ಪ್ರಾಂತ್ಯಗಳನ್ನು ತೊರೆದರು. ಉತ್ತರ ರಾಜ್ಯಗಳ ಕೆಲ ನಗರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇವರು ನೆಲೆಸಿದ್ದು ಅವುಗಳು ಅವರ ಸಾಂಸ್ಕೃತಿಕ ಕೇಂದ್ರಗಳಾಗಿ ಬೆಳೆದವು. ಮೊನ್ನೆ ನವೆಂಬರ್ ನಾಲ್ಕರ ರಾತ್ರಿ ಬರಾಕ್ ಒಬಾಮಾ ತನ್ನ "ವಿಕ್ಟರಿ ಭಾಷಣ"ವನ್ನು ಮಾಡಿದರಲ್ಲ, ಚಿಕಾಗೋ ನಗರದಲ್ಲಿ, ಆ ಚಿಕಾಗೊ ನಗರವೇ ಅಂದು ಅಮೆರಿಕದ ಕರಿಯರ ರಾಜಧಾನಿಯಂತಾಗಿತ್ತು!

ಕರಿಯರಿಗೆ ಅಮೆರಿಕಾದ ಸಾರ್ವಜನಿಕ ಜೀವನದಲ್ಲಿ ಯಾವ ಸ್ಥಾನವನ್ನೂ ಅಲ್ಲಿನ ಸರ್ಕಾರ ನೀಡಿರದಿದ್ದರೂ, ಎರಡನೆ ಮಹಾಯುದ್ಧದಲ್ಲಿ ಕರಿಯರು ಅಮೆರಿಕಾ ಪರವಾಗಿ ಯುದ್ಧದಲ್ಲಿ ಭಾಗವಹಿಸಿದರು. ಅದೂ ಹೇಗೆ ಅಂದರೆ ಅಮೆರಿಕಾ ಸೈನ್ಯದಲ್ಲಿ ಬಿಳಿ ಸೈನಿಕರದ್ದೇ ಪ್ರತ್ಯೇಕ ತಂಡ, ಕರಿಯರದ್ದೇ ಪ್ರತ್ಯೇಕ ತಂಡಗಳಿದ್ದವು. ಆದರೂ ಆ ಯುದ್ಧದಲ್ಲಿ ಕರಿಯರು ಎಷ್ಟು ಧೈರ್ಯದಿಂದ ಹೋರಾಡಿದರೆಂದರೆ ಯುದ್ಧದ ನಂತರ ಅಧ್ಯಕ್ಷ ಹ್ಯಾರಿ ಎಸ್. ಟ್ರೂಮನ್ ಅಮೆರಿಕಾ ಸೈನ್ಯದಲ್ಲಿನ ವರ್ಣಭೇದ ನೀತಿಯನ್ನು ರದ್ದುಗೊಳಿಸಿದರು.

ಆದರೆ ಅಮೆರಿಕಾ ಸಮಾಜದಲ್ಲಿ ವರ್ಣಭೇದ ಮುಂದುವರೆದಿತ್ತು. ಅದರ ವಿರುದ್ಧ ಕರಿಯರು ಮಾನವ ಹಕ್ಕುಗಳಿಗಾಗಿ, ಮತದಾನದ ಹಕ್ಕಿಗಾಗಿ ಅಹಿಂಸಾತ್ಮಕ ಹೋರಾಟಗಳನ್ನೂ, ಅಸಹಕಾರ ಚಳವಳಿಗಳನ್ನು ಮುಂದುವರೆಸಿದ್ದರು. ಆಗ ಅವರಿಗೆ ಸಿಗುತ್ತಿದ್ದದ್ದು ಲಾಠಿ ಏಟು, ಎಲೆಟ್ರಿಕ್ ಶಾಕ್ ಮತ್ತು ಸಾಮೂಹಿಕ ಬಂಧನ ಮಾತ್ರ.


ಕರಿಯರ ಇಂತಹ ಹೋರಾಟಗಳ ಬಗ್ಗೆ ಬಿಳಿಯರಲ್ಲಿ ಎಂತಹ ಅಸಮಾಧಾನ ಇತ್ತೆಂದರೆ ಅದು ಹಲವೊಮ್ಮೆ ವಿಕೋಪಕ್ಕೆ ಹೋಗುತ್ತಿತ್ತು. ಉದಾಹರಣೆಗೆ ಒಮ್ಮೆ ಕರಿಯರಿಗೆ ಸಾರ್ವಜನಿಕ ಶಾಲೆಗಳಲ್ಲಿ ಪ್ರವೇಶ ನಿರಾಕರಿಸುವುದನ್ನು ಪ್ರಶ್ನಿಸಿ ಒಂದು ಮೊಕದ್ದಮೆಯನ್ನು ಹೂಡಲಾಗಿದ್ದು ಅದು ಅಮೆರಿಕದ ಸುಪ್ರೀಂಕೋರ್ಟ್ ಮುಂದೆ ಬಂದಿತ್ತು. ಆಗ ಕೋರ್ಟ್ ಅಕಸ್ಮಾತ್ ತಮ್ಮ ವಿರುದ್ಧ ತೀರ್ಪು ನೀಡಿದರೆ ಎಂದು ಹೆದರಿದ ಎಲ್ಲಾ ಬಿಳಿಯರು ಎಲ್ಲ ಶಾಲೆಗಳನ್ನು ಇದ್ದಕ್ಕಿದ್ದಂತೆ ಬಂದ್ ಮಾಡಿದರು. ಬಿಳಿಯರ ಮಕ್ಕಳು ಖಾಸಗಿ ಶಾಲೆಗಳನ್ನು ಸೇರಿಕೊಂಡರೆ, ಬಡವರಾದ ಕರಿಯರು ಮಕ್ಕಳಿಗೆ ಶಾಲೆಯೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಕೊನೆಗೆ ಐದು ವರ್ಷಗಳ ನಂತರ ಕೋರ್ಟ್ ಆದೇಶ ನೀಡಿದ್ದರಿಂದಲೇ ಸಾರ್ವಜನಿಕ ಶಾಲೆಗಳು ತಮ್ಮ ಬಾಗಿಲನ್ನು ತೆರೆದಿದ್ದವು.

ತಮ್ಮ ಹಕ್ಕುಗಳಿಗಾಗಿ ಕರಿಯರು ನಡೆಸುತ್ತಿದ್ದ ಹೋರಾಟ ಉತ್ತುಂಗ ತಲುಪಿದ್ದು ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಎಂಬ ಪಾದ್ರಿಯ ನೇತೃತ್ವದಲ್ಲಿ. 1955 ರಲ್ಲಿ ರೋಸಾ ಪಾರ್ಕ್ಸ್ ಎಂಬ ಕಪ್ಪು ಮಹಿಳೆ ಮಾಂಟ್‌ಗೊಮೆರಿ ಎಂಬ ನಗರದಲ್ಲಿ ಒಂದು ದೊಡ್ಡ ಹೋರಾಟಕ್ಕೆ ನಾಂದಿ ಹಾಡಿದಳು. ಅಂದು ಆಕೆ ಪ್ರಯಾಣಿಸುತ್ತಿದ್ದ ಬಸ್‌ನಲ್ಲಿ ಆಕೆ ಬಿಳಿ ಪುರುಷನೊಬ್ಬನಿಗೆ ತನ್ನ ಸ್ಥಾನ ನೀಡಲು ನಿರಾಕರಿಸಿದಳು. ಈ ಉದ್ಧಟತನಕ್ಕೆ ರೋಸಾಳನ್ನು ಬಂಧಿಸಲಾಯಿತು. ಇದು ಕಿಂಗ್ ಅವರಿಗೆ ಗೊತ್ತಾಗಿ ಮಾಂಟ್‌ಗೊಮೆರಿ ನಗರದ ಸಾರಿಗೆ ವ್ಯವಸ್ಥೆಗೆ ಕರಿಯರು ಧಿಕ್ಕಾರ ಹೇಳುವಂತೆ ಮಾಡಿದರು. ಈ ಚಳವಳಿ ಎಲ್ಲೆಡೆ ಹಬ್ಬಿ ಕೊನೆಗೆ ನ್ಯಾಯಾಲಯವು ಕರಿಯರ ಪರವಾಗಿ ತೀರ್ಪು ನೀಡಿತು. ಇದು ಕರಿಯರಿಗೆ ಲಭಿಸಿದ ಮೊದಲ ಯಶಸ್ಸು. ಇದಾದ ನಂತರ 1963 ರಲ್ಲಿ ಕರಿಯರಿಗೆ ಉದ್ಯೋಗ ಮತ್ತು ಸ್ವಾತಂತ್ರ್ಯ ನೀಡಬೇಕೆಂದು ಒತ್ತಾಯಿಸಿ ಕಿಂಗ್ `March on Washington' ಕರೆದಿದ್ದರು. ಅವರ ಕರೆಗೆ ಸ್ಪಂದಿಸಿ ಎರಡೂವರೆ ಲಕ್ಷ ಜನ ರಾಜಧಾನಿಯಲ್ಲಿ ಹಾಜರಾಗಿದ್ದರು. ಇಂತಹ ಸಮೂಹಿಕ ಒತ್ತಡದಿಂದ ಅಧ್ಯಕ್ಷ ಜಾನ್ ಎಫ್. ಕೆನಡಿ ಕರಿಯರಿಗೆ ವಸತಿ, ಉದ್ಯೋಗ ಮತ್ತು ಕಾರ್ಮಿಕ ಸಂಘಟನೆಗಳಲ್ಲಿ ಭೇದ ಮಾಡುವುದನ್ನು ನಿಷೇಧಿಸಿದರು.

ಕರಿಯರ ನಿರ್ಣಾಯಕ ಹೋರಾಟ ನಡೆದದ್ದು 1964 ರಲ್ಲಿ. ಸಾವಿರಾರು ಆದರ್ಶವಾದಿ ಬಿಳಿ ಹಾಗೂ ಕರಿ ಯುವಕರು ಮಿಸಿಸ್ಸಿಪ್ಪಿ ರಾಜ್ಯದಲ್ಲಿ ಒಂದು ಸಾಮಾಜಿಕ ಹೋರಾಟವನ್ನೇ ನಡೆಸಲು ಮುಂದಾದರು. ಅವರೆಲ್ಲ ಆ ರಾಜ್ಯದಲ್ಲಿ 'ಸ್ವತಂತ್ರ ಶಾಲೆ'ಗಳನ್ನು ಪ್ರಾರಂಭಿಸಿ ಕರಿಯರ ಮಕ್ಕಳಿಗೆ ಸಾಕ್ಷರತೆ, ಇತಿಹಾಸ ಮತ್ತು ಪ್ರಜಾನೀತಿಗಳ ಬಗ್ಗೆ ಪಾಠ ಹೇಳಿಕೊಡಲಾರಂಭಿಸಿದರು. ಅದೇ ಹೊತ್ತಿಗೆ ಇನ್ನೂ ಹಲವಾರು ಜನ ಮತದಾರರ ಪಟ್ಟಿಯಲ್ಲಿ ಕರಿಯರ ಹೆಸರುಗಳನ್ನು ನೋಂದಾಯಿಸಲಾರಂಭಿಸಿದರು. ಆದರೆ ಆ ಯುವಕರ ಮೇಲೆ ಮತ್ತು ಅವರಿಗೆ ಆಶ್ರಯ ನೀಡಿದ್ದ ಸಂಸಾರಗಳ ಮೇಲೆ ವರ್ಣಬೇಧಿಗಳು ದಾಳಿಗಳನ್ನು ನಡೆಸಿದರು. ಆ ಗಲಭೆಗಳಲ್ಲಿ ಓರ್ವ ಕರಿಯ ಮತ್ತು ಆತನ ಸ್ನೇಹಿತರಾದ ಇಬ್ಬರು ಬಿಳಿ ಯುವಕರನ್ನು ನಿರ್ದಾಕ್ಷಿಣ್ಯವಾಗಿ ಕೊಂದು ಹಾಕಿದರು. ಈ ಕೊಲೆಗಳ ವಿರುದ್ಧ ಎಲ್ಲೆಡೆ ಪ್ರತಿಭಟನೆಗಳು ನಡೆದು ಕೊನೆಗೆ ಎಲ್ಲ ಕರಿಯರಿಗೆ ಮತದಾನ ಹಕ್ಕನ್ನು ನೀಡಲಾಯಿತು. ನೆನಪಿಡಿ, ಅಮೆರಿಕಾದಂತಹ ಅಭಿವೃದ್ಧಿ ಹೊಂದಿದ ದೇಶದಲ್ಲಿ ಅಲ್ಲಿನ ಕರಿಯರಿಗೆ ಈ ಹಕ್ಕು ಸಿಕ್ಕಿದ್ದು ಕೇವಲ 43 ವರ್ಷಗಳ ಹಿಂದೆ. ಅಂದರೆ ಭಾರತದ ದಲಿತರಿಗೆ ಈ ಹಕ್ಕು ಸಿಕ್ಕ 18 ವರ್ಷಗಳ ನಂತರ.

ಇಷ್ಟೆಲ್ಲಾ ಆದರೂ ಇವತ್ತಿಗೂ ಅಲ್ಲಿನ ಕರಿಯರ ಸ್ಥಿತಿಗತಿ ಅಷ್ಟೇನು ಚೆನ್ನಾಗಿಲ್ಲ. ಅದಕ್ಕೆ ಉದಾಹರಣೆ: ಕಳೆದ ಒಂದು ದಶಕದಿಂದ ಅಮೆರಿಕದ ಅತಿಹೆಚ್ಚು 400 ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಏಕೈಕ ಕಪ್ಪು ವ್ಯಕ್ತಿ ಓಫ್ರಾ ವಿನ್‌ಫ್ರಿ ಎಂಬ ಟಿವಿ ಸಂದರ್ಶನಗಾರ್ತಿ. ಅಷ್ಟೇ ಅಲ್ಲ, ಕರಿಯರು ಅಮೆರಿಕದ ಜನಸಂಖ್ಯೆಯಲ್ಲಿ ಶೇ. 12 ರಷ್ಟಿದ್ದರೂ ಅವರಿಗೆ ಆ ದೇಶದ ಸಂಪನ್ಮೂಲದಲ್ಲಿ ಸಿಕ್ಕಿರುವುದು ಕೇವಲ 0.25% ಮಾತ್ರ. ಹಾಗೆಯೇ, ಸಾಕ್ಷರತೆ, ಉದ್ಯೋಗದಲ್ಲಿ ಅವರು ಕನಿಷ್ಠ ಸಂಖ್ಯೆಯಲ್ಲಿದ್ದರೆ, ಅಮೆರಿಕದ ಜೈಲುಗಳಲ್ಲಿ ಮಾತ್ರ ಕರಿಯರು ಗರಿಷ್ಠ ಸಂಖ್ಯೆಯಲ್ಲಿದ್ದಾರೆ.

ಇವತ್ತು ಅಮೆರಿಕದ ಕರಿಯರ ಬೆಂಬಲ ಮಾತ್ರವಲ್ಲ ಅಲ್ಲಿನ ಶೇ. 43 ಅಷ್ಟು ಬಿಳಿಯರ ಬೆಂಬಲವನ್ನು ಪಡೆದು ಒಬಾಮಾ ಅಧ್ಯಕ್ಷರಾಗಿದ್ದಾರೆ. ಇದು ಅಮೆರಿಕದ ಜನರ ಐತಿಹಾಸಿಕ ನಿರ್ಧಾರ. ಈ ಅವಕಾಶವನ್ನು ಉಪಯೋಗಿಸಿಕೊಂಡು ಅಮೆರಿಕಾವನ್ನು ಒಂದು ಮಾನವೀಯ ದೇಶವಾಗಿ, ಜಗತ್ತಿನ ಕಾಳಜಿ ಹೊಂದಿರುವ ನೈಜ ಪ್ರಜಾಪ್ರಭುತ್ವವಾದಿ ವ್ಯವಸ್ಥೆಯಾಗಿ ರೂಪಿಸುವ ಮೂಲಕ ಒಬಾಮಾ ಐತಿಹಾಸಿಕ ಅಧ್ಯಕ್ಷರಾಗಬೇಕಿದೆ. ಅದು ಅವರಿಂದ ಸಾಧ್ಯವಾಗಲಿ ಎಂದು ಆಶಿಸಬಹುದಷ್ಟೇ. ■



ಮೂಡಿಗೆರೆಯ ಶಾಸಕ ಎಂ.ಪಿ. ಕುಮಾರಸ್ವಾಮಿ ಮೇಲೆ ಇನ್ನೋರ್ವ ಬಿಜೆಪಿ ಶಾಸಕ ಸಿ.ಟಿ. ರವಿ ಇತ್ತೀಚೆಗೆ ದೈಹಿಕ ಹಲ್ಲೆ ನಡೆಸಿದ್ದಾನೆ. ಹೀಗೆ ಮೇಲ್ಜಾತಿ ಬಿಜೆಪಿ ನಾಯಕನೊಬ್ಬ ಇನ್ನೊಬ್ಬ ದಲಿತ ಶಾಸಕನ ಮೇಲೆ ಹಲ್ಲೆ ನಡೆಸಿ ಬೆದರಿಕೆ ಹಾಕಿದ ಘಟನೆ ನಡೆದಿರುವುದು ಮತ್ತೊಬ್ಬ ಶೂದ್ರ ನಾಯಕ ಈಶ್ವರಪ್ಪನ ಸಮ್ಮುಖದಲ್ಲೇ.....!

ದಲಿತ ಶಾಸಕ ಕುಮಾರಸ್ವಾಮಿ ಮೇಲೆ ಸಿ.ಟಿ. ರವಿ ಹಲ್ಲೆ

ಬಿಜೆಪಿ ಆಡಳಿತದಲ್ಲಿ ದಲಿತರು ಸುರಕ್ಷತೆಯಿಂದಿರಲು ಸಾಧ್ಯವೆ?

ಜನಸಾಮಾನ್ಯ ದಲಿತರ ಮಾತು ಬಿಡಿ, ಈಗಿನ ಬಿಜೆಪಿ ದಲಿತ ಶಾಸಕರಿಗೂ ರಕ್ಷಣೆ ಸಿಗದ ಸ್ಥಿತಿ ಬಂದು ಬಿಟ್ಟಿದೆ. ಇದಕ್ಕೆ ಲೇಟೆಸ್ಟ್ ಉದಾಹರಣೆ ಹೇಳಬೇಕೆಂದರೆ ಮೂಡಿಗೆರೆಯ ಶಾಸಕ ಎಂ.ಪಿ. ಕುಮಾರಸ್ವಾಮಿ ಮೇಲೆ ಇನ್ನೋರ್ವ ಬಿಜೆಪಿ ಶಾಸಕ ಸಿ.ಟಿ. ರವಿ ಇತ್ತೀಚೆಗೆ ದೈಹಿಕ ಹಲ್ಲೆ ನಡೆಸಿದ್ದಾನೆ.

ಇವರಲ್ಲಿ ಕುಮಾರಸ್ವಾಮಿ ದಲಿತ ಶಾಸಕರಾದರೆ ಸಿ.ಟಿ. ರವಿ ಬಲಿತ ಶಾಸಕ. ಅರ್ಥಾತ್ ಮೇಲ್ಜಾತಿಗೆ ಸೇರಿದ, ಹಣ, ತೋಳ್ಬಲ, ರಾಜಕೀಯ ಪ್ರಭಾವಗಳಲ್ಲಿ ಜಾಸ್ತಿ ಪೊಗರಿನವನು.

ಹೀಗೆ ಮೇಲ್ಜಾತಿ ಬಿಜೆಪಿ ನಾಯಕನೊಬ್ಬ ಇನ್ನೊಬ್ಬ ದಲಿತ ಶಾಸಕನ ಮೇಲೆ ಹಲ್ಲೆ ನಡೆಸಿ ಬೆದರಿಕೆ ಹಾಕಿದ ಘಟನೆ ನಡೆದಿರುವುದು ಮತ್ತೊಬ್ಬ ಶೂದ್ರ ನಾಯಕ ಈಶ್ವರಪ್ಪನ ಸಮ್ಮುಖದಲ್ಲೇ.....!


ಬಿಜೆಪಿ ಹಿಂದೂವಾದಿಗಳ ಮೇಲ್ಜಾತಿ ದುರಹಂಕಾರ, ದಮನಕಾರಿ ಪ್ರವೃತ್ತಿ ಏನೆಂದು ತಿಳಿಯಲು ಈ ಹಲ್ಲೆ ಪ್ರಕರಣದ ಹಿನ್ನೆಲೆ ನೋಡಬೇಕು.

ಕ್ಷೇತ್ರ ಒತ್ತುವರಿ ಮಾಡಿದ ರವಿ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ವಿಧಾನಸಭಾ ಕ್ಷೇತ್ರಕ್ಕೆ ಸೇರಿರುವ ಮುಗುಳವಳ್ಳಿಯಲ್ಲಿ ಕಳೆದ ವಾರ ವಿದ್ಯುತ್ ವಿತರಣಾ ಕೇಂದ್ರ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿತು. ಈಗ ಮೂಡಿಗೆರೆ ಕ್ಷೇತ್ರದ ಶಾಸಕರಾಗಿರುವುದು ಬಿಜೆಪಿಯ ಎಂ.ಪಿ. ಕುಮಾರಸ್ವಾಮಿ. ಅದೇರೀತಿ ಯಾವುದೇ ಕ್ಷೇತ್ರದಲ್ಲಿ ಏನೇ ಅಭಿವೃದ್ಧಿ ಕಾಮಗಾರಿಗಳ ಗುದ್ದಲಿಪೂಜೆ, ಉದ್ಘಾಟನೆಗಳಾದರೂ ಆಯಾ ಕ್ಷೇತ್ರದ ಶಾಸಕರನ್ನು ಆಹ್ವಾನಿಸಬೇಕೆಂಬ ನಿಯಮವೇ ಇದೆ.


ಆದರೆ ಮೊನ್ನೆ ಮೂಡಿಗೆರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಈ ನಿಯಮ ಪಾಲಿಸಲಿಲ್ಲ, ಬದಲಾಗಿ ಪಕ್ಕದ ಚಿಕ್ಕಮಗಳೂರು ಕ್ಷೇತ್ರದ ಇನ್ನೊಬ್ಬ ಬಿಜೆಪಿ ಶಾಸಕ ಸಿ.ಟಿ. ರವಿ ಮುಗುಳವಳ್ಳಿಗೆ ಬಂದು ಕಾಮಗಾರಿಗೆ ಗುದ್ದಲಿಪೂಜೆ ಮಾಡಿ ಹೋಗಿದ್ದಾನೆ.

ಇದರಿಂದ ಸಿಟ್ಟಿಗೆದ್ದ ಶಾಸಕ ಕುಮಾರಸ್ವಾಮಿ ಪ್ರತಿಭಟಿಸಿ ಗಲಾಟೆ ಮಾಡಿದ್ದಾರೆ. ದಲಿತನೊಬ್ಬ ಸುಮ್ಮನೆ ಮೂಲೆಯಲ್ಲಿ ಕೂತಿರುವ ಬದಲು ಹೀಗೆ ಹಾರಾಡುತ್ತಿದ್ದಾನಲ್ಲ ಎಂದು ಚಕಿತಗೊಂಡ ಜಿಲ್ಲಾ ಬಿಜೆಪಿ ನಾಯಕರು ಕುಮಾರಸ್ವಾಮಿಯ ಪ್ರತಿಭಟನೆಯನ್ನು ಮೊದಮೊದಲು ನಿರ್ಲಕ್ಷಿಸಿ ಬಿಟ್ಟರು.




ಈಶ್ವರಪ್ಪ

ಆದರೆ ಅಷ್ಟಕ್ಕೆ ಸುಮ್ಮನಾಗದ ಕುಮಾರಸ್ವಾಮಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರಪ್ಪನ ಹತ್ತಿರ ದೂರು ಹೇಳಿದ್ದಾರೆ. ಒಂದು ಸಾರಿ ಕೂತು ಈ ವಿವಾದವನ್ನು ಮಾತನಾಡಿ ಬಗೆಹರಿಸಿ ಬಿಡೋಣ ಎಂದು ಈಶ್ವರಪ್ಪ ಮೊನ್ನೆ ನವೆಂಬರ್ 6 ರಂದು ಗುರುವಾರ ಬೆಂಗಳೂರಿನ ತಮ್ಮ ಮನೆಯಲ್ಲೇ ಒಂದು ಸಂಧಾನ ಸಭೆ ಕರೆದರು.



ಜೀವರಾಜ್

ಅವತ್ತು ಈಶ್ವರಪ್ಪ, ಕುಮಾರಸ್ವಾಮಿ, ಸಿ.ಟಿ. ರವಿ ಜೊತೆಗೆ ಶೃಂಗೇರಿ ಶಾಸಕ ಜೀವರಾಜ್, ತರೀಕೆರೆ ಶಾಸಕ ಸುರೇಶ್, ಜಿಲ್ಲಾ ಬಿಜೆಪಿ ನಾಯಕ ಭೋಜೇಗೌಡ ಮುಂತಾದವರಿದ್ದರು. ಯಾರದ್ದು ಸರಿ ಯಾರದ್ದು ತಪ್ಪೆಂದು ಅಲ್ಲಿ ಶುರುವಾದ ಮಾತುಕತೆ ಕೆಲವೇ ನಿಮಿಷದಲ್ಲಿ ತಾರಕಕ್ಕೇರಿತು. ಈ ಸಿ.ಟಿ. ರವಿಯ ಅಹಂಕಾರ ಎಷ್ಟಿದೆಯೆಂದರೆ ಚಿಕ್ಕಮಗಳೂರು ಜಿಲ್ಲೆಯ ನಾಲ್ವರು ಬಿಜೆಪಿ ಶಾಸಕರೂ ತನ್ನ ಅಡಿಯಾಳುಗಳಂತಿರಬೇಕೆಂದು ಬಯಸುತ್ತಾನೆ. ಬಹಳ ಸಾರಿ ಅದೇ ರೀತಿ ದಬ್ಬಾಳಿಕೆ ನಡೆಸಿರುವುದೂ ಉಂಟು. ಆದರೆ ಶಾಸಕ ಕುಮಾರಸ್ವಾಮಿ ನಿಷ್ಠೆ ಬಿಜೆಪಿಗಿದೆಯೇ ವಿನಃ ಅವರು ರವಿಯ ಚೇಲಾನಂತೆ ಇರಲು ಒಪ್ಪುವ ಮನುಷ್ಯ ಅಲ್ಲ, ಹಾಗಾಗಿ ಅವತ್ತು ಶುರುವಾದ ಮಾತುಕತೆ ಬೇಗನೆ ಜಗಳವಾಗಿ ಬದಲಾಯಿತು. 'ನೀನ್ಯಾವನೊ' 'ನೀನೆಷ್ಟರವನೊ' 'ಹೋಗೋಲೆಯ್' ಮುಂತಾದ ಸುಸಂಸ್ಕೃತ ಮಾತುಗಳಿಂದ ಹಿಡಿದು "....ಮಗ" ಇತ್ಯಾದಿ ಅಪ್ಪಟ ಸಂಸ್ಕೃತವನ್ನು ಈ ಹಿಂದೂ ಶಾಸಕರು ಚಲಾಯಿಸಿಬಿಟ್ಟರು. ಏನೇ ಆದರೂ ಕುಮಾರಸ್ವಾಮಿ ಸೋಲೊಪ್ಪದೇ ಹೋದಾಗ ಸಹಜವಾಗೇ ಮೇಲ್ಜಾತಿ ಹಿಂದೂ ವೀರ ರವಿಗೆ ಉರಿದುಹೋಗಿದೆ. ಒಂದು ಹಂತದಲ್ಲಿ ಕುಮಾರಸ್ವಾಮಿ "ನೀನೇನ್ ಮಾಡ್ ಕೊಂತಿಯ ಹೋಗೋಲೆಯ್' ಎಂದುಬಿಟ್ಟಿದ್ದಾರೆ. ಅಷ್ಟೇ ಸಾಕಾಯಿತು ನಾವೆಲ್ಲಾ ಹಿಂದೂ-ನಾವೆಲ್ಲಾ ಒಂದು ಇತ್ಯಾದಿ ಚೆಡ್ಡಿ ಧ್ಯೇಯಗಳನ್ನೆಲ್ಲಾ ಬದಿಗಿಟ್ಟು ಮುನ್ನುಗ್ಗಿದ ರವಿ



ಕುಮಾರಸ್ವಾಮಿ

ಹುಚ್ಚನಂತೆ ಕಿರುಚಿ ಕುಮಾರಸ್ವಾಮಿ ಮೇಲೇರಿ ಹೋ ಹಲ್ಲೆ ನಡೆಸಿದ್ದಾನೆ. ಕುಳಿತಿದ್ದವರೆಲ್ಲಾ ದಿಗ್ಭ್ರಮೆಯಿ ನೋಡುತ್ತಿದ್ದಾಗ ಸಚಿವ ಈಶ್ವರಪ್ಪ ಮೇಲೆದ್ದು ರವಿ ಎರಡೇಟು ಹಾಕಿ (ಎಷ್ಟೆಂದರೂ ಮಾಜಿ ಪೈಲ್ವಾ ತಾನೆ!) ಮೂಲೆಗೆಸೆದು ಕೂರಿಸಿದ್ದಾರೆ. ತರಿಕೆರೆ ಶಾ ಸುರೇಶ ಹಾಗೂ ಜೀವರಾಜ್ ನಡುವೆ ಹೋಗಿ ರ ಚೆನ್ನಾಗಿ ಉಗಿದಿದ್ದಾರೆ.

ತಮ್ಮ ಹಿಂದೂ ಪಕ್ಷದೊಳಗೆ ಹಿಂದೂ ಶಾಸ ಹೀಗೆ ಶರಂಪರ ಹೊಡೆದಾಟಕ್ಕಿಳಿದಿದ್ದು ನೋಡಿ ಈಶ್ವರ ವ್ಯಥೆ ಪಟ್ಟಿದ್ದಾರೆ. ಈಗ ಈ ಹಲ್ಲೆ ಪ್ರಕರಣ ರಾ ನಾಯಕರ ಹತ್ತಿರ ವಿಚಾರಣೆಗೆ ಹೋಗಿದೆ.

ರವಿ ಲೂಟಿ

ಒಂದು ಜುಜುಬಿ ವಿದ್ಯುತ್ ಟ್ರಾನ್ಸ್ ಫಾರ್ಮ ಗುದ್ದಲಿಪೂಜೆ ವಿಚಾರಕ್ಕೆ ನಡೆದಿರುವ ಜಗಳ ಇದು. ಇದರ ಹಿಂದೆ ಕೋಟಿಗಟ್ಟಲೆ ದೋಚುವ ಸಿ.ಟಿ. ರವಿಯ ದುರಾಸೆಯ ಇದೆ.

ವಾಸ್ತವವಾಗಿ 2004 ರ ಚುನಾವಣೆ ದಾಗ ಮುಗುಳವಳ್ಳಿ ಸಿ.ಟಿ. ರವಿಯ ಮಗಳೂರು ಕ್ಷೇತ್ರಕ್ಕೆ ಸೇರಿತ್ತು, ಆಗಿನ ಸಮ್ಮಿ ಸರ್ಕಾರದ ಕರೆಂಟು ಮಂತ್ರಿ ರೇವಣ್ಣ ಕೋಟಿ ರೂಪಾಯಿ ವೆಚ್ಚದ ಈ ಯೋಜ ಓಕೆ ಮಾಡಿದ್ದರು. ನಂತರ ಹೊಸ ಸರ್ಕಾ ಬಂದಮೇಲೆ ಕೆಲ ದಿನಗಳ ಹಿಂದೆ ಯೋಜ ಹಣವೂ ಸ್ಯಾಂಕ್ಷನ್ ಆಯಿತು. ಈ ನಡ ಕ್ಷೇತ್ರ ಪುನರ್ ವಿಂಗಡಣೆಯಾಗಿ ಮುಗುಳ ಕುಮಾರಸ್ವಾಮಿಯ ಮೂಡಿಗೆರೆಗೆ ಶಿಫ್ಟ್ ಆಗಿ ಈ ವಿದ್ಯುತ್ ಯೋಜನೆ ಸಿ.ಟಿ. ರವಿ ಶಾಸಕ ದ್ದಾಗಲೇ ಮಂಜೂರಾಗಿತ್ತಾದರೂ ಅದೊಂ ಕಾರಣಕ್ಕೆ ಹಾಲಿ ಶಾಸಕರನ್ನು ನಿರ್ಲಕ್ಷಿಸುವ ಎಷ್ಟು ಸರಿ?

ವಾಸ್ತವವಾಗಿ ರವಿಯ ಈ ಒತ್ತುವರಿ ಕೆಲ ಹಿಂದೆ ಬರೀ ಯೋಜನೆಯ ಕ್ರೆಡಿಟ್ ಪಡೆಯ ಸ್ವಾರ್ಥ ಒಂದೇ ಇರಲಿಲ್ಲ, ಬದಲಾಗಿ ಸಾಕ ದುಡ್ಡು ಹೊಡೆಯುವ ಪ್ಲಾನೂ ಇದೆ. ಕೋಟಿ ರೂಪಾಯಿ ವೆಚ್ಚದ ಈ ಯೋಜನೆ ಕಾಮಗಾರಿ ಗುತ್ತಿಗೆ ಸುದರ್ಶನ ಎಂಬುವ ಸಿಕ್ಕಿದೆ. ಇವನು ರವಿಯ ಹೆಂಡತಿ ಪಲ್ಲವಿ ರಕ್ತ ಸಂಬಂಧಿ. ಯೋಜನಾ ಸ್ಥಳ ಮಟ್ಟಸವಾ ಇದ್ದರೂ Earth work ಎಂದು ಸುಳ್ಳು ಲೆಕ್ಕ ತೋ ರವಿ ಹಾಗೂ ಸುದರ್ಶನ್ ಈಗಾಗಲೇ ದುಡ್ಡು ಗೆಬರ ಶುರು ಮಾಡಿದ್ದಾರೆ.

ಹಾಗಾಗಿ ಶಾಸಕ ಕುಮಾರಸ್ವಾಮಿ ಗಮನಕ್ಕೆ ಇದ ಬರದಿರಲೆಂದು ಆತನನ್ನು ದೂರವಿಡಲು ಸಿ.ಟಿ. ಇಷ್ಟೆಲ್ಲಾ ರಂಪ ಮಾಡಿ ಹಲ್ಲೆ ಮಾಡಿದ್ದಾನೆ. ಸ ಈಶ್ವರಪ್ಪ ಇದನ್ನೆಲ್ಲಾ ನೋಡಿಯಾದ ಮೇಲೆ

"ಕುಮಾರಸ್ವಾಮಿ ಆಗಿದ್ದಕ್ಕೆ ಪಾರ್ಟಿ ಗೌರವ ಉಳಿ ಸುಮ್ಮನಾಗಿದ್ದಾರೆ, ನಾನಾಗಿದ್ದಿದ್ದರೆ ರವಿ ಬಟ್ಟೆ ಹೊಡೆದಿರುತ್ತಿದ್ದೆ" ಅಂದರಂತೆ.

ಬಿಜೆಪಿಯೊಳಗೆ ದಲಿತ ಶಾಸಕರ ಸ್ಥಿತಿಗತಿ ಇದು

■ ಪಾರ್ವತೀಶ

ರವಿಯ ವರ್ಗಾ ಡೀಲ್‌ಗಳು

ಬಹುಶಃ ಯಡ್ಡಿಯ ಪುತ್ರರತ್ನನನ್ನು ಬಿಟ್ಟರೆ ಇಡೀ ರಾಜ್ಯದಲ್ಲಿ ಅತೀಹೆಚ್ಚು ಟ್ರಾನ್ಸ್‌ಫ ಡೀಲ್ ನಡೆಸಿರುವ ಬಿಜೆಪಿ ಶಾಸಕನೆಂದರೆ ಸಿ.ಟಿ. ರವಿಯೇ ಇರಬೇಕು.

ಕಳೆದ ಮೂರು ತಿಂಗಳಿಂದ ಸಿ.ಟಿ. ರವಿ ಹೆಚ್ಚುಕಡಿಮೆ 465 ವರ್ಗಾ ರೆಕಮೆಂಡೇಷನ ಲೆಟರ್‌ಗಳನ್ನು ಸಿಎಂ ಕಚೇರಿಗೆ ಕೊಟ್ಟಿದ್ದಾನೆ. ಅಂದರೆ ದಿನಕ್ಕೆ ಐದು ಪತ್ರ. ರವಿ ತನ್ನ ಚಿಕ್ಕಮಗಳೂರು ಕ್ಷೇತ್ರ ಮಾತ್ರವಲ್ಲದೆ ಇಡೀ ಚಿಕ್ಕಮಗಳೂರು ಜಿಲ್ಲೆಯ ವರ್ಗಾವಣೆಗಳನ್ನೆಲ್ಲಾ ತಾನೇ ಮಾಡಿಸಿಬಿಟ್ಟಿದ್ದಾ ಅಂದರೆ ತರೀಕೆರೆಯ ಸುರೇಶ್, ಮೂಡಿಗೆರೆಯ ಕುಮಾರಸ್ವಾಮಿ ಅಥವಾ ಶೃಂಗೇರಿಯ ಜೀವರಾಜ ಇವರ್‍ಯಾರಿಗೂ ಚೂರು ಅವಕಾಶ ಸಿಗದಂತೆ ಎಲ್ಲಾ ಆಟ-ಊಟವನ್ನೂ ತಾನೊಬ್ಬನೆ ಮಾಡಿಬಿಟ್ಟಿದ್ದಾ

2004 ರ ಎಲೆಕ್ಷನ್‌ನಲ್ಲಿ ರವಿ ಸಲ್ಲಿಸಿದ್ದ ಆಸ್ತಿ ವಿವರದಲ್ಲಿ ಕೆಲವೇ ಲಕ್ಷ ಕಾಣಿಸಲಾಗಿತ್ತು, ನಂತ 2008 ರ ವೇಳೆಗೆ ಅದು 1.8 ಕೋಟಿಗೆ ಏರಿತ್ತು, ರವಿಯ ಈಗಿನ ಡೀಲ್‌ಗಳ ವೇಗ, ನಿರ್ಲಜ್ಜ ನೋಡುತ್ತಿದ್ದರೆ 2012 ರ ಎಲೆಕ್ಷನ್ ಸಮಯಕ್ಕೆ ಈ ಹಿಂದೂವೀರನ ಆಸ್ತಿ 25 ಕೋಟಿ ದಾಟಿದರೂ ಆಶ್ಚರ್ಯವಿಲ್ಲ ಎನ್ನುವಂತಾಗಿದೆ.


ಇದರ ನೀತಿಪಾಠ ಏನೆಂದರೆ! 'ಹಿಂದೂ ಧರ್ಮಕ್ಕಾಗಿ ಕೈ ಎತ್ತು ನಿನಗೆ ರೋಲ್‌ಕಾಲ ಸಿಗುತ್ತದೆ!

ವಿರಾಜಪೇಟೆ ದಲಿತ ಶಾಸಕ ಬಸವರಾಜ್ ಮೇಲೂ ಹಲ್ಲೆಯಾಗಿತ್ತು

ಸಂಘ ಪರಿವಾರದ ಚೆಡ್ಡಿಗಳು ಎಸ್‌ಸಿ/ಎಸ್‌ಟಿ ಮೋರ್ಚಾ, ದಲಿತ ಮೋರ್ಚಾ ಎಂಬ ಬೋರ್ಡ್‌ಗಳನ್ನು ನೇತು ಹಾಕಿಕೊಂಡಿದ್ದಾರಾದರೂ ಹಿಂದೂ ಧರ್ಮದ ಮೇಲು ಕೀಳಿನ ಭಾವನೆ ಅವರನ್ನು ಬಿಟ್ಟಿಲ್ಲ.

ಸಿ.ಟಿ. ರವಿ ಈಗ ದಲಿತ ಶಾಸಕ ಕುಮಾರಸ್ವಾಮಿ ಮೇಲೆ ಹಲ್ಲೆ ಮಾಡಿರುವುದು ಬಿಜೆಪಿಯೊಳಗೆ ಇದೇ ಮೊದಲ ಘಟನೆಯಲ್ಲ. 2007 ರ ಜನವರಿಯಲ್ಲೂ ಆಗಿನ ವಿರಾಜಪೇಟೆಯ ಬಿಜೆಪಿ ದಲಿತ ಶಾಸಕ ಬಸವರಾಜ್ ಮೇಲೂ ವಿಶ್ವಹಿಂದೂ ಪರಿಷತ್ ಹಾಗೂ RSS ಹಿಂದೂಗಳು ಹಲ್ಲೆ ನಡೆಸಿದ್ದರು. ಬಸವರಾಜ್ ತಾವು ಹೇಳಿದ ಮಾತು ಕೇಳಲಿಲ್ಲವೆಂಬ ಆಕ್ರೋಶಕ್ಕೆ....

ಆದರೆ ಇದೇ ಚೆಡ್ಡಿಗಳು ಬ್ರಾಹ್ಮಣ ಲಿಂಗಾಯತ ಬಿಜೆಪಿ ಶಾಸಕರ ಮೇಲೆ ಹಲ್ಲೆ ಮಾಡಿದ ಸುದ್ದಿ ನಿಮ್ಮ ಕಿವಿಗೆ ಎಂದಾದರೂ ಬಿದ್ದಿದೆಯೇ?



ವೆಂಕಯ್ಯ

ಕನ್ನಡಾಂಬೆಗೆ ವೆಂಕಯ್ಯನಾಯ್ಡು 70 ಲಕ್ಷ ರೂಪಾಯಿ ಉಂಡೆನಾಮ

ಬಿಜೆಪಿ ಮಾಜಿ ಅಧ್ಯಕ್ಷ ಹಾಲಿ ರಾಜ್ಯಸಭಾ ಸದಸ್ಯ ಆಂಧ್ರವಾಡು ವೆಂಕಯ್ಯ ನಾಯ್ಡು ಕರ್ನಾಟಕದ ಜನತೆಗೆ ಅನಾಮತ್ತು 70 ಲಕ್ಷ ರೂಪಾಯಿ ಉಂಡೆ ನಾಮ ತಿಕ್ಕಿಬಿಟ್ಟಿದ್ದಾರೆ.

ಇದು ಡಬ್ಬಿಂಗ್ ದಂಧೆಯೋ, ರೋಲ್‌ಕಾಲ್, ಹಫ್ತಾ ವಸೂಲಿ ತರದ ವಂಚನೆಯಲ್ಲ, ಬದಲಾಗಿ ಬೇಜವಾಬ್ದಾರಿತನ ಹಾಗೂ ನಯವಂಚನೆಗೆ ಸಂಬಂಧಿಸಿದ್ದು.

ನಿಮಗೆ ನೆನಪಿರಬಹುದು. ಈ ವೆಂಕಯ್ಯ ನಾಯ್ಡು 1998 ರಿಂದಲೂ ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭೆಗೆ ಎರಡು ಬಾರಿ ಆಯ್ಕೆಯಾಗಿದ್ದಾನೆ. ರಾಜ್ಯ ಬಿಜೆಪಿ ನಾಯಕರು ಈ ವೆಂಕಯ್ಯ ಬೆಂಗಳೂರಿನ ಉತ್ತರಹಳ್ಳಿ ನಿವಾಸಿ ಎಂದು ಸುಳ್ಳು ದಾಖಲೆ ಸೃಷ್ಟಿಸಿ ರಾಜ್ಯಸಭೆಗೆ ಕಳುಹಿಸಿ ಕೊಟ್ಟಿದ್ದಾರೆ. ಅಲ್ಲಿಂದಾಚೆಗೆ ಈ ವೆಂಕಯ್ಯ ಒಂದೇ ಒಂದು ಸಾರಿಯಾದರೂ ಕರ್ನಾಟಕ ಪರವಾಗಿ ಮಾತನಾಡಿಲ್ಲ, ಕರ್ನಾಟಕಕ್ಕೆ ಸಂಸದನಾಗಿ ಅಭಿವೃದ್ಧಿ ಕೆಲಸ ನೋಡಲು ಕಾಲಿಟ್ಟಿಲ್ಲ, ಆದರೂ ವೆಂಕಯ್ಯ ಪ್ರವಾಸ ಭತ್ಯೆ, ದಿನಭತ್ಯೆ, ಸಂಬಳ ಸಾರಿಗೆ ಎಂದು ಇದುವರೆಗೂ 70 ಲಕ್ಷಕ್ಕೂ ಜಾಸ್ತಿ ಹಣ ತೆಗೆದುಕೊಂಡು ತಿಂದುಹಾಕಿದ್ದಾನೆ. ಕೇವಲ ಪ್ರವಾಸ ಭತ್ಯೆ ಹೆಸರಿಲ್ಲೇ 51 ಲಕ್ಷ ರೂಪಾಯಿ ತೆಗೆದುಕೊಂಡಿರುವ ವೆಂಕಯ್ಯ ನಾಯ್ಡುವಿನಿಂದ ಈ ಕರ್ನಾಟಕಕ್ಕೆ ಏನು ಉಪಕಾರ ಆಗಿದೆ ಎಂಬುದನ್ನು ರಾಜ್ಯ ಬಿಜೆಪಿ ಜನರಿಗೆ ತಿಳಿಸಲಿ. ■

ಹಿಂದೂ ನಾಯಕ ರವಿ ಉವಾಚ 'ದಲಿತರು ಗುದ್ದಲಿ ಪೂಜೆ ಮಾಡಕೂಡದು'

ಮುಗುಳವಳ್ಳಿ ವಿದ್ಯುತ್ ಸ್ಥಾವರ ಗುದ್ದಲಿಪೂಜೆ ಸಮಾರಂಭಕ್ಕೆ ಕ್ಷೇತ್ರದ ಶಾಸಕ ಕುಮಾರಸ್ವಾಮಿಯನ್ನು ಆಹ್ವಾನಿಸದಿರಲು ಜಾತಿಪ್ರಜ್ಞೆಯು ಒಂದು ಕಾರಣವಾಗಿದೆ.


ಕುಮಾರಸ್ವಾಮಿ ಪರಿಶಿಷ್ಟ ಪಂಗಡ ಜಾತಿಗೆ ಸೇರಿದವರಾಗಿದ್ದು ಅಂತವರಿಂ ಗುದ್ದಲಿಪೂಜೆ ಮಾಡಿಸಿದರೆ ಸರಿಯಾಗುವುದಿಲ್ಲ ಎಂದು ಒಕ್ಕಲಿಗ ಶಾಸ ರವಿ ತೀರ್ಮಾನಿಸಿದ್ದಾರೆ. ಜೊತೆಗೆ ಕಾಮಗಾರಿ ಗುತ್ತಿಗೆಯೂ ತಮ ಕುಟುಂಬದವರಿಗೇ ಕೊಡಿಸಿದ್ದರಿಂದ ಪೂಜೆಯೂ ಆಯಿತು ಪ್ರಸಾದನು ಸಿಕ್ಕಿತೆಂದು ರವಿ ತಾನೇ ಹೋಗಿ ಗುದ್ದಲಿ ಪೂಜೆ ಮಾಡಿಬಂದಿದ್ದಾನೆ.

ಪೇಜಾವರನ ಅವಕಾಶವಾದಿತನ


ಸಂಘಪರಿವಾರಿಗಳು ತಮ್ಮ ರಾಜಕೀಯ ಬೇಳೆ ...ಬೇಯಿಸಿಕೊಳ್ಳುವುದಕ್ಕೆ ಸಾಲು ಸಾಲು ಸುಳ್ಳುಗಳ ...ರೆಹೋಗುವುದು, ಚರಿತ್ರೆಯನ್ನು ತಿರುಚುವುದು ...ಯತೇನಲ್ಲ. ವಾಸ್ತವದಲ್ಲಿ ಇಂತಹ ಕುತಂತ್ರಗಳಿಂದಲೇ ...ವರು ಜಾತ್ಯತೀತ ಮನುಷ್ಯರಗಳಲ್ಲಿ ಕೋಮುದ್ವೇಷದ ...ಬೀಜ ಬಿತ್ತಿ ಸಮಾಜದಲ್ಲಿ ಅಶಾಂತಿಯುಂಟು ...ಮಾಡುವಲ್ಲಿ ನಿಸ್ಸೀಮರಾಗಿದ್ದಾರೆ ಎಂದರೆ ತಪ್ಪಲ್ಲ. ಬಾಬ್ರಿ ...ಸೀದಿ ಇದ್ದ ಜಾಗದಲ್ಲಿ ಮೊದಲು ರಾಮಮಂದಿರ ...ತ್ತೆಂದು ಸುಳ್ಳು ಚರಿತ್ರೆಯನ್ನು ಕಟ್ಟಿ ಇಡೀ ದೇಶದಲ್ಲಿ ...ಕೋಮು ದಳ್ಳುರಿ ಹಚ್ಚಿ ಅದರಲ್ಲಿ ಚಳಿ ಕಾಯಿಸಿಕೊಂಡರು. ...ತ್ಯತೀತ ಮನಸ್ಸಿನ ಹಾಗೂ ಅಪ್ಪಟ ದೇಶಪ್ರೇಮಿ ...ಪ್ಪು ಸುಲ್ತಾನ್‌ನನ್ನು ಹಿಂದೂಧರ್ಮ ದ್ವೇಷಿ ಎಂದೂ, ...ಶದ್ರೋಹಿ ಎಂದೂ ಹೇಳುತ್ತಾ ಅಪ್ಪಟ ದೇಶಪ್ರೇಮಿ ...ಬ್ಬನ ವ್ಯಕ್ತಿತ್ವಕ್ಕೆ ತೇಜೋವಧೆ ಮಾಡುವ ಕೆಲಸ ...ಮಾಡಿದರು. ಶತಶತಮಾನಗಳ ಹಿಂದೆಯೇ ಹಿಂದೂ ...ಮತ್ತು ಇಸ್ಲಾಮ್ ಧರ್ಮಗಳ ಮಾನವ ವಿರೋಧಿ ಮೌಲ್ಯ...ಗಳನ್ನು ಧಿಕ್ಕರಿಸಿ ಬಾಬಾಬುಡನ್‌ಗಿರಿಯಂತಹ ಕೋಮು ...ಸೌಹಾರ್ದ ತಾಣವನ್ನು ಸ್ಥಾಪಿಸಿದ ದತ್ತ-ಬಾಬರಿಗೆ ...ಕೋಮುಬಣ್ಣ ಬಳಿದು ಬಾಬಾಬುಡನ್‌ಗಿರಿ ಮೂಲತಃ ...ಹಿಂದೂಗಳದ್ದೆಂದೂ, ಅದನ್ನು ಮುಸ್ಲಿಮರು ವಶಪಡಿಸಿ...ಕೊಂಡಿದ್ದಾರೆಂದೂ, ಈಗ ಅದನ್ನು ಮುಸ್ಲಿಮರಿಂದ ...ವಿಮೋಚನೆ ಮಾಡಬೇಕೆಂದೂ ಹುಯಿಲೆಬ್ಬಿಸಿದರು. ಹೀಗೆ, ...ವರ ಚರಿತ್ರೆ ತಿರುಚುವ ಅವರ ಚಾರಿತ್ರ್ಯಹೀನ ಸಂಸ್ಕೃತಿ ...ಹಲವಾರು ನಿದರ್ಶನಗಳಲ್ಲಿ ಎದ್ದು ಕಾಣುತ್ತದೆ. ಈ ಪಟ್ಟಿಗೆ ಲೇಟೆಸ್ಟ್ ...ಸೇರ್ಪಡೆಯೆಂದರೆ ಮತಾಂತರದ ಹಿನ್ನೆಲೆಯಲ್ಲಿ ಬೌದ್ಧ ...ಧರ್ಮದ ಬಗ್ಗೆ ಪೇಜಾವರ ಮಠದ ವಿಶ್ವೇಶತೀರ್ಥ ...ಎಂಬ ಇತಿಹಾಸತಜ್ಞ(!) ಮಂಡಿಸಿರುವ ವಿಚಾರಧಾರೆ!

ಸಂಘಪರಿವಾರದ ಗೂಂಡಾಗಳು ಮತಾಂತರದ ...ನೆಪವೊಡ್ಡಿ ಕರ್ನಾಟಕದಾದ್ಯಂತ ಚರ್ಚುಗಳ ಮೇಲೆ ದಾಳಿ ...ನಡೆಸುತ್ತಿದ್ದ ಈ ಹೊತ್ತಿನಲ್ಲೇ ಅತ್ತ ಕೆಲವು ದಲಿತ ...ಸಂಘಟನೆಗಳು, ಪ್ರಗತಿಪರರು ತಂಡೋಪತಂಡವಾಗಿ ಬೌದ್ಧ ...ಧರ್ಮಕ್ಕೆ ಮತಾಂತರಗೊಂಡರು. ಇದನ್ನು ಅವರು ...ಸಂಘಪರಿವಾರಿಗಳಿಗೆ ಅಂಜಿ ಗುಪ್ತವಾಗಿ ನಡೆಸಲಿಲ್ಲ. ...ಭಜರಂಗದಳದವರಿಗೆ ತಾಕತ್ತಿದ್ದರೆ ತಮ್ಮನ್ನು ತಡೆಯಲಿ ...ಎಂದು ವೈದಿಕಶಾಹಿಗಳಿಗೆ ಬಹಿರಂಗವಾಗಿ ಸೆಡ್ಡು ...ಹೊಡೆದು ಮತಾಂತರಗೊಂಡರು. ಸಂಘಪರಿವಾರಿಗಳಿಗೆ ...ಎಲ್ಲಿ ತೋಳ್ಬಲ ಉಪಯೋಗಿಸಬೇಕು, ಎಲ್ಲಿ ಬ್ರಾಹ್ಮಣಶಾಹಿ ...ತಂತ್ರವನ್ನು ಬಳಸಬೇಕು ಎಂಬುದು ಚೆನ್ನಾಗಿ ಗೊತ್ತಿದೆ. ...ಆದ್ದರಿಂದಲೇ ಚರ್ಚುಗಳ ಮೇಲೆ ಲೀಲಾಜಾಲವಾಗಿ ...ದಾಳಿ ನಡೆಸಿದಂತೆ ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುತ್ತಿರುವ ...ದಲಿತರ ಮೇಲೆ ದಾಳಿ ನಡೆಸುವುದಕ್ಕೆ ಭಜರಂಗಿಗಳು ...ಧೈರ್ಯತೋರಲಿಲ್ಲ. ಏಕೆಂದರೆ ದಲಿತಶಕ್ತಿಯ ಅರಿವು ...ಅವರಿಗೆ ಚೆನ್ನಾಗಿ ಗೊತ್ತಿದೆ. ಇಂತಹ ಸಂದರ್ಭದಲ್ಲಿ ...ತೋಳ್ಬಲಕ್ಕಿಂತ ಮಿದುಳಿನ ತಂತ್ರವೇ ಪ್ರಭಾವ...ಶಾಲಿಯಾಗಿರುತ್ತದೆಂದು ಪೇಜಾವರನಂತಹ ನರಪೇತಲನನ್ನು ...ಮುಂದೆ ಬಿಟ್ಟಿದ್ದಾರೆ. ಬೌದ್ಧ ಧರ್ಮದ ಬಗ್ಗೆ ತಳಬುಡವಿಲ್ಲದ ...ಅಸಂಬದ್ಧ ವಾದಗಳನ್ನು ಮಂಡಿಸುತ್ತಿರುವ ಪೇಜಾವರ ...ಈಗ ದಲಿತರು ಬೌದ್ಧ ಧರ್ಮಕ್ಕೆ ಮತಾಂತರ...ಗೊಳ್ಳಬಾರದೆಂದು ಉಪದೇಶ, ಆಜ್ಞೆ ಮಾಡುತ್ತಿದ್ದಾರೆ.

ಮೊದಲನೆಯದಾಗಿ ಮತಾಂತರ ಎಂಬ ಮೂಲಭೂತ ...ಹಕ್ಕಿನ ವಿಚಾರವಾಗಿ ಪೇಜಾವರ ಹೇಳುವ ಮಾತನ್ನೇ ...ನೋಡಿ. ಒಂದೆಡೆ ಸ್ವಯಂಪ್ರೇರಿತ ಮತಾಂತರಕ್ಕೆ ತಮ್ಮ ...ವಿರೋಧವಿಲ್ಲ ಎಂದು ಹೇಳುತ್ತಲೇ ಇನ್ನೊಂದೆಡೆ ಹಿಂದೂ ...ಧರ್ಮದಂತೆ ಬೌದ್ಧ ಧರ್ಮದಲ್ಲಿ ಜಾತಿವ್ಯವಸ್ಥೆ ಇಲ್ಲ ...ಎಂಬ ಒಂದೇ ಕಾರಣಕ್ಕೆ ದಲಿತರು ಬೌದ್ಧ ಧರ್ಮಕ್ಕೆ ...ಮತಾಂತರವಾಗುವುದು ಸಮರ್ಥನೀಯವಲ್ಲ ಎನ್ನುತ್ತಾರೆ. ...ಇದರ ಅರ್ಥ? ದಲಿತರು ಸ್ವಯಂಪ್ರೇರಿತವಾಗಿ ಬೌದ್ಧ ...ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾ...ರೇ ಹೊರತು ಅವರನ್ನು ಬಲ...ವಂತವಾಗಿ ಯಾರೂ ಮತಾಂತರ ...ಮಾಡುತ್ತಿಲ್ಲ. ಹಾಗಿದ್ದ ಮೇಲೆ ...ಅವರನ್ನು ಬೆಂಬಲಿಸಬೇಕಿದ್ದ ಪೇಜಾ...ವರ ಶ್ರೀ ಅವರನ್ನು ವಿರೋಧಿಸುತ್ತಿ...ರುವುದೇಕೆ? ಅಷ್ಟಕ್ಕೂ, ಬೌದ್ಧ ...ಧರ್ಮಕ್ಕೆ ಸೇರಿದರೆ ದಲಿತರಿಗೆ ...ಪ್ರಯೋಗ ವೇನೂ ಆಗುವುದಿಲ್ಲ ...ಎಂದು ಪೇಜಾ ವರ ಹೇಳುತ್ತಾರೆ. ...ಹಾಗಿದ್ದಮೇಲೆ, ಅವರೆಲ್ಲರೂ ಹಿಂದೂ ...ಧರ್ಮದ ...ಲ್ಲಿಯೇ ...ಉಳಿಯುವುದರಿಂದ ಉಪ...ಯೋಗವಾಗುತ್ತದೆಯೆ?



ವಾಸ್ತವದಲ್ಲಿ ಭವ್ಯ-ದಿವ್ಯ ಹಿಂದೂ ಧರ್ಮ, ಸಂಸ್ಕೃತಿಗಳು ...ನಗೆಷ್ಟು ಉಪಯೋಗವಾಗಿದೆ ಎಂಬುದನ್ನು ದಲಿತರು ...ಶತಶತಮಾನಗಳಿಂದ ಖುದ್ದು ಅನುಭವಿಸಿ ನೋಡಿದ್ದಾರೆ. ...ದಲಿತರನ್ನು ಕನಿಷ್ಠ ಮನುಷ್ಯರಂತೆ ಕಾಣುವುದಿರಲಿ, ...ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣುವ ಹಿಂದೂ ಧರ್ಮದ ...ವ್ಯಕ್ತಿಯ ಬಗ್ಗೆ, ಪೇಜಾವರರಿಗಿಂತ ಆ ನರಕವನ್ನು ...ಅನುಭವಿಸುತ್ತಿರುವ ದಲಿತರಿಗೆ ಚೆನ್ನಾಗಿ ಗೊತ್ತಿದೆ. ಹಿಂದೂ ಧರ್ಮದ ಭವ್ಯ-ದಿವ್ಯತೆಗಳ ಬಗ್ಗೆ ವಾಸ್ತವದಲ್ಲಿ ಪೇಜಾವರ ಮಠದ ಗದ್ದುಗೆಯ ಮೇಲೆ ಕುಳಿತುಕೊಳ್ಳುವ ವಿಶ್ವೇಶತೀರ್ಥರಿಗಿಂತ ಚಪ್ಪಲಿ ಬಿಡುವ ಜಾಗದಲ್ಲಿ ಕುಳಿತುಕೊಳ್ಳುವ ದಲಿತರಿಗೆ ಚೆನ್ನಾಗಿ ಗೊತ್ತಿದೆ. ಮಿನರಲ್ ವಾಟರ್‌ನ ತೀರ್ಥ ಕುಡಿಯುವ ಪೇಜಾವರನಿಗಿಂತ ಸವರ್ಣೀಯರು ಕುಂಡಿ ತೊಳೆದುಕೊಳ್ಳುವ ಹೊಂಡದ ನೀರು ಮುಟ್ಟುವುದಕ್ಕೂ ವಂಚಿತರಾದ ದಲಿತರಿಗೆ ಹಿಂದೂ ಧರ್ಮದ ಭವ್ಯತೆಯ ಬಗ್ಗೆ ಚೆನ್ನಾಗಿ ಗೊತ್ತಿದೆ. ಹೂವಿನ ಹಾಸಿನ ಪಲ್ಲಕ್ಕಿಯ ಮೇಲೆ ಕುಳಿತುಕೊಳ್ಳುವ ಪೇಜಾವರರಿಗಿಂತ ದಿನನಿತ್ಯ ಕೊಳಚೆ ಪ್ರದೇಶಗಳಲ್ಲಿ ಹಂದಿಗಳಂತೆ ವಾಸಿಸುತ್ತಿರುವ ದಲಿತರಿಗೆ ಹಿಂದೂ ಧರ್ಮದ ಶ್ರೇಷ್ಠತೆ ಅರಿವು ಚೆನ್ನಾಗಿದೆ. ಹೀಗೆ ಬ್ರಾಹ್ಮಣಶಾಹಿಗಳಿಂದ, ಸವರ್ಣೀಯರಿಂದ ದಿನನಿತ್ಯ ಅವ್ಯಾಹತವಾಗಿ ಅತ್ಯಾಚಾರ, ದೌರ್ಜನ್ಯಗಳನ್ನು ಎದುರಿಸುತ್ತಿರುವ ದಲಿತರಿಗೆ ತಥಾಕಥಿತ ಹಿಂದೂ ಧರ್ಮ ಎಷ್ಟೊಂದು ಶ್ರೇಷ್ಠವಾಗಿದೆ, ಅವರಿಗೆ ಅದರಿಂದ ಎಷ್ಟು ಉಪಯೋಗವಾಗಿದೆ ಎಂಬುದು ಚೆನ್ನಾಗಿ ಗೊತ್ತಿದೆ. ಅದರ ಬಗ್ಗೆ ಪೇಜಾವರನಂತಹ ಮಹಾನ್ ದಾರ್ಶನಿಕ ಬೋಧನೆ ಮಾಡುವ ಅಗತ್ಯವಿಲ್ಲ.



ಬ್ರಾಹ್ಮಣಶಾಹಿಗಳು, ಸವರ್ಣೀಯರು ದಲಿತರ ಮೇಲೆ ನಡೆಸುತ್ತಿರುವ ಈ ದೌರ್ಜನ್ಯಗಳು, ಅಟ್ಟಹಾಸಗಳು, ಅತ್ಯಾಚಾರಗಳು ಆರು ಶತಮಾನಗಳ ಹಿಂದಿನ ಕತೆಗಳಲ್ಲ. ಈ ಹೊತ್ತಿಗೂ ಗ್ರಾಮೀಣ ಭಾರತ ಮಾತ್ರವಲ್ಲ, ಮಹಾನ್ ನಗರ ಪ್ರದೇಶಗಳಲ್ಲೂ ಕಂಡುಬರುವ ಸಾಮಾನ್ಯ ಚಿತ್ರಣ. ಇಂತಹ ಉಸಿರು ಕಟ್ಟಿಸುವ ವಾತಾವರಣದಲ್ಲಿ ಜೀವ ಕೈಯಲ್ಲಿ ಹಿಡಿದುಕೊಂಡು ಬದುಕುತ್ತಿರುವ ದಲಿತರು ಹಿಂದೂ ಧರ್ಮ 'ತಮ್ಮ ಧರ್ಮ'ವೆಂದು, 'ಶ್ರೇಷ್ಠ ಧರ್ಮ'ವೆಂದು ಹೇಗೆ ಹೇಳಲು ಸಾಧ್ಯವಿದೆ? ಹೀಗಾಗಿ ಅವರಿಚ್ಛಿಸಿದ ಧರ್ಮಕ್ಕೆ ಮತಾಂತರಗೊಳ್ಳುವುದು ಅವರ ಆಜನ್ಮ ಸಿದ್ಧ ಹಕ್ಕು. ಅದನ್ನು ಪ್ರಶ್ನಿಸುವ ಅಧಿಕಾರ ಪೇಜಾವರರಿಗೂ ಇಲ್ಲ, ಸಂಘಪರಿವಾರಿಗಳಿಗೂ ಇಲ್ಲ, ಅಷ್ಟೇ ಏಕೆ ಯಾವುದೇ ಪ್ರಭುತ್ವಗಳಿಗೂ ಇಲ್ಲ. ವ್ಯಕ್ತಿಯೊಬ್ಬ ತನಗಿಷ್ಟ ಬಂದ ಧರ್ಮವನ್ನು ಪಾಲಿಸುವುದು ಈ ದೇಶದ ಸಂವಿಧಾನ ಜಾರಿಗೆ ಬಂದ ಮೇಲೆ ಸಿಕ್ಕ ಹಕ್ಕಲ್ಲ. ಅದು ವ್ಯಕ್ತಿಯೊಬ್ಬ ಹುಟ್ಟಿನೊಂದಿಗೇ ಪಡೆದುಕೊಂಡ ಹಕ್ಕು. ಚರಿತ್ರೆಯನ್ನು ಒಂದಿಷ್ಟು ಅವಲೋಕನ ಮಾಡಿದರೆ ಸಾಕು ಜನರು, ರಾಜರು ತಮಗಿಷ್ಟ ಬಂದ ಧರ್ಮವನ್ನು ಆಯ್ಕೆ ಮಾಡಿಕೊಂಡ ಸಹಸ್ರಾರು ಉದಾಹರಣೆಗಳು ಕಾಣುತ್ತವೆ.

ಎರಡನೆಯದಾಗಿ ಬೌದ್ಧ ಧರ್ಮದ ಬಗ್ಗೆ ಸನ್ಮಾನ್ಯ ಪೇಜಾವರ ವಿಶ್ವೇಶತೀರ್ಥರ ಹೇಳಿಕೆಯನ್ನು ನೋಡಿ. ಬೌದ್ಧ ಧರ್ಮ ಈ ಜಗತ್ತೆಲ್ಲವೂ ಪೂರ್ಣ ಅಸತ್ಯವೆಂದು ಪ್ರತಿಪಾದಿಸುತ್ತದೆಂದೂ, ವಿಶ್ವವು ಶೂನ್ಯವೆಂದು ಭಾವಿಸು ತ್ತದೆಂದೂ ಪೇಜಾವರರು ಬೌದ್ಧ ಧರ್ಮದ ಬಗ್ಗೆ ಹೊಸ ಮಿಥ್ಯವನ್ನು ಕಂಡುಹಿಡಿದಿದ್ದಾರೆ. ಇದು ಅವರ ಅಜ್ಞಾನವೆನ್ನಬೇಕೋ ಅಥವ ಅವರ ಪ್ರಖಾಂಡ ಪಾಂಡಿತ್ಯ ವೆನ್ನಬೇಕೋ ಅಥವ ಸಂಘಪರಿ ವಾರದ ವಿಷಪೂರಿತ ಸೈದ್ಧಾಂತಿಕ ಸೆಗಣಿ ಅವರ ತಲೆಹೊಕ್ಕಿದೆ ಎನ್ನಬೇಕೋ ಅರ್ಥವಾಗುತ್ತಿಲ್ಲ. ಇಲ್ಲಿ ನಮಗೆ ಬೌದ್ಧ ಧರ್ಮದ ಪರ ವಕಾಲತ್ತು ವಹಿಸುವ ಅವಶ್ಯಕತೆಯಿಲ್ಲವಾದರೂ ಪೇಜಾ ವರರ ಭೊಗಳೆತನವನ್ನು ಬಯಲು ಗೊಳಿಸುವುದಕ್ಕಾದರೂ ವಾಸ್ತವ ವನ್ನು ಅರ್ಥಮಾಡಿಕೊಳ್ಳಬೇಕಾದದ್ದು ಅನಿವಾರ್ಯವಾಗಿದೆ. ಪೇಜಾವರ ಹೇಳುವಂತೆ ಬೌದ್ಧ ಧರ್ಮ ಎಲ್ಲೂ ಶೂನ್ಯತತ್ವವನ್ನು ಪ್ರತಿಪಾದಿಸುವುದಿಲ್ಲ. ವಾಸ್ತವದಲ್ಲಿ ಅದನ್ನು ಹೇಳಿದ್ದು ಹಿಂದೂ ಧರ್ಮದ ಪರಿಕಾರರಲ್ಲೊಬ್ಬನಾದ ಶಂಕರಾಚಾರ್ಯ. "ಜಗನ್ಮಿಥ್ಯಾ ಬ್ರಹ್ಮ ಸತ್ಯಾ" "ಅಹಂ ಬ್ರಹ್ಮಾಸ್ಮಿ" ಎಂಬ ಅವರ ಮಾತುಗಳು ಇಂದಿಗೂ ಬ್ರಾಹ್ಮಣಶಾಹಿಗಳ ಬಾಯಲ್ಲಿ ಅನುರಣಿಸುತ್ತಿವೆ. ಅಂದರೆ, ಜಗತ್ತೆಲ್ಲಾ ಮಿಥ್ಯೆ (ಸುಳ್ಳು) ಬ್ರಹ್ಮ ಮಾತ್ರ ಸತ್ಯ ಬ್ರಹ್ಮ ಬೇರೆಯಲ್ಲ ತಾನೇ ಬ್ರಹ್ಮ ಎಂಬುದು ಶಂಕರಾಚಾರ್ಯರ ಅದ್ವೈತ ಸಿದ್ಧಾಂತದ ತಳಹದಿ. ಶಂಕರರ ಪ್ರಕಾರ ಈ ವಿಶ್ವದಲ್ಲಿ ದಿನನಿತ್ಯ ಕಾಣುತ್ತಿರುವ ಅನ್ಯಾಯವಾಗಲೀ, ಶೋಷಣೆಯಾಗಲೀ, ಜಾತಿಪದ್ಧತಿಯಾಗಲೀ, ದೌರ್ಜನ್ಯಗಳಾಗಲೀ – ಎಲ್ಲವೂ ಸುಳ್ಳು, ಅವೆಲ್ಲ ನಮ್ಮ ನಮ್ಮ ಕಲ್ಪನೆಗಳು ಮಾತ್ರ. ಅವುಗಳನ್ನೆಲ್ಲಾ ನಾವೇ ನಮ್ಮ ಕಲ್ಪನೆಗಳಲ್ಲಿ ಸೃಷ್ಟಿಸುತ್ತೇವಾದ್ದರಿಂದ ನಾನೇ ಸೃಷ್ಟಿಕರ್ತ (ಬ್ರಹ್ಮ).

ಪ್ರಪಂಚದ ಅಸ್ತಿತ್ವವನ್ನೇ ಅಲ್ಲಗಳೆಯುವ ಈ ಸಿದ್ಧಾಂತದ ಬಗ್ಗೆ ಪೇಜಾವರರಿಗೆ ಅಷ್ಟೊಂದು ಕೋಪವಿದ್ದರೆ ನೇರವಾಗಿ ಶಂಕರಾಚಾರ್ಯನ ಅದ್ವೈತ ಸಿದ್ಧಾಂತವೇ ಒಂದು ಮಿಥ್ಯ ಎಂದು ಧೈರ್ಯವಾಗಿ ಹೇಳಬಹುದಿತ್ತು. ಆದರೆ ಅಷ್ಟೊಂದು ಧೈರ್ಯ ಅವರಿಗೆಲ್ಲಿದೆ? ಆದ್ದರಿಂದಲೇ, ಶಂಕರಾಚಾರ್ಯನ ಈ ಅಸಂಬದ್ಧ ಸಿದ್ಧಾಂತವನ್ನು ಬುದ್ಧನ ಬಾಯಲ್ಲಿ ಹಾಕಿ ಬೌದ್ಧ ಧರ್ಮದ ಮೇಲೆ ದಾಳಿಗಿಳಿದಿದ್ದಾರೆ.

ಪೇಜಾವರರು ಸಂಶೋಧನೆ ನಡೆಸಿ ಕಂಡುಹಿಡಿದಿರುವ ಮತ್ತೊಂದು ಮಿಥ್ಯ ಎಂದರೆ ಬೌದ್ಧ ಧರ್ಮವು ಹಿಂದೂ ಧರ್ಮದ ಭಾಗವೇ ಆಗಿದೆ ಎಂಬುದು. ಚರಿತ್ರೆಯ ಸ್ವಲ್ಪ ಜ್ಞಾನವಿದ್ದವನಿಗೂ ಇದು ಎಂತಹ ಅಸಂಬದ್ಧ, ತರ್ಕಹೀನ ಹಾಗೂ ಅಚಾರಿತ್ರಿಕವಾದದ್ದು ಎಂಬುದು ಅರ್ಥವಾಗುತ್ತದೆ.

ಇಲ್ಲಿ ಕೇಳಬೇಕಾದ ಮೊದಲನೇ ಪ್ರಶ್ನೆಯೆಂದರೆ ಪೇಜಾವರರ ಪ್ರಕಾರ ಬೌದ್ಧ ಧರ್ಮ ಹಿಂದೂ ಧರ್ಮದ ಭಾಗವೇ ಆಗಿದ್ದರೆ ದಲಿತರು ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುವುದನ್ನು ಅವರೇಕೆ ವಿರೋಧಿಸುತ್ತಿದ್ದಾರೆ? ದಲಿತರು ಬೌದ್ಧ ಧರ್ಮದಲ್ಲಿದ್ದರೂ ಹಿಂದೂ ಧರ್ಮದಲ್ಲಿದ್ದಂತೆಯೇ ಆಗುವುದಿಲ್ಲವೇ? ಇದಕ್ಕೆ ಪೇಜಾ ವರರ ಹತ್ತಿರ ಉತ್ತರವಿಲ್ಲ.

ವಾಸ್ತವ ಏನೆಂದರೆ, ಬೌದ್ಧ ಧರ್ಮವಾಗಲೀ, ಜೈನ ಧರ್ಮವಾಗಲೀ ಎಂದೂ ಹಿಂದೂ ಧರ್ಮದ ಭಾಗವಾಗಿರಲೇ ಇಲ್ಲ. ಇನ್ನೂ ಒಂದು ಕಠೋರ ಸತ್ಯವೆಂದರೆ ಈ ಎರಡೂ ಧರ್ಮಗಳು ವೈದಿಕ ಹಿಂದೂ ಧರ್ಮದ ಕಂದಾಚಾರಗಳಿಗೆ, ದೌರ್ಜನ್ಯಗಳಿಗೆ, ಶೋಷಣೆಗೆ ವಿರುದ್ಧವಾಗಿ ಸಿಡಿದೆದ್ದು ಹುಟ್ಟಿಕೊಂಡ ಧರ್ಮಗಳು. ಕ್ರಿ.ಪೂ. ಆರನೇ ಶತಮಾನದಲ್ಲಿ ವೈದಿಕ ಧರ್ಮದ ಕಂದಾಚಾರಗಳು ಉತ್ತುಂಗದಲ್ಲಿದ್ದಾಗ, ವೈದಿಕ ಧರ್ಮದ ಹೆಸರಿನಲ್ಲಿ ಸಾಮಾನ್ಯ ಜನರ ಮೇಲೆ ವೈದಿಕಶಾಹಿಗಳು ಹೇಳತೀರದ ದೌರ್ಜನ್ಯಗಳನ್ನು, ಶೋಷಣೆಯನ್ನು ಹರಿಬಿಟ್ಟಿದ್ದಾಗ, ವರ್ಣಾಶ್ರಮ ವ್ಯವಸ್ಥೆಯೊಳಗೆ ಶೂದ್ರರನ್ನು ತುಳಿಯುತ್ತಿದ್ದಾಗ, ದಲಿತರನ್ನು ವರ್ಣಾಶ್ರಮ ವ್ಯವಸ್ಥೆಯಿಂದ ಹೊರಗಿಟ್ಟು ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣುತ್ತಿದ್ದಾಗ ಇವೆಲ್ಲವುಗಳ ವಿರುದ್ಧದ ಪ್ರತಿರೋಧವಾಗಿ ಹುಟ್ಟಿಕೊಂಡ ಧರ್ಮಗಳೇ ಜೈನ ಮತ್ತು ಬೌದ್ಧ ಧರ್ಮಗಳು. ವೈದಿಕ-ಬ್ರಾಹ್ಮಣಶಾಹಿಗಳಿಗೆ ಕಪ್ಪ ಕಾಣಿಕೆ ಅರ್ಪಿಸದೇ ಮೋಕ್ಷ ಪಡೆಯಬಹುದೆಂದು, ಮಾನವರೆಲ್ಲರೂ ಒಂದೇ ಜಾತಿಯೆಂದೂ ಪ್ರತಿಪಾದಿಸಿದ ಈ ಎರಡು ಧರ್ಮಗಳು ಸಹಜವಾಗಿಯೇ ವೈದಿಕ ಧರ್ಮದಲ್ಲಿ ಶೋಷಣೆ, ಅನ್ಯಾಯ, ದೌರ್ಜನ್ಯಗಳನ್ನು ಅನುಭವಿಸುತ್ತಿದ್ದ ದುಡಿಯುವ ಜನಸಮುದಾಯಗಳಿಗೆ ಆಶಾಕಿರಣವಾಗಿ ಕಂಡುಬಂದವು.



ಈ ಕಾರಣಕ್ಕೇನೇ ವೈದಿಕ ಧರ್ಮದಿಂದ ದುಡಿಯುವ ಜನಸಮುದಾಯಗಳು ತಂಡೋಪತಂಡವಾಗಿ ಜೈನ-ಬೌದ್ಧ ಧರ್ಮಗಳಿಗೆ ಮತಾಂತರಗೊಂಡು ವೈದಿಕ-ಬ್ರಾಹ್ಮಣಶಾಹಿ ಶೋಷಣೆ ಯಿಂದ ವಿಮೋಚನೆಗೊಂಡರು.

ಯಾವಾಗ ವೈದಿಕ-ಬ್ರಾಹ್ಮಣಶಾಹಿ ಹಿಂದೂ ಧರ್ಮ ಜನರಿಲ್ಲದೇ ಖಾಲಿಯಾಗಿ ನಾಶವಾಗುತ್ತದೆ ಎಂಬಂತಹ ಪರಿಸ್ಥಿತಿ ತಲುಪಿದಾಗ ಮಾಂಸಾಹಾರಿಗಳಾಗಿದ್ದ ವೈದಿಕ-ಬ್ರಾಹ್ಮಣಶಾಹಿಗಳು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದಕ್ಕಾಗಿ ಎರಡು ರೀತಿಯ ಕುತಂತ್ರಗಳನ್ನು ಹೆಣೆದರು. ಮೊದಲನೆಯದೆಂದರೆ, ಮಾಂಸಾಹಾರಿಗಳಾಗಿದ್ದ ಬ್ರಾಹ್ಮಣರೂ ಸಂಪೂರ್ಣ ಸಸ್ಯಾಹಾರಿಗಳಾಗಿ ಪರಿವರ್ತನೆಗೊಳ್ಳುವ ಮೂಲಕ ವೈದಿಕ-ಬ್ರಾಹ್ಮಣಶಾಹಿ ಹಿಂದೂ ಧರ್ಮದಲ್ಲಿ ಒಂದಿಷ್ಟು ಮಾರ್ಪಾಡುಗಳನ್ನು ತಂದು ಧರ್ಮಾಂತರವನ್ನು ತಡೆಯಲು ಪ್ರಯತ್ನಿಸಿದ್ದು. ಎರಡನೆಯದಾಗಿ, ತಮ್ಮ ಅಸ್ತಿತ್ವದ ಬುಡಕ್ಕೆ ಕೊಡಲಿಪೆಟ್ಟು ನೀಡುತ್ತಿದ್ದ ಜೈನ-ಬೌದ್ಧ ಧರ್ಮಗಳ ಮೇಲೆ ದೈಹಿಕವಾಗಿ ಹಿಂಸಾತ್ಮಕ ದಾಳಿಯನ್ನು ನಡೆಸಿ ಆ ಧರ್ಮಗಳ ಜನರನ್ನು ಬಲವಂತವಾಗಿ ಹಿಂದೂ ಧರ್ಮಕ್ಕೆ ಮತಾಂತರ ಮಾಡಿಸಿದ್ದು. ಈ ಎರಡನೇ ತಂತ್ರವನ್ನು ಯಶಸ್ವಿಯಾಗಿ ನಡೆಸಿದವನೆಂದರೆ ಶಂಕರಾಚಾರ್ಯ. ಈತ ಗೂಂಡಾ ಪಡೆಗಳಂತಹ ಧಾರ್ಮಿಕ ಮತಾಂಧರ ದಂಡನ್ನು ಕಟ್ಟಿಕೊಂಡು ಜೈನ ಬಸದಿಗಳ ಮೇಲೆ, ಬೌದ್ಧ ವಿಹಾರಗಳ ಮೇಲೆ ಅಕ್ಷರಶಃ ದಂಡೆತ್ತಿಹೋಗಿ ಅವುಗಳನ್ನೆಲ್ಲಾ ನಾಶಮಾಡಿ ಆ ಜಾಗದಲ್ಲಿ ದೇವಾಲಯಗಳನ್ನು ಕಟ್ಟಿಸಿದ.

ಹೀಗೆ ವೈದಿಕ-ಬ್ರಾಹ್ಮಣಶಾಹಿ ಹಿಂದೂ ಧರ್ಮ ಮತ್ತು ಜೈನ-ಬೌದ್ಧ ಧರ್ಮಗಳು ಚಾರಿತ್ರಿಕವಾಗಿ ಮುಖಾಮುಖಿಯಾಗಿಯೇ ನಿಂತಿರುವುದು ಎದ್ದು ಕಾಣುತ್ತದೆಯಾದರೂ ಪೇಜಾವರರು ಬೌದ್ಧ ಧರ್ಮ ಹಿಂದೂ ಧರ್ಮದ ಭಾಗ ಎಂದೇ ವಿತಂಡ-ಭಂಡ ವಾದ ಮಾಡುತ್ತಾರೆಂದರೆ ಏನೆನ್ನಬೇಕು?

ಪೇಜಾವರರು ಕಣ್ಣಲ್ಲಿ ಹರಳೆಣ್ಣೆ ಹಾಕಿಕೊಂಡು, ಬರಿಮೈಯಲ್ಲಿ ಕುಳಿತು ಹಗಲಿರುಳೆನ್ನದೇ ಸಂಶೋಧಿಸಿ ಕಂಡುಹಿಡಿದಿರುವ ಇನ್ನೊಂದು ಮಿಥ್ಯ ಎಂದರೆ "ಆಧುನಿಕ ಬುದ್ಧಿಜೀವಿಗಳು ಹಿಂದೂ ಧರ್ಮದ ಬಗ್ಗೆ ಮಾಡುತ್ತಿರುವ ಅವಹೇಳನಗಳು ಬೌದ್ಧಧರ್ಮದಲ್ಲೂ ಇವೆ" ಎಂಬುದು. ಇಲ್ಲಿ ಪೇಜಾವರರಿಗೆ ಹೇಳಬೇಕಾದ ಒಂದೇ ಮಾತು ಎಂದರೆ ಈ ಹೊತ್ತು ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುತ್ತಿರುವುದು ದಲಿತರು. ಹಿಂದೂ ಧರ್ಮದಲ್ಲಿ ಅವರು ಅನುಭವಿಸುತ್ತಿರುವ ಹಿಂಸೆ, ದೌರ್ಜನ್ಯಗಳು ಬೌದ್ಧ ಧರ್ಮದಲ್ಲಿ ಇನ್ನೂ ಹೆಚ್ಚಾಗಿದ್ದರೆ ಸಹಜವಾಗಿ ಅವರೆಲ್ಲರೂ ಹಿಂದೂ ಧರ್ಮಕ್ಕೆ ವಾಪಸಾಗುತ್ತಾರೆ ಬಿಡಿ. ಇಲ್ಲವಾದರೆ, ಹಿಂಸೆ-ದೌರ್ಜನ್ಯಗಳು ಸಾಪೇಕ್ಷವಾಗಿ ಕಡಿಮೆಯಿರುವ ಇನ್ಯಾವುದೋ ಧರ್ಮವನ್ನು ಹುಡುಕಿಕೊಳ್ಳುತ್ತಾರೆ ಬಿಡಿ.

ಹಿಂದೂ ಧರ್ಮ ಮತಾಂತರಕ್ಕೊಳಗಾಗಿ ನಾಶಗೊಳ್ಳುತ್ತಿದೆ ಎಂಬ ಆತಂಕ ನಿಜಕ್ಕೂ ವಿಶ್ವೇಶತೀರ್ಥರಿಗೆ ಇದ್ದರೆ, ಹಿಂದೂ ಧರ್ಮದಂತಹ ಭವ್ಯ-ದಿವ್ಯ ಧರ್ಮವೊಂದನ್ನು ಉಳಿಸಿಕೊಳ್ಳಬೇಕೆಂದು ನಿಜಕ್ಕೂ ಅವರಿಗೆ ಕಾಳಜಿಯಿದ್ದರೆ ಅವರು ಹಿಂದೂಧರ್ಮವನ್ನು ಜನಸ್ನೇಹಿ ಧರ್ಮವನ್ನಾಗಿ ಮಾರ್ಪಡಿಸುವ ಕಡೆಗೆ ದಿಟ್ಟ ಹೆಜ್ಜೆಯಿಡಲಿ. ದಲಿತರು ಮತ್ತು ಬ್ರಾಹ್ಮಣರು ಒಂದೇ ಸಾಲಿನಲ್ಲಿ ಬೆರೆತು ಊಟ ಮಾಡುವ ಪರಂಪರೆಯನ್ನು ಎಲ್ಲಾ ಬ್ರಾಹ್ಮಣ-ಮಠಗಳಲ್ಲೂ ಬೆಳೆಸುವುದಕ್ಕೆ ಆಂದೋಲನ ಹಮ್ಮಿಕೊಳ್ಳಲಿ. ಎಲ್ಲಾ ಬ್ರಾಹ್ಮಣ ಮಠಗಳಿಗೆ ಒಂದು ಆದರ್ಶವಾಗಿ ಪೇಜಾವರ ಮಠಕ್ಕೆ ಒಬ್ಬ ದಲಿತ ಉತ್ತರಾಧಿಕಾರಿಯನ್ನು ನೇಮಿಸಲಿ. ದಲಿತರ ಮೇಲೆ ದೌರ್ಜನ್ಯಗಳಾದಾಗಲೆಲ್ಲಾ 48 ಗಂಟೆಗಳ ಉಪವಾಸ ಸತ್ಯಾಗ್ರಹ ಮಾಡಿ ದಲಿತರ ಮನಗೆಲ್ಲಲಿ. ದಲಿತರೂ 'ಇದು ನಮ್ಮ ಧರ್ಮ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಂತೆ ಹಿಂದೂ ಧರ್ಮವನ್ನು ಆಮೂಲಾಗ್ರವಾಗಿ ಪುನರ್ರೂಪಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಲಿ. ಹಿಂದೂ ಧರ್ಮದಿಂದ ಮತಾಂತರ ತನ್ನಿಂದ ತಾನೇ ನಿಲ್ಲುತ್ತದೆ.

ಅದೆಲ್ಲ ಬಿಡಿ. ಕರ್ನಾಟಕ ಜಾತಿವಿನಾಶ ವೇದಿಕೆಯ ಅಧ್ಯಕ್ಷ, ಸಾಹಿತಿ, ಮಾದಿಗ ಜಾತಿಗೆ ಸೇರಿದ ಲಕ್ಷ್ಮಣ್ ಅವರು ಇತ್ತೀಚೆಗೆ ಪತ್ರಿಕಾಗೋಷ್ಠಿ ನಡೆಸಿ ಡಿಸೆಂಬರ್ 6ರಂದು ತಮ್ಮ ಮನೆಗೆ ಊಟಕ್ಕೆ ಬರುವಂತೆ ಪೇಜಾವರ ವಿಶ್ವೇಶತೀರ್ಥರನ್ನು ಆಹ್ವಾನಿಸಿದ್ದಾರೆ. ಜೊತೆಗೆ ಅದೇ ದಿನ ಪೇಜಾವರ ಮಠದಲ್ಲಿ 100 ಜನ ದಲಿತರು ಮತ್ತು ಬ್ರಾಹ್ಮಣರೂ ಸೇರಿದಂತೆ ನೂರು ಜನ ಸವರ್ಣೀಯರು ಒಂದೇ ಸಾಲಿನಲ್ಲಿ ಬೆರೆತು ಜೊತೆಗೂಡಿ ಊಟ ಮಾಡುವ ವ್ಯವಸ್ಥೆ ಮಾಡಬೇಕೆಂದೂ ಅವರು ಕೇಳಿ ಕೊಂಡಿದ್ದಾರೆ. ವಿಶ್ವೇಶತೀರ್ಥರು ಡಿಸೆಂಬರ್ 6ರಂದು ಈ ಕೆಲಸ ಮಾಡಲಿ. ಡಿಸೆಂಬರ್ 6ರಿಂದಲೇ ಹಿಂದೂ ಧರ್ಮದ ಆಮೂಲಾಗ್ರ ಸುಧಾರಣೆಯ ಅಭಿಯಾನ ಆರಂಭವಾಗಲಿ.

ಪೇಜಾವರ ವಿಶ್ವೇಶತೀರ್ಥರಿಂದ ಇವನ್ನು ನಿರೀಕ್ಷಿಸಬಹುದೆ?

■ ಕುಮಾರ್ ಬುರಡಿಕಟ್ಟಿ

ಚೆಡ್ಡಿ ಭಟ್ಟನ ಟೊಳ್ಳುತನ

'ವಿಜಯ ಕರ್ನಾಟಕ' ಪತ್ರಿಕೆಯ ಸಂಪಾದಕ ವಿಶ್ವೇಶ್ವರ ಭಟ್ಟ ತನ್ನ ಟೊಳ್ಳುತನವನ್ನು ಮತ್ತೆ ಸಾಬೀತುಪಡಿಸಿದ್ದಾನೆ. ಮಾಜಿ ಉಪಪ್ರಧಾನಿ, ಬಿಜೆಪಿಯ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ ಬರೆದಿರುವ 'ಮೈ ಲೈಫ್ ಮೈ ಕಂಟ್ರಿ' ಎಂಬ ಆತ್ಮಕತೆಯನ್ನು ತಾನು ಕನ್ನಡಕ್ಕೆ ಅನುವಾದ ಮಾಡಿದ್ದೇನೆ ಎಂದು ಹೇಳಿಕೊಂಡು ಭಟ್ಟ ಪುಗಸಟ್ಟೆ ಪ್ರಚಾರ ಪಡೆಯುತ್ತಿದ್ದಾನೆ.

ಯಾವುದೇ ಒಳನೋಟವಿಲ್ಲದ, ಪತ್ರಿಕೆಯ ವರದಿಗಳಂತಿರುವ ಅಧ್ಯಾಯಗಳನ್ನು ಹೊಂದಿರುವ ಅಡ್ವಾಣಿಯ ಈ ಪುಸ್ತಕವನ್ನು ಸಂಘಪರಿವಾರದ ಬುದ್ಧಿಜೀವಿಗಳೇ ತಿರಸ್ಕರಿಸಿದ್ದಾರೆ. ಆದರೆ ಭಟ್ಟ ಇದನ್ನು ಕನ್ನಡಕ್ಕೆ ತಂದು ಕನ್ನಡಿಗರಿಗೆ ದೊಡ್ಡ ಉಪಕಾರ ಮಾಡಿರುವಂತೆ ಕೊಚ್ಚಿಕೊಳ್ಳುತ್ತಿದ್ದಾನೆ. "ಇದೊಂದು ಸ್ವಾತಂತ್ರ್ಯ ನಂತರದ ದೇಶದ ರಾಜಕೀಯ ದಾಖಲಿಸುವ ಪುಸ್ತಕ" ಎಂದೆಲ್ಲಾ ತನ್ನ ಪತ್ರಿಕೆಯ ಅಂಕಣದಲ್ಲಿ ಸಿಕ್ಕಸಿಕ್ಕಲ್ಲಿ ಪುಂಗಿ ಬಿಡುತ್ತಿದ್ದಾನೆ.


ನನ್ನ ದೇಶ ನನ್ನ ಜನ ಪುಸ್ತಕ ಬಿಡುಗಡೆ

ವಾಸ್ತವವಾಗಿ ಈ ಪುಸ್ತಕವನ್ನು ಸಂಪೂರ್ಣವಾಗಿ ಈತ ಅನುವಾದಿಸುವುದಿರಲಿ, ಅದನ್ನು ನೆಟ್ಟಗೆ ಓದಿದ್ದಾನೆಯೇ ಎಂಬುದರ ಬಗ್ಗೆಯೇ ಅನುಮಾನಗಳಿವೆ ಎಂದು 'ವಿಕ'ದ ಸಿಬ್ಬಂದಿಗಳೇ ಮಾತನಾಡಿಕೊಳ್ಳುತ್ತಿದ್ದಾರೆ! ಯಾಕೆಂದರೆ ಈ ಪುಸ್ತಕವನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದು ಭಟ್ಟನಲ್ಲ, ಬದಲಾಗಿ 'ವಿಕ'ದ ಸಿಬ್ಬಂದಿ! ಮಾತ್ರವಲ್ಲ ಟೈಮ್ಸ್ ಆಫ್ ಇಂಡಿಯಾ (ಕನ್ನಡ) ಹಾಗೂ ಇತರ ಪತ್ರಿಕೆಗಳ ಕೆಲ ಪತ್ರಕರ್ತರೂ ಈ ಪುಸ್ತಕದ ಹಲವಾರು ಭಾಗಗಳನ್ನು ಅನುವಾದಿಸಿ ಕೊಟ್ಟಿದ್ದಾರೆ. ಹಾಗಂತ ಭಟ್ಟನೇ ಪುಸ್ತಕದಲ್ಲಿ ಸೂಕ್ಷ್ಮವಾಗಿ ಹೇಳಿದ್ದಾನೆ. ಆದರೆ ಅನುವಾದ ಮಾಡಿದವರಿಗೆ ಕೃತಜ್ಞತೆಗಳನ್ನು ಮಾತ್ರ ಆತ ಎಲ್ಲೂ ವ್ಯಕ್ತಪಡಿಸಿಲ್ಲ.

ಅದರ ಬಗ್ಗೆ ನಿಜವಾದ ಅನುವಾದಕರೂ ತಕರಾರು ಎತ್ತುತ್ತಿಲ್ಲ. ಅದಕ್ಕೆ ಕಾರಣವೂ ಇದೆ. ಅದೇನೆಂದರೆ ಅವರೆಲ್ಲ ಅನುವಾದ ಮಾಡಿದ್ದು ಭಟ್ಟನಂತೆ ತಮ್ಮ ಹೆಸರು ಅಡ್ವಾನಿಯ ಪುಸ್ತಕದಲ್ಲಿ ಪ್ರಕಟವಾಗಬೇಕೆಂಬ ಆಸೆಯಿಂದಲ್ಲ, ಬದಲಾಗಿ ಅನುವಾದ ಮಾಡಿದ್ದಕ್ಕೆ ತಮಗೆ ಹೆಚ್ಚುವರಿ ಹಣ ಸಿಗುತ್ತದೆಂದು! ಅವರಲ್ಲೇ ಒಬ್ಬರು ಹೇಳಿದ್ದೇನೆಂದರೆ "ಆ ದರಿದ್ರ ಪುಸ್ತಕ ಯಾರ ಹೆಸರಲ್ಲಾದರೂ ಪ್ರಿಂಟ್ ಆಗಲಿ, ನಾವು ಅನುವಾದ ಮಾಡಿದ್ದು ಬರೀ ದುಡ್ಡಿಗಾಗಿ" ಎಂದು.

ಸಾವಿರಕ್ಕೂ ಹೆಚ್ಚು ಪುಟಗಳನ್ನು ಹೊಂದಿರುವ ಈ ಪುಸ್ತಕವನ್ನು ಭಟ್ಟ ಒಬ್ಬನೇ ಕುಳಿತು, ಪತ್ರಿಕೆಯ ಕೆಲಸದ ನಡುವೆಯೂ ತರ್ಜುಮೆ ಮಾಡಲು ಸಾಧ್ಯವಾಗದು ಎಂದು ಕೆಲಸಗೊತ್ತಿದ್ದವರಿಗೆಲ್ಲಾ ಗೊತ್ತಿದೆ. ಆದ್ದರಿಂದ ಬೇರೆಯವರಿಗೆ ದುಡ್ಡು ಕೊಟ್ಟು (ಇನ್ನೂ ಕೆಲವರಿಗೆ ದುಡ್ಡೂ ಸಂದಾಯವಾಗಿಲ್ಲವಂತೆ) ಅನುವಾದ ಮಾಡಿಸಿ, ಆದರೆ ಮುಖಪುಟದಲ್ಲಿ ತನ್ನ ಹೆಸರನ್ನು ಪ್ರಕಟಿಸಿ ಭಟ್ಟ ಮೆರೆಯುತ್ತಿದ್ದಾನೆ.

ಮೊನ್ನೆಯ ಚುನಾವಣೆಗೂ ಮೊದಲೇ ಅಡ್ವಾಣಿಯ ಪಕ್ಕಾ ಶಿಷ್ಯ ಅನಂತಕುಮಾರ್ ಈ ಪುಸ್ತಕವನ್ನು ಕನ್ನಡಕ್ಕೆ ತರುವ ಸಾಹಸ ಮಾಡಿದ್ದರು. ಆದರೆ ಇದು ಸುಲಭದ ಕೆಲಸವಲ್ಲ ಎಂದು ಗೊತ್ತಾಗುತ್ತಿದ್ದಂತೆಯೇ ಸದಾ ಆತನ ಹಿಂದೆ-ಮುಂದೆ ಸುತ್ತಾಡುವ ಭಟ್ಟನಿಗೆ ಆ ಕೆಲಸವನ್ನು ವಹಿಸಿದ್ದರು. ಭಟ್ಟನೋ ಆ ಪುಸ್ತಕವನ್ನು ನೇರವಾಗಿ ವಿಕ ಆಫೀಸಿಗೆ ತಂದು, ಅದರ ಪುಟಗಳನ್ನು ಹರಿದು, ಒಬ್ಬೊಬ್ಬರಿಗೆ ಇಂತಿಷ್ಟು ಪುಟಗಳು ಎಂದು ಉಪ ಸಂಪಾದಕರಿಗೆ ಹಂಚಿದ್ದ. ಸಂಪಾದಕರೇ ಆದೇಶ ಹೊರಡಿಸಿದ ಮೇಲೆ ಉಪ ಸಂಪಾದಕರು ಸುಮ್ಮನಿರಲಾಗುತ್ತದೆಯೇ? ಅವರೆಲ್ಲ ತಮಗೆ ನೀಡಿದ್ದ ಪುಟಗಳನ್ನು ಅನುವಾದಿಸುವ ಕೆಲಸವನ್ನು ಪ್ರಾರಂಭಿಸಿದ್ದರು.

ಈ ಮಧ್ಯೆ ಚುನಾವಣೆ ಬಂದಾಗ ಈ ಪುಸ್ತಕದ ಕೆಲಸ ನಿಂತಿತ್ತು. ಆದ್ರೆ ಮೊನ್ನೆ ಹೇಗಿದ್ದರೂ ಅಡ್ವಾನಿ ಹಂಪಿ ಉತ್ಸವಕ್ಕೆ ಬರುತ್ತಾರೆಂದು ನಿಕ್ಕಿ ಆದಾಗ ಎಚ್ಚೆತ್ತ ಭಟ್ಟ ತಮ್ಮ ಸಿಬ್ಬಂದಿ ಮೇಲೆ ಒತ್ತಡ ಹೇರಿ ಅನುವಾದದ ಕೆಲಸವನ್ನು ಮುಗಿಸಿಕೊಂಡ. ಕೊನೆಗೆ ತನ್ನ ಕೆಲ ಆತ್ಮೀಯ ಸಿಬ್ಬಂದಿಗೆ ಉಳಿದ ಕೆಲಸವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿದ. ಅನುವಾದ ಸರಿ ಇಲ್ಲದ ಕೆಲ ಅಧ್ಯಾಯಗಳನ್ನು ಪುನಃ ಬರೆದು ಪುಸ್ತಕ ಅಚ್ಚಿಗೆ ಹೋಗುವಂತೆ ನೋಡಿಕೊಂಡಿದ್ದು ವಿಕದ ಕೆಲ ಮುಖ್ಯ ಸಂಪಾದಕರು. ಆದರೆ ಪುಸ್ತಕದಲ್ಲಿ ಅನುವಾದ ಮಾಡಿದ್ದು ವಿಶ್ವೇಶ್ವರ ಭಟ್ಟ ಎಂದೇ ಪ್ರಕಟವಾಗಿದೆ. ಪುಸ್ತಕ ಬಿಡುಗಡೆಗೂ ಮುನ್ನ ಮತ್ತು ಬಿಡುಗಡೆ ಸಮಾರಂಭದಲ್ಲೂ ಈ ಭಟ್ಟ ಮಿಂಚಿದ್ದಾನೆ.

ಸ್ವಪ್ನ ಪ್ರಕಾಶನ ಈ ಪುಸ್ತಕವನ್ನು ಪ್ರಕಟಿಸಿದ್ದರೂ, ಮುಖ್ಯಮಂತ್ರಿ ಯಡ್ಡಿಯೇ ಕಾಳಜಿ ವಹಿಸಿ ಈ ಪುಸ್ತಕ ಬಿಡುಗಡೆ ಸಮಾರಂಭವನ್ನು ಆಯೋಜಿಸಿದ್ದರು. ವಿಧಾನ ಸೌಧವನ್ನು ಈ ಕಾರ್ಯಕ್ರಮಕ್ಕೆ ಬಳಸಿಕೊಂಡು, ಸರ್ಕಾರಿ ಯಂತ್ರವನ್ನು ದುರುಪಯೋಗಪಡಿಸಿಕೊಂಡರು. ಅನಂತು ಮಾತಿಗೆ ಕಿವಿಯಾಗುತ್ತಾ ಬಂದಿರುವ ಅಡ್ವಾಣಿಯನ್ನು ಒಲಿಸಿಕೊಳ್ಳಲು ಯಡ್ಡಿ ಈ ಕಾರ್ಯಕ್ರಮವನ್ನು ಬಳಸಿಕೊಂಡಿದ್ದಾರೆ ಎಂಬ ಮಾತೂ ಕೇಳಿ ಬಂದಿದೆ.

ಕಾರ್ಯಕ್ರಮಕ್ಕೆ ಹೋದವರಿಗೆಲ್ಲಾ ಒಂದು ಚೀಲದ ತುಂಬಾ ಸಾಮಗ್ರಿಗಳನ್ನು ಕೊಡಲಾಗಿದೆ. ಇದರಲ್ಲಿ ಪೆನ್ನು, ನೋಟ್ ಪ್ಯಾಡ್, ಮುನ್ನುಡಿ ಮತ್ತು ಅನುವಾದಕನ ಮಾತುಗಳನ್ನೊಳಗೊಂಡ ಕಿರು ಹೊತ್ತಿಗೆ, ಅನುವಾದಕನ ಮಾತುಗಳಿರುವ ಪೋಸ್ಟ್‌ಕಾರ್ಡ್ ಹೀಗೆ ಭಟ್ಟನ ಭೋಪರಾಕ್ ಸಾಮಗ್ರಿಗಳೇ ಸಾಕಷ್ಟಿದ್ದವು. ಇದನ್ನೆಲ್ಲಾ ಸ್ವಪ್ನದವರು ಕೊಟ್ಟರೋ ಅಥವಾ ಭಟ್ಟನೇ ಮಾಡಿಸಿ ಕೊಟ್ಟನೋ ಗೊತ್ತಿಲ್ಲ.


ವಿಶ್ವೇಶ್ವರ ಭಟ್

ಚಿನ್ನನ್‌ದಾಸ್‌ಗ[ೆ] ಮೋಡಿ

ಅಡ್ವಾಣಿಯ ಪುಸ್ತಕವನ್ನು ಕನ್ನಡಕ್ಕೆ ತಾನೇ ಅನುವಾದ ಮಾಡಿದ್ದು ಎಂದು ಹೇಳಿಕೊಂಡು ಬಿಜೆಪಿ ವಲಯದಲ್ಲಿ 'ಹೀರೋ' ಆಗಿರುವ ಭಟ್ಟ, ವಿಕವನ್ನು ಪ್ರಕಟಿಸುತ್ತಿರು[ವ] ಟೈಮ್ಸ್ ಗ್ರೂಪ್‌ನ ವಿಪಿಎಲ್ ಅಧ್ಯಕ್ಷ ಚಿನ್ನ[ನ್] ದಾಸ್‌ಗೂ ಮೋಡಿ ಮಾಡಿ ಅವರು ಆಕ್ಷೇಪವೆತ್ತದಂತೆ ಮಾಡಿದ್ದಾನೆ. ಚಿನ್ನನ್ ದಾಸ್ ಅವರನ್ನು ಪುಸ್ತಕ ಬಿಡುಗ[ಡೆ] ಕಾರ್ಯಕ್ರಮಕ್ಕೆ ಬರಮಾಡಿಕೊಂಡು, ಅಡ್ವಾಣಿಯಿಂ[ದ] ಅವರಿಗೊಂದು ಪುಸ್ತಕಕೊಡಿಸಿ, ಹಂಗಿಗೆ ಬೀಳಿಸಿದ್ದಾ[ನೆ].

ವಿಕವನ್ನು ಬಿಜೆಪಿ ಕರಪತ್ರವಾಗಿ ಮಾಡಿರುವುದ[ಕ್ಕೆ] ಟೈಮ್ಸ್ ಗ್ರೂಪ್‌ನಲ್ಲಿಯೇ ವಿರೋಧ ವ್ಯಕ್ತವಾಗುತ್ತಿ[ದೆ]. ಹೀಗಾಗಿ 'ಬಾಸ್' ಚಿನ್ನನ್ ದಾಸ್ ಅವರನ್ನೇ ಬುಟ್ಟಿ[ಗೆ] ಹಾಕಿಕೊಂಡು ತನ್ನ 'ಕೆಲಸ' ನಿರಂತರವಾಗಿ ನಡೆಯುವ[ಂತೆ] ನೋಡಿಕೊಂಡಿದ್ದಾನೆ. ಕನ್ನಡ ಬಾರದ ಚಿನ್ನನ್ ದಾ[ಸ್] ಪತ್ರಿಕೆ ತರುತ್ತಿರುವ ಆದಾಯವನ್ನು ಮಾತ್ರ ನೋ[ಡಿ] ಮಿಕ್ಕೆಲ್ಲವನ್ನು ಮರೆಯುವಂತಹವರು ಎಂಬುದ[ನ್ನು] ಅರಿತಿರುವ ಭಟ್ಟ ಅದನ್ನೇ ತನ್ನ ಬಂಡವಾ[ಳ] ಮಾಡಿಕೊಂಡು ತಾನಾಡಿದ್ದೇ ಆಟ ಎಂಬಂ[ತೆ] ವರ್ತಿಸುತ್ತಿದ್ದಾನೆ.


ಇತ್ತೀಚೆಗೆ ವಿಕಕ್ಕೆ ಹತ್ತು ವರ್ಷವಾದ ಹಿನ್ನೆಲೆಯ[ಲ್ಲಿ] ಕಾರ್ಯಕ್ರಮವೊಂದನ್ನು ಪತ್ರಿಕೆಯ ಕಚೇರಿಯ[ಲ್ಲಿ] ಆಯೋಜಿಸಲಾಗಿತ್ತು. ಟೈಮ್ಸ್ ಗ್ರೂಪ್‌ನ ಎಲ್ಲ ಪತ್ರಿಕೆ[ಗಳ] ಸಂಪಾದಕರೂ ಅಂದು ಸೇರಿದ್ದರು. ಆಗ 'ಎಕನಾಮಿ[ಕ್] ಟೈಮ್ಸ್'ನ ಸಂಪಾದಕರು ಎಸ್.ಎಲ್.ಭೈರಪ್ಪ[ನ] 'ಮತಾಂತರ' ಆಟದ ಬಗ್ಗೆ ಭಟ್ಟನನ್ನು ತಣ್ಣಗೆ ತರಾಟೆ[ಗೆ] ತೆಗೆದುಕೊಂಡರಂತೆ. ಆದರೆ, ಕನ್ನಡ ಬಾರದ ಚಿನ್ನ[ನ್] ದಾಸ್ ಮಾತ್ರ "ಭಟ್ಟ ಚೆನ್ನ ಇದ್ದಹಾಗೆ" ಎಂ[ದು] ಹಾಡಿಹೊಗಳಿದ್ದನ್ನು ನೋಡಿ, ಅಲ್ಲಿದ್ದ ಎಲ್ಲರ[ೂ] ಬೆಚ್ಚಿಬಿದ್ದರಂತೆ.

ಇದು ಮೊದಲಲ್ಲ!

ದುಡ್ಡುಕೊಟ್ಟು ಯಾರ ಹತ್ತಿರವಾದರೂ ಅನುವಾ[ದ]

ಜಮಖಂಡಿ: ಆರ್.ಕೆ.ನಾಯಕ್‌ನ ತುಘಲಕ್ ದರ್ಬಾರ್

ಶ್ರೀಕಾಂತ್ ಕುಲಕರ್ಣಿ ಎಂಬ ಅಪ್ಪಟ ಚೆಡ್ಡಿ ಶಾಸಕ ಮತ್ತು ಆರ್.ಕೆ. ನಾಯಕ್ ಎಂಬ ಡಿವೈಎಸ್‌ಪಿ ಇಬ್ಬರೇ ಸಾಕು ಜಮಖಂಡಿಯನ್ನು ಸುಡುಗಾಡು ಮಾಡುವುದಕ್ಕೆ. ಕುಲಕರ್ಣಿಯಂಥ ಅಡ್ನಾಡಿಯನ್ನು ಶಾಸಕನನ್ನಾಗಿ ಗೆಲ್ಲಿಸಿ ನಾಯಕ್‌ನಂಥ ಸರ್ವಾಧಿಕಾರಿಯನ್ನು ಫ್ರೀಯಾಗಿ ಪಡೆದ ದೌರ್ಭಾಗ್ಯ ಜಮಖಂಡಿಯ ಜನರದ್ದು.



ಆರ್.ಕೆ.ನಾಯಕ್


ಕಳೆದ ಚುನಾವಣೆಗೆ ಮುನ್ನವೇ ಜಮಖಂಡಿಯ ಸರ್ಕಾರಿ ಅಧಿಕಾರಿಗಳು ಕುಲಕರ್ಣಿಗೆ ಕಪ್ಪ ಕಾಣಿಕೆ ಅರ್ಪಿಸಿದ್ದರು. ಚುನಾವಣೆ ಮುಗಿದು ಆತ ಗೆದ್ದ ಮೇಲೆ ಅಧಿಕಾರಿಗಳನ್ನು ಎತ್ತಂಗಡಿ ಮಾಡಬಾರದೆಂದರೆ ಮತ್ತೆ ಕಾಣಿಕೆ ಅರ್ಪಿಸಬೇಕೆಂದು ಕುಲಕರ್ಣಿ ಆಜ್ಞೆ ಹೊರಡಿಸಿದ್ದ. ಯಾರ್ಯಾರು ಕೊಡಲಿಲ್ಲವೋ ಅವರನ್ನೆಲ್ಲಾ ಹಿಂದುಮುಂದು ನೋಡದೆ ಎತ್ತಂಗಡಿ ಮಾಡಿಬಿಟ್ಟ. ಆ ಜಾಗಕ್ಕೆ ತನಗೆ ಅಮೇಧ್ಯ ತಿನ್ನಿಸಿದವರನ್ನು ತಂದು ಕೂರಿಸಿದ. ಹೀಗೆ ಜಮಖಂಡಿಗೆ ವಕ್ಕರಿಸಿದವರಲ್ಲಿ ಡಿವೈಎಸ್‌ಪಿ ಆರ್.ಕೆ.ನಾಯಕ್ ಕೂಡ ಒಬ್ಬ.

ನಾಯಕ್ ಲಂಬಾಣಿ ಜನಾಂಗಕ್ಕೆ ಸೇರಿದವನು. ಆದರೂ, ಈತ ಲಂಬಾಣಿ ಜನರನ್ನೆ ನಾಯಿಗಿಂತ ಕೀಳಾಗಿ ಕಾಣುವ ಸಂಘಪರಿವಾರಿಗಳ ಕಾವಲು ನಾಯಿಯಂತಾಗಿರುವುದು ಇಡೀ ಲಂಬಾಣಿ ಜನಾಂಗಕ್ಕೆ ಆತ ಮಾಡುತ್ತಿರುವ ಮೋಸ. ಈತನ ನಡಾವಳಿಗಳು, ದಲಿತ ವಿರೋಧಿ ಆರ್ಭಟಗಳು ಎಂಥ ಆರ್‌ಎಸ್‌ಎಸ್ ಕೇಡರನ್ನೂ ಮೀರಿಸುತ್ತವೆ.

ದಲಿತ ವಿರೋಧಿ ಡಿವೈಎಸ್‌ಪಿ

ಮೊನ್ನೆ ನಡೆದ ಒಂದು ಘಟನೆಯನ್ನೇ ನೋಡಿ. ಈ ಹಿಂದಿನ ತಹಶೀಲ್ದಾರರು ದಲಿತರ ಸಾಮಾಜಿಕ ಕಾರ್ಯಕ್ರಮಗಳಿಗೆ ಅನುಕೂಲವಾಗಲೆಂದು ಜಮಖಂಡಿ ತಾಲ್ಲೂಕಿನ ಸಾವಳಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕನ್ನಳ್ಳಿ ಎಂಬಲ್ಲಿ ಒಂದು ಎಕರೆ ಜಾಗವನ್ನು ಕೊಡಮಾಡಿದ್ದರು. ಅಲ್ಲಿ ದಲಿತರು ತಮ್ಮ ಆತ್ಮಾಭಿಮಾನದ ಸಂಕೇತವಾದ ನೀಲಿ ಧ್ವಜಗಳನ್ನು ನೆಟ್ಟಿದ್ದರು. ಅವು ಈ ಡಿವೈಎಸ್‌ಪಿ ನಾಯಕ್‌ಗೆ ಏನು ತೊಂದರೆ ಕೊಟ್ಟವೋ ಗೊತ್ತಿಲ್ಲ, ಏಕಾಏಕಿ ಅಲ್ಲಿಗೆ ದಾಳಿ ಮಾಡಿ ಬೂಟುಗಾಲಿನಿಂದ ಅವುಗಳನ್ನೆಲ್ಲಾ ಒದ್ದು ಕಿತ್ತುಹಾಕಿಬಂದಿದ್ದಾನೆ.


ಎಂ.ಬಿ.ಸುಂಕದ್


ಶ್ರೀಕಾಂತ್ ಕುಲಕರ್ಣಿ

ಸಹಜವಾಗಿಯೇ ಇದು ದಲಿತ ಸಂಘಟನೆಗಳ ನಾಯಕರನ್ನು ಕೆರಳಿಸಿದೆ. ತಮ್ಮ ದಲಿತಪರ ಹೋರಾಟಗಳಿಂದ ಜಮಖಂಡಿಯಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ರಾಜು ಮೇಲಿನಕೇರಿ ಎಂಬ ದಲಿತ ಯುವಕ ಡಿವೈಎಸ್‌ಪಿ ನಾಯಕ್ ವಿರುದ್ಧ ಸೆಡ್ಡು ಹೊಡೆದಿದ್ದಾನೆ. ಇದು ಇಬ್ಬರ ನಡುವೆಯೂ ಗುದ್ದಾಟಕ್ಕೆ ತಿರುಗಿದೆ. ಯಃಕಶ್ಚಿತ್ ಒಬ್ಬ ದಲಿತ ಯುವಕ ತನ್ನಂಥ ಸರ್ವಾಧಿಕಾರಿಗೇ ಸೆಡ್ಡು ಹೊಡೆಯುತ್ತಾನೆಂದರೆ ಏನರ್ಥ ಎಂದುಕೊಂಡು ಡಿವೈಎಸ್‌ಪಿ ನಾಯಕ್ ಒಳಗೊಳಗೇ ಬೆದರಿದ್ದಾನೆ. ಮುಂದೆಯೂ ಈತ ತನಗೆ ಅಪಾಯಕಾರಿಯೇ ಎಂದು ಆ ಯುವಕನನ್ನು ಜೈಲಿಗಟ್ಟುವ ಸಂಚು ರೂಪಿಸಿದ್ದಾನೆ. ಸಾವಳಗಿ ಗ್ರಾಮ ಪಂಚಾಯತಿಯ ಸೆಕ್ರೆಟರಿ ಮತ್ತು ನಾಲ್ಕಾರು ಮೆಂಬರುಗಳನ್ನು ಕರೆಸಿ ಒತ್ತಾಯಪೂರ್ವಕವಾಗಿ ರಾಜು ಮೇಲಿನಕೇರಿಯ ವಿರುದ್ಧ ಕಂಪ್ಲೇಂಟ್ ಬರೆಸಿಕೊಂಡು ಒಂದಲ್ಲ ಮೂರು ಕೇಸು ಜಡಿದಿದ್ದಾನೆ. ಇದು ಈತನ ದಲಿತ ವಿರೋಧಿ ತುಘಲಕ್ ದರ್ಬಾರ್‌ಗೆ ಒಂದು ಚಿಕ್ಕ ಉದಾಹರಣೆಯಷ್ಟೆ.

ಈತ ಈ ಹಿಂದೆ ಬಿಜಾಪುರ ಜಿಲ್ಲೆಯ ಇಂಡಿಯಲ್ಲಿದ್ದಾಗಲೂ ಇದೇ ಚಟವನ[್ನು] ಅಂಟಿಸಿಕೊಂಡಿದ್ದ. ಅಲ್ಲಿ ದಲಿತ ಸ್ವಾಭಿಮಾ[ನ] ಹೋರಾಟಗಳಿಗೆ ನೇತೃತ್ವ ವಹಿಸಿದ್ದ ಜಿತೇಂ[ದ್ರ] ಕಾಂಬಳೆ ಎಂಬ ಯುವಕನನ್ನು ಮಟ್ಟ[ಹಾಕುವುದಕ್ಕೂ] ಹಾಕುವುದಕ್ಕೂ ಇದೇ ತಂತ್ರಗಳನ್ನು ಬಳಸಿ[ದ್ದ]. ಈಗ್ಗೆ ಮೂರು ವರ್ಷಗಳ ಹಿಂದೆ ಇಂಡಿಯ[ಲ್ಲಿ] ಕೆಲವು ಸವರ್ಣೀಯ ಯುವಕರು ದಲಿ[ತ] ಹುಡುಗಿಯೊಬ್ಬಳನ್ನು ಅತ್ಯಾಚಾರ ಮಾ[ಡಿ] ಕೊಲೆಮಾಡಿದ್ದರು. ಆಗ ಇದೇ ನಾಯ[ಕ್] ಅಪರಾಧಿಗಳನ್ನು ಹಿಡಿದು ಕಾನೂನಿನ ಕಟ್ಟಳೆ[ಗೆ] ಒಪ್ಪಿಸುವುದನ್ನು ಬಿಟ್ಟು ಕೇಸ್ ಮುಚ್ಚಿಹಾಕು[ವ] ಮೂಲಕ ಅವರೆಲ್ಲರನ್ನೂ ಬಚಾವ್ ಮಾಡಿ[ದ್ದ].

ಆಗ ಡಿವೈಎಸ್‌ಪಿ ನಾಯಕ್ ವಿರು[ದ್ಧ] ಜಿತೇಂದ್ರ ಕಾಂಬಳೆ ದಲಿತರನ್ನು ಒಗ್ಗೂಡಿ[ಸಿ] ಪ್ರತಿಭಟನೆ ನಡೆಸಿದ್ದ. ಇನ್ನೊಂದು ಪ್ರಕರಣದಲ್[ಲಿ] ಕಾಂಬಳೆ ನಾಯಕ್‌ನನ್ನು ಎದುರುಹಾಕಿಕೊಂಡಿದ[್ದ]. ಮಹಾದೇವ್ ಹರಿಜನ ಎಂಬ ದಲಿತನೊಬ್ಬ[ನ] ಕೊಲೆಯಾಗಿತ್ತು. ಕೊಲೆಯಲ್ಲಿ ಭಾಗಿಯಾದ ಆರು ಜ[ನ] ಆರೋಪಿಗಳಲ್ಲಿ ಭೀಮಾಶಂಕರ್ ನಾಟಿಕರ್ ಎಂ[ಬ] ಪೊಲೀಸ್ ಪೇದೆಯೂ ಇದ್ದ. ನಾಯಕ್‌ನ ದಗಲ್ಬಾಜಿಗಳ[ಿಗೆ] ಈ ನಾಟಿಕರ್ ಯಾವಾಗಲೂ ಸಾಥ್ ನೀಡಿದ್ದ. ಅದ[ಕ್ಕೆ] ಪ್ರತ್ಯುಪಕಾರ ಸಲ್ಲಿಸುವ ಉದ್ದೇಶದಿಂದಲೋ ಏನೋ ಈ[?] ಕೊಲೆ ಪ್ರಕರಣದಿಂದ ನಾಟಿಕರ್‌ನನ್ನು ಸೇಫ್ ಮಾಡಿಬಿಟ್[ಟ]. ಇದರ ವಿರುದ್ಧವೂ ಕಾಂಬಳೆ ದಲಿತರನ್ನು ಕಟ್ಟಿಕೊಂಡ[ು] ಬೀದಿಗಿಳಿದಿದ್ದ. ಅದೂಅಲ್ಲದೇ ಮಟ್ಕಾ ಮತ್ತು ಇಸ್ಪೀಟ[್] ಅಡ್ಡೆಗಳನ್ನು ಮುಚ್ಚಬೇಕೆಂದು ಈಗಾಗಲೇ ಕಾಂಬ[ಳೆ] ಹಲವಾರು ಬಾರಿ ಹೋರಾಟ ನಡೆಸಿದ್[ದ]. ಇವುಗಳನ್ನೇನಾದರೂ ಮುಚ್ಚಿದರೆ ಡಿವೈಎಸ್‌ಪಿಯ

ಗಂಗೂಳ ಸೈಕಲ್



ಗಂಗೂ ಎಂಬಾಕೆ ಮೂಲತಃ ಬಿಜಾಪುರದವಳು. ಕಲಿತದ್ದು ಸೈಕ್ಲಿಂಗ್. ಅದರಲ್ಲಿ ಚಾಂಪಿಯನ್ ಕೂಡ ಹೌದು. ಈಕೆಗೆ ಈ ಹಿಂದೆಯೇ ಒಬ್ಬ ಪೇದೆಯೊಂದಿಗೆ ಮದುವೆಯಾಗಿತ್ತು. ಗಂಡ-ಹೆಂಡತಿ ಸುಖವಾಗಿ ಸೈಕಲ್ ಏರಿ ಹೋಗುವುದು ಅದೇಕೋ ಡಿವೈಎಸ್ಪಿ ನಾಯಕ್‌ಗೆ ಸರಿಕಾಣಲಿಲ್ಲವೇನೋ. ಹಿಂದು ಮುಂದು ನೋಡದೆ ಅವರ ಸೈಕಲ್ ಪಂಚರ್ ಮಾಡಿಬಿಟ್ಟ. ಡಿವೈಎಸ್ಪಿ ಸಾಹೇಬ್ರನ್ನು ಎದುರು ಹಾಕಿಕೊಂಡು ಒಬ್ಬ ಸಾಮಾನ್ಯ ಪೇದೆ ಬದುಕುವುದುಂಟೆ? ಆ ಪೇದೆ ಹೇಳದೆ ಕೇಳದೆ ಓಡಿಹೋಗಿಬಿಟ್ಟ. ಆಗ ಗಂಗೂಳ ಸೈಕಲ್‌ಅನ್ನು ನಾಯಕನೇ ಸವಾರಿ ಮಾಡಲಾರಂಭಿಸಿದ.

ಇದರ ಬಗ್ಗೆ ಇಡೀ ಊರೇ ಆಡಿಕೊಂಡಿತ್ತು. ಆದರೇನಂತೆ? ಗಂಗೂಳಿಗೆ ಬಿಜಾಪುರದ ಸೋಲ್ಲಾಪುರ ರೋಡಿನ ಕೆಎಚ್‌ಬಿ ಕಾಲನಿಯಲ್ಲಿ ಕಾಲು ಕೋಟಿಗೂ ಹೆಚ್ಚು ಬೆಲೆಬಾಳುವ ಒಂದು ಗ್ಯಾರೇಜ್ ಉಡುಗೊರೆಯಾಗಿ ಸಿಕ್ಕಿತು.

ಸ್ವಲ್ಪ ಕಾಲದ ನಂತರ, ಅಲ್ಲಿಗೆ ಅರುಣ್ ಚಕ್ರವರ್ತಿ ಎಸ್ಪಿಯಾಗಿ ಬಂದರು. ಖಡಕ್ ಅಧಿಕಾರಿಯಾದ ಚಕ್ರವರ್ತಿ ಇವರಿಬ್ಬರ ಸೈಕ್ಲಿಂಗ್‌ಗೆ ಅಡ್ಡಹಾಕಿದರು. ನಾಯಕ್ ಮೈಕೈ ಪರಚಿಕೊಳ್ಳುತ್ತಾ ಜಮಖಂಡಿಗೆ ಓಡಿ ಬಂದ. ಸದ್ಯಕ್ಕೆ ಜಮಖಂಡಿಯಲ್ಲಿ ಅವನಿಗೆ ಯಾರ ಸೈಕಲ್ ಇನ್ನೂ ಸಿಕ್ಕಿಲ್ಲ!

...ಪಿ. ಅವನ್ನು ತಾನೇ ಅನುವಾದ ಮಾಡಿದ್ದು ... ಭಟ್ಟ ಹೇಳಿಕೊಳ್ಳುತ್ತಿರುವುದು ಇದೇ ...ವಲೇನೂ ಅಲ್ಲವಂತೆ. ಹಿಂದೆ ಪ್ರತಿಭಾವಂತ ...ರ್ ಪಿ.ಪಿ. ಸತೀಶ್ ಅನುವಾದ ಮಾಡಿದ್ದ ಒಶೋ ... ಪುಸ್ತಕಕ್ಕೆ ತನ್ನ ಹೆಸರು ಹಾಕಿಕೊಂಡು ಪ್ರಕಟಿಸಿದ್ದ ... ಎಂದು ಕೆಲವರು ಮಾತನಾಡಿಕೊಳ್ಳುತ್ತಿದ್ದಾರೆ. ...ಪತ್ರಿಕೆಯಲ್ಲಿನ ಸಿಬ್ಬಂದಿಗೆ ಪ್ರಮೋಷನ್ ಬೇಕೆಂದರೆ ... ಭಟ್ಟನಿಗೆ ಒಂದು ಪುಸ್ತಕ ಅನುವಾದ ...ಕೊಡಬೇಕೆಂಬ ಅಲಿಖಿತ ಷರತ್ತೂ ಇದೆಯಂತೆ. ...ಗಿ ಈಗ ಆ ಪತ್ರಿಕೆಯ ಪ್ರಮುಖ ಹುದ್ದೆಯಲ್ಲಿರು...ವ್ವಾ ಒಂದಲ್ಲ ಒಂದು ಪುಸ್ತಕವನ್ನು ಭಟ್ಟನಿಗೆ ...ವಾದ ಮಾಡಿಕೊಟ್ಟಿದ್ದಾರೆ. ಅನುವಾದ ಮಾಡಲ್ಲ ...ವರು ಕೆಲಸ ಬಿಟ್ಟು ಹೋಗಿದ್ದಾರೆ ಎಂಬ ಮಾತು ... ಕಚೇರಿಯಿಂದಲೇ ಕೇಳಿಬರುತ್ತಿದೆ.

...ಮಹಾಭ್ರಷ್ಟ ಪತ್ರಕರ್ತ ಕಾರಂಜಿಯಾನನ್ನು ...ವದೆಯ ಪತ್ರಕರ್ತ' ಎಂದು ಹೊಗಳಿದ್ದ ಈ ... ಆದರ್ಶ ಪತ್ರಿಕೋದ್ಯಮಿ ಯಾರು ಗೊತ್ತ? ...ನ ಎಲ್ಲ ಮಾಧ್ಯಮಗಳ, ಸರ್ಕಾರದ ಮೇಲೆ ಹಿಡಿತ ಸಾಧಿಸಲು ಹವಣಿಸುತ್ತಿರುವ ರೂಪರ್ಟ್ ಮುರ್ಡೋಕ್! ಕಾರಂಜಿಯಾ ಮತ್ತು ಮುರ್ಡೋಕ್ ಬಗ್ಗೆ ಇಂಗ್ಲಿಷ್‌ನಲ್ಲಿ ಪ್ರಕಟವಾಗಿದ್ದನ್ನೆಲ್ಲ ಉಪ ಸಂಪಾದಕರು ಸಂಗ್ರಹಿಸಿ ಕನ್ನಡಕ್ಕೆ ಅನುವಾದಿಸಿದ್ದನ್ನು ತನ್ನ ಹೆಸರಿನಲ್ಲಿ ಪ್ರಕಟಿಸಿರುವ ಈ ಭಟ್ಟ ಯಾರಿಗೂ ಆದರ್ಶ ಆಗದಿದ್ದರೆ ಅದೇ ಈ ನೆಲದ ಪುಣ್ಯ!

ಪ್ರತಿಭಾವಂತರೊಂದಿಗೆ, ಹೆಸರಾಂತ ಲೇಖಕರೊಂದಿಗೆ ತನಗೆ ಆತ್ಮೀಯ ಸಂಬಂಧವಿದೆ ಎಂದು ಆಗಾಗ ಭಟ್ಟ ಕೊಚ್ಚಿಕೊಳ್ಳುವುದುಂಟು. ಶಾರದಾ ಪ್ರಸಾದ್ ತನ್ನ ಆತ್ಮೀಯರು ಎಂದು ಹೇಳಿಕೊಂಡು, ಅವರು ಇಂಗ್ಲಿಷ್ ಪತ್ರಿಕೆಗೆ ಬರೆದ ಅಂಕಣವನ್ನೇ ತಾನು ಅನುವಾದ ಮಾಡಿಸಿ ಪ್ರಕಟಿಸಿ, ತನ್ನ ಮೇಲಿನ ಪ್ರೀತಿಯಿಂದಲೇ ಅವರು ಅಂಕಣ ಬರೆಯುತ್ತಿದ್ದಾರೆ ಎಂದು ಕೊಚ್ಚಿಕೊಂಡಿದ್ದು ಈಗ ಜಗಜ್ಜಾಹೀರಾಗಿರುವ ಸಂಗತಿ.

ಬೌದ್ಧಿಕವಾಗಿ ದಿವಾಳಿ ಎದ್ದವರು ಮಾತ್ರ ಹೀಗೆ ವರ್ತಿಸುತ್ತಾರೆ. ಟೈಮ್ಸ್ ಗ್ರೂಪ್‌ನವರಿಗೆ ಇದಿನ್ನೂ ಅರ್ಥವಾಗದಿರುವುದೇ ಆಶ್ಚರ್ಯ. ■

ಪ್ರಜಾವಾಣಿ ಮೇಲೆ ಕೇಸರಿ ಶಾಲು!

...ತ್ತ ನಂ.1 ಕನ್ನಡ ದಿನಪತ್ರಿಕೆ ವಿಜಯ ಕರ್ನಾಟಕದ ಸಂಪಾದಕ ವಿಶ್ವೇಶ್ವರ ಭಟ್ಟ ತನ್ನ ಬೌದ್ಧಿಕ ...ತನವನ್ನು ಪದೇ ಪದೇ ಸಾಬೀತುಪಡಿಸುತ್ತಿರುವಾಗಲೇ, ಅತ್ತ ಪ್ರಜ್ಞಾವಂತರ ಪತ್ರಿಕೆ ಎನಿಸಿಕೊಂಡಿರುವ ...ಜಾವಾಣಿ' ಮೇಲೆ ಕೇಸರಿ ಶಾಲು ಹಾರಾಡುತ್ತಿದೆ ಎಂಬ ಸುದ್ದಿ ಬಂದಿದೆ.

...ಈ ಹಿಂದೆ ಈ ಪತ್ರಿಕೆಯ ಸಂಪಾದಕರಾಗಿದ್ದ ಆರ್.ಪಿ. ಜಗದೀಶ್ ಪ್ರಜಾವಾಣಿಗೆ ಯಡ್ಡಿಯ ಚೆಡ್ಡಿ ...ರಿಸಲು ಮುಂದಾಗಿದ್ದು ಓದುಗರ ಜಿಗುಪ್ಸೆಗೆ ಕಾರಣವಾಗಿತ್ತು. ಕೊನೆಗೆ ಜಗದೀಶ್ ನಿವೃತ್ತಿಹೊಂದಿ ಈಗ ...ಡ್ಡಿಗೆ ಮಾಧ್ಯಮ ಸಲಹೆಗಾರರಾಗಿ ಭಾಜಪ ಜಪ ಮಾಡುತ್ತಿದ್ದಾರೆ ಬಿಡಿ.

...ಪ್ರಜಾವಾಣಿಯ ಹಾಲಿ ಸಂಪಾದಕ ಪದ್ಮರಾಜ ದಂಡಾವತಿ ಪಕ್ಕಾ ಪತ್ರಕರ್ತರು. ಇದುವರೆಗೂ ಯಾವ ...ಪದವನ್ನೂ ಹತ್ತಿರ ಬಿಟ್ಟುಕೊಂಡ ಉದಾಹರಣೆಗಳಿಲ್ಲ. ಆದರೆ ಅದ್ಯಾವ ಒತ್ತಡಕ್ಕೆ ಒಳಗಾದರೋ ಏನೋ. ...ಚೆಗೆ ಬಿಜೆಪಿ ಏರ್ಪಡಿಸಿದ್ದ ಮಾಧ್ಯಮ ಕಾರ್ಯಾಗಾರವೊಂದರಲ್ಲಿ ಭಾಗವಹಿಸಿದ್ದಾರೆ. ಅಲ್ಲಿ ಮಾಧ್ಯಮಗಳನ್ನು ...ಗೆ ಬಳಸಿಕೊಳ್ಳಬೇಕೆಂದು ಬಿಜೆಪಿ ನಾಯಕರಿಗೆ, ಕಾರ್ಯಕರ್ತರಿಗೆ ಪಾಠಮಾಡಿ ಬಂದಿದ್ದಾರೆ. ಇದಾದ ...ದು ವಾರದಲ್ಲಿಯೇ ಯಡ್ಡಿ ಸರ್ಕಾರ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಿದೆ. ಇದೆಲ್ಲಾ ಪ್ರಜಾವಾಣಿ ...ಗದಲ್ಲಿಯೇ ಇಲ್ಲದ ವದಂತಿಗಳು ಹರಡಲು ಕಾರಣವಾಗಿದೆ. ದಂಡಾವತಿ ಕೂಡ ಕೇಸರಿ ಶಾಲು ಹೊದ್ದರಾ ...ಬ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ.

...ಪತ್ರಿಕೆಯ ಸಂಪಾದಕರೇ ಬಿಜೆಪಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಉಪಸಂಪಾದಕರು ...ಮ್ಮ ನಿರುತ್ತಾರೆಯೇ? ಕಳೆದ ವಾರ ರಾಷ್ಟ್ರೋತ್ಥಾನ ಪರಿಷತ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ...ಕೆಯ ಹಿರಿಯ ಉಪ ಸಂಪಾದಕರಾದ ಉದಯಶಂಕರ ಭಟ್ ಮತ್ತು ಸ್ವಾಮಿ ರಂಗರಾಜು ಭಾಗವಹಿಸಿ ...ಸರಿ ಶಾಲು ಹೊದಿಸಿಕೊಂಡು ಬಂದಿದ್ದಾರೆ.

...ಇದೆಲ್ಲಾ ಎಲ್ಲೋ ಪ್ರಜಾವಾಣಿ ಹಾದಿ ತಪ್ಪುತ್ತಿದೆ ಎಂಬ ಅನುಮಾನಕ್ಕೆ ಕಾರಣವಾಗಿದೆ. ಪತ್ರಕರ್ತರಾಗಿ, ...ಹಾ ಪಂಡಿತರಾಗಿ ಹೆಸರು ಮಾಡಿರುವ ದಂಡಾವತಿಯವರೇ, ಪ್ರಜಾವಾಣಿ ದಿಕ್ಕು ತಪ್ಪದಂತೆ ನೋಡಿಕೊಳ್ಳಿ ...ರ್!

...ವಸೂಲಿಗೆ ಬ್ರೇಕ್ ಬೀಳುತ್ತಿತ್ತು. ತನ್ನ ಬುಡಕ್ಕೇ ...ಯಿಡುತ್ತಿರುವ ಕಾಂಬಳೆಯನ್ನು ಮಟ್ಟಹಾಕಲು ...ಎಸ್‌ಪಿ ನಾಯಕ್ ತಂತ್ರರೂಪಿಸಿದ. ...ಳೆಯ ಮೇಲೆಯೇ ನಾಲ್ಕಾರು ಜನರನ್ನು ಛೂ ...ಟ್ಟ ಅಲ್ಲದೇ ಆ ಯುವಕನ ಮೇಲೆ ...ಂಬಾ ಕೇಸು ಹಾಕಿ ಒಂದು ರೌಡಿ ಶೀಟನ್ನೇ



...ಬಿಟ್ಟ.

...ಶ್‌ನ

...ಡಿಧಿತನಕ್ಕೆ ...ಂದು ...ಹರಣೆ.

...ವೊಮ್ಮೆ ಈತ ಸರ್ಕಾರಿ ಪೊಲೀಸ್ ...ರಿಯೋ ಅಥವಾ ಸಂಘಪರಿವಾರದ ತುಂಡೋ ...ದೇ ಗೊತ್ತಾಗುವುದಿಲ್ಲ. ಪೊಲೀಸ್ ...ಮಲ್ಲಿಯೇ ಕುಳಿತುಕೊಂಡು ಬರುವ ಜನರಿಗೆಲ್ಲಾ ... ವರ್ಷ ಕಾಂಗ್ರೆಸ್‌ಗೆ ಓಟು ಹಾಕಿದ್ದೀರಿ. ...ಏನು ಅಭಿವೃದ್ಧಿ ಮಾಡಿದ್ದಾರೆ? ಬಿಜೆಪಿ ಈಗ ...ರಕ್ಕೆ ಬಂದು ಒಳ್ಳೆ ಕೆಲಸ ಮಾಡುತ್ತಿದೆ. ...ಲ್ಲರೂ ಯಾವಾಗಲೂ ಬಿಜೆಪಿಗೆ ಓಟು ...ಬೇಕು' ಎಂದು ಭಾಷಣ ಬಿಗಿಯುತ್ತಿರುತ್ತಾನೆ. ...ಕಾರ್ಯನಿಮಿತ್ತ ಯಾವುದೇ ಊರಿಗೆ ...ದರೂ ಈ ಭಾಷಣ ಜಾರಿಯಲ್ಲಿರುತ್ತದೆ.

ವಸೂಲಿ ವೀರ

ಲಂಚ, ಹಫ್ತಾ ವಸೂಲಿಗಳಿಗಾಗಿ ಒಂದು ಪ್ರಶಸ್ತಿಯನ್ನೇನಾದರೂ ಇಟ್ಟಿದ್ದರೆ ಅದು ನಿಶ್ಚಿತವಾಗಿ ಡಿವೈಎಸ್‌ಪಿ ನಾಯಕ್‌ಗೆ ಸಿಗುತ್ತದೆ. ಶ್ರೀಕಾಂತ್ ಕುಲಕರ್ಣಿ ಎಂಬ ಬ್ರಾಹ್ಮಣನಿಗೆ ಅದೆಷ್ಟು ದುಡ್ಡು ಕೊಟ್ಟು ಇಲ್ಲಿಗೆ ಎತ್ತಂಗಡಿ ಮಾಡಿಸಿಕೊಂಡಿದ್ದಾನೋ ಗೊತ್ತಿಲ್ಲ. ಅಂತೂ ಅದನ್ನೆಲ್ಲಾ ಬಡ್ಡಿ ಸಮೇತ ವಸೂಲಿ ಮಾಡುವ ಇರಾದೆ ಈತನಿಗಿ ದ್ದಂತಿದೆ. ಶ್ರೀಕಾಂತ್ ಕುಲಕರ್ಣಿ ಯಂತಹ ಒಬ್ಬ ಶಾಸಕ, ಎಸ್.ಆರ್.ನಾಯಕ್‌ನಂತಹ ಒಬ್ಬ ಡಿವೈಎಸ್‌ಪಿ ಇದ್ದ ಮೇಲೆ ಕೇಳಬೇಕೆ? ಇವತ್ತು ಇಡೀ ಜಮಖಂಡಿಯಲ್ಲಿ ಇಸ್ಪೀಟ್-ಮಟ್ಕಾಗಳು ರಾಜಾರೋಷವಾಗಿ ನಡೆಯುತ್ತಿವೆ.

ಇತ್ತೀಚೆಗೆ ಜಮಖಂಡಿಯಲ್ಲಿ ಒಂದು ಹೊಸ ರೀತಿಯ ರೌಡಿಯಿಸಂ ಪ್ರಾರಂಭವಾಗಿದೆ. ತಾವು ಚಂದಪ್ಪ ಹರಿಜನನ ಶಿಷ್ಯಂದಿರು ಎಂದು ಹೇಳಿಕೊಳ್ಳುವ ರೌಡಿಗಳ ತಂಡಗಳು ಶ್ರೀಮಂತ ಮಾರ್ವಾಡಿಗಳನ್ನು ಬೆದರಿಸಿ ಹಣ ವಸೂಲಿ ಮಾಡುತ್ತಿವೆ. ಅವರನ್ನು ನಿಯಂತ್ರಿಸುವತ್ತ ನಾಯಕ್ ಯಾವ ಗಮನವನ್ನೂ ಕೊಡುತ್ತಿಲ್ಲ. ಆದ್ದರಿಂದ ಜಮಖಂಡಿಯ ಜನ "ಈ ರೌಡಿಗಳು ವಸೂಲಿ ದುಡ್ಡನ್ನು ಪೊಲೀಸರೊಂದಿಗೆ ಹಂಚಿಕೊಳ್ಳುತ್ತಿದ್ದಾರೆ" ಎಂದು ಆಡಿಕೊಳ್ಳುವಂತಾಗಿದೆ.

■ ಮೇಘರಾಜ್



ಸಿ.ಟಿ. ರವಿಗೆ ಶತಮಾನದ ಗೂಸಾ ಬಿತ್ತಂತಲ್ಲಾ



ಚಿಕ್ಕಮಗಳೂರ ಸೀಮೆಎಣ್ಣೆ ಸಿ.ಟಿ. ರವಿಯನ್ನು ಮೂಡಿಗೆರೆ ಮೀಸಲು ಶಾಸಕ ಕುಮಾರಸ್ವಾಮಿ ಜಾಡಿಸಿ ಒದ್ದನಂತಲ್ಲಾ.

ಬಿಜೆಪಿಯ ಬೇಹುಗಾರಿಕೆ ಪಡೆ ಹೇಳುವ ಪ್ರಕಾರ ಸಗೀರ್ ಅಹಮದ್ ಪ್ರಯತ್ನದಿಂದ ಮುಗಳವಳ್ಳಿಯಲ್ಲಿ ವಿದ್ಯುತ್‌ನ ಸಬ್ ಪವರ್ ಸ್ಟೇಷನ್ ಮಂಜೂರಾಗಿತ್ತು. ಆದರ ಕಾಮಗಾರಿ ಕೆಲಸಕ್ಕೆ ಮೂಡಿಗೆರೆ ಶಾಸಕ ಮತ್ತು ಪಂಚಾಯ್ತಿ ಅಧ್ಯಕ್ಷರನ್ನೆಲ್ಲಾ ಮೂಲೆಗುಂಪು ಮಾಡಿದ ಸಿ.ಟಿ. ರವಿ ಈಶ್ವರಪ್ಪನನ್ನು ಮಾತ್ರ ಕರೆದು ಗುದ್ದಲಿಪೂಜೆ ಮಾಡಿಸಿದನಂತಲ್ಲಾ. ಹೀಗೆ ಮಾಡಲು ಮುಖ್ಯ ಕಾರಣ ಸದರಿ ಕಟ್ಟಡದ ಕಾಮಗಾರಿಯ ಫಲಾನುಭವಿ ರವಿಯ ಭಾವನಾದ ಸುದರ್ಶನ್ ಎಂಬ ಹೆಗ್ಗಣವಾಗಿದ್ದು ಕುಮಾರಸ್ವಾಮಿ ಕೆರಳಲು ಕಾರಣವಾಯ್ತಂತಲ್ಲಾ, ಥೂತ್ತೇರಿ!!!

* * * * *

ಕೆರಳಿದ ಕುಮಾರಸ್ವಾಮಿ ಕಾಮಗಾರಿ ಸ್ಥಳಕ್ಕೆ ಹೋಗಿ, ಕೆಲಸ ನಿಲ್ಲಿಸದಿದ್ದರೆ ಜೆಸಿಬಿ ಯಂತ್ರ ಮತ್ತು ಟ್ರ್ಯಾಕ್ಟರ್‌ಗೆ ಬೆಂಕಿ ಹಚ್ಚುವುದಾಗಿ ಬೆದರಿಸಿದನಂತಲ್ಲಾ. ಪರಿಸ್ಥಿತಿಯ ವಿಕೋಪವನ್ನರಿತ ಈಶ್ವರಪ್ಪ ಎಂಬ ದೊಗಲೆಚೆಡ್ಡಿ ತನ್ನ ಮನೆಗೇ ಉಭಯತ್ತರನ್ನು ಕರೆಸಿಕೊಂಡು ಅಸುರನ ಒಡ್ಡೋಲಗ ನೆನಪಿಸುವಂತಹ ವಿಚಾರಣೆ ಆರಂಭಿಸಿದರಂತಲ್ಲಾ. ಆಗ ಹಠಾತ್ತನೆ ಸಿಟ್ಟಿಗೆದ್ದ ಸಿ.ಟಿ. ರವಿ ಕುಮಾರಸ್ವಾಮಿಗೆ ಹೊಡೆಯಲಾಗಿ, ಶತಮಾನದ ಸಿಟ್ಟನ್ನೆಲ್ಲಾ ಸೇರಿಸಿ ಕುಮಾರಸ್ವಾಮಿ ರವಿಗೆ ಜಾಡಿಸಿ ಒದ್ದನಂತಲ್ಲಾ. ಕೂಡಲೇ ಕುಮಾರಸ್ವಾಮಿ ಮೇಲೆ ಕೈ ಎತ್ತಿದ ಈಶ್ವರಪ್ಪನಿಗೆ ಅಟ್ರಾಸಿಟಿ ಕಾನೂನು ನೆನಪಾಗಿ ಸಿ.ಟಿ. ರವಿಗೇ ಒಂದು ಬಿಟ್ಟು ರಾಜಿ ಕಬೂಲಿ ನಡೆಸಿದನಂತಲ್ಲಾ, ಥೂತ್ತೇರಿ!!

* * * * *

ವಿದ್ಯುತ್‌ನ ಸಬ್ ಪವರ್ ಸ್ಟೇಷನ್‌ಗಾಗಿ ಮಂಜೂರಾಗಿರುವುದು ಬರೋಬ್ಬರಿ 54 ಕೋಟಿ. ಇದರಲ್ಲಿ ಕೇವಲ 5 ಕೋಟಿ ಕಮಿಷನ್ ಕೇಳುತ್ತಿರುವ ಸಿ.ಟಿ. ರವಿಗೆ ಸಿಟ್ಟುಬರುವುದು ಸಹಜವಲ್ಲದೆ ಎಂದು ದತ್ತಪೀಠದ ಕಾಲಾಳುಗಳು ತಮ್ಮ ತರ್ಕ ಮಂಡಿಸುತ್ತಿವೆಯಂತಲ್ಲಾ.

ಥೂತ್ತೇರಿ

ಯಾಹೂ

"ಸರಿ ಸ್ವಾಮಿ. ಮುಗಳವಳ್ಳಿಯಿರುವುದು ಮೂಡಿಗೆರೆ ಕ್ಷೇತ್ರದಲ್ಲಿ. ಇಲ್ಲಿಗೆ ಬಂದು ಕಮಿಷನ್ ಕೇಳಲು ಈ ಸಿ.ಟಿ. ರವಿ ಯಾವ ಶ್ಯಾಟ?" ಎಂದು ಹೇಳಿದ ಎಂ.ಡಿ. ಗಂಗಯ್ಯನ ಹಿಂಬಾಲಕರು "ಬರುತಿಹೆವು ನಾವು ಬರುತಿಹೆವು ಬರುತಿಹೆವು ನಾವು ಬರುತಿಹೆವು" ಎಂಬ ಬಂಡಾಯದ ಹಾಡನ್ನೆ ಶುರು ಮಾಡಿದರಂತಲ್ಲಾ. ಥೂತ್ತೇರಿ!!

* * * * *

ಧನಕನಕವನ್ನು ತುಂಬಿದ ಗಂಡನ್ನೇ ಎಡವಿ ಬಿದ್ದಂತಾಗಿರುವ ಚೆಡ್ಡಿಗಳ ಧನದಾಹ ನೋಡಿದ ಕಾಂಗ್ರೆಗಳೇ ಬೆಚ್ಚಿಬಿದ್ದಿವೆಯಂತಲ್ಲಾ. ಕಾಮಗಾರಿಯಲ್ಲಿ ಕಾಸು, ವರ್ಗಾವಣೆಯಲ್ಲಿ ಕಾಸು, ರೆವಿನ್ಯೂ ಇಲಾಖೆಯಿಂದ ಕಾಸು, ಪೊಲೀಸ್ ಇಲಾಖೆಯಿಂದ ಕಾಸು- ಹೀಗೆ ಶ್ರೀಸಾಮಾನ್ಯರ ನವನಾರು ಸಂದಿಯಿಂದಲೂ ಕಾಸು ಕೀಳುತ್ತಿರುವ ಬಿಜೆಪಿಗಳನ್ನು ನೋಡಿದ ಮೂಲನಿವಾಸಿ ಬಿಜೆಪಿಗಳು "ಹೀಗೇ ಆದರೆ ನಮ್ಮವರ ಆಟ ಇದೇ ಕಡೆ ಆಟ ಅನ್ನಿಸುತ್ತಿದೆ" ಎಂದು ಉದ್ಗಾರ ತೆಗೆದರಂತಲ್ಲಾ. ಇದನ್ನು ಕೇಳಿಸಿಕೊಂಡ ಎಡೂರಿ ಕಡೆಯ ಎಡವಟ್ಟುಗಳು "ಹಾಗೇ ಆಗಲಿ ಬಿಡ್ರಿ. ನಮ್ಮ ಎಡೂರಪ್ಪನ ಸೋಭಾಯಮಾನವಾದ ಕಾಲ ಮುಗಿದ ನಂತರ ಆ ದರಿದ್ರ ಬಿಜೆಪಿ ಗೆದ್ದರೆಷ್ಟು, ಸೋತರೆಷ್ಟು" ಎಂದು ನಕ್ಕರಂತಲ್ಲಾ, ಥೂತ್ತೇರಿ!!

* * * * *


ಇದ್ದಕ್ಕಿದ್ದಂತೆ ಕರ್ನಾಟಕದ ಭೂತಗಳು ಭಗವದ್ಗೀತೆ ಪಟಿಸತೊಡಗಿವೆಯಂತಲ್ಲಾ. ಮೊದಲನೆಯದಾಗಿ ಕರ್ನಾಟಕದ ಹಳೆಯ ಭೂತವಾದ ಬಂ "ಸೆಕ್ಯೂಲರ್ ಪಾರ್ಟಿಗಳೆಲ್ಲಾ ಒಂದಾಗಬೇಕು" ಎಂದುಬಿಟ್ಟಿದೆಯಂತಲ್ಲಾ. ಇದನ್ನು ಕೇಳಿಸಿಕೊಂಡ ಕುಮಾರ ಬಂಗಾರಪ್ಪನ ಕಡೆಯ ಪಡ್ಡೆ ಹುಡುಗರು "ನಮ್ಮ ದೊಡ್ಡ ಸಾಹೇಬರಿಗೆ ಈ ಕಡೇಗಳಿಗೆಯಲ್ಲಿ ಜ್ಞಾನೋದಯವಾಗಿರುವುದು ಆಶ್ಚರ್ಯ. ಕೈಯಲ್ಲಿ ಕಮಲ ಹಿಡಿದು ಹೋಗಿ ಬಿಜೆಪಿ ಬಾಗಿಲು ತಟ್ಟುವಾಗ ಸೆಕ್ಯೂಲರ್ ಪದ ಜ್ಞಾಪಕಕ್ಕೆ ಬರಲಿಲ್ಲವೆ" ಎಂದು ಆಡಿಕೊಳ್ಳುತ್ತಿವೆಯಂತಲ್ಲಾ.

ಅತ್ತ ಕುಮಾರಸ್ವಾಮಿಗೂ ಸೆಕ್ಯುಲರ್ ಪದದ ಅರ್ಥವನ್ನು ಕಡೆಗೂ ದತ್ತ ಅರ್ಥವಾಗುವಂತೆ ಹೇಳಲಾಗಿ, ಆತನೂ ಕೂಡ "ಸೆಕ್ಯಲರ್ ಮನಿಸಿನೋರ್‍ಯಲ್ಲ ಬಂದು ನಮ್ಮ ತಂದೆಯವರತ್ರ ಮಾತಾಡ್ರಿ. ಬೇಗ ಒಂದು ತೀರ್ಮಾನಕ್ಕೆ ಬನ್ರಿ. ನಾನು ಆ ರೆಡ್ಡಿ ಬಡ್ಡೆತ್ತವು ಆಡೊ ಆಟ ನೋಡಕ್ಯಾಯ್ತಾಯಿಲ್ಲ" ಎಂದನಂತಲ್ಲಾ, ಥೂತ್ತೇರಿ!!!

* * * * *


ಇನ್ನ ಧರ್ಮಸಂಸದರ ಅಧಿಪತಿಯಾದ ಪೇಜಾವರ ಶ್ರೀಯವರ ಆಶೀರ್ವಚನ ಕೇಳಲು ಅಪ್ಯಾಯಮಾನವಾಗಿದೆಯಂತಲ್ಲಾ. "ನರಮಾನವ ಗೂಂತಿಗೆ ಬಿಗಿದ ಎತ್ತಿನಂತೆ ಅಲ್ಲೇ ಸುತ್ತಿ ಅಲ್ಲೇ ಮರಣವಪ್ಪುತ್ತಾನೆ ಗೊಂತು ದೇವರು. ಹಾಗೆಯೇ ನಾನೂ ಕೂಡ ಉಡುಪಿಯ ಕಡೆಗೋಲು ಕಂಬದ ಕೃಷ್ಣನ ಸುತ್ತವೇ ಸುತ್ತೀ ಸುತ್ತೀ ಸುಸ್ತಾಗಿದ್ದೇನೆ" ಎಂದರಂತಲ್ಲಾ. ಹೀಗೆ ಸೋತ ಎತ್ತಿನಂತಾಗಿರುವ ಪೇಜಾವರ ಶ್ರೀಗಳು ಮತಾಂತರಗೊಳ್ಳುತ್ತಿರುವ ದಲಿತರನ್ನು ಎಚ್ಚರಿಸಿ-"ನೀವು ಹೀಗೆ ಹಿಂದುಮುಂದು ನೋಡದೆ ಮತಾಂತರವಾದರೆ ನಿಮ್ಮ ಸಂಖ್ಯೆ ಕಡಿಮೆಯಾಗಿ ಹೋಗ್ತದೆ. ಹಿಂದೂ ಧರ್ಮದ ಮೇಲುಜಾತಿಯ ಜನರು ನಿಮಗೆ ಪೆಟ್ಟು ಕೊಡುವಾಗ ಅದನ್ನು ತಡೆಯಲೋಸ್ಕರವಾಗಿ ನೀವು ಬಹುಸಂಖ್ಯೆಯಲ್ಲಿರಬೇಕು. ಆದ್ದರಿಂದ ನೀವು ಮತಾಂತರವಾಗದೆ ದಲಿತರಾಗಿ ಉಳಿದರೆ ನಿಮಗೂ ಒಳ್ಳೆಯದು. ಶ್ರೇಣೀಕೃತ ಸಮಾಜದ ಹಿಂದೂ ಧರ್ಮಕ್ಕೂ ಒಳ್ಳೆಯದು" ಎಂದರಂತಲ್ಲಾ. ಗುರುಗಳ ಜ್ಞಾನಕ್ಕೆ ಗಹಗಹಿಸಿ ನಕ್ಕ ದಲಿತರು "ಹೋಗೋಲೊ ಗುಳ್ಳೆನರಿ" ಎಂದವಂತಲ್ಲಾ, ಥೂತ್ತೇರಿ!! ■

ಈಡಿಗ ಸಮಾಜ ಒಡೆದ ಯಡ್ಡಿ



ಮುಖ್ಯಮಂತ್ರಿ ಯಡ್ಡಿ ತವರು ಜಿಲ್ಲೆ ಶಿವಮೊಗ್ಗದಲ್ಲಿ ಕಚಡಾ ರಾಜಕೀಯ ಆರಂಭಿಸಿದ್ದಾರೆ. ಇದುವರೆಗೆ ಜಿಲ್ಲೆಯನ್ನು ಅಭಿವೃದ್ಧಿ ಪಡಿಸುವ ನೆಪದಲ್ಲಿ ಕೊಳ್ಳೆ ಹೊಡೆಯುತ್ತಾ, ತನ್ನ ಆಸ್ತಿ ಹೆಚ್ಚಿಸಿಕೊಳ್ಳುತ್ತಿದ್ದ ಯಡ್ಡಿ ಈಗ ತಾನು ರಾಜಕೀಯವಾಗಿ ಬಲಗೊಳ್ಳಲು ಸಮುದಾಯಗಳನ್ನು ಒಡೆದು ರಾಜಕೀಯ ಮಾಡಲು ಹೊರಟಿದ್ದಾರೆ. ಇದಕ್ಕೆ ಮೊದಲ ಬಲಿ ಎಂದರೆ ಈಡಿಗ ಸಮಾಜ.


ಈಡಿಗ ಸಮಾಜವೇನೂ ಚಿಕ್ಕ ಸಮುದಾಯವಲ್ಲ. ರಾಜಕೀಯವಾಗಿ ಈ ಸಮುದಾಯಕ್ಕೆ ಸಾಕಷ್ಟು ಶಕ್ತಿ ಇದೆ. ಮಾಜಿ ಮುಖ್ಯಮಂತ್ರಿ ಬಂಗಾರಪ್ಪ, ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಕುಮಾರ್ ಬಂಗಾರಪ್ಪ ಈ ಸಮುದಾಯಕ್ಕೆ ಸೇರಿದವರು. ಮುದಿ ಹುಲಿಯಂತಾಗಿರುವ 'ಬಂ' ಎಂದಾದರೂ ತಮ್ಮ ಮೇಲೆ ಎಗರಬಹುದು ಎಂದು ಹೆದರಿದ ಯಡ್ಡಿ ಈಗ ಅವರ ಶಕ್ತಿಯನ್ನು ಸಂಪೂರ್ಣವಾಗಿ ನಾಶಮಾಡಲು ಈಡಿಗರ ಸಂಘಟನೆಯನ್ನು ಒಡೆದಿದ್ದಾರೆ.



ಈಶ್ವರಪ್ಪ

ಇದಕ್ಕೆ ಸಚಿವ ಹಾಲಪ್ಪ ಮತ್ತು ಶಾಸಕ ಬೇಳೂರು ಗೋಪಾಲಕೃಷ್ಣನನ್ನು ಬಳಸಿಕೊಳ್ಳಲಾಗಿದೆ. ಜೊತೆಗೆ ಬಂಗಾರಪ್ಪ ಅವರಿಗೆ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಾ ಸಾಕಷ್ಟು ದುಡ್ಡು ಮಾಡಿಕೊಂಡಿದ್ದ ಆರ್. ಶ್ರೀಧರ್ ಕೈಜೋಡಿಸಿದ್ದಾನೆ. ಈ ಮನೆಹಾಳರಿಂದಾಗಿ ಈಗ ಈಡಿಗ ಸಮಾಜ ದಿಕ್ಕುತಪ್ಪಿದ ಹಡಗಿನಂತಾಗಿದೆ.

ಈಡಿಗ ಸಮಾಜ 'ಈಡಿಗ ಸಂಘ' ಎಂಬ ಹೆಸರಿನಲ್ಲಿ ಸಂಘಟಿತವಾಗಿದೆ. ಇದರ ಪ್ರಮುಖರು ಒಂದೋ ಕಾಂಗ್ರೆಸ್‌ನಲ್ಲಿದ್ದಾರೆ, ಇಲ್ಲವೇ ಬಿಜೆಪಿ ಬಿಟ್ಟು ಬೇರೆ ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡಿದ್ದಾರೆ. ಹೀಗಾಗಿ ಇಲ್ಲಿ ಬಿಜೆಪಿಗೆ ಅವಕಾಶವೇ ಇರಲಿಲ್ಲ, ಬಂ ಬಿಜೆಪಿ ಸೇರಿದಾಗ ಸಂಘ ಒಂದಿಷ್ಟು ಕೇಸರಿಮಯವಾಗಿತ್ತು. ಬಂ ಹೊರಬಂದರೂ ಅವರ ಶಿಷ್ಯರಾದ ಹಾಲಪ್ಪ ಮತ್ತು ಬೇಳೂರು ಮತ್ತೆ ಬಿಜೆಪಿ ಸೇರಿದ್ದರಿಂದಾಗಿ ಸಮಾಜದಲ್ಲಿ ಕೇಸರಿ ಬಾವುಟ ಹಿಡಿದುಕೊಂಡವರೂ ಕಾಣಿಸಿಕೊಳ್ಳಲಾರಂಭಿಸಿದರು.



ತಿಮ್ಮಪ್ಪ

ಈ ಸಮಾಜದ ಮೇಲೆ ಸಂಪೂರ್ಣವಾಗಿ ಹಿಡಿತ ಸಾಧಿಸಲು ಯಡ್ಡಿ ಸೂಚನೆಯಂತೆ ವೇದಿಕೆಯೊಂದನ್ನು ರೂಪಿಸಲಾಯಿತು. 'ಜಿಲ್ಲಾ ಈಡಿಗ-ದೀವರ ಸಮಾಜ' ಎಂಬ ಹೆಸರಿನ ಈ ವೇದಿಕೆ ಮುಖ್ಯಮಂತ್ರಿ ಯಡ್ಡಿ ಮತ್ತು ಜಿಲ್ಲೆಯ ಇತರ ಸಚಿವರಿಗೆ ಸನ್ಮಾನ ಕಾರ್ಯಕ್ರಮವನ್ನೂ ಏರ್ಪಡಿಸಿತ್ತು. ಆದರೆ ಈ ಕಾರ್ಯಕ್ರಮ ಸಂಪೂರ್ಣ ಯಶಸ್ವಿಯಾಗುವಂತೆ ನೋಡಿಕೊಂಡಿದ್ದು ಈಡಿಗರಲ್ಲ, ಬದಲಾಗಿ ಜಿಲ್ಲಾ ಬಿಜೆಪಿ ಪದಾಧಿಕಾರಿಗಳು.



ಬಂಗಾರಪ್ಪ

ಈಡಿಗರ ಸಂಘಟನೆಗಳ ಒಕ್ಕೂಟವೆಂದು ಹೇಳಲಾದ ಈ ವೇದಿಕೆಯನ್ನು ಈಡಿಗ ಸಂಘ ಬಹಿಷ್ಕರಿಸಿದೆ. ಆದರೆ ದುಡ್ಡು ಕೊಟ್ಟು ಒಂದಿಷ್ಟು ಈಡಿಗರನ್ನು ಕರೆತಂದು ಈ ಸನ್ಮಾನ ನಾಟಕವನ್ನು ಯಶಸ್ವಿಗೊಳಿಸಲಾಗಿದೆ. ಸಾಮಾನ್ಯ ಈಡಿಗರಿಗೆ ಈ ರಾಜಕೀಯ ಅರ್ಥವಾಗದೇ ದಿಕ್ಕು ತಪ್ಪಿಸಿದಂತಾಗಿದೆ.

ಆರ್‌ಟಿಒ ಹಣ ಕೊಟ್ಟರು!

ಶಿವಮೊಗ್ಗದ ಸೈನ್ಸ್ ಫೀಲ್ಡ್‌ನಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಪ್ರತಿ ತಾಲೂಕಿನಿಂದಲೂ ಹತ್ತಾರು ಬಸ್‌ಗಳಲ್ಲಿ ಜನರನ್ನು ಕರೆತರಲಾಗಿತ್ತು, ಕೆಲವು ಬಸ್‌ಗಳಿಗೆ ಬಿಜೆಪಿ ಬೆಂಬಲಿಸುವ ಉದ್ಯಮಿಗಳು ಹಣ ನೀಡಿದ್ದರೆ, ಮತ್ತೆ ಕೆಲವು ಬಸ್‌ಗಳಿಗೆ ಆರ್‌ಟಿಒ ಹಣ ನೀಡಿದ್ದಾರೆ. ಈ ಹಣ ಎಲ್ಲಿಂದ ಬಂತು, ಹೇಗೆ ನೀಡಿದರು ಎಂಬುದನ್ನು ಇಲ್ಲಿ ಬಿಡಿಸಿ ಹೇಳಬೇಕಾಗಿಯೇನೂ ಇಲ್ಲ, ಮತ್ತೆ ಕೆಲ ಬಸ್ ಮಾಲೀಕರಿಗೆ ಹಣ ನೀಡದೇ ಹೆದರಿಸಲಾಗುತ್ತಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಯಡ್ಡಿ, 'ನೀವು ಒಟ್ಟಾಗಿ ಇರಿ, ನಿಮ್ಮ ಸಮಾಜದ ಅಭಿವೃದ್ಧಿಯನ್ನು ನನಗೆ ಬಿಡಿ' ಎಂದಿದ್ದಾರೆ. ಜೊತೆಗೆ ಜನಾಂಗಕ್ಕೆ ಒಂದು ಕೋಟಿ ಕೊಡುವುದಾಗಿ ಪ್ರಕಟಿಸಿದ್ದಾರೆ. ಇದು ಬಂಗಾರಪ್ಪ ಮಾಡದ ಟ್ರಿಕ್ಸ್ ಏನೂ ಅಲ್ಲ ಎಂಬುದು ಯಡ್ಡಿಗೆ ಗೊತ್ತಾದಂತಿಲ್ಲ. ಹೀಗೆ ಈಡಿಗರನ್ನು ಬಂ ಯಾಮಾರಿಸಿಕೊಂಡೇ ಬಂದಿದ್ದರು. ಈಗ ಯಡ್ಡಿಯ ಸರದಿ.

ಕೆಲಸ ಮಾಡಿದ್ದು ಕಾಗೋಡು, ಹೆಸರು ಯಡ್ಡಿಗೆ

ಕಾಗೋಡು ತಿಮ್ಮಪ್ಪ ತಾವು ಸಚಿವರಾಗಿದ್ದಾಗ ಶಿವಮೊಗ್ಗದ ಹೃದಯಭಾಗದಲ್ಲಿರುವ ಸುಮಾರು ಒಂದು ಎಕರೆ ಜಾಗವನ್ನು (ಮೆಗ್ಗಾನ್ ಆಸ್ಪತ್ರೆ ಮುಂದೆ ಇದೆ) ಈ ಜನಾಂಗಕ್ಕೆ ನೀಡಲು ಪ್ರಯತ್ನಿಸಿದ್ದರು. ಆದರೆ ಪೊಲೀಸ್ ಇಲಾಖೆ ತನಗೇ ಈ ಜಾಗ ಬೇಕು ಎಂದು ಪಟ್ಟು ಹಿಡಿದಿದ್ದರಿಂದ ಅಂತಿಮ ತೀರ್ಮಾನ ಪ್ರಕಟವಾಗಿರಲಿಲ್ಲ, ಇಷ್ಟರಲ್ಲೇ ಅವರ ಅಧಿಕಾರ ಹೋಗಿತ್ತು. ಈಗ ಈ ಜಾಗವನ್ನು ಈಡಿಗ ಸಮುದಾಯಕ್ಕೆ ನೀಡುವುದಾಗಿ ಪ್ರಕಟಿಸುವ ಮೂಲಕ ಯಡ್ಡಿ ರಾಜಕೀಯ ಮಾಡಿದ್ದಾರೆ. ಪಾಪ ಕಾಗೋಡು ತಿಮ್ಮಪ್ಪ ಯಡ್ಡಿಯ ಹೊಡೆತ ಎದುರಿಸಲಾಗದೆ ಬಾಯಿ ಮುಚ್ಚಿಕೊಂಡು ಮನೆ ಸೇರಿದ್ದಾರೆ. ಇದೆಲ್ಲಾ ಗೊತ್ತಿರುವ ಸಮಾಜದ ಮುಖಂಡರು ಮುಸಿ ಮುಸಿ ನಗುತ್ತಿದ್ದಾರೆ.

ಈಗ ಈಡಿಗ ಸಮಾಜ ಒಡೆದ ಮನೆಯಾಗಿದೆ. ಅಧಿಕಾರವಿದೆ ಎಂಬ ಕಾರಣದಿಂದ ಕೆಲವರು ಬಿಜೆಪಿ ಬೆಂಬಲಿಸಲಾರಂಭಿಸಿದ್ದಾರೆ. ಇವರ ತಲೆಯಲ್ಲಿ ಸಂಘಪರಿವಾರದವರು ಹುಳ ಬಿಟ್ಟರೆ ಒಂದು ಕಾಲದಲ್ಲಿ ಸಮಾಜವಾದಿಗಳ ನೆಲೆಯಾಗಿದ್ದ ಶಿವಮೊಗ್ಗ ಸಂಪೂರ್ಣ ಕೇಸರಿಮಯವಾಗುವ ಅಪಾಯವಿದೆ. ಈಡಿಗ ಸಮಾಜದ ಪ್ರಜ್ಞಾವಂತರು ಈಗಲೇ ಎಚ್ಚೆತ್ತುಕೊಂಡರೆ ಒಳ್ಳೆಯದು. ■

ಗಣಪತಿಯಪ್ಪ ಎಚ್ಚರ ತಪ್ಪಬಾರದು!


ಈಡಿಗರ ಹೆಸರಿನಲ್ಲಿ, ಸಮಾಜ ಒಡೆಯಲೆಂದೇ ಬಿಜೆಪಿ ಏರ್ಪಡಿಸಿದ್ದ ಈ ಸನ್ಮಾನ ಕಾರ್ಯಕ್ರಮದಲ್ಲಿ ಕಾಗೋಡು ಹೋರಾಟದ ರೂವಾರಿ ಎಚ್. ಗಣಪತಿಯಪ್ಪ ಭಾಗವಹಿಸಿದ್ದರು. ರಾಜಕೀಯವಾಗಿ ಜಾತ್ಯತೀತ ಜನತಾದಳದಲ್ಲಿ ಗುರುತಿಸಿಕೊಂಡಿದ್ದ ಗಣಪತಿಯಪ್ಪರ ಈ ನಿಲುವು ಅವರ ಅಭಿಮಾನಿಗಳಲ್ಲಿ ಆಶ್ಚರ್ಯ ಮೂಡಿಸಿದೆ.



ಗಣಪತಿಯಪ್ಪ

ಕೇಸರಿಬಣಕ್ಕೆ ಆಗಾಗ 'ಚಳಿ' ಮುಟ್ಟಿಸುತ್ತಾ, ಜೀವ ಇರುವವರೆಗೂ ಕೋಮುವಾದಿಗಳ ವಿರುದ್ಧ ಹೋರಾಡುವುದಾಗಿ ಹೇಳುತ್ತಿದ್ದ ಗಣಪತಿಯಪ್ಪರನ್ನು ಅದ್ಯಾವ ರೀತಿಯಲ್ಲಿ ಚಡ್ಡಿಗಳು ದಿಕ್ಕು ತಪ್ಪಿಸಿದರೋ ಗೊತ್ತಾಗುತ್ತಿಲ್ಲ, ಈಗಲಾದರೂ ಗಣಪತಿಯಪ್ಪ ಎಚ್ಚೆತ್ತು, ತಮ್ಮ ಜನಾಂಗದವರಿಗಾದರೂ ಕೋಮುವಾದಿ ರಾಜಕೀಯದ ಅಪಾಯದ ಬಗ್ಗೆ ಮನವರಿಕೆ ಮಾಡಿಕೊಡುತ್ತಾರೆಂದು ಆಶಿಸೋಣ.

ಹಾವೇರಿ: ಉದಾಸಿ ರಕ್ತದಾಹಕ್ಕೆ ಮತ್ತೊಂದು ಬಲಿ!



ಸಿ.ಎಂ. ಉದಾಸಿ

ಚೆಡ್ಡಿ ಸರ್ಕಾರದ ಮುದಿ ಮಂತ್ರಿ ಉದಾಸಿಯ ರಕ್ತದಾಹಕ್ಕೆ ಮತ್ತೊಬ್ಬ ಕಾರ್ಮಿಕ ಬಲಿಯಾಗಿದ್ದಾನೆ. ಜಿಲ್ಲೆಯಲ್ಲಿ ಗೊಬ್ಬರ ಕೇಳಿದ ರೈತರಿಗೆ ಬಂದೂಕಿನ ಗುಂಡುಗಳನ್ನು ಹಾರಿಸಿದ ಸರ್ಕಾರದ ರಕ್ತದಾಹ ಇನ್ನೂ ನಿಂತಂತಿಲ್ಲ, ಈಗ ಕಾರ್ಮಿಕರ ಮೇಲೆ ಮುಗಿಬಿದ್ದಿದೆ. ಅಖಂಡ ಧಾರವಾಡ ಜಿಲ್ಲೆಯ ಏಕೈಕ ಸಹಕಾರಿ ಸಕ್ಕರೆ ಕಾರ್ಖಾನೆಯಾದ ಸಂಗೂರು ಶುಗರ್ಸ್‌ನ್ನು ದಿವಾಳಿಗೆ ಹಚ್ಚಿ ರಕ್ತ ರಾಜಕಾರಣಕ್ಕೆ ನಿಂತಿರುವ ಉದಾಸಿಯೇ ಇದಕ್ಕೆ ನೇರ ಜವಾಬ್ದಾರನಾಗುತ್ತಾನೆ. ಈತನಿಗೆ ಈ ಮುದಿ ವಯಸ್ಸಿನಲ್ಲಿ ಕೆಟ್ಟು ಕೆರ ಹಿಡಿದು ಹೋಗಿರುವ ಹಾವೇರಿ ಜಿಲ್ಲೆಯನ್ನು ಉದ್ಧಾರ ಮಾಡುವುದಕ್ಕಂತೂ ಸಾಧ್ಯವಿಲ್ಲ, ಹಾಳು ಮಾಡೇ ತೀರುತ್ತೇನೆಂದು ನಿಂತಿರುವುದೇಕೆ?




ಹನುಮಂತಪ್ಪ ಕಾಳೆಯ ಮೃತದೇಹ

ಸಂಗೂರು ಸಕ್ಕರೆ ಕಾರ್ಖಾನೆ ಒಂದು ಕಾಲದಲ್ಲಿ ತುಂಬಾ ಲಾಭದಲ್ಲಿತ್ತು. ಯಾವಾಗ ಶಿವರಾಜ್ ಸಜ್ಜನ ಎಂಬ ಮಾಜಿ ಎಮ್ಮೆಲ್ಲೆ ಇದಕ್ಕೆ ಉಪಾಧ್ಯಕ್ಷನಾಗಿ ಬಂದನೋ ಅಲ್ಲಿಗೆ ಶುರುವಾಗಿತ್ತು ಅದರ ಅವನತಿ. ಲಾಭದಲ್ಲಿದ್ದ ಕಾರ್ಖಾನೆಯನ್ನು ಪೂರಾ ದಿವಾಳಿಗೆ ಹಚ್ಚಿಯೇ ಈತ ಕಾರ್ಖಾನೆಯಿಂದ ಹೊರನಡೆದಿದ್ದ. ಈ ಹೊತ್ತು ಅದರ ಪರಿಣಾಮವನ್ನು ನೋಡುತ್ತಿದ್ದೇವೆ. ಮೊನ್ನೆ ಬಸವರಾಜ್ ಬೊಮ್ಮಾಯಿಯ ರಾಜೀನಾಮೆಯಿಂದ ತೆರವಾದ ಪರಿಷತ್ ಜಾಗಕ್ಕೆ ಈತ ಚುನಾಯಿತನಾಗಿ ಹಬ್ಬ ಆಚರಿಸುತ್ತಿದ್ದ ದಿನವೇ ಅತ್ತ ಸಂಗೂರಿನಲ್ಲಿ ಕಾರ್ಮಿಕನೊಬ್ಬ ಕಾರ್ಖಾನೆಯ ಆವರಣದಲ್ಲಿಯೇ ವಿಷ ಕುಡಿದು ಸತ್ತು ಹೋಗಿದ್ದ. ಅತ್ತ ಶಿವರಾಜ್ ಸಜ್ಜನನ ಗೆಲುವಿಗಾಗಿ ಉದಾಸಿ ಸಾರಥ್ಯದ ಕೇಸರಿ ಪಡೆ ವಿಜಯೋತ್ಸವ ಆಚರಿಸುತ್ತಿದ್ದರೆ ಇತ್ತ ಸಂಗೂರು ಶುಗರ್ಸ್‌ನ ಕಾರ್ಮಿಕರು ಕಾರ್ಮಿಕನ ಶವದೆರುರು ಚೆಡ್ಡಿ ಪಟಾಲಂಗೆ ಧಿಕ್ಕಾರ ಕೂಗುತ್ತಿದ್ದರು.

ಶೂಟ್‌ಔಟ್ ಅಂಡ್ ಸುಸೈಡ್: ಉದಾಸಿ ಕೊಡುಗೆಗಳು



ಪ್ರಶಾಂತ್



ಗದ್ದನಕೇರಿ

ಮುಳುಗುತ್ತಿರುವ ಹಡಗಿನಂತಿರುವ ಸಂಗೂರು ಶುಗರ್ಸ್‌ನ ಕಾರ್ಮಿಕರು ಕಳೆದ ನವೆಂಬರ್‌ನಲ್ಲಿ ತಮ್ಮ ಇಪ್ಪತ್ತು ತಿಂಗಳ ಬಾಕಿ ಸಂಬಳ ಕೊಡಬೇಕೆಂಬ ಒತ್ತಾಯದ ಜೊತೆಗೆ ಒಟ್ಟಾರೆ ನ್ಯಾಯಕ್ಕಾಗಿ ಹಾವೇರಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಕುಟುಂಬ ಸಮೇತವಾಗಿ ಎರಡೂವರೆ ತಿಂಗಳು ಹಗಲು ರಾತ್ರಿ ಧರಣಿ ನಡೆಸಿದರು. ಕನಿಷ್ಠ ಮಾನವೀಯತೆಗಾದರೂ ಕಾರ್ಮಿಕರ ಕಷ್ಟ ಕೇಳದ ಉದಾಸಿ ವಸ್ತ್ರದ್ ಎಂಬ ನಾಮರ್ಧ ಡಿಸಿಯೊಂದಿಗೆ ಸೇರಿ ಬಡ ಕಾರ್ಮಿಕರ ತಳಕ್ಕೆ ಬತ್ತಿ ಇಡುವುದಕ್ಕಾಗಿ ಹೊಂಚುಹಾಕಿದ್ದ. ಇದನ್ನೆಲ್ಲಾ ಕಣ್ಣಾರೆ ಕಂಡು ತಮಗಿನ್ನು ನ್ಯಾಯ ಸಿಗಲಾರದು ಎಂದು ನೊಂದ ದುರ್ಗಪ್ಪ ತಳವಾರ ಎಂಬ ಕಾರ್ಮಿಕ ಕಾರ್ಖಾನೆಯ ವರ್ಕ್‌ಶಾಪ್‌ನಲ್ಲಿ ಡೆತ್‌ನೋಟ್ ಬರೆದಿಟ್ಟು ವಿಷ ಕುಡಿದು ಸತ್ತು ಹೋದ. ಒಂದು ಅಮಾಯಕ ಬಡ ಜೀವವನ್ನು ಬಲಿ ಪಡೆದರೂ ಜಿಲ್ಲಾ ಮಂತ್ರಿ ಉದಾಸಿಯ ಮನಸ್ಸಿಗೆ ಶಾಂತಿ ಸಿಕ್ಕಿರಲಿಲ್ಲವೇನೋ? ಈಗ ಹನುಮಂತಪ್ಪ ಕಾಳೆ ಎಂಬ ಮತ್ತೊಬ್ಬ ಕಾರ್ಮಿಕ ಸತ್ತಿದ್ದಾನೆ.

ಗೊಬ್ಬರ ಬೇಡಿದ ರೈತರನ್ನೂ ಗುಂಡಿಕ್ಕಿ ಕೊಂದಿದ್ದಾಯಿತು. ದುಡಿದ ಕೂಲಿ ಕೇಳಿದ ದುರ್ಗಪ್ಪನನ್ನೂ ಮುಗಿಸಿದ್ದಾಯಿತು. ದುರ್ಗಪ್ಪನ ಹೆಣದ ಮುಂದೆ ಪ್ರತಿಭಟಿಸಿದ ಜನರಿಗೆ ಬಂದೂಕಿನಿಂದ ಗುಂಡಿಟ್ಟಿದ್ದೂ ಆಯಿತು. ಈಗ ಕಾರ್ಮಿಕ ಹನುಮಂತಪ್ಪ ಕಾಳೆಯನ್ನು ಆತ್ಮಹತ್ಯೆಗೆ ನೂಕಿದ್ದಾಯಿತು. ಮುದಿ ಉದಾಸಿ ಸಾಯುವುದರೊಳಗಾಗಿ ಇನ್ನೆಷ್ಟು ಜೀವಗಳನ್ನು ಬಲಿತೆಗೆ ಕೊಳ್ಳುತ್ತಾನೋ?

ಆತ ಕಡುಬಡವನಾಗಿದ್ದ

ಸಂಗೂರು ಎಂಬ ಸಣ್ಣ ಗ್ರಾಮದಲ್ಲಿ 30 ಗುಂ... ಜಮೀನು ಹೊಂದಿದ್ದ ಹನುಮಂತಪ್ಪ ಕಾಳೆಯದ್ದು ತುಂ... ಬಡ ಕುಟುಂಬ. ಬಂಜರು ಜಮೀನು ಏನಕ್ಕೂ ಸಾಕಾಗು... ದಿಲ್ಲವೆಂದು ಆತ ಕಳೆದ ಇಪ್ಪತ್ತು ವರ್ಷಗಳಿಂದ ಸಂಗೂ... ಸಕ್ಕರೆ ಕಾರ್ಖಾನೆಯಲ್ಲಿ ಹಂಗಾಮಿ ಕಾರ್ಮಿಕನಾಗಿ ಕೆ... ಮಾಡುತ್ತಿದ್ದ. ಇತ್ತೀಚೆಗೆ ಅವನ ನೌಕರಿಯೂ ಕಾಯ... ಆಗಿತ್ತು, ಉದಾಸಿಯ ಚೆಡ್ಡಿ ಪಟಾಲಂನ ಲೂಟಿಯಿಂದಾ... ಕಾರ್ಖಾನೆ ನಷ್ಟಕ್ಕೆ ಬಿದ್ದು ಕಳೆದ 20 ತಿಂಗಳಿನಿಂ... ಕಾರ್ಮಿಕರಿಗೆ ಸಂಬಳವನ್ನೇ ಕೊಟ್ಟಿರಲಿಲ್ಲ. ಅದೇ ಸಮಯ... ಕಾರ್ಖಾನೆಯನ್ನು ಗುತ್ತಿಗೆ ಪಡೆದ ದಾವಣಗೆರೆ ಸಂಸ... ಜಿ.ಎಂ.ಸಿದ್ದೇಶ್ ಹಾಗೂ ಜಿಲ್ಲಾಡಳಿತ ಹೊರತಂ... ವಿಆರ್‌ಎಸ್ ಎಂಬ ಅಸ್ತ್ರ ಕಾರ್ಮಿಕರ ಕುಟುಂಬಕ್ಕೆ ಕಂಟ... ವಾಗಿ ತಿರುಗಿದೆ. ನಷ್ಟದಲ್ಲಿ ದುಡಿಯುವುದು ಬೇಡ ಹ... ಪಡೆದುಕೊಂಡು ಕಾರ್ಖಾನೆಯಿಂದ ಹೊರನಡೆಯೋ... ಎಂದುಕೊಂಡಿದ್ದ ಕಾರ್ಮಿಕರಿಗೂ ಸಂಚಕಾರ ಕಾದಿತ್ತು... ಎಂ.ಡಿ. ಗದ್ದನಕೇರಿ ಮತ್ತು ವಸ್ತ್ರದ್ ಸೇರಿಕೊಂಡ... ಅರಿಯರ್ಸ್, ಗ್ರ್ಯಾಚುಟಿ ಮತ್ತಿತರ ಸೌಲಭ್ಯಗಳನ್ನು ಕೊಡ... ಹಿಂದೇಟು ಹಾಕಿದರು. ಅತ್ತ ನೌಕರಿಯೂ ಹೋಯಿತ... ಇತ್ತ ದುಡ್ಡೂ ಸಿಗಲಿಲ್ಲ ಎಂಬ ಹೀನ ಪರಿಸ್ಥಿತಿಗೆ ತಳ್ಳಲ್ಪ... ಕಾರ್ಮಿಕರು ಆತಂಕಗೊಂಡಿದ್ದರು. ಅದರಲ್ಲಿ ಹನುಮಂತ... ಕಾಳೆಯಂತೂ ಸಂಸಾರ ನಡೆಸುವುದು ಹೇಗೆಂಬ ಚಿಂತೆಯ... ಬಿದ್ದು ನವೆಂಬರ್ 3ರ ಮಧ್ಯಾಹ್ನ 12 ಗಂಟೆಗೆ ಕಾರ್ಖಾನೆ... ಬಂದು ಅಧಿಕಾರಿಗಳೊಂದಿಗೆ ಚರ್ಚಿಸಿ ಕಾರ್ಖಾನೆಯ... ಆವರಣದಲ್ಲಿಯೇ ವಿಷ ಕುಡಿದು ಸತ್ತಿದ್ದಾನೆ. ಹೆಂಡ... ಒಂಭತ್ತು ವರ್ಷದ ರಾಜು ಹಾಗೂ ಹನ್ನೊಂದು ವರ್ಷ... ಅನಿತ ಎಂಬ ಇಬ್ಬರು ಮಕ್ಕಳೀಗ ಅಕ್ಷರಶಃ ಅನಾಥರಾಗಿದ್ದಾ...

ಉದಾಸಿ ಮನಸ್ಸು ಮಾಡಿದ್ದರೆ ಸಂಗೂರು ಶುಗರ್ಸ್... ಮರುಜೀವ ಕೊಡುವುದು ಕಷ್ಟವೇನಾಗಿರಲಿಲ್ಲ. ಆದ... ಅದನ್ನು ಸರ್ವನಾಶ ಮಾಡುವುದಕ್ಕೆ ಪಣತೊಟ್ಟಿರುವ ಆತನ... ಅಂತಹದ್ದೊಂದು ವಿಚಾರವಾದರೂ ಹೇಗೆ ಹೊಳೆಯುತ್ತದ... ಹಾಗಾಗಿಯೇ, ಕಾರ್ಖಾನೆಯನ್ನು ತನ್ನ ಚೆಡ್ಡಿ ದೋಸ... ದಾವಣಗೆರೆಯ ಎಂಪಿ ಸಿದ್ದೇಶನ ಜೇಮ್ಸ್ ಶುಗರ್ಸ್... ಗುತ್ತಿಗೆ ಕೊಟ್ಟುಬಿಟ್ಟ. ಗುತ್ತಿಗೆ ಕೊಟ್ಟ ಆರು ತಿಂಗಳೊಳಗಾ... ಕಾರ್ಮಿಕರ 20 ತಿಂಗಳ ಬಾಕಿ ಸಂಬಳವನ್ನು ಕೊಡಬೇಕೆಂ... ಷರತ್ತು ಕೂಡ ವಿಧಿಸಲಾಗಿತ್ತು. ಆದರೆ, ಇದ್ದಬದ್ದದ್ದನ... ತಿಂದು ತೇಗಿ ಹೋಗಲೆಂದೇ ಬಂದಿದ್ದ ಸಿದ್ದೇಶನ ಜೇಮ... ಶುಗರ್ಸ್ ಬಾಕಿ ಸಂಬಳ ಕೊಡುವುದಿರಲಿ, ಕಾರ್ಮಿಕರು ವಾಸವಿದ್ದ ಮುರುಕು ಗುಡಿಸಲುಗಳಿಗೆ ಬಾಡಿಗೆ ವಿಧಿಸಿ ಅವರ ಬೆನ್ನುಮೂಳೆ ಮುರಿಯಲಾರಂ... ಸಿತು. ಆಗ



ವಸ್ತ್ರದ್



ಶಿವರಾಜ್

ಅನಿವಾರ್ಯವಾಗಿ ಕಾರ್ಮಿಕರು ಹೋರಾಟದ ಹಾ... ತುಳಿದರು. ಡಿ.ಸಿ ಕಚೇರಿಯೆದುರು ಮತ್ತೊಮ್ಮೆ ಟೆಂಟ... ಹಾಕಿ ಧರಣಿ ಪ್ರಾರಂಭಿಸಬೇಕೆಂದುಕೊಂಡಿರುವಾಗಲೆ... ವಿಆರ್‌ಎಸ್ ಎಂಬ ಅಸ್ತ್ರವನ್ನು ಮುಂದಿಟ್ಟ ಜಿಲ್ಲಾಡಳಿ... ಕಾರ್ಮಿಕರ ಮೂಗಿಗೆ ತುಪ್ಪ ಸವರಲಾರಂಭಿಸಿತು.

22.09.08ರಂದು ಸಂಗೂರು ಶುಗರ್ಸ್ ಅನ್ನು ಕಾಯ... ಆಗಿ ಮುಚ್ಚುವ ಉದ್ದೇಶದಿಂದ ನೌಕರರ ಸ್ವಯಂ ನಿವೃ... ಯೋಜನೆಯ ಸಭೆಯನ್ನು ಬಲವಂತವಾಗಿ ಮಾಡಲಾಯಿತು... ವಿ.ಆರ್.ಎಸ್. ಪಡೆದ ಕಾರ್ಮಿಕರಿಗೆ ಒಂದು ವಾರದ... ಒಳಗಾಗಿ ಶೇ.೫೦ರಷ್ಟು ಬಾಕಿ ವೇತನ ಕೊಡಬೇಕೆಂದರೂ... ನಿವೃತ್ತಿ ವಯಸ್ಸನ್ನು 58 ವರ್ಷಕ್ಕೆ ಬದಲಾಗಿ 60 ವರ್ಷ... ಎಂದು ಪರಿಗಣಿಸಬೇಕು ಮುಂತಾದ ಹಲವು ಬೇಡಿಕೆಗಳನ್ನು... ಕಾರ್ಮಿಕರು ಇಟ್ಟಾಗ ಇದೇ ಉದಾಸಿ ಕೋಲು ಬಸವನಂ... ತಲೆಯಲ್ಲಾಡಿಸಿ ಹೋಗಿದ್ದ. ಕೊನೆಗೆ ಮಾಡಿದ್ದು ವಿಆರ್‌ಎಸ್... ಪಡೆದವರ ಸೇವಾವಧಿ 26.09.2008ಕ್ಕೆ ಕೊನೆಯಾಗುವುದು... ಎಂಬ ಆದೇಶ ಕೊಟ್ಟದ್ದು. ಅಂದರೆ ನೌಕರಿಯನ್ನೂ ಕಿತ್ತು... ಕೊಂಡರು, ಕಾರ್ಮಿಕರಿಗೆ ಸಿಗಬೇಕಿದ್ದ ದುಡ್ಡನ್ನೂ ಕಿತ್ತು... ಕೊಂಡರು. ಪರಿಣಾಮವಾಗಿ ಕಾರ್ಮಿಕರು ಬರಿಗೈಯಲ್ಲಿ... ಬೀದಿಗೆ ಬಿದ್ದರು. ಅದೇ ಈಗ ಕಾರ್ಮಿಕ ಹನುಮಂತಪ್ಪ... ಕಾಳೆಯ ಆತ್ಮಹತ್ಯೆಯಲ್ಲಿ ಪರ್ಯವಸನ ಹೊಂದಿದೆ.

ಒಟ್ಟಿನಲ್ಲಿ ಉದಾಸಿಯ ರಕ್ತ ರಾಜಕಾರಣಕ್ಕೆ... ಹಾವೇರಿಯಲ್ಲಿ ಮತ್ತೊಂದು ಹೆಣ ಬಿದ್ದಿದೆ. ಒಂದೆಡೆ... ಕಾರ್ಮಿಕರ, ಇನ್ನೊಂದೆಡೆ ರೈತರ ವಿರೋಧ ಕಟ್ಟಿಕೊಳ್ಳುತ್ತಿರುವ... ಮುದಿ ಉದಾಸಿಗೆ ಸಹಜ ಸಾವು ಬರುತ್ತೋ ಅಥವಾ... ರೈತ-ಕಾರ್ಮಿಕರೆ ಅವಧಿಗೆ ಮುಂಚೆ ಸಾಯುವಂತೆ... ಮಾಡುತ್ತಾರೋ ಗೊತ್ತಿಲ್ಲ.

■ ಹುರುಳಿಕುಪ್ಪಿ ವಿನಯ...

ನಗ್ಗಲ ಮುಳ್ಳು

ಭಲೇ ಬಸವ

ಮಂಡ್ಯದ ಚಿಕ್ಕರಸಿನಕೆರೆಯಲ್ಲಿ ಒಂದು ಬಸವ ಇದೆ. ಅದು ಅಂತಿಂತಹ ಬಸವ ಅಲ್ಲ, ಪವಾಡ ಬಸವ! ಮೆರೆಯೋ ದೇವರ ತರಹ ಅದು ಭಕ್ತರಿಗೆ ದರ್ಶನ ನೀಡೋದು ಫುಲ್ ಮೇಕಪ್ ಮಾಡಿಕೊಂಡೇ. ಮೈಮೇಲೆ ತರಾವರಿ ರಂಗುರಂಗಿನ ಬಟ್ಟೆ, ಕೋಡಿಗೆ ನೋಟಿನ ಕಂತೆ ಇಲ್ಲದೆ ಟಿವಿಗಳಿಗಿರಲಿ ಜನರಿಗೂ ಪೋಸ್ ಕೊಟ್ಟದ್ದಿಲ್ಲ. ಮೇಕಪ್ ಅದೇ ಮಾಡಿಕೊಳ್ಳುತ್ತಾ? ಅಂತ ಅಣಕ ಹೊಡೆಯೋರಿಗೆ ಒಂದು ಮಾತು. ದೇವರು ಅವನ ಮೇಕಪ್ಪು ಅವನೇ ಮಾಡಿಕೊಳ್ಳುತ್ತಾನಲ್ಲಾ ಹಂಗೇ ಇದೂನೂವೆ. ಅದಕ್ಕೆ ಹರಕೆ ಹೊತ್ತರೆ ಕುರಿತುಕೊಂಡ ಕೆಲಸ ಎಲ್ಲ ಹೂ ಎತ್ತಿದಂಗೆ ಆಗೋಯ್ತದೆ ಅಂತ ಸುದ್ದಿ. ದೇವರ ಜಮೀನ ಯಾರೋ ಒತ್ತುವರಿ ಮಾಡಿಕೊಂಡಿದ್ದಂತೆ. 'ದೇವರ ಜಮೀನು ಹೀಗೆಲ್ಲ ಮಾಡಬಾರದು' ಅಂತ ಬುದ್ಧಿ ಮಾತು ಹೇಳಿ ನೋಡಿದರಂತೆ ಹಿರೀಕರು. ಅವನು ಅವರ ಮಾತಿಗೆ ಕ್ಯಾರೇ ಮಾಡಿರ್ಲಿಲ್ವಂತೆ. ಬಸವನಿಗೆ ಹರಕೆ ಹೊತ್ತರು ನೋಡಿ. ಅದು ಜಮೀನಿನ ಸುತ್ತ ಒಂದು ಸುತ್ತು ಬತ್ತಂತೆ. ಥೇಟ್ ಮೋಜಣಿದಾರನ ಅಳತೆಗೆ ಕರಾರುವಾಕ್ಕಾಗಿತ್ತಂತೆ. ಎಲ ಎಲ ಜಮೀನು ಇಷ್ಟೇಯಾ ಅಂತ ಕುರ್ತೇಟು ಕಂಡುಹಿಡೀತಲ್ಲ, ಇದು ಸಾಮಾನ್ಯ ಬಸವ ಅಲ್ಲ ಅಂತ ಒತ್ತುವರಿಯೋನು ತಪ್ಪು ಕಾಣಿಕೆ ನೀಡಿ ಜಮೀನು ಬಿಟ್ಟುಕೊಟ್ಟನಂತೆ. ತಿಳೀತಾ ಇದರ ಮಹಿಮೆ ಏನು ಅಂತಾವ. ಕೋರ್ಟು; ಪೋಲೀಸ್ ಸ್ಟೇಷನ್ನು ಅಂತ ಅಲೆಯಂಗಿಲ್ಲ. ಹರಕೆ ಹೊತ್ತುಕೊಂಡರೆ ಸಾಕು! ಬರೀ ಇಷ್ಟೇ ಅಲ್ಲ, ಮಕ್ಕಳಾಗಲಿಲ್ಲ ಅನ್ನಿ. ಡಾಕ್ಟರ್ ಹತ್ತಿರ ಹೋಗಿ ತಲೆಬೋಳಿಸಿಕೊಳ್ಳಬೇಕಿಲ್ಲ. ಬಸವನಿಗೆ ಹರಕೆ ಹೊತ್ತು ಅದರ ಮುಂದೆ ಮಲಗಿದರೆ ಮುಗೀತು. ಬಸವ ಅವರ ಮೇಲೆ ಹಾಯ್ದುಹೋದರೆ ಎಂಥ ಬಂಜೆಗೂ ಮಕ್ಕಳು ಗ್ಯಾರಂಟಿ! ಇಂತಹ ಬಸವನ ಹತ್ತಿರ ನೀವೇ ಹೋಗಬೇಕು ಅಂತಿಲ್ಲ, ಇದೇ ಒಂದೊಂದು ಸಲ ವಾಲಂಟರಿಯಾಗಿ ಮನೆಗಳಿಗೆ ಹೋಗಿ ಆ ಮನೆಯವರಿಗೆ ಒದಗಿರುವ ಸಂಕಟ ದೂರ ಮಾಡುತ್ತೆ. ಇಂತಹ ಪವಾಡ ಬಸವ ದೀಪಾವಳಿ ದಿವಸ, ತಾರಾ ಗೊತ್ತಲ್ಲ ಅದೇ ಸಿನಿಮಾ ತಾರೆ, ಅವರ ಮನೆಗೆ ತನ್ನ ಪಾದ ಬೆಳಸ್ತು. ಮೊದಲೇ ಸಿನಿಮಾ ಜನ. ಪಂಚಾಂಗಾನ ಬಗಲಿಗೆ ತಗುಲಿಸಿಕೊಂಡಿರ್ತಾರೆ. ಇನ್ನು ಪವಾಡ ಬಸವ ಮನೆ ಬಾಗಿಲಿಗೆ ಬಂದಿದೆ ಅಂದ್ರೆ ಕೇಳಬೇಕೆ. ಭಯಭಕ್ತಿಯಿಂದ ಅದ್ದೂರಿಯಾಗಿ ಸೇವೆ ಸಲ್ಲಿಸಿದರು. ಬಸವ ಎತ್ತಿದ ಮುಂಗಾಲನ್ನೇ ಎರಡೂ ಕೈಲಿ ಹಿಡಿದು ನಮಸ್ಕರಿಸಿದರು. ಅದರ ಮುಂದೆ ಮಲಗಿದರು. ಬಸವ ಅವರ ಮೇಲೆ ಹಾದು ಹೋದಾಗ ತಾರಾ ಮುಖದಲ್ಲಿ ಎಲ್ಲಿಲ್ಲದ ಕಳೆ ತುಂಬಿ ಬಂತು. ಧನ್ಯೋಸ್ಮಿ ಅಂದುಕೊಂಡಿರಬೇಕು.

ಇದೆಲ್ಲ ಸರಿ. ಪವಾಡ ಬಸವನನ್ನು ಇಂತಹ ಸಮಯಗಳಲ್ಲಿ ಯಾವಾಗಲೂ ಹಿಡಿದುಕೊಂಡೆ ಇರ್ತಾರಲ್ಲ! ಅದು ಯಾಕೆ ಆಯ್ದು ಆಯ್ದು ಶ್ರೀಮಂತರ ಮನೆಗೇ ವಾಲೆಂಟರಿ ವಿಸಿಟ್ ಕೊಡುತ್ತಲ್ಲಾ...




ಕೊಲೆ ರಸಿಕರು

ಕೆಲವು ಪ್ರಭೃತಿಗಳಿದ್ದಾರೆ. ಸಭೆ ಸಮಾರಂಭಗಳಲ್ಲಿ ಅವರಿಗೆ ಮೊದಲ ಸಾಲೇ ಆಗಬೇಕು. ಪೀಠಸ್ಥರಾದವರ ಗಂಭೀರ ಮುಖಮುದ್ರೆ ಯಾವುದೇ ಬದಲಾವಣೆ ಕಾಣುವುದಿಲ್ಲ, ಎಂತಹ ಘಟಾನುಘಟಿ ಅತಿಥಿಯಾದರೂ ಅವರ ಚಹರೆ ಬದಲಿಸಲು ಸಾಧ್ಯವೇ ಇಲ್ಲ, ಅತಿಥಿಯ ಆತ್ಮಸ್ಥೈರ್ಯವೇ ಕೆರ ಹಿಡಿಯುತ್ತೆ! ಇದನ್ನ ಯಾಕೆ ಪ್ರಸ್ತಾಪಿಸಬೇಕಾಯ್ತು ಅಂದರೆ ಹಂಪಿ ಉತ್ಸವ ಅಂತ ನಡೀತಲ್ಲ ಅಲ್ಲಿಗೆ ಆಶಾ ಬೋಂಸ್ಲೆ ಕರೆಸಿದ್ದರು. ಕಾರ್ಯಕ್ರಮ ಉದ್ಘಾಟಕ ಅಡ್ವಾಣಿ ಬಂದದ್ದೇ ನಾಲ್ಕು ಗಂಟೆ ತಡವಾಗಿ! ಜನ ಕಾಯ್ತಾ ಇರ್ತಾರಲ್ಲ ಅಂತ ಯಾವ ರಾಜಕಾರಣಿಗೂ ಮುಜುಗರ ಆಗೋಲ್ಲ ಬಿಡಿ. ಕಾಯುವುದು ಅವರ ಕರ್ಮ ಕಾಯಿಸುವುದು ನಮ್ಮ ಧರ್ಮ ಅನ್ನೋ ಜಾತೀವು ಅವು. ಸರಿ ಆಶಾ ಹಾಡು ಪ್ರಾರಂಭ ಆಯಿತು. ಒಂದು ಹಾಡಾಯಿತು, ಎರಡೂ ಮುಗಿಯಿತು. ಹಿಂದೆ ಕುಳಿತಿದ್ದ 'ಕಲಾರಸಿಕರು' ಚಪ್ಪಾಳೆ ಮೂಲಕ ಪ್ರಶಂಸೆ ವ್ಯಕ್ತಪಡಿಸಿದರು. ಮೊದಲನೆ ಸಾಲಿನಲ್ಲಿ ವಿಜೃಂಭಿಸುತ್ತಿದ್ದರಲ್ಲ ವಿಐಪಿಗಳು ಅವರೇ 'ಕೊಲೆರಸಿಕರು'. ಗಂಭೀರವದನರಾಗಿದ್ದೇ ತಮ್ಮ ಸ್ಥಾನಗೌರವ ಕಾಪಾಡಿಕೊಂಡರು! ' ಈ ಗಣ್ಯರಿಗೆ ಚಪ್ಪಾಳೆ ಹೊಡೆಸಿಕೊಂಡು ಗೊತ್ತು, ಹೊಡೆದು ಗೊತ್ತಿಲ್ಲ!' ಅನ್ನೋ ಆಶಾ ಚುಚ್ಚು ಮಾತುಗಳು ಅವರ ಎಮ್ಮೆ ಚರ್ಮದೊಳಗೆ ಇಳಿಯಲೇ ಇಲ್ವಂತೆ!! ನಾಲ್ಕನೇ ಹಾಡು ಹಾಡುತ್ತಿದ್ದಾಗಲೇ ಅಡ್ವಾಣಿ ಸಾಹೇಬರು ಎದ್ದು ನಿಂತು ಸಭೆಯ ಅಧ್ಯಾನ ಮಾಡಿದರಂತೆ. ಆಹಾ ಎಂತಹ ಸಂಸ್ಕೃತಿ! ಬಸವನ ಹಿಂದೆ ಬಾಲ ಅನ್ನುವಂತೆ ಸುಮಾರು ಜನ ಅವರನ್ನ ಹಿಂಬಾಲಿಸಿದರಂತೆ. ಇಂತಹ ಗೋಜುಗೊಂದಲಗಳಿಂದ ಬೇಸತ್ತ ಆಶಾ 'ಸಾಕಾಯ್ತು ಇನ್ನು ಹಂಪಿಗೆ ಬರಲ್ಲ' ಅಂದರಂತೆ. ಹಾಗೆ ನೋಡಿದರೆ ಆಕೇದು ತಪ್ಪೇನೋ ಅನ್ನಿಸುತ್ತೆ, ಅವರನ್ನು ಕರೆಸಿದ್ದು ಅವರಿಗೆ ಜನಪ್ರಿಯತೆ ಇದೆ ಅಂತ. 'ಆಶಾ ಬೋಂಸ್ಲೆನೇ ಕರ್ಸಿದ್ದ ರೆಡ್ಡಿ' ಅನ್ನಿಸಿಕೊಂಡು ತನ್ನ ಬೆನ್ನು ತಟ್ಟಿಕೊಳ್ಳೋಕೆ. ಇಂಪಾದ ಹಾಡಿನ ರಸಾಸ್ವಾದನೆಗೆ ಅಲ್ಲ, ಅವರ ಬಾಯಿಯಿಂದ ಹಾಡಿನ ಬದಲು ಓಟುಗಳು ಉದುರುತ್ತಿದ್ದರೆ ಅಡ್ವಾಣಿ ಅಂದು ಅಲುಗುತ್ತಿರಲೇ ಇಲ್ಲ, ಅಲ್ವಾ?

'ಸನ್ಯಾಸಿ ದೊಡ್ಡಣ್ಣ'

ಹಾಳಾದ ಶೂದ್ರ ಮುಂಡೇವು ಯಾವುಯಾವುದೋ ಧರ್ಮಕ್ಕೆ ಮತಾಂತರ ಆಗಿ ರೌರವ ನರಕಕ್ಕೆ ಹೋಗ್ತಾರಲ್ಲ ಅಂತ ದೊಡ್ಡಣ್ಣನವರಿಗೆ ಭಾರೀ ನೋವಾಯಿತು. (ದೊಡ್ಡಣ್ಣ ಅಂದರೆ ಯಾರು ಅಂತೀರಿ, ಸಿನಿಮಾ ದೊಡ್ಡಣ್ಣ ಅಲ್ಲ. ಪೇಜಾವರ ಮಠದ ವಿಶ್ವೇಶತೀರ್ಥ ಅವರು. ಪ್ರಪಂಚಕ್ಕೆ ಅಮೆರಿಕ ದೊಡ್ಡಣ್ಣ ಅಲ್ವ, ಹಂಗೇ ಎಲ್ಲಾ ಮಠಗಳಿಗೂ ಇವರು ದೊಡ್ಡಣ್ಣ) ಅದೂ ದಲಿತರು ಹೋಲ್‌ಸೇಲಾಗಿ ಹಾಳಾಗ್ತಿದಾರಲ್ಲ ಅಂತ. "ಸೇರೋರು ಸೇರ್ತೀರಿ. ಆ ಹಾಳು ಬೌದ್ಧ ಮತಕ್ಕೆ ಯಾಕೆ ಸೇರ್ತೀರ ಮುಂಡೇವ, ಅದೇನಿದ್ರೂ ಹಿಂದೂ ಧರ್ಮದ ಒಂದು ಭಾಗವೇಯ. ಆರ್ಯ ಸಮಾಜಕ್ಕೆ ಸೇರಿ ಉದ್ಧಾರ ಆಗಿ" ಎಂದು ದಲಿತೋದ್ಧಾರದ ಮಾತು ಹೇಳಿದರು. ಶ್ರೀಗಳ ಮಾತಿಗೆ ಪುರಸ್ಕಾರ ನೀಡುವುದು ಹಾಗಿರಲಿ, ಅಂತಹ ಸರ್ವಸಂಗ ಪರಿತ್ಯಾಗಿಗಳ ಮೇಲೆ ತಿರುಗಿ ಬೀಳೋದ! ಹಿಂದೂ ಧರ್ಮ ಧರ್ಮವೇ ಅಲ್ಲ, ಅದೊಂದು ಜಾತಿಗಳ ಸಮೂಹ. ಇಲ್ಲಿನ ಅನಿಷ್ಟಗಳ ವಿರುದ್ಧ ಸಿಡಿದೆದ್ದ ಬುದ್ಧ ಬೌದ್ಧ ಮತ ಸ್ಥಾಪಿಸಿದ. ಹೀಗಿರುವಾಗ ಅದು ಹಿಂದೂ ಧರ್ಮದ ಭಾಗ ಹೆಂಗೆ ಆಗಲು ಸಾಧ್ಯ ಅಂತಾವ ಏನೇನೋ ಕೇಳಿ ಕುಂತವೆ. ಅಯ್ಯೋ ರಾಮನೇ ಹಿಂಗೆ ಸಿಡಿದು ಹೋಗಿದ್ದೇ ಅಲ್ವೆ ಅವನ್ನ ವಿಷ್ಣುವಿನ ಹನ್ನೊಂದನೆ ಅವತಾರ ಅಂತ ಮಾಡಿದ್ದು ಅಂದ್ರೂ ಕೇಳೊಲ್ಲರು. ಬಸವಣ್ಣನೂ ಹಿಂಗೇ ಸಿಡಿದು ಹೋಗಿದ್ದ. ಈಗ ಲಿಂಗಾಯಿತರೆಲ್ಲ ನಾವೇ ಹಿಂದೂ ಧರ್ಮ ಹುಟ್ಟಿಸಿದೋರು ಅಂತಾವ ಎದ್ದೆದ್ದು ಕುಣೀತಾ ಇಲ್ವ ಹಂಗೇ ಕುಣೀರಿ ನೀವೂವೆ ಅಂದ್ರೆ ಒಪ್ಪೊಲ್ಲರು. ಹಿಂದೂ ಧರ್ಮ ಗುಲಾಮಗಿರಿ, ಅಸಮಾನತೆ, ತಾರತಮ್ಯ ಮತ್ತು ಅನ್ಯಾಯದ ಮೇಲೆ ನಿಂತದೆ; ಬೌದ್ಧ ಧರ್ಮ ಸ್ವಾತಂತ್ರ್ಯ, ಸಮಾನತೆ, ಸೋದರತ್ವ ಮತ್ತು ನ್ಯಾಯದ ಮೇಲೆ ನಿಂತದೆ. ಅಂತಹ ಪವಿತ್ರ ಹಿಂದೂ ಮೇಲೆ ದಸಂಸದೋವು ತಿರುಗಿಬೀಳ್ತ ಅವೆ. ಅದು ನಮ್ಮ ಮೂಲಧರ್ಮ. ನಿಮ್ಮ 'ಘರ್‌ವಾಪಿಸಿ' ಕಾರ್ಯಕ್ರಮ ಇದ್ದಂಗೆ ಇದು ನಮ್ಮ 'ಮರಳಿಮನೆಗೆ' ಕಾರ್ಯಕ್ರಮ ಅಂತಾವೆ. ಅಷ್ಟೇ ಅಲ್ಲ, ಯಾವುದೇ ಧರ್ಮದ ಮೇಲಾದರೂ ಅಧಿಕೃತವಾಗಿ ಮಾತನಾಡುವ ಹಕ್ಕು ಇರುವ ಶ್ರೀಗಳಿಗೆ ಬೌದ್ಧ ಮತದ ತಿರುಳು ಗೊತ್ತಿಲ್ಲದಿದ್ದರೆ ಬಾಯಿಮುಚ್ಚಕೊಂಡು ಬದ್ದಿರಿ ಅಂತಾವಲ್ಲ. ಅದೇನು ಉದ್ಧಟತನ ಅಂತೀನಿ, ಶ್ರೀಮಠದ ಊರಿನವನೇ ಒಬ್ಬ ದಲಿತ 'ಮಠದ ಉತ್ತರಾಧಿಕಾರಿಯಾಗಿ ನನ್ನನ್ನು ಸ್ವೀಕರಿಸುತ್ತೀರಾ' ಅಂತ ಕೇಳ್ತಾ ಬದ್ದವನಲ್ಲಾ, ಎಲ್ಲಿಗೆ ಬಂತು ನೋಡಿ ಮತ್ತೆ, ಶ್ರೀಗಳು ಹರಿಜನ 'ಉದ್ಧಾರಕ್ಕೆ' ಕೈ ಹಾಕಿದ್ದೇ ಯಡವಟ್ಟಾಯಿತೋ ಏನೋ...?






ಕೊಲೆಪಾತಕಿ ಹೆಬ್ಬೆಟ್ ಮಂಜನ ಜೊತೆ ಅರೆಸ್ಟ್ ಆಗಿರುವ ನೆಲಗದಿರೇನಹಳ್ಳಿ ಮಂಜುನಾಥ

ಹೆಬ್ಬೆಟ್ಟು, ಸ್ಲಂ ಬಾಲ, ಮುಲಾಮು, ಯೂತ್ ಕಾಂಗ್ರೆಸ್ ಮಂಜ... ಎಲ್ಲಾ ಮಾಯಾವೋ ಪ್ರಭುವೇ....!

ಏನಿದೆಲ್ಲಾ ಎಂದು ನೀವು ಗೊಂದಲಕ್ಕೀಡಾಗುವುದೇ ಬೇಡ. ಇರೋ ವಿಷಯವನ್ನು ನಾಲ್ಕೇ ಮಾತುಗಳಲ್ಲಿ ಹೇಳಿಬಿಡುತ್ತೇವೆ.

ಮೊನ್ನೆ ಶನಿವಾರ ಬೆಂಗಳೂರಿನ ಸಿಸಿಬಿ ಪೊಲೀಸರು ಹೆಬ್ಬೆಟ್ ಮಂಜ ಎಂಬ ಧಡಿಯನನ್ನು ಅರೆಸ್ಟು ಮಾಡಿದ್ದಾರೆ. ಜೊತೆಯಲ್ಲಿ ಒಂದು ಪಿಸ್ತೂಲ್, 13 ರೌಂಡ್ಸ್, ಲಾಂಗು, ಚಾಕು ಮುಂತಾದ ಕರಕುಶಲ ವಸ್ತುಗಳೂ ಪೊಲೀಸರಿಗೆ ಸಿಕ್ಕಿವೆ.



ಡೀಕೆಗೆ ಶುಭಾಷಯ ಕೋರುತ್ತಿರುವ ನಕಲಿ ಯುವ ಕಾಂಗ್ರೆಸ್ ಮುಖಂಡರಾದ ಶ್ರೀನಿವಾಸ ಮತ್ತು ರೌಡಿ ಮಂಜುನಾಥ

ವಿಷಯ ಏನೆಂದರೆ, ಈ ಹೆಬ್ಬೆಟ್ ಗಿರಾಕಿ ಕೊರಂಗು ಕೃಷ್ಣ ಎಂಬ ಇನ್ನೊಬ್ಬ ರೌಡಿಯನ್ನು ಕೊಲೆ ಮಾಡಲು ಹೊರಟಿದ್ದಾಗ ಪೊಲೀಸರಿಗೆ ಸಿಕ್ಕುಬಿದ್ದ. ಅವನ ಜೊತೆಗೆ ರಘು ಅಲಿಯಾಸ್ ತಿಮ್ಮ, ರವಿನಾಯಕ, ನಾಗರಾಜ, ಗಂಗಾಧರ ಅಲಿಯಾಸ್ ರಾಜ ಮತ್ತು ಮಂಜುನಾಥ ಎಂಬ ಪಾತಕಿಗಳೂ ಸಿಕ್ಕಿಬಿದ್ದಿದ್ದಾರೆ.

ಇವರೆಲ್ಲಾ ಬೆಂಗಳೂರಿನ ಕುಖ್ಯಾತ ರೌಡಿ ಹಾಗೂ ಸೂಫಿ ಸಂತರಾದ ಮುಲಾಮು ಯಾನೆ ಲೋಕೇಶನ ಹಂತಕ ಪಡೆಯವರು. ಈ ಮಹಾತ್ಮರ ಫೋಟೋ ಶನಿವಾರದ ಈ ಸಂಜೆ ಪತ್ರಿಕೆಯ ಮುಖಪುಟದಲ್ಲೇ ದೊಡ್ಡದಾಗಿ ಪ್ರಕಟವಾಗಿತ್ತು. ಅದರಲ್ಲಿ ಎಡತುದಿಯಲ್ಲಿದ್ದವನೇ ನೆಲಗದಿರೇನಹಳ್ಳಿ ಮಂಜುನಾಥ. ಅದೇ ವೇಳೆಯಲ್ಲಿ ನವರಂಗ್ ಟಾಕೀಸಿನ ಮುಂದೆಯೂ ಈ ಮಂಜುನಾಥನ ಫೋಟೋ ರಾರಾಜಿಸುತ್ತಿತ್ತು. ಮೊನ್ನೆ ಬಿಡುಗಡೆಯಾದ 'ಸ್ಲಂ ಬಾಲ' ಸಿನಿಮಾಗೆ ಶುಭಾಷಯ ಕೋರಿ ಈ ರೌಡಿ ಮಂಜುನಾಥ ತನ್ನದೊಂದು ದೊಡ್ಡ ಫೋಟೋ ಇರುವ ವಿನಯಲ್ ಹಾಕಿಸಿಕೊಂಡಿದ್ದ.

ಅಂದರೆ ಅತ್ತ ಸ್ಲಂ ಬಾಲ ಸಿನಿಮಾದವರಿಗೂ ಇತ್ತ ಹೆಬ್ಬೆಟ್ ಮಂಜನೆಂಬ ಪಾತಕಿಗೂ ಏಕಕಾಲದಲ್ಲಿ ಮಂಜುನಾಥನಿಗೆ ಲಿಂಕ್ ಇದೆ ಎಂದಾಯಿತು. ಇದಿಷ್ಟೇ ಅಲ್ಲ ಡಿ.ಕೆ. ಶಿವಕುಮಾರ್ ಕಾಂಗ್ರೆಸ್ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡಾಗ ಸೆಪ್ಟೆಂಬರ್ 26 ನೇ ತಾರೀಖಿನ ಈ ಸಂಜೆಯಲ್ಲಿ ಮುಲಾಮನ ಶಿಷ್ಯ ಮಂಜುನಾಥ ಶುಭಾಶಯ ಕೋರಿ ಅರ್ಧ ಪುಟದ ಜಾಹೀರಾತು ಹಾಕಿಸಿದ್ದ. ಅದರಲ್ಲಿ ಯಾರೂ ಅಧಿಕೃತವಾಗಿ ನೇಮಿಸಿರದಿದ್ದರೂ ತನ್ನನ್ನು ಯುವ ಕಾಂಗ್ರೆಸ್ ಮುಖಂಡ ಎಂದು ಪ್ರಕಟಿಸಿಕೊಂಡಿದ್ದ. ಅದೇ ಜಾಹೀರಾತಿನಲ್ಲಿ ಬಿ.ವಿ. ಶ್ರೀನಿವಾಸನೆಂಬ ಇನ್ನೊಬ್ಬನ ಫೋಟೋ ಸಹ ಇತ್ತು. ಭದ್ರಾವತಿಯವನಾದ ಬಿ.ವಿ. ಶ್ರೀನಿವಾಸ ರೌಡಿ ಮಂಜುನಾಥನ ಗೆಳೆಕಾರನಾಗಿದ್ದು ಮಹಾಲಕ್ಷ್ಮಿ ಲೇಔಟ್ 'ಕರುನಾಡ ಸೇನೆ'ಯೆಂಬ ಗುಂಪಿನ ಅಧ್ಯಕ್ಷನೆಂದು ಹೇಳಿಕೊಳ್ಳುತ್ತಾನೆ. ತಮಾಷೆ ಏನೆಂದರೆ ಈ ಗೂಂಡಾಗಳ ಗೆಳೆಕಾರ ಶ್ರೀನಿವಾಸ ಸ್ಲಂ ಬಾಲು ಸಿನಿಮಾದಲ್ಲಿ ಪೊಲೀಸ್ ಆಫೀಸರ್ ಪಾತ್ರ ಮಾಡಿದ್ದಾನೆ!



'ಸ್ಲಂ ಬಾಲ'ನಿಗೆ ಶುಭಾಷಯ ಕೋರುತ್ತಿರುವ ಹೆಬ್ಬೆಟ್ ಮಂಜನ ಶಿಷ್ಯ ಮಂಜುನಾಥ

ಅಂಥ ಬಹುಮುಖ ಪ್ರತಿಭೆಯ ಶ್ರೀನಿವಾಸ ತನ್ನ 'ಸೂಫಿ' ಮಿತ್ರರೆಲ್ಲಾ ಪೊಲೀಸರ ವಶವಾಗಿದ್ದನ್ನು ನೋಡಿ ಬೇಸರದಿಂದ ತಲೆಮರೆಸಿಕೊಂಡು ಈಗ ನಾಪತ್ತೆಯಾಗಿದ್ದಾನೆ. ರೌಡಿಗಳಾದ ಹೆಬ್ಬೆಟ್ ಮಂಜ ಹಾಗೂ ಮಂಜುನಾಥನನ್ನು ಪೊಲೀಸರು ಅರೆಸ್ಟು ಮಾಡಿದರೆ ಸ್ಲಂ ಬಾಲ ಸಿನಿಮಾದ ಪೊಲೀಸು ಅಧಿಕಾರಿಯ ಪಾತ್ರಧಾರಿ ಯಾಕೆ ತಲೆ ತಪ್ಪಿಸಿಕೊಂಡು ಓಡಿಹೋಗಬೇಕು?

ಕರ್ನಾಟಕದ 'ಬುದ್ಧಿ'ಜೀವಿಗಳ ಪೈಕಿ ಯಾರಾದರೂ ಈ ಮುಲಾಮು, ಹೆಬ್ಬೆಟ್ ಮಂಜನ ಗೆಳೆತನ ಹೊಂದಿರುವವರು ಉತ್ತರಿಸಿಯಾರೆ? ■

ಮಲವೇ ಜೀವನ ಸಾಕ್ಷಾತ್ಕಾರ?

ಶ್ರೀಧರ ಗುಡ್ಡದ ಮಾಯಾಂಗನೆ


ವಿನುತಾಶ್ರೀನಿವಾಸ

■ ರಾ. ಸೋಮನಾಥ್

* ಈ ದೇಹದ ಋಣಭಾರ ಕಳೆದು ಪೂರ್ಣ ಮಲಗಳನ್ನು ಅಂದರೆ (ಅಣವ, ಕರ್ಮ ಮತ್ತು ಮಾಯಾಮಲ) ದೇಹ, ಮನಸ್ಸು ಮತ್ತು ಆತ್ಮದ ಲೇಪಗಳನ್ನು ಕಳೆದು ಮುಕ್ತಿಗಾಗಿ ದೇಹ ಪೋಷಣೆ ಅದಕ್ಕೆ ಸಂಬಂಧಿವಾಗಿ ನಡೆಯುತ್ತಿರುತ್ತದೆ!
* ಸೇವಿಸುವ ಆಹಾರದ ಪಚನಾಶಕ್ತಿ, ಜೀರ್ಣಶಕ್ತಿ, ರಕ್ತಗತವಾಗಿಸುವ ಶಕ್ತಿಗೆ ಬೇಕಾದ ಅಗ್ನಿಯು ದೇಹದಲ್ಲಿ ತ್ರಿದೋಷಗಳನ್ನು ಸಪ್ತದಾತುಗಳನ್ನು ಮತ್ತು ಮಲವನ್ನು ನಿಯಂತ್ರಿಸುತ್ತದೆ!
* ಸಹಸ್ರಾರು ಶರೀರಗಳಲ್ಲಿ ದಹಿಸುತ್ತಿರುವ ಅಗ್ನಿಯಲ್ಲಿ ನಿಮ್ಮಿಂದ ದಾನವಾದ ಧಾನ್ಯಗಳು ಆಹುತಿಯಾಗಲಿ. ಈ ಅನ್ನ ಯಜ್ಞವು ನಿಮ್ಮ ಕೋಟಿ ಜನ್ಮದ ಮಲಗಳನ್ನು ಒಂದೇ ಬಾರಿಗೆ ಹರಿಸಿ ಮುಕ್ತಿಯಾಗಲಿ!

ನಿಮಗೇನಾದರೂ ಈ ಮೇಲ್ಕಂಡ ಯಾವುದಾದರೂ ಒಂದು ವಾಕ್ಯ ಅರ್ಥವಾಯಿತೆ? ಬಹುಶಃ ಸೃಷ್ಟಿಕರ್ತ ಬ್ರಹ್ಮನಿಗೂ ಅರ್ಥವಾಗಲಿಕ್ಕಿಲ್ಲ, ಆದರೆ ತಲೆಬುಡ ಅರ್ಥವಾಗದ ಇಂಥ ಅಸಂಬದ್ಧ ವೇದಾಂತವನ್ನೇ ದೈವವಾಣಿಯೆಂದೂ, ಹೀಗೆ ತಲೆಗೆ ತೋಚಿದಂತೆ ಬುರುಡೆ ಬಿಡುವ ಹೆಂಗಸನ್ನೇ ದುರ್ಗಾಮಾತೆ, ಆದಿಪರಾಶಕ್ತಿ, ಕರುಣಾಕ್ಷಿ, ಕನ್ನಿಕಾ ಪರಮೇಶ್ವರಿ ಇತ್ಯಾದಿ ದೇವರುಗಳ ಅವತಾರವೆಂದೂ ನಂಬುವ, ಪೂಜಿಸುವ ಕೊನೆಗೆ ಕಾಸು ಕೊಟ್ಟು ತಲೆಯನ್ನೂ ಬೋಳಿಸಿಕೊಳ್ಳುವ ಮಂಕುದಿಣ್ಣೆಗಳ ದೊಡ್ಡ ಗುಂಪೇ ಇದೆ. ಈ ಪೈಕಿ ಹೆಚ್ಚಿನ ಸಂಖ್ಯೆಯವರು ಬೆಂಗಳೂರಿನ ವಿವಿಪುರಂನ ಕೋಮಟಿ ಶೆಟ್ಟರು. ಹಾಸನ, ಶಿವಮೊಗ್ಗ, ಮೈಸೂರು, ಮಂಡ್ಯಗಳಲ್ಲಷ್ಟೇ ಅಲ್ಲ ನ್ಯೂಯಾರ್ಕ್, ಟೆಕ್ಸಾಸ್, ಲಂಡನ್, ಪಿಟ್ಸ್‌ಬರ್ಗ್, ಸಿಂಗಾಪೂರ್ ಇತ್ಯಾದಿ ವಿದೇಶಿ ಭಕ್ತಾದಿಗಳ ಹಿಂಡೂ ಹುಟ್ಟಿಕೊಂಡಿದೆ.

ಆಕೆಯ ಹೆಸರು ವಿನುತಾ ಶ್ರೀನಿವಾಸ್. ಬೆಂಗಳೂರಿನ ಹನುಮಂತನಗರದ ಫೂಟ್ ಲಾಯರ್ ಶ್ರೀನಿವಾಸ್ ಎಂಬಾತನ ಈ ಕಿಲಾಡಿ ಪತ್ನಿಯೇ ಸದ್ಯ ಕೆಂಗೇರಿ ಸಮೀಪದ ಶ್ರೀಧರ ಗುಡ್ಡವನ್ನು ಆಕ್ರಮಿಸಿ ಕೂತ ಸಾಕ್ಷಾತ್ ಕನ್ನಿಕಾ ಪರಮೇಶ್ವರಿ!

ಶ್ರೀಧರ ಗುಡ್ಡಕ್ಕೆ ಯಾರೇ ಕಾಲಿಟ್ಟರೂ ಈ ವಿನುತಾ ಶ್ರೀನಿವಾಸ್ ಎಂಬ ಹೆಂಗಸಿನ ವಂಚಕ ರೂಪವನ್ನು ಕಣ್ಣಾರೆ ಕಾಣಬಹುದು. ಇಲ್ಲಿಗೆ ಹತ್ತು ವರ್ಷದ ಹಿಂದೆ ಸರ್ಕಾರಿ ಸೊತ್ತಾಗಿದ್ದ ಇಪ್ಪತ್ತೈದು ಎಕರೆಗಳಷ್ಟು ವಿಶಾಲವಾದ ಶ್ರೀಧರಗುಡ್ಡವನ್ನೇ ಆಕ್ರಮಿಸಿಕೊಂಡವಳಿಗೆ ವಿವಿಪುರಂನ ಕೋಮಟಿ ಶೆಟ್ಟರನ್ನು ಮುಂಡಾಯಿಸುವುದು ಯಾವ ಲೆಕ್ಕ?

ಅದ್ಯಾವತ್ತು ಆದಿ ಪರಾಶಕ್ತಿ ಅರ್ಥಾತ್ ಕನ್ನಿಕಾ ಪರಮೇಶ್ವರಿ ಪ್ರತ್ಯಕ್ಷಳಾಗಿ 'ನೀನೇ ನನ್ನ ಕಲಿಯುಗ ಅವತಾರ' ಎಂಬ ರಹಸ್ಯವನ್ನು ಈಕೆಯ ಕಿವಿಗೆ ಹಾಕಿದಳೋ ಗೊತ್ತಿಲ್ಲ, ನಾನೇ ದುರ್ಗಾಮಾತೆ, ನಾನೇ ಕನ್ನಿಕಾ ಪರಮೇಶ್ವರಿ, ನಾನೇ ಆದಿಪರಾಶಕ್ತಿ ಎಂದು ಮಾತುಮಾತಿಗೆ ಬಂಡಲ್ ಬಿಡುತ್ತಾಳೆ ವಿನುತಾ ಶ್ರೀನಿವಾಸ್. ಮೂಲತಃ ಶಿವಮೊಗ್ಗದ ಬ್ರಾಹ್ಮಣ ಹೆಂಗುಸು ವಿನುತಾ ಮೊದಮೊದಲು ಚೀಟಿ ನಡೆಸಿಕೊಂಡಿದ್ದವಳು ಅನೇಕ ಗೃಹಿಣಿಯರಿಗೆ ಟೋಪಿ ಇಟ್ಟೇ ಬೆಂಗಳೂರಿಗೆ ಬಂದವಳು. ಶಿವಮೊಗ್ಗದಲ್ಲಿದ್ದಾಗಲೇ ಈಕೆಗೆ ಯೋಗ ಕಲಿಸುವ ಋಷಿ ಪ್ರಭಾಕರ್ ಪರಿಚಯವಾಗಿತ್ತು. ಬೆಂಗಳೂರಿಗೆ ಬಂದನಂತರ ಕೆಲಕಾಲ ಓಂಕಾರಾಶ್ರಮದ ನೆಲಗಳ್ಳ ಶಿವಪುರಿ ಸ್ವಾಮಿಗೆ ಸಖಿಯಂತೆ ಓಡಾಡಿಕೊಂಡಿದ್ದಳು. ನೋಡಲು ತಕ್ಕಮಟ್ಟಿದ ಸುಂದರಿಯಂತಿದ್ದ ಈಕೆಗೆ ಶಿವಪುರಿ ಸಂಗದಲ್ಲಿದ್ದಾಗಲೇ ದೇವರು ಮೈಮೇಲೆ ಬರುವುದು ಶುರುವಾಗಿದೆ. ಅದಕ್ಕಿದ್ದ ಅತೀ ಮುಖ್ಯ ಕಾರಣವೆಂದರೆ, ಓಂಕಾರಾಶ್ರಮದ ಪಕ್ಕಕ್ಕೇ ಇದ್ದ ಕೆಂಗೇರಿಯ ಸರ್ವೆ ನಂಬರ್ 69 ರ ಮೂವತ್ತೆಕರೆಗಳಷ್ಟು ವಿಶಾಲವಾದ ಶ್ರೀಧರ ಗುಡ್ಡ!

ನೆಲಗಳ್ಳ ಶಿವಪುರಿ ತನ್ನ ಪರಮಾಪ್ತೆಗೂ ಭೂಕಬಳಿಕೆಯ ಪಾಠ ಹೇಳಿಕೊಟ್ಟಿದ್ದ. ಮೂವತ್ತೆಕರೆ ವಿಶಾಲವಾದ ಶ್ರೀಧರ ಗುಡ್ಡಕ್ಕೆ ಬೋಗಸ್ ದಾಖಲೆಗಳನ್ನು ಸೃಷ್ಟಿಸಿ, ಸರ್ಕಾರಿ ಖರಾಬು ಭೂಮಿಯಾಗಿದ್ದ ಅದರ 25 ಎಕರೆಗಳಷ್ಟನ್ನು ಒಂದಷ್ಟು ಮಂದಿ ವಿವಿಪುರಂ ಶೆಟ್ಟರಿಗೂ ಚಾಮರಾಜಪೇಟೆಯ ಕೆಲ ಬ್ರಾಹ್ಮಣರಿಗೂ ಮಂಜೂರಾದಂತೆ ಕತೆ ಕಟ್ಟಿದ್ದಾಳೆ.

ಇಂಥದೊಂದು ಭೂಕಬಳಿಕೆಗೆ ಕುಮ್ಮಕ್ಕು ಕೊಟ್ಟವನು 1995 ರ ಹೊತ್ತಿಗೆ ಕೆಂಗೇರಿ ವಿಲೇಜ್ ಅಕೌಂಟೆಂಟ್ ಆಗಿದ್ದ ಐ.ಎಂ. ವೆಂಕಟಸ್ವಾಮಿ. ಆ ಕಾಲಕ್ಕೆ ಕೆಂಗೇರಿ ಸುತ್ತಮುತ್ತಲ ಕಂಡಕಂಡ ಸರ್ಕಾರಿ ಭೂಮಿಗೆಲ್ಲ ಬೋಗಸ್ ಪಹಣಿ, ಮ್ಯುಟೇಷನ್ ಸೃಷ್ಟಿಸಿ ಕೊಡುತ್ತಿದ್ದ ಖದೀಮ ಗ್ರಾಮ ಲೆಕ್ಕಿಗ ವೆಂಕಟಸ್ವಾಮಿಯ ಮುಂದೆ ಸುತ್ತಮುತ್ತಲ ನೂರಾರು ದಲಿತರು ಈ ಭೂಮಿಯನ್ನು ತಮಗೆ ಮಂಜೂರು ಮಾಡು ವಂತೆ ಕೊಟ್ಟ ಅರ್ಜಿಗಳ ರಾಶಿಯೇ ಇತ್ತು. ಹಾಗಿದ್ದೂ ವಿನುತಾಳ ಎಂಜಲು ಕಾಸಿಗೆ ಕೈಚಾಚಿದ ವೆಂಕಟಸ್ವಾಮಿಯ ಜೊತೆ ಆಗ ಬೆಂಗಳೂರು ದಕ್ಷಿಣದ ತಹಶೀಲ್ದಾರ್ ಆಗಿದ್ದ ಹುಟ್ಟಾ ವಂಚಕ ಬಿ.ಆರ್. ಕೃಷ್ಣನ್ ಕೂಡ ಕೈಜೋಡಿಸಿಬಿಟ್ಟ. ಇದರ ವಿರುದ್ಧ ದಲಿತರು ಸರ್ಕಾರಕ್ಕೆ ದೂರು ಕೊಟ್ಟರು. ಈ ಬಗ್ಗೆ ನಗರ ಜಿಲ್ಲಾಧಿಕಾರಿ ವೆಂಕಟಯ್ಯ ತಲೆಕೆಡಿಸಿಕೊಂಡು ಮೂವತ್ತೆಕರೆಯ ಸರ್ಕಾರಿ ಸೊತ್ತನ್ನು ಯಾವುದೇ ಕಾರಣಕ್ಕೂ ವಿನುತಾಳ ಹೆಸರಿಗೆ ರಿಜಿಸ್ಟರ್ ಮಾಡದಂತೆ ಕೆಂಗೇರಿಯ ಸಬ್ ರಿಜಿಸ್ಟ್ರಾರ್‌ಗೆ ಆದೇಶಿಸಿದ ಫಲವಾಗಿ ಇಡೀ ಶ್ರೀಧರಗುಡ್ಡ ಆಕೆಯ ಹೆಸರಿಗೆ ನೋಂದಾವಣಿಯಾಗುವುದು ತಪ್ಪಿ ಹೋಯಿತು.


ಆಶ್ರಮದ ನಕಾಶೆ

ನಿಜ. ಹಾಗಂತ ಪಾಕಡಾ ಹೆಂಗಸು ವಿನುತಾ ಬಿಡಬೇಕಲ್ಲ.
ಶ್ರೀಧರ ಗುಡ್ಡವನ್ನೇ ಆಕ್ರಮಿಸಿಕೊಂಡಳು. ಅದು ತನ್ನ ಸ್ವಂತ ಸೊತ್ತ
ದಬಾಯಿಸಲಾರಂಭಿಸಿದಳು. ಕಾಲಕ್ರಮೇಣ ಅಲ್ಲಿ ಥರೇವಾರಿ ಕಟ್ಟಡಗಳ
ಸಿದಳು. ಈ ಪೈಕಿ ಒಂದಕ್ಕೆ ವ್ಯಾಸವೇದ ಪೀಠವೆಂದೂ, ಮತ್ತೊ
ಶ್ರೀಧರ ಶ್ರೀಗುಡ್ಡ ಆತ್ಮ ಸಂಶೋಧನಾ ಕೇಂದ್ರ, ಜೀವನಧರ್ಮ ಯೋಗಕೇ
ರುದ್ರಾಕ್ಷವನ, ಜೀವನಮುಕ್ತಿ ಧಾಮ- ಇತ್ಯಾದಿ ಚಿತ್ರವಿಚಿತ್ರ ಹೆಸರುಗಳನ್ನಿ

ವಿಕಟವೇನೆಂದರೆ ಹೀಗೆ ಮೂವತ್ತೆಕರೆಯ ಸರ್ಕಾರಿ ಖರಾ
ಭೂಮಿಯನ್ನು ದೋಚಲೆಂದೇ ವಿನುತಾ ಆದಿಪರಾಶಕ್ತಿಯ ಅವ
ಧರಿಸಿದ್ದಳು. ಹಾಗಂತ ಉಮಾಭಾರತಿಯಂತೆ ಖಾವಿಯನ್ನಾಗಲಿ,
ಪ್ರಜ್ಞಾಳಂತೆ ಕಾಷಾಯವನ್ನಾಗಲಿ ತೊಡಲಿಲ್ಲ, ಎಲ್ಲಾ ಹೆಂಗಸರಂತೆ ದಿನಕ್ಕೊ
ರೇಷ್ಮೆ ಸೀರೆ ತೊಡುತ್ತಿದ್ದಳು. ಕೆಲವೊಮ್ಮೆ ಚೂಡಿದಾರ್ ಧರಿಸಿ ಸ್ಟೈ
ಬರುತ್ತಿದ್ದಳು. ಯಾವ ಸೀರಿಯಲ್ ನಟಿಗೂ ಕಮ್ಮಿಯಿಲ್ಲದಂತೆ ಮೇ
ಮಾಡಿಕೊಂಡು ಚಿತ್ರವಿಚಿತ್ರ ಡೈಲಾಗ್ ಹೊಡೆಯುತ್ತಿದ್ದಳು.

ಹೋಗಲಿ ಕನಿಷ್ಠ ಸನ್ಯಾಸಿನಿಯಾ ಅಂದರೆ ಅದೂ ಇಲ್ಲ, ಗಂಡ ಶ್ರೀನಿ
ಪ್ಯಾದೆಯಂತೆ ಯಾವತ್ತೂ ಜೊತೆಗಿರುತ್ತಾನೆ. ಮದುವೆಗೆ ಬಂದ ಆ
ಇಬ್ಬರು ಮಕ್ಕಳ ಪೈಕಿ ಗಂಡು ಮಗ ಪಕ್ಕಾ ಫಂಕ್ ಮತ್ತು ಹು
ಪರೋಡಿ. ಹೆಣ್ಣು ಮಗಳಂತೂ ಜೀನ್ಸು ಟೀಶರ್ಟಿನ ಹೊರತಾಗಿ
ಬಟ್ಟೆಯನ್ನೇ ಕಂಡಿಲ್ಲ. ಇತ್ತ ತಾಯಿ ವಿನುತಾ ವೈದಿಕ ಸಂಸ್ಕೃತಿ, ಧ
ಋಷಿ ಪರಂಪರೆ, ಉಪನಿಷತ್‌ಗಳ ಬುರುಡೆ ಬಿಡುತ್ತಿದ್ದರೆ ಆಕೆಯ ಮಕ್ಕಳಿಬ
ಐಷಾರಾಮಿ ಕಾರಲ್ಲಿ ಕೂತು ಭಕ್ತಾದಿಗಳನ್ನು ಗೇಲಿ ಮಾಡುತ್ತಾರೆ.

ಪ್ರಾರಂಭದಲ್ಲಿ ಹನುಮಂತನಗರದ ತನ್ನ ಮನೆಯ
ವಂಚನಾಕೇಂದ್ರವನ್ನಾಗಿ ಬಳಸುತ್ತಿದ್ದಳು. ಕ್ರಮೇಣ ಓಂಕಾರಾಶ್ರಮಕ್ಕೆ ಗಂಟು
ಅಲ್ಲಿ ಸತ್ಸಂಗ ಶುರುವಿಟ್ಟಳು. 1998 ರ ಹೊತ್ತಿಗೆ ಶ್ರೀಧರ ಗು
ಆಕೆಯ ಅಡ್ಡೆಯಾಯಿತು. ಹೋಗಲಿ ಕನಿಷ್ಠ ಯೋಗವನ್ನಾದರೂ ಕಲಿಸುತ
ಅಂದರೆ ಈಕೆಗೆ ಗೋಬಿಮಂಚೂರಿ ತಿನ್ನುವುದು ಬಿಟ್ಟರೆ ಬೇರೆ
ಗೊತ್ತಿಲ್ಲ!

▶▶

ಅವಳು ಅಪ್ಪಿಕೋ ಅಮ್ಮ ಇವಳು ಮಲಕೋ ತಮ್ಮ!



ಕೆಲ್ಲಿ ಗ್ಯಾಂಗಿನ ಅಮ್ಮ ಭಗವಾನ್, ಕೇರಳದ ಅಪ್ಪಿಕೋ ಅಮ್ಮ ಅಮೃತಾನಂದ ಮಯಿ ಇತ್ಯಾದಿ ಹೈಟೆಕ್ ದೇವಿಯರಂತೆ ತಾನೂ ಏನಾದರೂ ಒಂದು ಗಿಮ್ಮಿಕ್ ಮಾಡಬೇಕಲ್ಲ, ಅದಕ್ಕೇ ವಿನುತಾ ಹೊಸ ವಿಧಾನವೊಂದನ್ನು ಶುರುಹಚ್ಚಿಕೊಂಡಿದ್ದಾಳೆ. ಅದು ಕಷ್ಟ ಹೇಳಿಕೊಳ್ಳುವ ಭಕ್ತನನ್ನು ತನ್ನ ತೊಡೆ ಮೇಲೆ ಮಲಗಿಸಿಕೊಳ್ಳುವುದು!

ಶ್ರೀಧರಗುಡ್ಡದ ಈಕೆಯ ಆಸ್ಥಾನದಲ್ಲಿ ಪ್ರತಿ ಸಂಜೆಯೂ ಇಂಥ ದೊಂಬರಾಟ ನಡೆಯುತ್ತಲೇ ಇರುತ್ತದೆ. ಥೇಟು ಸಿನಿಮಾ ನಟಿಯಂತೆ ಮಾದಕ ಪೋಜು ಕೊಡುತ್ತ ತನ್ನ ಪಾಲಿಶ್ ಮಾಡಿದ ಹಲ್ಲು ಕಿರಿಯುತ್ತಾಳೆ. ಪ್ರಾರಂಭದಲ್ಲಿ ತಾನೇ ನಾಟಕಕ್ಕೆಂದು ರೆಡಿ ಮಾಡಿದ ಒಂದಿಬ್ಬರನ್ನು ಎಲ್ಲರೆದುರು ತನ್ನ ತೊಡೆ ಮೇಲೆ ಮಲಗಿಸಿಕೊಂಡು ಕೆನ್ನೆ, ಹೊಟ್ಟೆ, ಬೆನ್ನು ಸವರುತ್ತಾಳೆ. ಇಷ್ಟೆಲ್ಲ ಮುದ್ದು ಮಾಡಿಸಿಕೊಂಡಾತನಿಗೆ ದಿಕ್ಕೇ ತೋಚದಂತಾಗಿ ಮಂಕಾಗಿದ್ದೇ ತಡ ಇವತ್ತಿನಿಂದ ಕಷ್ಟ ಕಳೆಯಿತು. ನೀನಿನ್ನು ನನ್ನ ಮಗು. ನಾನೇ ನಿನ್ನ ತಾಯಿ. ನಿನಗಿನ್ನು ತಾಪತ್ರಯವೇ ಇಲ್ಲ...! ಎಂದು ಸಾಗಹಾಕುತ್ತಾಳೆ.


ಹೆಂಗಸಂತೆ ಮೈಕೈ ಮುಟ್ಟಿಸಿಕೊಂಡಾತನ ಮುಂದೆ ಒಂದಿಬ್ಬರು ಬಂದು ಬೆಳ್ಳಿ ತಟ್ಟೆ ಹಿಡಿಯುತ್ತಾರೆ. ಅಮ್ಮನ ಮಡಿಲಲ್ಲಿ ಮಲಗಿದ ತಪ್ಪಿಗೆ ಜೇಬಿನಲ್ಲಿದ್ದ ಐನೂರು, ಸಾವಿರ ರೂಪಾಯಿ ನೋಟುಗಳನ್ನು ತಟ್ಟೆಗೆ ಹಾಕಲೇಬೇಕು. ಇದು ವಿನುತಾಳ ತಂತ್ರ. ಇದಲ್ಲದೇ ಬೆಂಗಳೂರು ಏರ್‌ಪೋರ್ಟ್, ಗರುಡಾ ಮಾಲ್, ಬ್ರಿಗೇಡ್ ರೋಡ್, ಫೋರಂ, ಬಿಗ್ ಬಜಾರ್‌ನಂಥ ಶ್ರೀಮಂತರೇ ಬರುವ ಜಾಗೆಗಳನ್ನು ಆಯ್ದು ನ್ಯೂಯಾರ್ಕ್, ಲಂಡನ್, ಟೆಕ್ಸಾಸ್, ಪಿಟ್ಸ್‌ಬರ್ಗ್ ಇತ್ಯಾದಿ ವಿದೇಶದ ಐಷಾರಾಮಿ ನಗರಗಳಲ್ಲಿ ಇಂತಿಂಥಾ ದಿನಗಳಂದು ತನ್ನ ಮೆಡಿಟೇಷನ್ ಕ್ಯಾಂಪುಗಳಿವೆ ಎಂಬಂತೆ ಖೊಟ್ಟಿ ಜಾಹೀರಾತು ಕೊಡುತ್ತಾಳೆ.

ಇದು ದುಡ್ಡಿನ ಗಿರಾಕಿಗಳನ್ನು ಸೆಳೆಯುವ ಮತ್ತೊಂದು ಹುನ್ನಾರ. ಹಾಗೊಮ್ಮೆ ಲಂಡನ್‌ನಲ್ಲೇ ಈಕೆಯನ್ನು ಯಾರಾದರೂ ಪೂಜಿಸಿದರೆ ಅದಕ್ಕೆ ಬೆಂಗಳೂರಿನಲ್ಲಿ ಏಕೆ ಜಾಹೀರಾತು ಕೊಡಬೇಕು? ಇಂಥ ಜಾಹೀರಾತು ನಂಬಿದ ವಿವಿಪುರಂ ಶೆಟ್ಟರ ನಾಯಕ ಬಿ.ಎಲ್.ಎಸ್. ಮೂರ್ತಿ ಎಂಬ ಈರುಳ್ಳಿ ದೊರೆಯೊಬ್ಬನಿಗೆ ಈಗಾಗಲೇ ವಿನುತಾ ಮೂವತ್ತು ಲಕ್ಷಕ್ಕೆ ಟೋಪಿ ಹಾಕಿದ್ದಾಳೆ. ವಾಸು ಅಗರಬತ್ತಿ ಧಣಿ ಪದ್ಮನಾಭ ಶೆಟ್ಟಿಯನ್ನು ಮುಂದಿಟ್ಟುಕೊಂಡು ಬಹುತೇಕ ವಿವಿಪುರಂ ಶೆಟ್ಟರಿಗೆ ಬಲೆ ಹಾಕಿದ್ದಾಳೆ. ಫೈನಾನ್ಶಿಯರ್ ಪಾಂಡುರಂಗ ಶೆಟ್ಟಿ, ಸಿನಿಮಾ ಕ್ರಿಮಿ ಜಗನ್ನಾಥ್ ಶೆಟ್ಟಿ, ರಜತಾ ಜ್ಯುವೆಲ್ಲರ್ಸ್ ಧಣಿ ಶ್ರೀಕುಮಾರ ಶೆಟ್ಟಿ, ಹೋಟೆಲಿಯರ್ ಸುರೇಶ್ ಶೆಟ್ಟಿಯಂಥ ಅನೇಕ ರೊಕ್ಕಸ್ಥ ಕೋಮಟಿಗಳು ಈಗಾಗಲೇ ಅಮ್ಮನ ಮಡಿಲು ಸೇರಿದ್ದಾರೆ.

ಈಕೆಯ ಭಕ್ತಾದಿಗಳ ಲಿಸ್ಟಿಗೆ ಲೇಟೆಸ್ಟ್ ಸೇರ್ಪಡೆಯೆಂದರೆ ಆತ
ಮುಜರಾಯಿ ಮಂತ್ರಿ ಮತ್ತು ಹುಟ್ಟಾ ನೆಲಗಳ್ಳ ಕೃಷ್ಣಯ್ಯ ಶೆಟ್ಟಿ!

ಮಂತ್ರಿ ಕೃಷ್ಣಯ್ಯ ಶೆಟ್ಟಿಯನ್ನು ಮುಂದಿಟ್ಟುಕೊಂಡೇ ಶ್ರೀಧರ ಗುಡ್ಡಕ್ಕೊಂದು
ಗತಿ ಕಾಣಿಸುವುದು ಈಕೆಯ ಷಡ್ಯಂತ್ರ. ಮೂವತ್ತೆಕರೆಯ ಶ್ರೀಧರ ಗುಡ್ಡ
ಸರ್ಕಾರಿ ಸೊತ್ತು. ಅದು ಕೆಂಗೇರಿ ಸುತ್ತಮುತ್ತಲಿನ ದಲಿತರಿಗೋ ಅಥವಾ
ಪಾರ್ಕ್ ಆಗಿಯೋ ಸಮಾಜದ ಸೊತ್ತಾಗಬೇಕೇ ಹೊರತು ಈಕೆಯ
ವಂಚನೆಗಲ್ಲ. ಓಂಕಾರಾಶ್ರಮದ ಶಿವಪುರಿ ಸ್ವಾಮಿಯಂತೆ ಗುಡ್ಡ ಕಬಳಿಸಲು
ನಿಂತ ಈಕೆಯನ್ನು ಫೋರ್ಜರಿ ಮತ್ತು ಸರ್ಕಾರಿ ಭೂಮಿ ಕಬಳಿಕೆಯ
ಆರೋಪದ ಮೇಲೆ ಮೊದಲು ಬಂಧಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರಜ್ಞಾವಂತರು
ಬೀದಿಗಿಳಿಯಲಿ. ■





...ವೊಮ್ಮೆ ತನ್ನದು ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ...ಜಿಯಂತೆ ಜೀವನ ಧರ್ಮ ಯೋಗ ಕೇಂದ್ರ ಅನ್ನುತ್ತಾಳೆ. ...ಮ್ಮೆ ವ್ಯಾಸ ವೇದಪೀಠ ಅನ್ನುತ್ತಾಳೆ. ಮಗದೊಮ್ಮೆ ಫುಟ್ ವಂಚಕಿಯ ಗತ್ತಿನಲ್ಲಿ ತಾನೇ ಕನ್ನಿಕಾ ಪರಮೇಶ್ವರಿ, ಆದಿ ...ಕ್ತಿಯ ಅವತಾರ ಅನ್ನುತ್ತಾಳೆ. ವಂಚನೆಗೂ ಇಂಥದ್ದೇ ವೇಷ ... ನಂಬಿಬಂದ ಮುಠ್ಠಾಳರನ್ನು ವಂಚಿಸಲು ವೆರೈಟಿವಾರೇ ...ಗಳೂ ಚಿತ್ರವಿಚಿತ್ರ ತಂತ್ರಗಳೂ ಈಕೆಯ ಸೋಕಾಲ್ಡ್ ...ಗುಡ್ಡ ಎಂಬ ಅಂಗಡಿಯಲ್ಲಿವೆ. ರೊಕ್ಕ ವಸೂಲಿಯೇ ಈ ಷಡ್ಯಂತ್ರಗಳ ಮೂಲೋದ್ದೇಶ.

...ಪೈಕಿ ಅತೀ ಮುಖ್ಯವಾದದ್ದು ದಂಪತಿ ಪೂಜೆ. ಶಾಸ್ತ್ರೋಕ್ತ ...ಯಾವುದೋ ಕಾಲಕ್ಕೆ ಮದುವೆಯಾಗಿ ಮಕ್ಕಳು ಮೊಮ್ಮಕ್ಕಳಿ... ವಿನುತಾಳ ದಂಪತಿ ಪೂಜೆಗೆ ಈಡಾಗಲೇಬೇಕಂತೆ. ಗಂಡ ...ತಿಯರ ಮೇಲೆ ಯಾರ್‍ಯಾರದೋ ಕೆಟ್ಟ ದೃಷ್ಟಿ ಬಿದ್ದಿರುತ್ತದೆ ... ಅದು ನಿವಾರಣೆಯಾಗದೇ ಹೋದರೆ ಗಂಡಹೆಂಡತಿಯ ...ಮೇ ಬಿರುಕು ಹುಟ್ಟಿ ಗಂಡ ಪರಸ್ತ್ರೀ ಸಂಗಕ್ಕೆ ಬೀಳುತ್ತಾನಂತೆ. ವಿನುತಾ ಸೂಚಿಸುವ ಪರಿಹಾರವೇ ದಂಪತಿ ಪೂಜೆ!

...ಮೂ ಪುಕ್ಕಟೆಯೇನಲ್ಲ. ಒಂದು ಜೋಡಿ ದಂಪತಿಗಳನ್ನು ... ಮಾಡಬೇಕೆಂದರೆ ವಿನುತಾ ಕನಿಷ್ಠ ಹತ್ತು ಸಾವಿರ ರೂಪಾಯಿ ...ತ್ತಾಳೆ. ಅದರಲ್ಲೂ ವಿಶೇಷ ಪೂಜೆಗೆ 25 ಸಾವಿರ ರೂಪಾಯಿ!


... ರೀತಿ ದಂಪತಿ ಪೂಜೆ ಮಾಡಿಸಿಕೊಳ್ಳುವುದೇ ಸದ್ಯ ...ೂರಿನ ಕೋಮಟ ಶೆಟ್ಟರಿಗೊಂದು ಫ್ಯಾಷನ್ನಾಗಿಬಿಟ್ಟಿದೆ. ...ದೇ 'ವಾಹನ ಲಕ್ಷ್ಮೀ ಪೂಜಾ' ಎಂಬ ಮತ್ತೊಂದು ಟೆಕ್ನಿಕ್ಕಿದೆ. ...ಟಗೆ ಬಲಿಯಾಗದ ಹಾಗೇ ಮಾಡಬೇಕೆಂದರೆ ಅದಕ್ಕೆ ... ಲಕ್ಷ್ಮಿ ಪೂಜೆಯಾಗಬೇಕು. ತಮ್ಮ ಐಷಾರಾಮಿ ಕಾರನ್ನು ...ಮ ನಾಲ್ಕು ನಿಂಬೆಹಣ್ಣುಗಳ ಸಮೇತ ಶ್ರೀಧರ ಗುಡ್ಡಕ್ಕೆ ಐದು ಸಾವಿರ ರೂಪಾಯಿ ತೆತ್ತು ಟಿಕೆಟ್ ಪಡೆಯಬೇಕು. ...ಕಾರುಗಳನ್ನೂ ಒಟ್ಟಿಗೇ ನಿಲ್ಲಿಸಿ ವಿನುತಾ ಪೂಜೆ ಮಾಡುತ್ತಾಳೆ. ...ಕ್ಕೆ ಪ್ರತಿ ಕಾರಿಗೂ ಪ್ರತ್ಯೇಕವಾಗಿ 'ತಾಯಿತ' ಕಟ್ಟಬೇಕೆಂದರೆ ...ತಾಯಿತಕ್ಕೂ ಎರಡೂವರೆ ಸಾವಿರ ಕಕ್ಕಬೇಕು!

...ಷ್ಟಲ್ಲದೇ ನೈವೇದ್ಯ ಲಕ್ಷ್ಮಿ ಪೂಜೆ, ಮಕ್ಕಳ ತುಲಾಭಾರ, ... ಋಣ ಹರಿಸುವ ತುಲಾಭಾರ, ಮಹಾಪೀಠ ಸೇವೆ, ...ದ್ವಾರ ಸೇವೆ, ಮಹಾಪ್ರಕಾರ ಸೇವೆ, ಮಹಾಮೂರ್ತಿ ಸೇವೆ, ...ಟಿತಾ ಪೂಜೆ ಇತ್ಯಾದಿ ಥರೇವಾರಿ ಬ್ಲೇಡುಗಳ ರಾಶಿಯೇ ...ನು ಬಳಿಯಿದೆ. ಬಡತನ ಅಥವಾ ದಾರಿದ್ರ್ಯದಿಂದ ...ವಾಗಬೇಕೆಂದರೆ ಈಕೆಯ ಶ್ರೀಧರ ಗುಡ್ಡಕ್ಕೆ ಬಂದು ತಾವು ...ವಷ್ಟು ಅಕ್ಕಿ, ಬೇಳೆ ಕೊಡಬೇಕು. ಸಹಸ್ರಾರು ಶರೀರಗಳಲ್ಲಿ ...ತ್ತಿರುವ ಅಗ್ನಿಯಲ್ಲಿ ನಿಮ್ಮಿಂದ ದಾನವಾದ ಧಾನ್ಯಗಳು ...ಯಾಗಲಿ. ಈ ಅನ್ನಯಜ್ಞವು ನಿಮ್ಮ ಕೋಟಿ ಜನ್ಮದ ...ಳನ್ನು ಒಂದೇ ಬಾರಿಗೆ ಹರಿಸಿ ಮುಕ್ತಿಯಾಗಲಿ.

...ದು ವಿನುತಾ ಉರ್ಫ್ ಗುರುಮಾತಾ ಅಮ್ಮ ಅಲಿಯಾಸ್ ...ಕ್ಷ್ಮಿ, ಆದಿಪರಾಶಕ್ತಿ ಅರ್ಥಾತ್ ಕನ್ನಿಕಾ ಪರಮೇಶ್ವರಿ ತನ್ನ ...ರಾತಿನಲ್ಲಿ ಬಳಸುವ ಶಬ್ದಾವಳಿ. ಅದರರ್ಥವೇನು ಅಂತ ...ದರೂ ಈಕೆಗೆ ಪ್ರಶ್ನೆಯಿಟ್ಟರೆ 'ನಿಮಗೇನ್ರೀ ಗೊತ್ತು' ಮಲವೇ ... ಸಾಕ್ಷಾತ್ಕಾರ ಗೊತ್ತಾ' ಅಂತ ಪರಚಲು ಬರುತ್ತಾಳೆ. 'ಎಲ್ಲಾ ...ನ್ನು ಕಟ್ಟಿಕೊಂಡರೆ ನೀವೇನ್ರೀ ಮಲಮಲ ಅಂಥ ಹೇಳ್ತೀರಾ?' ... 'ಹೌದು ಅದು ಮಾಯಾಮಲ. ಈ ದೇಹದ ಋಣಭಾರ ...ಪೂರ್ಣ ಮಲಗಳಿಂದ ಮುಕ್ತಿ ಕಾಣುವುದೇ ಜೀವನದ ...ಕತೆ' ಎನ್ನುತ್ತಾಳೆ.

...ಂಥ ಅಸಂಬದ್ಧ, ಅವಿವೇಕದ ವೇದಾಂತ ಯಾರಿಗೆ ತಾನೇ ...ವಾಗಲು ಸಾಧ್ಯ? ಅರ್ಥವಾಗಕೂಡದು ಎಂಬುದೇ ಈಕೆಯ ...ಶವಿರಬೇಕು. ಅರ್ಥವಾಗದೇ ಹೋದರೆ ತಾನೇ ಕೋಮಟ ...ನ್ನು ಮುಂಡಾಯಿಸುವುದು? ಭೂಮಿಯ ಋಣ ಹರಿಸಲು ...ತೂಕದಷ್ಟು ಧಾನ್ಯಗಳನ್ನು ತುಲಭಾರ ಮಾಡಿಸಿ ಅದನ್ನು ...ಗೆ ಅರ್ಪಿಸಬೇಕಂತೆ. ಇನ್ನು ಮಕ್ಕಳ ಋಣಭಾರವನ್ನು ...ಯು ಕಳೆದುಕೊಳ್ಳಬೇಕೆಂದರೆ ಮಕ್ಕಳಷ್ಟೇ ತೂಕದ ಪಂಚಧಾನ್ಯ ... ತುಲಾಭಾರ ಮಾಡಿಸಿ ಈಕೆಯ ಉಡಿಗೆ ಸುರಿಯಬೇಕಂತೆ. ... ಯಾವುದರಲ್ಲಾದರೂ ದೇವರ ಗಂಧವುಂಟೆ? ಸುಲಿಗೆಯ ...ಗಾಗಿ, ರೊಕ್ಕ ವಸೂಲಿಯ ಉದ್ದೇಶಬಿಟ್ಟರೆ ಇದಕ್ಕೆ ಕವಡೆ ...ನ ಅರ್ಥವುಂಟೆ? ಇವಳೇ ಒಂದು ಮಲ. ಐವತ್ತು ಕೋಟಿಯ ... ಆಸ್ತಿಯನ್ನು ಮುಂಡಾ ಮೋಚಿ, ಅದನ್ನು ಉಳಿಸಿಕೊಳ್ಳಲು ... ಮಾಡಲು ತಾನೇ ಸಾಕ್ಷಾತ್ ದೇವರೆಂದು ಪೋಜು ...ವ ಈಕೆಯನ್ನು ನಂಬುವ ಮುಠ್ಠಾಳರಿಗೆ ಯಾವುದರಲ್ಲಿ ...ಯಬೇಕು?

...ಕ್ಕೆ ದಾಖಲೆ ಸೃಷ್ಟಿಸಿ ಮೂವತ್ತೆರೆಡೆ ಸರ್ಕಾರಿ ಭೂಮಿ ಕಬಳಿಸಿದ ...ನ್ನು ಜೈಲಿಗೆ ತಳ್ಳುವವರ್‍ಯಾರು? ಈ ಬಗ್ಗೆ ಕಂದಾಯ ... ಇಷ್ಟು ಕಣ್ಣು ಮುಚ್ಚಿ ಕೂತಿದೆಯಲ್ಲ; ದುರಂತ ಇದಕ್ಕಿಂತ ■



ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು ಚುನಾವಣಾ ಪ್ರಣಾಳಿಕೆಯಲ್ಲಿ ಹಾಲು ಉತ್ಪಾದಕ ರೈತರಿಗೆ ಪ್ರತಿ ಲೀಟರ್‌ಗೆ 2 ರೂ. ಸಬ್ಸಿಡಿ ನೀಡುವುದಾಗಿ ಭರವಸೆ ನೀಡಿತ್ತು, ಈಗ ಬಿಜೆಪಿ ಗೆದ್ದು ಅಧಿಕಾರಕ್ಕೆ ಬಂದಾಗಿದೆ. ನೂರು ದಿನದ ಸಾಧನೆ ಆಚರಿಸಿ ನೂರೈವತ್ತನೇ ದಿನಕ್ಕೂ ಬರುತ್ತಿದೆ. ಆದರೆ ಇವತ್ತಿನವರೆಗೂ ಹಾಲು ಉತ್ಪಾದಕರಿಗೆ 2 ರೂಪಾಯಿ ಇರಲಿ ನಾಲ್ಕಾಣೆಯೂ ಸಿಕ್ಕಿಲ್ಲ, ಅದಕ್ಕೂ ಮಿಗಿಲಾಗಿ ಯಡ್ಡಿಯ ಬಜೆಟ್‌ನಲ್ಲಿ ಈ ಸಬ್ಸಿಡಿ ವಿಚಾರವೇ ಪ್ರಸ್ತಾಪವಾಗಿಲ್ಲ.

ಈಗ ರಾಜ್ಯದ ರೈತರು ಪ್ರತಿದಿನ 30 ಲಕ್ಷ ಲೀಟರ್ ಹಾಲು ಉತ್ಪಾದಿಸುತ್ತಿದ್ದಾರೆ. ಆ ಲೆಕ್ಕದಲ್ಲಿ ಸಬ್ಸಿಡಿ ಕೊಡಬೇಕೆಂದರೆ ದಿನಕ್ಕೆ 60 ಲಕ್ಷ ರೂ.ಗಳಾಯಿತು. ಇದು ತಿಂಗಳಿಗೆ 18 ಕೋಟಿಯಾಗಿ ವರ್ಷಕ್ಕೆ 206 ಕೋಟಿ ರೂಪಾಯಿ ಆಗುತ್ತದೆ.

ಇಷ್ಟು ದುಡ್ಡು ಎಲ್ಲಿಂದ ತರುತ್ತಾರೆ ಯಡ್ಡಿ?

ಬಜೆಟ್‌ನಲ್ಲಿ ಅನುದಾನ ನಿಗದಿಯಾಗಿಲ್ಲ, ಸಬ್ಸಿಡಿಗೆಂದು ಬೇರೆ ಯಾವ ಮೂಲದಲ್ಲೂ ಹಣವಿಲ್ಲ. ಆದರೂ ಯಡ್ಡಿಯ ಪುಗಸಟ್ಟೆ ಮಾತಿಗೆ ಕೊನೆಯೇ ಇಲ್ಲ.

ಯಡ್ಡಿಯ ಎರಡೂ ರೂಪಾಯಿ ಸಬ್ಸಿಡಿ ಬರಲಿಲ್ಲ

KMF ಹಾಲಿಗೆ ಬಿಜೆಪಿ ವಿಷ!

ಹಾಲಿ ಕೆಎಂಎಫ್ ಅಧ್ಯಕ್ಷ ರೇವಣ್ಣನನ್ನು ಅಧಿಕಾರದಿಂದ ಕಿತ್ತೊಗೆಯಲು ಬಿಜೆಪಿಗಳು ನಾನಾ ದಾರಿ ಹುಡುಕುತ್ತಿದ್ದಾರೆ, ಬಿಟ್ಟೂಬಿಡದೆ ಒಂಬತ್ತು ಬಾರಿ KMF ಮೇಲೆ ದಾಳಿ ಮಾಡಿಸಿ ತನಿಖೆಯ ನಾಟಕ ಆಡುತ್ತಿದ್ದಾರೆ. ಈಗ ಆಡಿಟ್ ಎಂಬ ಹೊಸ ನಾಟಕ ಶುರುವಾಗಿದೆ. KMF ಅನ್ನು ಸೂಪರ್‌ಸೀಡ್ ಮಾಡುವಂತೆ ಬಿಜೆಪಿ ವಕ್ತಾರ ಧನಂಜಯಕುಮಾರ್ ಚೀರಿಕೊಂಡಿದ್ದಾರೆ.



ಆಪರೇಷನ್ ಕಮಲದ ಇನ್ನೊಂದು ವಿಕಾರ ರೂಪ ಇದು. ರಾಜ್ಯದ ಹನ್ನೊಂದು ಸಾವಿರ ಹಳ್ಳಿಗಳಲ್ಲಿ ಹರಡಿ ಬೇರು ಬಿಟ್ಟುಕೊಂಡಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಮೇಲೆ ಅಕ್ರಮ ವಿಧಾನದ ಮೂಲಕ ಕಂಟ್ರೋಲ್ ತೆಗೆದುಕೊಂಡು ಆ ಮೂಲಕ ಬಿಜೆಪಿಗೆ ಗ್ರಾಮೀಣ ಪ್ರದೇಶಗಳಲ್ಲೂ ಬೇಸ್ ನಿರ್ಮಿಸಿಕೊಳ್ಳುವ ಪಿತೂರಿಯೂ ಹೌದು.

ಮೇಲ್ನೋಟಕ್ಕೆ ಹಾಲಿನ ಬೆಲೆ ಎರಡು ರೂಪಾಯಿ ಏರಿಸಬೇಕೋ ಬೇಡವೋ ಎಂಬ ಜಗಳದಂತೆ ಇದು ಕಾಣುತ್ತಿದೆಯಾದರೂ ಯಡಿಯೂರಪ್ಪ ಸೇಡಿನ ರಾಜಕೀಯಕ್ಕೆ ಹೊರಟು ನಿಂತಿರುವುದಂತೂ ಸತ್ಯ. KMF ಅಧ್ಯಕ್ಷ ಎಚ್.ಡಿ. ರೇವಣ್ಣ ತಿರುಗಿ ಬಿದ್ದು ಬಡಿದಾಡುತ್ತಿದ್ದಾರಾದರೂ ಇದರಲ್ಲಿ ಬಿಜೆಪಿಗಳೇನಾದರೂ ಮೇಲುಗೈ ಸಾಧಿಸಿದರೋ.... ಅಂದಿಗೆ ರಾಜ್ಯದ ರೈತರ ಹಾಗೂ ಜನರ ಪಾಲಿಗೆ ನಂದಿನಿ ಹಾಲು ವಿಷವಾಗುವುದು ಗ್ಯಾರಂಟಿ.

ಅಕ್ರಮ ಎಷ್ಟು ಸತ್ಯ

ಇಡೀ ಭಾರತದಲ್ಲೇ ಮೂರನೇ ಅತೀ ದೊಡ್ಡ ಹಾಲು ಉತ್ಪಾದಕ ಸಂಸ್ಥೆಯಾಗಿರುವ KMF ಗೆ ಈಗ 11,063 ಗ್ರಾಮಮಟ್ಟದ ಸಹಕಾರ ಸಂಘಗಳಿವೆ. ಕರ್ನಾಟಕಾದ್ಯಂತ ಹದಿಮೂರು ಜಿಲ್ಲಾ ಹಾಲು ಉತ್ಪಾದಕ ಸಹಕಾರ ಯೂನಿಯನ್‌ಗಳಿವೆ. KMF ಇವನ್ನೆಲ್ಲಾ ಸಂಯೋಜಿಸುತ್ತಾ ಉತ್ಪಾದನೆ-ವಿತರಣೆ-ಮಾರಾಟದ ಉಸ್ತುವಾರಿ ನೋಡಿಕೊಳ್ಳುತ್ತಿದೆ. ಗ್ರಾಹಕನಿಗೆ ಹಾಲು, ಮೊಸರು, ತುಪ್ಪ ಸರಬರಾಜು ಮಾಡಿ ಹಣ ಪಡೆದು ಮತ್ತೊಂದು ತುದಿಯಲ್ಲಿರುವ ರೈತನಿಗೆ ಹಣ ಪಾವತಿಸುತ್ತಿದೆ.

ಇದನ್ನೆಲ್ಲ ಕೇವಲ ಹಾಲು ಉತ್ಪಾದನೆ ಹಾಗೂ ಮಾರಾಟ ಎಂದು ನೋಡುವವರಿಗೆ ಅದು ಹಾಗೇ ಕಾಣುತ್ತದೆ. ಆದರೆ KMF ವ್ಯಾಪ್ತಿ ಅಷ್ಟಕ್ಕೇ ಸೀಮಿತವಾಗಿಲ್ಲ, ಅದರಲ್ಲೂ ವಿಪರೀತ ರಾಜಕೀಯ ಇದೆ. ಜೆಡಿಎಸ್, ಕಾಂಗ್ರೆಸ್‌ಗಳೆಂಬ ಜಿದ್ದಾಜಿದ್ದಿ ಮೊದಲಿನಿಂದಲೂ ಇದೆ. ಈಗ ಇದೇ ರಾಜಕೀಯಕ್ಕೆ ಬಿಜೆಪಿಗಳು ಕಾಲಿಡಲು ಹೊರಟಿದ್ದಾರೆ. ಹೇಗೂ ರಾಜ್ಯದಲ್ಲಿ ಬಿಜೆಪಿಯೇ ಅಧಿಕಾರದಲ್ಲಿರುವುದರಿಂದ ಅದನ್ನು ಬಳಸಿಕೊಂಡು KMF ವಶಪಡಿಸಿಕೊಳ್ಳುವುದು ಅವರ ದುರುದ್ದೇಶ, ಜೊತೆಗೆ ದೇವೇಗೌಡರ ಕುಟುಂಬವನ್ನು ಸಂಪೂರ್ಣವಾಗಿ ಸದೆಬಡಿದು ಮೂಲೆಗುಂಪು ಮಾಡಬೇಕೆಂಬ ಪಿತೂರಿಯೂ ಇದರಲ್ಲಿದೆ. ಗೌಡರ ಕುಟುಂಬದಲ್ಲಿ ಈಗ ನಿಜವಾದ ಅಧಿಕಾರ ಅಂತ ಉಳಿದಿರುವುದು ರೇವಣ್ಣನಿಗೆ ಮಾತ್ರ.

ದೇವೇಗೌಡರು ಎಂಪಿಯಾಗಿದ್ದರೂ, ಕುಮಾರಸ್ವಾಮಿ ಶಾಸಕ ಪ್ಲಸ್ ಜೆಡಿಎಸ್ ಅಧ್ಯಕ್ಷರಾಗಿದ್ದರೂ ಅದರಾಚೆಗಿನ ಅಧಿಕಾರ ಅವರಿಗಿಲ್ಲ, ಇದ್ದಿದ್ದರಲ್ಲಿ ರೇವಣ್ಣ ಪರವಾಗಿಲ್ಲ, ಶಾಸಕತ್ವದ ಜೊತೆಗೆ ವಾರ್ಷಿಕ ಎರಡೂ ಮುಕ್ಕಾಲು ಸಾವಿರ ಕೋಟಿ ವಹಿವಾಟಿರುವ KMF ಗೆ ಅಧ್ಯಕ್ಷರಾಗಿದ್ದಾರೆ ರೇವಣ್ಣ ಹತ್ತೊಂಭತ್ತು ಲಕ್ಷ ರೈತರ ಸದಸ್ಯತ್ವ, ಹನ್ನೊಂದು ಸಾವಿರ ಘಟಕಗಳು, ನಿತ್ಯ ಮೂವತ್ತು ಲಕ್ಷ ಲೀಟರ್ ಹಾಲು ಉತ್ಪಾದನೆ, ಮೂರೂವರೆ ಕೋಟಿ ರೂಪಾಯಿ ಬಟವಾಡೆ ನಡೆಸುವ KMF ನದ್ದೇ ಒಂದು ವಿಭಿನ್ನ ಜಗತ್ತು, ಅದರದ್ದೇ ಒಂದು ಪರ್ಯಾಯ ಸರ್ಕಾರವಿದ್ದಂತೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ದೇವೇಗೌಡರ ಕುಟುಂಬದ ರಾಜಕೀಯ ಶಕ್ತಿಗೆ KMF ಕೂಡ ಒಂದು ಬಲಿಷ್ಠ ಆಧಾರಸ್ತಂಭದಂತಿದೆ. ಹಾಗೆಂದು ರೇವಣ್ಣ KMF ಅಧ್ಯಕ್ಷಗಿರಿಯನ್ನೇನೂ ದುರುಪಯೋಗ ಮಾಡಿಕೊಂಡಿಲ್ಲ, ರೇವಣ್ಣ ಬಂದ ಮೇಲೆ ಇಡೀ KMF ಒಂದಕ್ಕೆ ಮೂರರಷ್ಟು ಬೆಳೆದು ನಿಂತಿದೆ. ನೌಕರರು ನೆಮ್ಮದಿಯಾಗಿದ್ದಾರೆ, ರೈತರಿಗೆ ನಾಲ್ಕಾರು ಕಾಸೂ ಸಿಗುವಂತಾಗಿದೆ.

ಹೀಗೆ ಎಲ್ಲಾ ಸರಿಯಿದ್ದಾಗ ಬಿಜೆಪಿಗಳೇಕೆ ರೇವಣ್ಣನನ್ನು ಬಲಿ ಹಾಕಲು ಹೊರಟಿದ್ದಾರೆ?

ಈ ತನಿಖೆಯ ವಿಚಾರವನ್ನೇ ನೋಡಿ, ಕಳೆದ ಎರಡು ತಿಂಗಳಿಗಳಿಂದ KMF ಒಳಾಡಳಿತ ಕುರಿತು ಎಂಟತ್ತು ತನಿಖೆಗಳಾಗಿವೆ. ಈಗ ಮೂರನೇ ಬಾರಿ ಆಡಿಟ್ ಮಾಡಿಸಲಾಗುತ್ತಿದೆ. ಯಾರು ನೇರವಾಗಿ KMF ವಿರುದ್ಧ ಇದುವರೆಗೂ ದೂರನ್ನೆ ನೀಡಿಲ್ಲ, ಆದರೂ ಯಡ್ಡಿ ಕಚೇರಿಯಿಂದ ತನಿಖೆ ಮಾಡುವಂತೆ ಸಹಕಾರ ಸಂಘಗಳ ರಿಜಿಸ್ಟ್ರಾರ್‌ಗೆ ಪತ್ರ ಹೋಯಿತು.

ಅವರು ಏನೇ ಆಕಾಶಕ್ಕೆ ಏಣಿ ಹಾಕಿ, ಪಾತಾಳ ಬಗೆದು ನೋಡಿದರೂ ಯಾವ ಗುರುತರವಾದ ಅಪರಾಧಗಳೂ ಸಿಗಲಿಲ್ಲ, ಆದರೂ ಈ ಮಧ್ಯೆ ರೇವಣ್ಣನಿಂದ ಒಂದೆರಡು ತಪ್ಪುಗಳಾಗಿರುವುದೂ ನಿಜ.

ಅವುಗಳಲ್ಲಿ ಸಂಸ್ಥೆಯೊಳಗೆ ರೋಸ್ಟರ್ ನಿಯಮ ಪಾಲಿಸದಿರುವುದೂ ಒಂದಾಗಿದೆ. ಪರಿಶಿಷ್ಟರಿಗೆ ಮೀಸಲಿದ್ದ ಸ್ಥಾನ ತುಂಬದಿರುವುದು, ಬಡ್ತಿ ಮೀಸಲಾತಿ ಉಲ್ಲಂಘನೆಗಳು ಇಲ್ಲಿ ನಡೆದಿವೆ. ಚನ್ನರಾಯಪಟ್ಟಣದಲ್ಲಿ ಹಾಲಿನ ಪುಡಿ ಉತ್ಪಾದನ ಘಟಕ ಪ್ರಾರಂಭವಾಗುವ ಮೊದಲೇ ಅಲ್ಲಿ ನೌಕರರ ನೇಮಕಾತಿ ಆಗಿ ಹೋಗಿತ್ತೆಂಬ ಆರೋಪವೂ ಒಂದಿದೆ.

ಇವೆಲ್ಲಾ ನಿಜವಾಗಿದ್ದರೆ ಪರಿಶೀಲಿಸಿ ಕಾನೂನುಕ್ರಮ ತೆಗೆದುಕೊಂಡರೆ ತಪ್ಪೇನಿಲ್ಲ, ಆದರೆ ಇಷ್ಟು ಸಣ್ಣಪುಟ್ಟ ದೋಷಗಳನ್ನೇ ನೆಪ ಮಾಡಿ KMF ನಂತಹ ದೊಡ್ಡ ಸಹಕಾರಿ ಸಂಸ್ಥೆಯನ್ನೇ ಸೂಪರ್ ಸೀಡ್ ಮಾಡಲು ಹೇಗೆ ಸಾಧ್ಯ?

ಇದಕ್ಕೆ ಕಾನೂನು-ಕೋರ್ಟು ಒಪ್ಪದಿರಬಹುದು. ಆದರೆ ಯಡಿಯೂರಪ್ಪನ ಸೇಡಿನ ರಾಜಕಾರಣ ಒಪ್ಪೇ ಒಪ್ಪುತ್ತದೆ. ಯಡ್ಡಿ ಉಪಮುಖ್ಯಮಂತ್ರಿಯಾಗಿದ್ದಾಗ ಏನೇನು ಅವ್ಯವಹಾರ ನಡೆಸಿದ್ದರೆಂಬ ಬಗ್ಗೆ ಈಗ ರೇವಣ್ಣ ದಾಖಲೆ ಸಮೇತ ಮಾಹಿತಿ ತಯಾರಿಸಿಕೊಳ್ಳುತ್ತಿರುವುದೂ ಯಡ್ಡಿ ಕೋಪ ಕೆರಳಲು ಕಾರಣವಾಗಿದೆ. ಹಾಗಾಗಿ ರಮೇಶ್ ಎಂಬ ಕಡುಭ್ರಷ್ಟ ಅಧಿಕಾರಿಯನ್ನು KMF ವಿರುದ್ಧ ಯಡ್ಡಿ ಛೂ ಬಿಟ್ಟಿದ್ದಾರೆ. KMF ಎಂಬುದು ರಾಜ್ಯದ 13 ಹಾಲು ಒಕ್ಕೂಟಗಳ ಸಂಯೋಜಿತ ಸಂಸ್ಥೆ. ಈ ಒಕ್ಕೂಟಗಳ ಅಧ್ಯಕ್ಷರುಗಳೇ KMF ನ ನಿರ್ದೇಶಕರಾಗಿರುತ್ತಾರೆ. ಅದೇ ರೀತಿ ಹಾಸನ ಹಾಲು ಒಕ್ಕೂಟದ ಅಧ್ಯಕ್ಷ ರೇವಣ್ಣ KMF ಗೂ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಬಿಜೆಪಿಗಳು ಹೇಗಾದರೂ ಮಾಡಿ ಕೆಲ ಜಿಲ್ಲಾ ಅಧ್ಯಕ್ಷರನ್ನು ಖರೀದಿಸಿ ರೇವಣ್ಣನಿಗೆ ಕಿರುಕುಳ ನೀಡಲು ಬಯಸುತ್ತಿದ್ದಾರೆ. ಅಂದರೆ KMF ನಿಯಮದ ಪ್ರಕಾರ ಅಲ್ಲಿ ಒಮ್ಮೆ ಅಧ್ಯಕ್ಷರಾಗಿ ಆಯ್ಕೆಯಾದರೆ ಮುಂದಿನ ಎರಡೂವರೆ ವರ್ಷ ಬದಲಿಸಲು ಅವಕಾಶವಿಲ್ಲ. ಆದರೆ ಬಿಜೆಪಿಯು KMF ಅನ್ನೇ ಸೂಪರ್ ಸೀಡ್ ಮಾಡಬೇಕಾಗುತ್ತದೆಯೇ ವಿನಃ ರೇವಣ್ಣನನ್ನು ಅಧ್ಯಕ್ಷಸ್ಥಾನದಿಂದ ತೆಗೆಯಲು ಸಾಧ್ಯವಿಲ್ಲ.

ಬಿಜೆಪಿಗಳ ಆಪರೇಷನ್ KMF ಗೆ ಇರುವ ಇನ್ನೊಂದು ಕಾರಣ ಏನೆಂದರೆ ಮುಂದೆ ಬರಲಿರುವ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಎಲೆಕ್ಷನ್ ವೇಳೆಗೆ ಗ್ರಾಮ ಮಟ್ಟದಲ್ಲೂ ಬಿಜೆಪಿಗೆ ನೆಲೆ ರೂಪಿಸಿಕೊಳ್ಳುವುದೇ ಆಗಿದೆ.

ಹಾಗಾಗಿ ಅವರು ನಂದಿನಿ ಹಾಲಿಗೆ ವಿಷ ಹಾಕಲು ಹೊರಟಿದ್ದಾರೆ. ■

ಬೆಲೆ ಏರಿಕೆ ರೈತರಿಗೆ ಬೇಕಿದೆ?

ಹತ್ತು ಲೀಟರ್ ಹಾಲು ಉತ್ಪಾದನೆಗೆ ರೈತರಿಗೆಷ್ಟು ಖರ್ಚಾಗುತ್ತದೆ?

ಹತ್ತಿರತ್ತಿರ ನೂರೈವತ್ತು ರೂಗಳು!

ಅಂದರೆ ಪ್ರತಿ ಲೀಟರ್‌ಗೆ 15 ರೂ. ಆದರೆ ಅವರಿಗೆ ಸಿಗುವ ಹಣ ಲೀಟರ್‌ಗೆ ಕೇವಲ 12 ರೂ. ಐವತ್ತು ಪೈಸೆ ಮಾತ್ರ!!! ಇದನ್ನು ಸರಿದೂಗಿಸಲು ಹಾಲಿನ ಬೆಲೆ 2 ರೂ ಏರಿಸಬೇಕೆಂಬ KMF ತೀರ್ಮಾನ ತರ್ಕಬದ್ಧವಾಗೇ ಇದೆ. ಆದರೆ ಮತ್ತೊಂದೆಡೆ ಬಳಕೆದಾರರ ಕಷ್ಟಗಳನ್ನು ನೋಡುತ್ತಿದ್ದರೆ ಅಷ್ಟು ಬೆಲೆ ನೀಡಿ ಹಾಲು ಖರೀದಿಸುವ ಶಕ್ತಿ ಜನರಿಗಿದೆಯಾ ಎಂತಲೂ ಅನ್ನಿಸಬಹುದು.

50 ಕೆಜಿಯ ಬೈಪಾಸ್ ಪಶು ಆಹಾರದ ಬೆಲೆ ಈಗ 505 ರೂ. ಇದೆ. ಜೊತೆಗೆ ಹಸಿ ಹುಲ್ಲು, ಹಿಂಡಿ-ಬೂಸಾ ಮತ್ತು ರೈತನ ಕೂಲಿ ಸೇರಿಸಿ ಲೆಕ್ಕ ಹಾಕಿದರೆ ಹಾಲಿನ ವ್ಯಾಪಾರನೇ ನಷ್ಟದ ಬಾಬ್ತು. ಇದನ್ನು ಸರಿದೂಗಿಸಲು 2 ರೂಪಾಯಿ ಸಬ್ಸಿಡಿ ಕೊಡುವುದಾಗಿ ಯಡ್ಡಿ ಹೇಳಿದ್ದರೂ ಹಣ ಮಾತ್ರ ರೈತರಿಗೆ ತಲುಪಿಲ್ಲ, ಇತ್ತ KMF ಬೆಲೆ ಏರಿಸಲೂ ಸರ್ಕಾರ ಬಿಡುತ್ತಿಲ್ಲ. ಇದರಿಂದ ರೈತ ಹಾಗೂ ಬಳಕೆದಾರ ಇಬ್ಬರಿಗೂ ಸಂಕಷ್ಟ.

KMF ಇಂಥ ಸಂದರ್ಭ ಎದುರಿಸಲು ಕೆಲವು ದೀರ್ಘಕಾಲೀನ ಪರಿಹಾರ ಕಂಡುಕೊಳ್ಳಬಹುದಾಗಿದೆ. ಉದಾಹರಣೆಗೆ ಅದು ಪಶು ಆಹಾರ ಉತ್ಪಾದಿಸಲು ಖಾಸಗಿ ಮೂಲಗಳಿಂದ ಅಕ್ಕಿನುಚ್ಚು, ಜೋಳ ಹಾಗೂ ಕಾಕಂಬಿ ಖರೀದಿಸುತ್ತಿದೆ. ಸಹಜವಾಗೆ ಅವರ ಬೆಲೆ ಜಾಸ್ತಿ ಇರುತ್ತದೆ. ಅದರ ಬದಲಾಗಿ ತನ್ನ ಸದಸ್ಯ ರೈತರಿಂದಲೇ ಜೋಳ ಇನ್ನಿತರ ಕಚ್ಚಾ ಪದಾರ್ಥಗಳನ್ನು KMF ಖರೀದಿಸಿ ಪಶು ಆಹಾರ ಬೆಲೆ ಕಡಿಮೆ ಮಾಡಿಕೊಳ್ಳಬಹುದಾಗಿದೆ. ಇವತ್ತಿನ ಬೆಲೆ ಏರಿಕೆಯಲ್ಲಿ ತಮಗೆ ಲೀಟರಿಗೆ 18 ರೂ. ಕೊಟ್ಟರೂ ಆದೀತು ಎನ್ನುತ್ತಿದ್ದಾರೆ. ಮತ್ತೊಂದೆಡೆ ಜನ ಸಾಕಪ್ಪೋ ಸಾಕು ನಂದಿನಿ ಸಹವಾಸ ಅನ್ನುತ್ತಿದ್ದಾರೆ.

ಇದಕ್ಕೆ ಸೇಡಿನ ರಾಜಕಾರಣದಲ್ಲಂತೂ ಪರಿಹಾರ ಸಿಗದು ಬಿಡಿ.

ದೇವದುರ್ಗ: ಮತದಾರರೊಳಗೆ ನಡೆದಿರುವ ರಾಜಕೀಯ ಗುದಮುರಗಿ

ಎಲ್ಲಾ ಪಕ್ಷಗಳ ತೆರೆಮರೆಯ ಈ ಕಸರತ್ತುಗಳನ್ನು ನೋಡಿಕೊಂಡು ಮುಸುಮುಸು ನಗುತ್ತಿರುವ ಮತದಾರ ಕೊನೆಯದಾಗಿ ಯಾರ ಕೊರಳಿಗೆ ತನ್ನ ವಿಜಯದ ಮಾಲೆ ಹಾಕಿ ಗೆಲ್ಲಿಸುತ್ತಾನೆ ಎಂಬುದನ್ನು ಮಾತ್ರ ಸ್ಪಷ್ಟವಾಗಿ ತೋರಿಸಿಕೊಳ್ಳುತ್ತಿಲ್ಲ.

ರಾಯಚೂರು ಜಿಲ್ಲೆಯ ದೇವದುರ್ಗ ಮತಕ್ಷೇತ್ರದ ಹಣೆಬರಹ ಅದೇಕೋ ಸರಿಯಿಲ್ಲವೆಂದೇ. ಎಲ್ಲರೂ ಅನ್ನುತ್ತಿದ್ದಾರೆ. ಈ ಮಾತಿಗೆ ಕಾರಣ ಇಲ್ಲದಿಲ್ಲ. ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ದೇವದುರ್ಗ ಕ್ಷೇತ್ರವನ್ನು ಪ್ರತಿನಿಧಿಸಿರುವ ಎಲ್ಲರೂ ಬಹುತೇಕ "ತಿಂದುಂಡು ಎದ್ದು ಹೋಗುವ" ಸಾಮಾನ್ಯ ಕಾರ್ಯಕ್ರಮವನ್ನು ಹಾಕಿಕೊಂಡೆ ಬಂದವರೇ. ಈ ಕೆಲಸಕ್ಕೆ ಅವರೆಂದೂ ಪಕ್ಷಭೇದವನ್ನು ಮಾಡಿಲ್ಲ. ಅಧಿಕಾರ ಸಿಕ್ಕನಂತರ ಇಂಥ ವಿಷಯದಲ್ಲಿ ಮೀನಮೇಷ ಎಣಿಸಿಲ್ಲ. ಎಲ್ಲರೂ ದೇವದುರ್ಗದಿಂದ ಸಾಕಷ್ಟು 'ಕಮಾಯಿಸಿ'ಕೊಂಡು ಹೋಗಿರುವವರೇ.


ಶಾಂತಗೌಡ

ರಾಯಚೂರಿನ ಹಾಲಿ ಸಂಸದ ಎ. ವೆಂಕಟೇಶನಾಯಕನ ಅರಿಕೇರಾ ದೇವದುರ್ಗ ತಾಲೂಕಿನಲ್ಲಿಯೆ ಬರುತ್ತದೆ. ಹೇಗೂ ತಾನು ಮೂರ್‍ನಾಲ್ಕು ಅವಧಿಗೆ ಎಂ.ಪಿ. ಆಗಿದ್ದಾಗಿದೆ. ಇನ್ನು ಮುಂದೆ ತನ್ನ ಮಕ್ಕಳು ದೇವದುರ್ಗವನ್ನು ಆಳಿದರೆ ಎಷ್ಟು ಚೆನ್ನ ಎಂದೆಲ್ಲ ವೆಂಕಟೇಶ ನಾಯಕ ಲೆಕ್ಕಾಚಾರ ಹಾಕಿದ್ದರು. ಇವರು ತಮ್ಮ ಪುತ್ರರತ್ನರಿಗಾಗಿ ಎಸ್‌ಸಿ ಎಂದು ಮೀಸಲಾಗಿದ್ದ ದೇವದುರ್ಗ ಕ್ಷೇತ್ರವನ್ನು ಎಸ್ಟಿ ಮೀಸಲೆಂದು ಮಾಡಿಸಿಕೊಂಡು ಬಂದಿದ್ದರು ಕೂಡ. ಆದರೆ ಇದೇ ಸಂದರ್ಭದಲ್ಲಿ ಅವರ ಓರ್ವ ಪುತ್ರ ಭಗವಂತರಾಯನನ್ನು ಕನ್ಯಾಕುಮಾರಿಯ ಭೂತ ಸುತ್ತಿಕೊಂಡರೆ ಮತ್ತೊಬ್ಬ ಮಗ ರಾಜಶೇಖರನ 'ಕಾಮದ ದಾಹಕ್ಕೆ ಬಲಿಯಾದ' ನತದೃಷ್ಟೆಯರ ಗೋಳು ಮುಗಿಲು ಮುಟ್ಟಿತ್ತು. ಇಂಥ ಕೆಟ್ಟಗಳಿಗೆಯಲ್ಲಿಯೆ ವಿಧಾನಸಭೆಯ ಚುನಾವಣೆಗಳು ಬಂದು ವೆಂಕಟೇಶನ್ನಾಯಕನ ಜಂಘಾಬಲವೇ ಕುಗ್ಗಿಹೋಗಿತ್ತು.


ರಘು

ದೆಹಲಿಯ ದೊರೆಸಾನಿಯವರೆಗೂ ಮುಟ್ಟಿದ ಸಂಸದನ ಮಕ್ಕಳ ಈ ಪ್ರತೀತಿಯಿಂದ ಅವರ್‍ಯಾರಿಗೂ ವಿಧಾನಸಭೆಯ ಟಿಕೆಟು ಸಿಕ್ಕಲಿಲ್ಲ. ಆದರೇನಂತೆ? ಇಷ್ಟು ವರ್ಷ ಕಾಂಗ್ರೆಸ್ಸಿಗೆ ದುಡಿದರೂ ವಿಧಾನಸಭೆಯ ಮಾಮೂಲಿ ಟಿಕೆಟು ಸಿಕ್ಕಲಿಲ್ಲವೆಂದರೆ ಹೇಗೆ? ಎಂದು ಪ್ರತಿಷ್ಠೆಯ ವಿಷಯವನ್ನಾಗಿ ಮಾಡಿಕೊಂಡು ಹೈಕಮಾಂಡ್ ಜೊತೆ ಹೇಗೂ ಗುದ್ದಾಡಿ ಕೊನೆಗೂ ದೇವದುರ್ಗ ಮತಕ್ಷೇತ್ರದ ಟಿಕೆಟ್ ತಂದರು. ಆದರೆ ತನ್ನ ಮಕ್ಕಳಿಗಲ್ಲ, ತನಗೇ !


ಸಿದ್ದನಗೌಡ

ಅಧಿಕಾರದ ಈ ಅಮಲು, ಹಪಹಪಿತನ ಚುನಾವಣೆಗಳಲ್ಲಿ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡಿದವು. ಆಗ ಈತನ ಮೊಮ್ಮಗನಾದ ಶಿವನಗೌಡ ನಾಯಕನನ್ನು ಜೆಡಿಎಸ್ ಪಕ್ಷದಿಂದ ಆಯ್ಕೆ ಮಾಡುವ ಮೂಲಕ ಮತದಾರರು ವೆಂಕಟೇಶನಾಯಕರಿಗೆ ಟಾಂಗು ಕೊಟ್ಟಿದ್ದರು. ಈ ಮರ್ಮಾಘಾತದಿಂದ ವೆಂಕಟೇಶ ನಾಯಕ ಚೇತರಿಸಿಕೊಳ್ಳುವುದು ತುಸು ಕಷ್ಟವಾಗಿದ್ದರೂ ಅದು ಹೇಗೂ ಸಹಿಸಿಕೊಂಡು ಸುಮ್ಮನಾಗಿದ್ದರು. ಆದರೆ ರಾಜಕೀಯದಲ್ಲುಂಟಾದ ತೀವ್ರವಾದ ಬದಲಾವಣೆಗೋ? ಅಥವಾ ಶಿವನಗೌಡ ನಾಯಕನಿಗೆ ಗಣಿಧಣಿಗಳು ತೋರಿಸಿದ ದುಡ್ಡಿನ ಲಾಲಸೆಗೋ? ಅಥವಾ ಮಂತ್ರಿ ಎಂಬ ಅಧಿಕಾರದ ಅಮಲಿಗೋ?! ಮತಕ್ಷೇತ್ರದ ಯಾರನ್ನೂ ಹೇಳದೆ ಕೇಳದೆ ಶಿವನಗೌಡ ಬಿಜೆಪಿ ತೆಕ್ಕೆಗೆ ಹಾರಿದ್ದರು.


ವೆಂಕಟೇಶ್ ನಾಯಕ

ಈಗ ಮತ್ತೆ ಚುನಾವಣೆಯ ಕರಿನೆರಳು ದೇವದುರ್ಗ ಮತಕ್ಷೇತ್ರದ ಮೇಲೆ ಕವಿದು ರಾಜಕೀಯ ದೊಂಬರಾಟ ಶುರುವಾಗಿದೆ. ಯಾರು ಯಾರನ್ನು ಹಣಿಯುತ್ತಾರೋ? ಮಕಾಡೆ ಮಲಗಿಸುತ್ತಾರೋ? ಚುನಾವಣೆ ದಿನಾಂಕ ಘೋಷಣೆಯಾಗದೆ ಇದ್ದರೂ ಅದರ ತಯಾರಿ ಮಾತ್ರ ಜೋರಾಗಿ ನಡೆದಿದೆ. ಜೆಡಿಎಸ್‌ನಿಂದ ಗೆದ್ದು ಬಿಜೆಪಿ ಎಂಬ ಚಡ್ಡಿಗಳ ಪಕ್ಷಕ್ಕೆ ಜಿಗಿದು ಹೊಸ ಚಡ್ಡಿ ಹೊಲಿಸಿಕೊಂಡಿರುವ ಶಿವನಗೌಡ ನಾಯಕ ಆದಾಗಲೆ ಅಖಾಡಕ್ಕೆ ಇಳಿದು ತೊಡೆ ತಟ್ಟುತ್ತ ತನಗೆ ಎದುರಾಗುವ ಎದುರಾಳಿಗಾಗಿ ಕಾಯುತ್ತಿದ್ದಾನೆ. 10 ಕೋಟಿ ರೂಪಾಯಿಗಳ ಅನುದಾನವನ್ನು ಯಡ್ಡಿಯಿಂದ ಬಿಡುಗಡೆ ಮಾಡಿಸಿಕೊಂಡು ತನ್ನ ಕ್ಷೇತ್ರದಲ್ಲಿಯ ಎಲ್ಲಾ ಧಾರ್ಮಿಕ ಕ್ಷೇತ್ರಗಳನ್ನು ಉದ್ಧಾರ ಮಾಡುವುದಾಗಿ ಶಿವನಗೌಡ ಹೂಂಕರಿಸುತ್ತಿದ್ದಾನೆ. ಈಗಾಗಲೆ ಕೆಲವು ಕೋಟಿಗಳ ಹಣ ಬಿಡುಗಡೆಯಾದ ಸರಕಾರದ ಸುತ್ತೋಲೆ ಹಿಡಿದು ತಾಲೂಕಿನಾದ್ಯಂತ ಸುತ್ತತೊಡಗಿದ್ದಾನೆ. ಇದನ್ನು ಕಂಡು ಶಿವನಗೌಡ ರಾಜ್ಯದ ಗ್ರಂಥಾಲಯದ ಮಂತ್ರಿಯೋ? ದೇವದುರ್ಗ ತಾಲೂಕಿನ ಮಂತ್ರಿಯೊ? ಎಂದು ಜನ ನಗಾಡುತ್ತಿದ್ದಾರೆ.

ಆದರೆ ಶಿವನಗೌಡ ನಾಯಕ ಮತ್ತು 'ಯಡ್ಡಿಯ ಚಡ್ಡಿ ಕಳಚಿ ಬೆತ್ತಲೆ' ಮಾಡಲೇಬೇಕೆಂದು ಹೊಂಚುಹಾಕಿರುವ ಜೆಡಿಎಸ್ ಪಕ್ಷವೂ ಕ್ರಿಯಾಶೀಲ ಚಟುವಟಿಕೆಗಳ ಮೂಲಕ ಜನರ ಗಮನ ಸೆಳೆದಿದೆ. ಈಗಾಗಲೇ ಜೆಡಿಎಸ್ ಪಕ್ಷದ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ದೇವದುರ್ಗದ ಹಳ್ಳಿಯೊಂದರಲ್ಲಿ ವಾಸ್ತವ್ಯ ಮಾಡುವ ಮೂಲಕ ತನ್ನ ಟ್ರಂಪ್ ಕಾರ್ಡ ಚಲಾಯಿಸಿದ್ದಾರೆ. ಇದರಿಂದಾಗಿ ಜೆಡಿಎಸ್‌ನ ಟಿಕೆಟ್ ಆಕಾಂಕ್ಷಿಗಳ ಪಟ್ಟಿ ದೊಡ್ಡದಾಗಿ ಬೆಳೆದು ಈಗ ಅವರೊಳಗೆ ಪೈಪೋಟಿ ಶುರುವಾಗಿದೆ.

ನೆರೆಯ ಜಿಲ್ಲೆಯ, ಸುರಪುರ ತಾಲೂಕಿನ ಶಾಂತಗೌಡ ಚನ್ನಪಟ್ಟಣ ಎಂಬಾತನ ಹೆಸರು ಮುಂಚೂಣಿಯಲ್ಲಿದೆ. ಶಿವನಗೌಡನಿಗಿಂತಲೂ ವ್ಯಕ್ತಿತ್ವದಲ್ಲಿ ಶಾಂತನಗೌಡ ಯೋಗ್ಯ ಅನ್ನುವುದಕ್ಕಿಂತಲೂ ಏನು ನಡೆದರೂ ಅದನ್ನು ದಕ್ಕಿಸಿಕೊಳ್ಳುವ ತಾಕತ್ತು ಆತನಿಗಿದೆ ಎಂಬ ಮಾತು ಈಗಾಗಲೇ ಸುರಪುರ ಮತಕ್ಷೇತ್ರದಿಂದ ಕೇಳಿಬರುತ್ತಿದೆ. ಈತನಿಗೆ ದೇವದುರ್ಗದ ಜನರ ಬೆಂಬಲಕ್ಕಿಂತ ಮುಖ್ಯವಾಗಿ ಆತನಂತಹವೇ ಗುಣಗಳ ಉಡಾಳ ಹುಡುಗರ ಯಥೇಚ್ಛಬೆಂಬಲ ಇದೆ. ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿರುವ ದೇವದುರ್ಗದ ಮತದಾರ "ಜಾಲಿಬತ್ತಿ ಕಾಲಿಗೆ ಮೂಲ ಮಾಡಿಕೊಳ್ಳುವ" ಉಮೇದಿನಲ್ಲಂತೂ ಇಲ್ಲ ಎಂಬುದನ್ನು ಜೆಡಿಎಸ್ ಪರಿವೀಕ್ಷಕರ ಮುಂದೆ ತೋರಿಸಿದ್ದಾನೆ.

ಹಿಂದೊಂದು ಸಂದರ್ಭದಲ್ಲಿ ಆಲ್ಕೋಡ ಹನುಮಂತಪ್ಪನವರೆ ಸರಕಾರವನ್ನು ಒತ್ತಾಯಿಸಿ "ಗಡಿಪಾರು ಮಾಡಲು ಯೋಗ್ಯವಾದ ವ್ಯಕ್ತಿ" ಎಂದು ಬಿಂಬಿಸಿದ್ದ ಹಾಲಿ ತಾಲೂಕಾ ಪಂಚಾಯತ್ ಅಧ್ಯಕ್ಷ (ಕಾಂಗ್ರೆಸ್ ಪಕ್ಷದ) ಸಿದ್ದನಗೌಡ ಮೂಡಲಗುಂಡನನ್ನು ಮತ್ತೆ ಜೆಡಿಎಸ್‌ಗೆ ಕರೆತಂದು ಮಣೆಹಾಕಲು ತಯಾರಿ ನಡೆಸಿದ್ದಾನೆ. ನಾಡಗೌಡರ ಕೊಲೆಯ ಸಂಬಂಧದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮುಡಲಗುಂಡನ 'ಪುರಾಣದ' ಪ್ರತಿ ರಾಯಚೂರು ಜಿಲ್ಲಾಧಿಕಾರಿಗಳ ಟೇಬಲ್ ಮೇಲೆ ಇಂದಿಗೂ ಥಳ ಥಳ ಹೊಳೆಯುತ್ತ ಕುಳಿತಿದೆ. ಆದರೆ ಆಲ್ಕೋಡ ಹನುಮಂತಪ್ಪ ಶಿವನಗೌಡನಿಗೆ ಟಾಂಗು ಕೊಡಲು ಸಿದ್ಧನಗೌಡನನ್ನು ಕ್ಯಾಂಡಿಡೇಟ್ ಮಾಡಲು ತುದಿಗಾಲ ಮೇಲೆ ನಿಂತಿದ್ದಾರೆ.


ಡಾ. ರಘು ಎಂಬ ಡಾಕ್ಟರ್ ವೃತ್ತಿಯ ವ್ಯಕ್ತಿಯೊಬ್ಬರೂ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಇವರು ಮೂಲತಃ ಬೆಳಗಾಂವ ಜಿಲ್ಲೆಯವರಾದರೂ ತನ್ನ ಸನ್ನಡತೆಯ ಮೂಲಕ ಈಗಾಗಲೆ ಕ್ಷೇತ್ರದ ತುಂಬೆಲ್ಲ ಮನೆ ಮಾತಾಗಿದ್ದಾರೆ. ಅಲ್ಲದೆ ತಾಲೂಕಾ ಜೆಡಿಎಸ್‌ನ ಮುಖಂಡರಾದ ಶರಣಪ್ಪ ಬಳಿ ಮತ್ತು ಬಸನಗೌಡ ದೇಸಾಯಿ ಸೇರಿದಂತೆ ಹಲವಾರು ಜನಗಳ ಬೆಂಬಲವಿದೆ. ಈತನ ಸದ್ವಿನಯದ ಮಾತುಗಾರಿಕೆಗೆ, ವಿದ್ಯಾವಂತನೆಂಬ ಅಭಿಮಾನದ ಜೊತೆಗೆ ರೊಕ್ಕಸ್ಥ ಕುಳ ಎಂಬ ಕಾರಣಕ್ಕೆ ಜೆಡಿಎಸ್ ಟಿಕೇಟ್ ರಘು ಅವರಿಗೆ ದೊರೆತರೆ ಅದು ಹೆಗ್ಗಳಿಕೆಯಾಗಲಾರದು. ಏಕೆಂದರೆ ಕಳೆದ ವಿಧಾನಸಭೆಯ ಚುನಾವಣೆಗೆ ನಿಲ್ಲಲು ಹವಣಿಸಿದ್ದರೂ ಕೊನೆಗೆ ಅದು ಶಿವನಗೌಡನಿಗೆ ಸಿಕ್ಕಿದ್ದರಿಂದ ಹಿಂದೆ ಸರಿದಿದ್ದರು. ಬಹುಶಃ ದೇವದುರ್ಗದ ಜನತೆಗೆ ಈತ ದೆವ್ವದಂತೆ ತಿಕ್ಕಿ ಮುಕ್ಕಿ ಕಾಡಲಾರ. ಅಲ್ಲದೆ "ಮುಂದೆ ಬಂದರೆ ಹಾಯಲಾರೆ, ಹಿಂದೆ ಬಂದರೆ ಒದೆಯಲಾರೆ" ಎಂಬ ಪುಣ್ಯಕೋಟಿ ಗೋವಿನ ನೆನಪುತರುವ ರಘು ಉತ್ತಮ ಅಭ್ಯರ್ಥಿ. ಆದರೆ ರಾಜಕೀಯದಲ್ಲಿ ಒಳ್ಳೆಯತನವೊಂದೆ ಕೌಂಟ್ ಆಗುವುದಿಲ್ಲವಲ್ಲ?!

ಜೆಡಿಎಸ್ ಪಕ್ಷದ ಟಿಕೆಟ್ ಪಡೆಯಲು ಈ ರೀತಿ ತೆರೆಮರೆಯ ಕಸರತ್ತು ಆರಂಭಗೊಂಡಿದ್ದರೆ ಕಾಂಗ್ರೆಸ್ ಪಕ್ಷ ಮಾತ್ರ ಅದ್ಯಾಕೋ ಗಾಢ ನಿದ್ರೆಯಲ್ಲಿ ಮಲಗಿಬಿಟ್ಟಿದೆ. ಐದು ವರ್ಷಗಳ ಕಾಲ ಅದು ಹೇಗೋ ತನ್ನ ಮನಸ್ಸಿಗೆ ಆದ ಗಾಯವನ್ನು ಮಾಯಿಸಿಕೊಳ್ಳುತ್ತ ಕಾಲ ತಳ್ಳಬೇಕೆಂದುಕೊಂಡಿದ್ದ ಹಾಲಿ ಸಂಸದ ವೆಂಕಟೇಶನಾಯಕ ಈಗ ಚಿಂತಾಕ್ರಾಂತರಾಗಿದ್ದಾರೆ. ಸೋಲೋ-ಗೆಲುವೋ ಹೇಗೂ ಸ್ಪರ್ಧಿಸಲೇ ಬೇಕಲ್ಲ ಎಂಬ ಅನಿವಾರ್ಯಕ್ಕೆ ಬಿದ್ದು ತಮ್ಮ ಕುಲಪುತ್ರ, ಸೆಕ್ಸ್‌ಸ್ಕ್ಯಾಂಡಲ್ ಖ್ಯಾತಿಯ ಭಗವಂತರಾಯನನ್ನೆ ಮತ್ತೆ ಮುಂದೆ ಮಾಡಿಕೊಂಡು ಹೋಗುವ ಸಾಧ್ಯತೆಗಳು ಹೆಚ್ಚಾಗಿವೆ.

ಎಲ್ಲಾ ಪಕ್ಷಗಳ ತೆರೆಮರೆಯ ಈ ಕಸರತ್ತುಗಳನ್ನು ನೋಡಿಕೊಂಡು ಮುಸುಮುಸು ನಗುತ್ತಿರುವ ಮತದಾರ ಕೊನೆಯದಾಗಿ ಯಾರ ಕೊರಳಿಗೆ ತನ್ನ ವಿಜಯದ ಮಾಲೆ ಹಾಕಿ ಗೆಲ್ಲಿಸುತ್ತಾನೆ ಎಂಬುದನ್ನು ಮಾತ್ರ ಸ್ಪಷ್ಟವಾಗಿ ತೋರಿಸಿಕೊಳ್ಳುತ್ತಿಲ್ಲ. ಆದರೆ ಇಷ್ಟು ಮಾತ್ರ ಸತ್ಯ. ಶಿವನಗೌಡನ ಗೆಲುವು ಆತನ ರಾಜಕೀಯ ಭವಿಷ್ಯಕ್ಕೆ ಕೊಡಲಿಪೆಟ್ಟಾದರೆ, ಸೋಲು ಆತನ ರಾಜಕೀಯ ಬದುಕಿನ ಆರಂಭವಾಗುತ್ತದೆ ಎಂದು ಕೆಲವರು ವ್ಯಾಖ್ಯಾನಿಸುತ್ತಿದ್ದಾರೆ. ಈ ಮಾತುಗಳ ಸತ್ಯಾಸತ್ಯತೆ ಕುರಿತು ಕಾಲವೇ ನಿರ್ಧರಿಸಬಲ್ಲದು, ಅಲ್ಲವೆ?

■ ವಿಶ್ವಾರಾಧ್ಯ ಸತ್ಯಂಪೇಟೆ

ಯಡ್ಡಿ: ಸಿಮೆಂಟ್ ಕಾರ್ಖಾನೆ ಮಾಲೀಕರ ಪರವೋ? ರೈತರ ಪರವೋ?


ಸಿಮೆಂಟ್ ಕಾರ್ಖಾನೆಯ ಮುಂದೆ ಧರಣಿ ಕುಳಿತಿರುವ ರೈತರ ಕುಟುಂಬಗಳು

"ಪಾಪಿ ಸಮುದ್ರ ಹೊಕ್ಕರೂ ಮೊಳಕಾಲ ಮಟ್ಟ ನೀರು" ಎಂಬಂತೆ ಸೇಡಂ ತಾಲೂಕಿನ ಹಂಗನಹಳ್ಳಿಯ ರೈತರ ಗೋಳು ಶುರುವಾಗಿದೆ. ಬಿರ್ಲಾ ಗುಂಪಿನ ರಾಜಶ್ರೀ ಸಿಮೆಂಟ್ ಘಟಕದ ತ್ಯಾಜ್ಯವಾದ ನೀರು ನೆರೆಯ ರೈತರ ಹೊಲಗಳಿಗೆ ಹರಿದು ಅವರ ಹೊಲಗಳೆಲ್ಲ 'ಸತ್ಯಾನಾಶ ಆಗಿ' ಹೋಗಿವೆ. ನೀರು ನಿಂತು ಜೌಗು ತುಂಬಿ ಹೊಲಗಳಲೆಲ್ಲ ಕಾಂಗ್ರೆಸ್ ಕಸ-ಜಬ್ಬಲ ಬೆಳೆದು ರೈತರೇ ಹೈರಾಣಾಗಿ ವರ್ಷಾನುಗಟ್ಟಲೆ ಹೋರಾಟ ನಡೆಸಿದ್ದರು. ಕೊನೆಗೂ ಈ ಹೋರಾಟಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿ ಸಮಿತಿಯೊಂದರ ಶಿಫಾರಸ್ಸಿನ ಆಧಾರದ ಮೇಲೆ 19.28 ಎಕರೆ ಹೊಲಕ್ಕೆ 7 ಲಕ್ಷ ರೂಪಾಯಿಗಳ ಪರಿಹಾರವನ್ನು ಕಾರ್ಖಾನೆಯ ಮಾಲೀಕರೆ ರೈತರಿಗೆ ನೀಡಬೇಕೆಂದು ಸೆಪ್ಟೆಂಬರ 24 ರಂದು ಆದೇಶಿಸಿದ್ದರು.



ಆದರೆ ಜಿಲ್ಲಾಧಿಕಾರಿಗಳ ಈ ಆದೇಶವನ್ನು ತಮ್ಮ ಅಂದಿನ ಬುಡಕ್ಕೆ ಹಾಕಿಕೊಂಡು ರಾಜಶ್ರೀ ಕಾರ್ಖಾನೆಯ ಆಡಳಿತವರ್ಗ ಕುಳಿತುಕೊಂಡಿದೆ. ಇದರಿಂದಾಗಿ ಸರಕಾರದ ಪರಿಹಾರ ತಮ್ಮ ಕೈ ಸೇರಿತು ಎಂಬ ಖುಷಿಯಲ್ಲಿದ್ದ ಹಂಗನಹಳ್ಳಿಯ 15 ಕುಟುಂಬಗಳ ಸಂತ್ರಸ್ತರು ಕಾರ್ಖಾನೆಯ ಮುಂದೆ 'ಅನಿರ್ದಿಷ್ಟ ಧರಣಿ' ಆರಂಭಿಸಿದ್ದಾರೆ. ರೈತರೆಲ್ಲ ತಮ್ಮ ಮನೆಯ ಹೆಂಡಿರು-ಮಕ್ಕಳು ದನಕರುಗಳ ಸಮೇತ ಅಲ್ಲಿ ಕುಳಿತಿದ್ದಾರೆ.

ಸರಕಾರದ ಪ್ರತಿನಿಧಿಯಾಗಿರುವ ಜಿಲ್ಲಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿಯು ತಾನೆ 'ಶಾಣ್ಯಾ' ಅನ್ನಿಸಿಕೊಳ್ಳಲು ಹಾಗೂ ಸಂಬಂಧಿಸಿದ ರೈತರಿಗೆ ಪರಿಹಾರ ಕೊಡದೆ ಇರಲು ಕಾರ್ಖಾನೆಯ ಮಾಲೀಕರು ತೀರ್ಮಾನಿಸಿದಂತಿದೆ. ಇದರಿಂದ ರೈತರ ಆತಂಕ ಇನ್ನಷ್ಟು ಇಮ್ಮಡಿಯಾಗಿದೆ.

ರೈತರ ಈ ಆತಂಕವನ್ನು ಮನಗಂಡಿರುವ ಜಿಲ್ಲಾಧಿಕಾರಿ ಡಾ. ಜಗದೀಶ್ ಈ ಅನಿವಾರ್ಯವಾಗಿ ಸರಕಾರಕ್ಕೆ ಪತ್ರ ಬರೆದು ವಾಸ್ತವ ಅಂಶವನ್ನು ವಿವರಿಸಿದ್ದಾರೆ 'ಚೆಂಡು' ಈಗ 'ಯಡ್ಡಿಯ' ಅಂಗಳದಲ್ಲಿದೆ. 'ರೈತರ ಮಗ' ಎಂದು ಹೇಳಿಕೊಂಡು 'ಹಸಿರು ಟವಲ'ನ್ನು ಧರಿಸಿಯೆ ಮುಖ್ಯಮಂತ್ರಿ ಪ್ರಮಾಣವಚನ ಸ್ವೀಕರಿಸಿ ಯಡಿಯೂರಪ್ಪ ರೈತರ ಪರವಾಗಿರುವವರೋ? ಇಲ್ಲ ಕಾರ್ಖಾನೆಯ ಮಾಲೀಕ ಪರವಾಗಿರುವವರೋ? ಎಂದು ಸಾಬೀತುಪಡಿಸುವ ಕಾಲ ಎದುರಾಗಿದೆ.

ದರ್ಶನಾಪುರನ ಸೊಂಟ ಮುರಿದಿರುವ ಡಾ.ಮಲ್ಲಣ್ಣಗೌಡ ಉಕ್ಕಿನಾಳ


ಉಕ್ಕಿನಾಳ


ಗುಲಬರ್ಗಾ ಜಿಲ್ಲೆಯ ಮಾಜಿ ಉಸ್ತುವಾರಿ ಸಚಿವ, ಶಹಾಪುರದ ಹಾಲಿ ಶಾಸಕ ಶರಣಬಸಪ್ಪಗೌಡ ದರ್ಶನಾಪುರ "ತಾನೊಂದು ಬಗೆದರೆ ದೈವವೊಂದು ಬಗೆಯಿತು" ಎಂಬಂತೆ ಜೆಡಿಎಸ್ ತೆಕ್ಕೆಯಿಂದ ಜಿಗಿದು ಕಾಂಗ್ರೆಸ್ ಪಕ್ಷಕ್ಕೆ ಭಾರಿ ಆಸೆಯೊಂದಿಗೆ ಹೋಗಿದ್ದರು. ಈಗ ನೋಡಿದರೆ ಬೆಂಕಿಯಿಂದ ಬಾಣಲೆಗೆ ಜಿಗಿದರು ಎಂಬಂತಾಗಿದೆ ಅವರ ಪರಿಸ್ಥಿತಿ.


ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ ಎಂದಿದ್ದರೆ ಮೊದಲೆ ಬಿಜೆಪಿಗೆ ಹೋಗಬಹುದಿತ್ತಲ್ಲ!! ಎಂದು ಈಗ ಕಂಡಕಂಡವರ ಮುಂದೆ ಹಲುಬುತ್ತ ತನ್ನ ನಿರ್ಧಾರಕ್ಕೆ ತಾನೆ ಮಂಡಿಗೆ ತಿನ್ನುವಂತಾಗಿದೆ. ಆದರು ದರ್ಶನಾಪುರ ತನ್ನ ಕಬಳಿಕೆಯ ಗುಣವನ್ನು ಮಾತ್ರ ಮರೆಯ "ಸಿಕ್ಕಷ್ಟು ಸೀರುಂಡೆ" ಎನ್ನುತ್ತ ತಾಲೂಕಾ ಪಂಚಾಯ ಮುಖ್ಯಸ್ಥ ತಹಶೀಲ್ದಾರ್, ಪುರಸಭೆಯ ಮುಖ್ಯಾಧಿಕಾ ಅಬಕಾರಿ ಇಲಾಖೆಯ ಮುಖ್ಯಾಧಿಕಾರಿ, ಸಮಾಜ ಕಲ್ಯಾ ಇಲಾಖೆಯ ಮುಖ್ಯಾಧಿಕಾರಿಗಳಿಗೆ ಅಲಿಖಿತ ಆದೇಶ ನೀ ಪ್ರತಿತಿಂಗಳು ತನಗೆ ಇಂತಿಷ್ಟು ಕೊಡಬೇಕು "ಇಲ್ಲಾಂ ನೀವು ಅದ್ಹೆಂಗೆ ಕೆಲಸ ಮಾಡ್ತಿರೋ ನಾನು ನೋಡ್ತಿನಿ ಎಂಬ ಧಮಕಿ ಹಾಕಿ ಪರ್ಸೆಂಟೇಜ್ ಫಿಕ್ಸ್ ಮಾಡಿಕೊಂಡಿದ್ದಾ


ದರ್ಶನಾಪುರ್

ದರ್ಶನಾಪುರನ ಕಬಳಿಕೆಯನ್ನು ಮೊದಲಿನಿಂದಲು ಖಂಡಿಸುವ ಎದೆಗಾರಿಕೆ ಇರುವ ಡಾ.ಮಲ್ಲಣ್ಣಗೌಡ ಉಕ್ಕನಾ ಎಂಬ (ಬಿಜೆಪಿಯಿಂದ ಶಾಸಕತ್ವ ಸ್ಥಾನಕ್ಕೆ ನಿಂತು ಸೋತ ಅಭ್ಯರ್ಥಿ) ವ್ಯಕ್ತಿ ದರ್ಶನಾಪುರ ಸೊಂಟ ಮುರಿಯಲು ಈಗ ರೆಡಿಯಾಗಿ ನಿಂತಿದ್ದಾನೆ. ದರ್ಶನಾಪುರನ ಚೇಲಾಗಳಂತಿರು ಅಧಿಕಾರಿ ವರ್ಗವನ್ನು ಸಂಪೂರ್ಣ ಬೇರೆಡೆ ವರ್ಗಾಯಿಸಿದ್ದಾನೆ. ಉಕ್ಕಿನಾಳ ತಾಲೂಕಿ ಆಯಕಟ್ಟಿನ ಜಾಗಗಳಲ್ಲಿ ಖಡಕ್ ಅಧಿಕಾರಿಗಳನ್ನು ಕುಳ್ಳಿರಿಸಿದ್ದು ದರ್ಶನಾಪುರನಿ ನುಂಗಲಾಗದ ತುತ್ತಾಗಿದೆ..

ಪಾಪದ ಕೊಡ ತುಂಬಿ ಹೋದಾಗ ಆ ದೇವರು ಕೂಡ ಕೈ ಹಿಡಿಯುವುದಿಲ್ಲವಂ ಹಾಗೆಯೇ ದರ್ಶನಾಪುರನ ಆಡಳಿತದ ಅವಧಿ ಮುಗಿದು ಹೋಗಿದ್ದು ಅದು ಕಾಲ ತೆಕ್ಕೆಗೆ ಜಾರಿ ಬಿಟ್ಟಿದೆ. ಈಗ ಈತನನ್ನು ಆ ದೇವರೂ ಕೂಡ ಕಾಪಾಡಲಾರ ಅಲ್ಲವ






ಕೊಪ್ಪಳ: ಸರ್ಕಾರಿ ಭೂಮಿ ನುಂಗಾಟ!

ಕೃಷ್ಣ, ರಾಮಕೃಷ್ಣ, ರಾಮಚಂದ್ರ...

ಇವರಲ್ಲಿ ಒಬ್ಬ ತಹಶೀಲ್ದಾರ್, ಇನ್ನೊಬ್ಬ ಸರ್ವೆ ...ಕಾರ, ಮತ್ತೊಬ್ಬ ಭೂಗಳ್ಳ! ಈ ಮೂವರು ಸೇರಿ ಮಾಡಿರುವ ಘನಂದಾರಿ ಕೆಲಸವೆಂದರೆ ಮುಳುಗಡೆಯಾದ ರೈತರ ಪಾಲಿನ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ ಕಾರ್ಖಾನೆಗೆ ಮಾರಿರುವುದು.

ಕೆಲ ವರ್ಷಗಳ ಹಿಂದಿನ ತನಕ ಕೊಪ್ಪಳದ ಸುತ್ತಮುತ್ತಲಿನ ಬರಡುಭೂಮಿಯನ್ನು ಕೇಳುವವರೇ ಇದ್ದಿಲ್ಲ. ಆದರೆ ಯಾವಾಗ ಇಲ್ಲಿ ಒಂದೆರಡು ಕಾರ್ಖಾನೆಗಳು ತಲೆಯೆತ್ತಿದವೋ, ಯಾವಾಗ ಬಲ್ಡೋಟಾ, ಎಂಎಸ್‌ಪಿಎಲ್ ಸಾವಿರಗಟ್ಟಲೆ ಎಕರೆ ಭೂಮಿ ಖರೀದಿಗೆ ಮುಂದಾದುವೋ, ಅದೇ ಹೊತ್ತಿಗೆ ಚೀನಾಕ್ಕೆ ಅದಿರು ಮಾರುತ್ತಿದ್ದ ಬಳ್ಳಾರಿ ಮೈನಿಂಗ್ ಕುಳಗಳೆಲ್ಲ ತಮ್ಮ ಹಣ ವೈಟ್ ಮಾಡಿಕೊಳ್ಳಲು ಕೊಪ್ಪಳದ ಭೂಮಿ ಖರೀದಿಗೆ ಕೈ ಹಾಕಿದರು.


ಕೃಷ್ಣ ಗುಜ್ಜರ್

ಅದರ ಪರಿಣಾಮ ಒಂದು ಲಕ್ಷ ಬೆಲೆಬಾಳುತ್ತಿದ್ದ ಭೂಮಿಯ ರೇಟು ಕೋಟಿಗೇರಿತು. ಮೇಲಿಂದ ಮೇಲೆ ಕಾರ್ಖಾನೆಗಳು ಲಗ್ಗೆ ಇಟ್ಟಿದ್ದು ತುಂಗಭದ್ರಾ ಎಡದಂಡೆಯ ಬಗನಾಳ ಸುತ್ತಮುತ್ತ. ಇದನ್ನು ಅರಿತ ಕಿನ್ನಾಳದ ಭೂಗಳ್ಳ ರಾಮಚಂದ್ರಪ್ಪ ಚಿತ್ರಗಾರ, ಬಗನಾಳ ಗ್ರಾಮದ ರಮೇಶರೆಡ್ಡಿ, ಸೈಯದ್ ಸಾಬ ಬೇಟಗೇರಿ ಮತ್ತು ಕುಣಿಕೇರಿಯ ಸೋಮನಗೌಡ ಮಾಲೀ ಪಾಟೀಲ ಜೊತೆ ಸೇರಿ ಹತ್ತಾರು ಜನರ ಹೆಸರಿಗೆ ಸರ್ಕಾರಿ ಭೂಮಿಯ ದಾಖಲೆ ಸೃಷ್ಟಿಸಿ ಕಾರ್ಖಾನೆಗಳಿಗೆ ಮಾರಿ ಕೋಟ್ಯಂತರ ರೂಪಾಯಿ ಗುಂಡಾಮೋಚಿದ್ದಾರೆ.

ಆಗಿದ್ದೇನೆಂದರೆ, ಕೊಪ್ಪಳ ಬಳಿ 1953ರಲ್ಲಿ ತುಂಗಭದ್ರಾ ಅಣೆಕಟ್ಟು ಕಟ್ಟಿದಾಗ ಅದರಲ್ಲಿ ಭೂಮಿ ಕಳೆದುಕೊಂಡ ಒಟ್ಟು 35 ರೈತರಿಗೆ ಸರ್ಕಾರ ಬಗನಾಳ ಬಳಿಯ ಸರ್ವೆ ನಂ. 42, 84ರಲ್ಲಿ ಭೂಮಿ ಮಂಜೂರು ಮಾಡಿತ್ತು. ಅದರಲ್ಲಿ ಸದರಿ 35 ರೈತರು ಉಳುಮೆ ಮಾಡುತ್ತಲೇ ಇದ್ದರು. ಆದರೆ 1982-83ರಲ್ಲಿ ಸರ್ಕಾರದ ಆದೇಶದಂತೆ ಪ್ರತಿ ರೈತರಿಗೆ 5 ಎಕರೆ ನಿಗದಿಗೊಳಿಸಿ ಉಳಿದ ಅಂದಾಜು 80 ಎಕರೆಯಷ್ಟು ಭೂಮಿಯನ್ನು ಸರ್ಕಾರ ಕಿತ್ತುಕೊಂಡು ಎಲ್ಲಾ ರೈತರಿಗೆ ಮ್ಯುಟೇಷನ್ ಮಾಡಿಕೊಟ್ಟಿತು.

ಈ ಹಿಂದೆ ಕೊಪ್ಪಳದ ಶಾಸಕ ಸಂಗಣ್ಣ ಕರಡಿಯ ಚೇಲನಾಗಿದ್ದ, ನತ್ತು ಪ್ರಿಯ ಹಾಗೂ ನೆಲಗಳ್ಳ ರಾಮಚಂದ್ರ ಚಿತ್ರಗಾರ ಶಾಸಕ, ತಹಶೀಲ್ದಾರ ನೇತೃತ್ವದ ಭೂ ಮಂಜೂರಾತಿ ಸಮಿತಿಯ ಸದಸ್ಯನಾಗಿದ್ದಾಲೇ ತಾಲ್ಲೂಕಿನಲ್ಲಿದ್ದ ಸರ್ಕಾರಿ ಭೂಮಿಯತ್ತ ಕಣ್ಣು ಹಾಕಿದ್ದ. ಇನ್ನೊಂದು ಕಿನ್ನಾಳನಿಂದ ದೂರದ ಜಗನಾಳ ಬಳಿಯ ಸರ್ವೆ ನಂ. 42, 84ರಲ್ಲಿರುವ ಅಂದಾಜು 40 ಎಕರೆಯಷ್ಟು ಭೂಮಿಯ ದಾಖಲೆಯನ್ನು ಬೇರೆ ಬೇರೆಯವರ ಹೆಸರಿನಲ್ಲಿ ಸೃಷ್ಟಿಸಿದ್ದ. ಇದಕ್ಕೆಲ್ಲ ಸಹಕರಿಸಿದವನು 2006ರಲ್ಲಿ ತಹಶೀಲ್ದಾರನಾಗಿದ್ದ ಕೃಷ್ಣ ಗುಜ್ಜರ್ ಮತ್ತು ಸರ್ವೆ ಇಲಾಖೆಯ ರಾಮಕೃಷ್ಣ.

ಬಗನಾಳ ಗ್ರಾಮವನ್ನೇ ಹೊಕ್ಕಿರುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಆರ್.ವಿ.ದೇಶಪಾಂಡೆಯ ದ್ರುವದೇಶ ...ಚ್ ಬರನ್ ಕಾರ್ಖಾನೆಯ ಹಿಂದಿರುವ ಹಾಗೂ ಹೊಸಪೇಟೆ ಶಾಸಕ ಆನಂದ್ ಸಿಂಗ್‌ನ ತೋಟದ ಪಕ್ಕದಲ್ಲಿರುವ ಈ ಭೂಮಿಗೆ ಡಿಮ್ಯಾಂಡ್ ಬರುವ ಸಂಗತಿ ಅರಿತ ದಾಖಲೆ ಸೃಷ್ಟಿಸಿದ ರಾಮಚಂದ್ರ ಚಿತ್ರಗಾರ ತನ್ನ ಸಹಚರರಾದ ರಮೇಶ್ ರೆಡ್ಡಿಯ ತಾಯಿ ಹೆಸರಿನಲ್ಲಿ, ಸೈಯದ್ ಸಾಬನ ತಾಯಿ ಹೆಸರಿನಲ್ಲಿ, ಸೋಮನಗೌಡನ ಈರಮ್ಮ ಎಂಬ ಹೆಸರಿನಲ್ಲಿ ಹಾಗೂ ಇತರ 9 ಜನರ ಹೆಸರಿನಲ್ಲಿ ದಾಖಲೆ ಸೃಷ್ಟಿಸಿದ್ದಾನೆ.

ಸತ್ಯಪ್ರಿಯ ರಾಮಚಂದ್ರನಿಗೆ 'ದೈವದಾನ' ...ದಿದವರಿಗೂ, ಅವರ ಮಕ್ಕಳ ಹೆಸರಿಗೂ ಭೂಮಿ ...ಡಿ ಹಣ ತೀರಿಸಿದ್ದಾನೆ. ಆದರೆ ಹಣ ಮಾತ್ರ ... ನುಂಗಿದ್ದಾನೆ. 1982-83ರಲ್ಲಿ ಮ್ಯುಟೇಷನ್ ರಿಜಿಸ್ಟರ್‌ನಲ್ಲಿ ಒಂಬತ್ತು ಜನರ ಹೆಸರು ಸೇರಿಸಿದ್ದಾನೆ.

ಅದೇ ರಿಜಿಸ್ಟರ್‌ನಲ್ಲಿ 35 ರೈತರ ಹೆಸರು ಇರುವ ಕೈ ಬರಹ ಮತ್ತು ಈ 9 ಜನರ ಹೆಸರು ಬರೆದ ಕೈ ಬರಹಕ್ಕೂ ಅಜಗಜಾಂತರ ವ್ಯತ್ಯಾಸವಿದ್ದು, ಹಗರಣ ಮಾಡಿರುವುದು ಮೇಲ್ನೋಟಕ್ಕೆ ಸರಳವಾಗಿ ಕಂಡು ಬರುತ್ತಿದೆ.

ಇಷ್ಟೆಲ್ಲ ಮಾಡಿದ ಮೇಲೆ, ಅದೇ ಕಳ್ಳ ತಹಶೀಲ್ದಾರ ಕೃಷ್ಣ ಗುಜ್ಜರ ಈ ಭೂಮಿಯನ್ನು ಮಾರಾಟ ಮಾಡುವ ಪರವಾನಗಿಯನ್ನು ನೀಡಿದ್ದಾನೆ. ಇದೆಲ್ಲ ಮಾಡಿದ್ದು ಆಗತಾನೆ ದೇಶಪಾಂಡೆಯ ಕಾರ್ಖಾನೆ ಮತ್ತು ಆನಂದ್‌ಸಿಂಗ್ ತೋಟದ ಪಕ್ಕದಲ್ಲಿ ಅಮರಿಕೊಳ್ಳುತ್ತಿದ್ದ 'ಹಂಪಿ ಸ್ಟೀಲ್' ಎಂಬ ಕಾರ್ಖಾನೆಗೆ. ಸದರಿ ಭೂಮಿ ಮಾರಾಟವಾಗಿರಲಿಲ್ಲ, ಆದರೆ ಭೂಮಿ ಖರೀದಿಸಿದ ಹಂಪಿ ಸ್ಟೀಲ್ ಕಾರ್ಖಾನೆ ಬಾಗಿಲು ತೆರೆಯದೇ ಅದೇ ಭೂಮಿಯನ್ನು ಚೀನಾ ಮೂಲದ x-india ಎಂಬ ಕಂಪೆನಿಗೆ ಮಾರಿದಾಗ ಇವರು ನುಸುಳಿ ಕೆಐಎಡಿಬಿ ಮೂಲಕ ಎಕರೆಗೆ 3 ಲಕ್ಷ ರೂ. ಪಡೆದರು.

1982ರಲ್ಲಿ ರೈತರಿಂದ ಸರ್ಕಾರ ಕಸಿದುಕೊಂಡ ಭೂಮಿಗೆ ದಾಖಲೆ ಸೃಷ್ಟಿಸಿ, ಸರ್ವೆ ಮಾಡಿ, ಕೆಐಎಡಿಬಿ ಮೂಲಕ ಕಾರ್ಖಾನೆಗೆ ಮಾರಿ ಅದರ ಹಣವನ್ನು ಚೆಕ್ ಮೂಲಕ ಪಡೆದುಕೊಂಡ ಮೇಲೇಯೇ ಈ ಹಗರಣ ಬಯಲಾಗಿದೆ.

ಆದರೆ ಈ ಖದೀಮರು ಭೂಮಿ ಮಾರಾಟ ಮಾಡಲು ವಾಸಸ್ಥಳ ಪ್ರಮಾಣ ಪಾತ್ರ ಅವಶ್ಯಕತೆ ಬಿದ್ದಾಗ ಕುಣಿಕೇರಿ ಗ್ರಾಮ ಪಂಚಾಯತಿಯ ಲಂಚಕೋರ ಅಧ್ಯಕ್ಷ ಈರಪ್ಪ ಕುರುಬರನ ಬಾಯಿಗೆ ಒಂದಿಷ್ಟು ಸಗಣಿ ತುರುಕಿ ಒಂಬತ್ತು ಜನರ ಹೆಸರಿಗೆ ವಾಸಸ್ಥಳ ಪ್ರಮಾಣಪತ್ರ ಹೊಡಕೊಂಡು ಬಿಟ್ಟಿದ್ದಾರೆ. ಹಿಂದೊಮ್ಮೆ ಇದೇ ರಾಮಚಂದ್ರ ದೇವಲಾಪುರ ಗ್ರಾಮದ ಕಿನ್ನಾಳ ಗಂಗಾವತಿ ಕ್ಷೇತ್ರಕ್ಕೆ ಸೇರಿದ್ದರಿಂದ ಅಲ್ಲಿಯ ಶಾಸಕ ಪರಣ್ಣ ಅಂಗಿ ಚುಂಗು ಹಿಡಿದು ತಿರುಗುತ್ತಾ ಅಕ್ರಮ-ಸಕ್ರಮ ಸಮಿತಿಗೆ ಅಮರಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಇವನ ಬಗ್ಗೆ ಎಚ್ಚರಗೊಳ್ಳದೇ ಹೋದರೆ ನಾಳೆ ಇವನು ಪರಣ್ಣನ ಮನೆ, ಮಿಲ್‌ಗೂ ತನ್ನದೇ ದಾಖಲೆ ಸೃಷ್ಟಿಸಿ ಮಾರಿಬಿಡಬಲ್ಲ.


ಅಣೆಕಟ್ಟೆಗೆ ಹೆಚ್ಚೆಚ್ಚು ಭೂಮಿ ಕಳೆದುಕೊಂಡು ಸರ್ಕಾರದಿಂದ ಭಿಕ್ಷೆ ತರಹ 5 ಎಕರೆ ಪಡೆದು ಬವಣೆ ಪಡುತ್ತಿದ್ದ ರೈತರ ಪಾಲಿನ ಭೂಮಿ ನುಂಗಿರುವ 9 ಜನರನ್ನು, ರಾಮಚಂದ್ರ ಚಿತ್ರಗಾರ, ಸರ್ವೆ ಇಲಾಖೆಯ ರಾಮಕೃಷ್ಣ, ನಿವೃತ್ತ ತಹಶೀಲ್ದಾರ ಕೃಷ್ಣ ಗುಜ್ಜರನನ್ನು ಜೈಲಿಗಟ್ಟಬೇಕು. ಅದಕ್ಕೂ ಮುನ್ನ ಇದೆಲ್ಲ ತನಿಖೆ ಆಗಬೇಕು. ಅದು ಸಾಧ್ಯವಿರುವುದು 'ಗಂಡು ಮಗಳು', ಅಂದ್ರೆ ಎ.ಸಿ. ಗಂಗೂಬಾಯಿ ಮಾನ್ಕರ್‌ರಿಂದ ಮಾತ್ರ. ಆದಷ್ಟು ಬೇಗ ಕೆಲಸ ಆರಂಭವಾಗಲಿ! ಸದ್ಯಕ್ಕೆ ಬಗನಾಳ ರೈತರು ಪ್ರತಿಭಟನೆಗೆ ಇಳಿಯಲಿದ್ದಾರೆ.

■ ವರದಿಗಾರ

ಭೂಗಳ್ಳರ ಹೆಸರು

1. ರಮೇಶ್ ರೆಡ್ಡಿ ಚಿಕ್ಕಬಗನಾಳ
2. ಸೈಯದ್ ಸಾಬ ಬೇಟಗೇರಿ
3. ಸೋಮನಗೌಡ ಮಾಲಿ ಪಾಟೀಲ
4. ರೇಣುಕಪ್ಪ ಗ್ಯಾನಪ್ಪ
5. ಪಾರ್ವತಮ್ಮ ಭೀಮಪ್ಪ ಕುರುಬರ
6. ಮಲ್ಲಪ್ಪ ಅಂದಪ್ಪ ಕುರುಬರ
7. ಪದ್ಮಾವತಿ ವೆಂಕಪ್ಪ ಕ್ಷತ್ರಿಯರು
8. ಪಾರಮ್ಮ ಭೀಮಪ್ಪ ಕುರುಬರ
9. ಹುಚ್ಚಪ್ಪ ತಂದೆ ಬಸಪ್ಪ
10. ಮೋಹನ ತಂದೆ ಸೋಮಪ್ಪ
11. ಸರೋಜ ಗಂಡ ಭಾಸ್ಕರ್

ಕೊಳ್ಳೇಗಾಲ: ಎಸ್ಸೈ ಪುಟ್ಟನಂಜಯ್ಯನಿಗೆ ಇನ್ನೆಷ್ಟು ಜನ ಬಲಿಯಾಗಬೇಕು?


ಪುಟ್ಟನಂಜಯ್ಯ ಯಳಂದೂರು ಪಿಎಸ್ಸೈ

ಈತನ ಹೆಸರು ಪುಟ್ಟನಂಜಯ್ಯ. ಸದ್ಯಕ್ಕೆ ಯಳಂದೂರು ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ. ನಿವೃತ್ತಿಯಾಗುವುದಕ್ಕೆ ಇನ್ನೇನು ಎರಡು ವರ್ಷ ಬಾಕಿಯಿದೆ. ವೃತ್ತಿಯಲ್ಲಿರುವಾಗಲೇ ಸಾಕಷ್ಟು ಮೇಯ್ದು ಕೊಬ್ಬಿಕೊಳ್ಳಬೇಕು ಎಂದುಕೊಂಡು ಯಳಂದೂರಿನ ಜನರನ್ನು ಸುಲಿಯುವುದಕ್ಕೆ ನಿಂತಿರುವ ಪುಣ್ಯಾತ್ಮ. ಇವನ ಕಾಟ ತಾಳಲಾರದೇ ಒಂದಿಷ್ಟು ಜನ ಆತ್ಮಹತ್ಯೆ ಮಾಡಿಕೊಂಡಾಗಿದೆ. ಎರಡು ವರ್ಷದಲ್ಲಿ ಇನ್ನೆಷ್ಟು ಅಮಾಯಕರು ಬಲಿಯಾಗಬೇಕಿದೆಯೋ ಗೊತ್ತಿಲ್ಲ. ಆದರೆ ಶಾಸಕ ಧ್ರುವನಾರಾಯಣ್ ಮಾತ್ರ ಕಣ್ಣಿದ್ದೂ ಕುರುಡರಂತೆ, ಬಾಯಿದ್ದು ಮೂಗರಂತೆ ಕಂಬಳಿ ಹೊದ್ದುಕೊಂಡು ಬೆಚ್ಚಗೆ ಮಲಗಿಬಿಟ್ಟಿದ್ದಾರೆ.


ಧ್ರುವನಾರಾಯಣ್

ಈಗ್ಗೆ ಎಂಟು ತಿಂಗಳ ಹಿಂದೆ ಪುಟ್ಟನಂಜಯ್ಯ ಎಚ್.ಡಿ.ಕೋಟೆಯ ಸರಗೂರಿನ ಠಾಣೆಯಲ್ಲಿದ್ದ. ಅಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಮಾಡಬಾರದ ಹಲ್ಕಟ್ ಕೆಲಸಗಳನ್ನೆಲ್ಲಾ ಮಾಡಿ, ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದು ಫನಿಶ್‌ಮೆಂಟ್‌ಗಾಗಿ ಟ್ರಾನ್ಸ್‌ಫರ್ ಆಗಿ ಯಳಂದೂರೆಂಬ ಬರ ಸೀಮೆಗೆ ಬಂದ. ಅವನಿಗೇನೋ ಫನಿಶ್‌ಮೆಂಟು. ಆದರೆ ಯಳಂದೂರಿನ ಜನರಿಗೆ? ಯಾವುದೇ ತಪ್ಪು ಮಾಡದ ಯಳಂದೂರಿನ ಅಮಾಯಕರಿಗೂ ಇದೊಂಥರಾ ಫನಿಶ್‌ಮೆಂಟೆ.

ಬಂದ ಹೊಸತರಲ್ಲಿ ಸಿನಿಮಾದ ಎಸ್ಸೈಗಳಂತೆ ಭಾರಿ ಪೋಜು ಕೊಟ್ಟ. ಆದರೆ, ಅವನೊಳಗಿದ್ದ ಲಂಚಬಾಕ ಹೊರಗೆ ಕಾಣಿಸಿಕೊಳ್ಳುವುದಕ್ಕೆ ಜಾಸ್ತಿ ದಿನ ಬೇಕಾಗಲಿಲ್ಲ. ಸುಮ್ಮನೇ ಪರೀಕ್ಷೆ ಮಾಡುವುದಕ್ಕಾಗಿ ಒಂದು ಕಂಪ್ಲೇಂಟ್ ಹಿಡಿದುಕೊಂಡು ಯಳಂದೂರು ಠಾಣೆಗೆ ಬನ್ನಿ. ಈತ ಹೇಗೆ ಕಂಪ್ಲೇಂಟ್ ಕೊಡಲು ಬರುವ ಅಮಾಯಕರನ್ನು ಸುಲಿಯುತ್ತಾನೆ ಎಂಬುದರ ಸ್ಥೂಲ ಚಿತ್ರಣ ಸಿಕ್ಕುಬಿಡುತ್ತೆ.


ಯಳಂದೂರು ಪಿಎಸ್ಸೈ ಪುಟ್ಟನಂಜಯ್ಯ ವಿರುದ್ಧ ಯರಿಯೂರು ಗ್ರಾಮಸ್ಥರಿಂದ ಪ್ರತಿಭಟನೆ

ಯಳಂದೂರಿನಲ್ಲಿರುವ ಐದು ಬಾರ್ ಮಾಲಿಕರನ್ನು ಬೆದರಿಸಿ ಪ್ರತಿ ತಿಂಗಳು ಐದೈದು ಸಾವಿರ ಕೊಡಬೇಕೆಂದು ಕಟ್ಟಪ್ಪಣೆ ಮಾಡಿದ್ದಾನೆ. ವೈನ್ ಶಾಪುಗಳ ಓನರ್‌ಗಳು ನೀಡುವ ಕಾಣಿಕೆಗೆ ಪ್ರತಿಯಾಗಿ ಅವರ ಸೆಕೆಂಡ್ಸ್ ದಂಧೆಗೆ ಬೆಂಗಾವಲಾಗಿ ನಿಲ್ಲುತ್ತೇನೆಂದು ಭರವಸೆ ಕೊಟ್ಟಿದ್ದಾನೆ. ಖುದ್ದು ಎಸ್ಸೈ ಬೆನ್ನಿಗೆ ನಿಂತ ಮೇಲೆ ಈ ವೈನ್‌ಶಾಪ್ ಮಾಲಿಕರನ್ನು ಕೇಳಬೇಕೆ? ಯಳಂದೂರು ತಾಲ್ಲೂಕಿನ ಪ್ರತೀ ಹಳ್ಳಿಗಳಿಗೂ ತಾವೇ ತಯಾರಿಸಿದ ನಕಲಿ ಹೆಂಡವನ್ನು ಸರಬರಾಜು ಮಾಡುತ್ತಿದ್ದಾರೆ. ಇದಕ್ಕೆ ಯಾವ ಅಡೆತಡೆಯೂ ಬಾರದಂತೆ ಖುದ್ದು ಎಸ್ಸೈ ಪುಟ್ಟನಂಜಯ್ಯ ಕಾವಲಿಗೆ ನಿಂತಿದ್ದಾನೆ. ಇನ್ನೊಂದೆಡೆ ಯಳಂದೂರಿನ ಬಳೆಪೇಟೆಯ ಸಿದ್ಧಶೆಟ್ಟಿ ಎಂಬುವವನ ತೋಟದ ಮನೆ ಅಪ್ಪಟ ಇಸ್ಪೀಟ್ ಅಡ್ಡೆಯಾಗಿದ್ದು ಅಲ್ಲಿಂದ ಏನಿಲ್ಲವೆಂದರೂ ಪ್ರತಿ ತಿಂಗಳು 30 ಸಾವಿರ ಕಾಣಿಕೆ ಬರುವಂತೆ ವ್ಯವಸ್ಥೆ ಮಾಡಿಕೊಂಡಿದ್ದಾನೆ. ಅದಕ್ಕೂ ವಾಚ್‌ಮನ್ ಆಗಿ ರಕ್ಷಣೆ ಕೊಡುತ್ತಿದ್ದಾನೆ.

ಪುಟ್ಟನಂಜಯ್ಯನ ಕಮಾಯಿ ಪುರಾಣ ಇಷ್ಟಕ್ಕೇ ನಿಲ್ಲುವುದಿಲ್ಲ. ರಸ್ತೆಯಲ್ಲಿ ಓಡಾಡುವ ವಾಹನಗಳಿಂದಲೂ ಭರ್ಜರಿಯಾಗಿ ಸುಲಿಯುತ್ತಿದ್ದಾನೆ. ಚಾಮರಾಜನಗರದಿಂದ ಕೊಳ್ಳೆಗಾಲಕ್ಕೆ ಬರುವ ವಾಹನಗಳು ಯಳಂದೂರು ಮಾರ್ಗವಾಗಿಯೇ ಬರಬೇಕು. ಈ ಮಾರ್ಗದಲ್ಲಿ ದಿನಕ್ಕೆ ಸುಮಾರು 150 ರಿಂದ 200 ಖಾಸಗಿ ಬಸ್‌ಗಳು ಓಡಾಡುತ್ತವೆ. ಅವೆಲ್ಲವಕ್ಕೂ ಮಂತ್ಲಿ ಫಿಕ್ಸ್ ಮಾಡಿರುವ ಪುಟ್ಟನಂಜಯ್ಯ ಏನಿಲ್ಲವೆಂದರೂ ಪ್ರತಿ ತಿಂಗಳು 20 ರಿಂದ 30 ಸಾವಿರ ಸುಲಿಯುತ್ತಾನೆ. ಯಳಂದೂರಿನಿಂದ ಬಿಳಿಗಿರಿರಂಗನಬೆಟ್ಟಕ್ಕೆ ಸಂಚರಿಸುವ ಟೆಂಪೋಗಳಿಂದ ದುಡ್ಡು ಸುಲಿಯುವುದಕ್ಕಾಗಿ ಸೂತ್ರನಾಯಕ ಎಂಬ ಪೇದೆಯನ್ನು ಬಿಳಿಗಿರಿರಂಗನ ಬೆಟ್ಟದ ಚೆಕ್‌ಪೋಸ್ಟ್‌ನಲ್ಲಿ ಪರ್ಮನೆಂಟಾಗಿ ಪ್ರತಿಷ್ಠಾಪಿಸಿದ್ದಾನೆ. ಬಿಳಿಗಿರಿರಂಗನ ಬೆಟ್ಟದಲ್ಲೂ ನಕಲಿ ಮದ್ಯ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗಿದ್ದು ಮದ್ಯ ಮಾರಾಟಗಾರರಿಂದ ವಾರಕ್ಕೆ ಇಂತಿಷ್ಟು ಎಂದು ಫಿಕ್ಸ್ ಮಾಡಿಕೊಂಡಿದ್ದಾನೆ.


ಪುಟ್ಟನಂಜಯ್ಯನಿಗೆ ಅದೆಂಥ ದುಡ್ಡಿನ ಹಸಿವಿದೆಯೆಂದರೆ ದುಡ್ಡಿಗಾಗಿ ಈತ ಎಂಥ ಕೆಲಸಕ್ಕೂ ಕೈಹಾಕುತ್ತಾನೆ. ಇತ್ತೀಚೆಗೆ ತನ್ನ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಯರಿಯೂರು ಎಂಬ ಗ್ರಾಮದಲ್ಲಿ ಬಡ್ಡಿ ರಮೇಶ್ ಎಂಬ ದುಡ್ಡಿನ ಕುಳ ನಂಜುಂಡಸ್ವಾಮಿ ಎಂಬ ಬಡ ದಲಿತನನ್ನು ಕೊಚ್ಚಿ ಕೊಲೆ ಮಾಡಿ ಶವವನ್ನು ಸುವರ್ಣಾವತಿ ನದಿಯಲ್ಲಿ ಬಿಸಾಡಿದ್ದ. ಇಡೀ ಗ್ರಾಮವೇ ಬಂದು ಕೊಲೆ ಮಾಡಿದ್ದು ಬಡ್ಡಿ ರಮೇಶನೇ ಎಂದು ಕಂಪ್ಲೇಂಟ್ ಕೊಟ್ಟಿತ್ತು. ಬಡ್ಡಿ ರಮೇಶ್ ದುಡ್ಡಿನ ಗಣಿ ಎಂಬುದು ಗೊತ್ತಾಗುತ್ತಿದ್ದಂತೆಯೇ ಅವನೊಂದಿಗೆ ಡೀಲ್ ಕುದುರಿಸಿಕೊಂಡ ಪುಟ್ಟನಂಜಯ್ಯ ಹತ್ತಿರ ಹತ್ತಿರ ಒಂದು ಲಕ್ಷ ದುಡ್ಡು ಪಡೆದು ಬಡ್ಡಿ ರಮೇಶ್‌ನನ್ನು ಬಚಾವ್ ಮಾಡಲು ಹೊರಟ. ಇದು ಯರಿಯೂರಿನ ಜನಕ್ಕೆ ಗೊತ್ತಾಗಿದ್ದೇ ತಡ, ಇಡೀ ಗ್ರಾಮದ ಜನರೆಲ್ಲರೂ ಯಳಂದೂರಿನ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಪುಟ್ಟನಂಜಯ್ಯನನ್ನು ಅಟಕಾಯಿಸಿಕೊಂಡರು. ಇನ್ನೇನು ತನ್ನ ಚೆಡ್ಡಿ ಕಳಚುವುದು ಗ್ಯಾರಂಟಿಯಾಗುತ್ತಿದ್ದಂತೆಯೇ ಕೊಲೆಪಾತಕಿ ಬಡ್ಡಿ ರಮೇಶ ನನ್ನು ಬಂಧಿಸಿ ಸುಲಭವಾಗಿ ಜಾಮೀನು ಸಿಗುವಂತೆ ಎಫ್‌ಐಆರ್ ಬರೆದು ನ್ಯಾಯಾಲಯಕ್ಕೆ ಒಪ್ಪಿಸಿದ್ದಾನೆ.

ಇಲ್ಲೊಂದು ವಿಚಾರವನ್ನು ಹೇಳಲೇಬೇಕು. ಕೊಲೆಯಾದ ನಂಜುಂಡಸ್ವಾಮಿ ಒಬ್ಬ ದಲಿತ. ಎಸ್ಸೈ ಪುಟ್ಟನಂಜಯ್ಯ ಕೂಡ ದಲಿತನೇ. ದಲಿತನೊಬ್ಬನ ಕೊಲೆಯಾದಾಗ ಕೊಲೆ ಮಾಡಿದವರ ಮೇಲೆ ಕಾನೂನುಕ್ರಮ ಜರುಗಿಸಿ ದಲಿತ ಸಮುದಾಯಕ್ಕೆ ನ್ಯಾಯ ಒದಗಿಸಬೇಕಿದ್ದ ಪುಟ್ಟನಂಜಯ್ಯ ಕೊಲೆಗಾರನೊಂದಿಗೆ ಶಾಮೀಲಾಗುತ್ತಾನೆ ಎಂದರೆ ಇವನ ದುಡ್ಡಿನ ಹಸಿವು ಎಷ್ಟಿದೆ ಎಂಬುದು ಅರ್ಥವಾಗುತ್ತದೆ.

ಇದಕ್ಕೂ ಮೊದಲು ನಡೆದ ಇನ್ನೊಂದು ಘಟನೆಯನ್ನು ನೋಡಿ. ಗಣಗನೂರು ಎಂಬ ಊರಿನಲ್ಲಿದ್ದ ಒಂದೇ ಒಂದು ಆಚಾರರ ಕುಟುಂಬದಲ್ಲಿ ಮಹಿಳೆಯೊಬ್ಬಳು ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಳು. ತನಗಿದ್ದ ಭಯಾನಕ ಕಾಯಿಲೆಯಿಂದ ತತ್ತರಿಸಿದ್ದ ಹುಡುಗಿ ಅಂತಿಮವಾಗಿ ಆತ್ಮಹತ್ಯೆಗೆ ಶರಣಾಗಿದ್ದಾಳೆ ಎಂದು ಇಡೀ ಊರಿಗೆ ಊರೇ ಹೇಳುತ್ತದೆ. ಆದರೆ, ಅದನ್ನು ಕೇಳುವ ವ್ಯವಧಾನ ಪುಟ್ಟನಂಜಯ್ಯನಂತಹ ಜನಕಂಟಕರಿಗೆ, ಧನದಾಹಿಗಳಿಗೆಲ್ಲಿರಬೇಕು? ಶವಪರೀಕ್ಷೆ ನಡೆಸಿದ ಪುಟ್ಟನಂಜಯ್ಯ ನಂತರ ಈಗಾಗಲೇ ಮಗಳ ಆತ್ಮಹತ್ಯೆಯಿಂದ ಜರ್ಜರಿತವಾಗಿದ್ದ ಆಕೆಯ ತಂದೆಯನ್ನು ಅಮರಿಕೊಂಡ; ನಿನ್ನ ಮಗಳನ್ನು ನೀನೇ ಕೊಲೆ ಮಾಡಿದ್ದೀಯ ಎಂದು ಕೇಸು ಹಾಕಿ ಜೈಲಿಗೆ ತಳ್ಳುತ್ತೇನೆಂದು ಆ ಬಡ ತಂದೆಯನ್ನು ಪೀಡಿಸಿದ. ಒಂದೆಡೆ ಮಗಳನ್ನು ಕಳೆದುಕೊಂಡ ನೋವು. ಇನ್ನೊಂದೆಡೆ ಧನದಾಹಿ ಪುಟ್ಟನಂಜಯ್ಯನ ಬ್ಲಾಕ್‌ಮೇಲ್. ಅಷ್ಟು ಸಾಕಿತ್ತು ಆ ನೊಂದ ಜೀವಕ್ಕೆ. ಹಿಂದು ಮುಂದು ನೋಡದೇ ಆತನೂ ನೇಣಿಗೆ ಕೊರಳೊಡ್ಡಿದ.

ಯಳಂದೂರಿನ ಜನರ ತಾಳ್ಮೆಯೂ ಈಗ ಕಟ್ಟೆಯೊಡೆಯುವ ಹಂತಕ್ಕೆ ಬಂದಿದೆ. ಅವರ ಸಿಟ್ಟೇನಾದರೂ ರಟ್ಟೆಗೆ ಬಂದರೆ ಪುಟ್ಟನಂಜಯ್ಯ ರಿಟೈರ್ ಆಗೋವರೆಗೂ ಇರುವುದೇ ಡೌಟ್ ಆಗಿದೆ. ಆತ ಈಗಲಾದರೂ ಎಚ್ಚೆತ್ತುಕೊಂಡು ತನ್ನ ಕೆಲಸ ನಿರ್ವಹಿಸಿದರೆ ಆತನಿಗೇ ಒಳ್ಳೆಯದು.

■ ಕೊಳ್ಳೇಗಾಲ ಮಾಳಿಗೆ



ಲೇಖಕರು : ಡಾ. ಅಪ್ಪಗೆರೆ ಸೋಮಶೇಖರ್
ಪ್ರಕಾಶಕರು : ನಂದಿ ಬುಕ್‌ಹೌಸ್
ಪುಟಗಳು : 332
ಬೆಲೆ : 190/-

ದಮನಿತ ಪರಂಪರೆಯ ಅರ್ಥಪೂರ್ಣ ದಾಖಲೆ

ಪುಸ್ತಕ ವಿಮರ್ಶೆ

■ ವೀರಣ್ಣ ಮಡಿವಾಳರ

ಮನುಷ್ಯನಿಗೆ ಚೇತನ, ಬೌದ್ಧಿಕತೆ ಇದ್ದರೆ ಮಾತ್ರ ಸಾಲದು. ತನ್ನನ್ನು ಬೆಳಗಿಸಿಕೊಳ್ಳುವ ಬೆಳಕನ್ನು ಕೂಡಾ ಹೊಂದಿರಬೇಕೆನ್ನುವ ವಿಶಿಷ್ಟ ದನಿಗಳನ್ನು ಒಡಲಾಗಿಸಿಕೊಂಡ 'ಬಯಲ ಬೆಳಕು' ಮೂಡ್ನಾಕೂಡು ಚಿನ್ನಸ್ವಾಮಿಯವರ ಸಾಹಿತ್ಯಾನುಸಂಧಾನದ ಸುತ್ತ ದಮನಿತ ಪರಂಪರೆಯ ಕುರಿತಾದ ಭಿನ್ನವಿಭಿನ್ನ ಆಲೋಚನಾ ಕ್ರಮಗಳನ್ನು, ಸ್ಪಷ್ಟ ಒಳನೋಟಗಳನ್ನು ದಾಖಲಿಸುವ ಪ್ರಯತ್ನ ಮಾಡುತ್ತದೆ. ಈ ದೃಷ್ಟಿಯ ಅವಲೋಕನ ಸಾಧ್ಯವಾಗುವುದರಿಂದಲೇ ಮೂಡ್ನಾಕೂಡು ಚಿನ್ನಸ್ವಾಮಿ ಒಂದು ಪರಂಪರೆಯ ಭಿನ್ನ ದನಿಯಾಗಿ, ಅರ್ಥಪೂರ್ಣ ಅಭಿವ್ಯಕ್ತಿಯ ಅನನ್ಯರೂಪವಾಗಿ ಕಾಣಿಸುತ್ತಾರೆ.

ಇಲ್ಲಿ ವ್ಯಕ್ತಗೊಂಡಿರುವ ಕನ್ನಡದ ಮುಖ್ಯದನಿಗಳು ಮಾಡಿರುವ ಪರಿಗಣಿತ ಕಾರ್ಯವೆಂದರೆ ಕನ್ನಡದ ದೇಸಿ ಸಂವೇದನೆಯ ನೆಲದ ಛಾಯೆಯಾಗಿ ಸಮುದಾಯದ ದನಿಯಾದ ಒಬ್ಬ ಕವಿಯನ್ನು ಮಾತ್ರ ಮುಖ್ಯವಾಗಿಸಿ ಕೊಳ್ಳದೆ, ಆ ನಿಟ್ಟಿನಲ್ಲಿ ಸಾಧ್ಯವಾಗಬಹುದಾದ ಎಪ್ಪತ್ತರ ದಶಕದ ನಂತರದ ಕಾಲಘಟ್ಟವನ್ನು ವಾಸ್ತವ ಸತ್ಯಗಳಿಗೆ ಸಾಕ್ಷಿಯಾಗಿ ನಿಂತು ದಾಖಲಿಸುತ್ತಾ ನಡೆದಿರುವುದು. ಹೀಗಾದುದರಿಂದಲೇ ಈ ಕೃತಿ, ಈ ಸಂದರ್ಭದ ಮೌಲಿಕ ರೂಪ.

ಶ್ರಮದ ಬೇಡಿನ ಸಾಂಸ್ಕೃತಿಕ ಮೌಲ್ಯದ ಕುರಿತು ಗಮನಸೆಳೆಯುತ್ತಾ ಹೆಚ್.ಗೋವಿಂದಯ್ಯ "ನಮ್ಮ ದಲಿತರು, ಕೆಳಜಾತಿಯವರು ಬೌದ್ಧಿಕವಾಗಿ ಬರೆಯದಿದ್ದರೂ, ಆಧ್ಯಾತ್ಮಿಕವಾಗಿ ಅತ್ಯಂತ ಶ್ರೀಮಂತರು. ಆಧ್ಯಾತ್ಮಿಕತೆಯನ್ನು ಮತ್ತು ನಿಜವಾದ ಬೌದ್ಧಿಕತೆಯನ್ನು ಬೆಸೆದಾಗ ಮಾತ್ರ, ಈ ಮುಳುಗಿಹೋಗಿರುವ ಸರಳವಾದ ಉತ್ಕ್ರಾಂತಿಯನ್ನು, ಸಾಂಸ್ಕೃತಿಕ ಸಾಮ್ರಾಜ್ಯವನ್ನು ಎತ್ತಿ ತರಲಿಕ್ಕೆ ಸಾಧ್ಯವೇನೋ?" ಎನ್ನುತ್ತಾರೆ. ಈ ತಿಳಿವಿನ ಹರವು ಇಂದಿನ ಬರಹ ಸಮೂಹಕ್ಕೆ ಸ್ಪಷ್ಟ ದಿಕ್ಕುಗಳನ್ನು ತೋರಿಸುತ್ತದೆ. ಇದೇ ನಡೆಯಲ್ಲಿ ಅಮರೇಶ ನುಗಡೋಣಿ "ಯಾವುದೇ ಧರ್ಮವಿರಲಿ, ಆ ಧರ್ಮದಲ್ಲಿ ಮನೆ ಮಾಡಿಕೊಂಡಿರುವ ಆಚರಣೆ, ಪದ್ಧತಿ, ನಂಬಿಕೆಗಳನ್ನೇ ಆಧರಿಸಿರುವುದಕ್ಕಿಂತ, ಆ ಧರ್ಮದ ಒಡಲಲ್ಲಿರುವ ಆಧ್ಯಾತ್ಮಿಕ ಚೈತನ್ಯವನ್ನು ಆಧರಿಸಿ ಬದುಕುವುದನ್ನು ಕಲಿಯಬೇಕು" ಎನ್ನುತ್ತಾ ಸೆಕ್ಯುಲರ್ ಸಮಾಜದ ಅಗತ್ಯಗಳ ಕುರಿತು ಗಮನ ಸೆಳೆಯುತ್ತಾರೆ. ಈ ರೀತಿಯ ಪ್ರಾಜ್ಞ ಚಿಂತನೆಗಳು ಈ ಸಂದರ್ಭದ ಕೋಮುವಾದದ ಕರಾಳತೆಯನ್ನು, ಮೂಲಭೂತತೆಯ ಮೂಢತೆಯನ್ನು ನಿಖರವಾಗಿ ಗುರುತಿಸಿಕೊಂಡು ಜನ ಸಮುದಾಯಕ್ಕೆ'ಅನುಭಾವ'ವನ್ನು ಅರ್ಥೈಸುತ್ತವೆ.

ಮೂಡ್ನಾಕೂಡು ಚಿನ್ನಸ್ವಾಮಿಯವರ ಕಾವ್ಯದ ಕುರಿತ ಇಲ್ಲಿನ ಆಖ್ಯಾನಗಳು ಒಂದಕ್ಕಿಂತ ಮತ್ತೊಂದು ಕಾವ್ಯದ ಉತ್ಕೃಷ್ಟತೆಯನ್ನು ವ್ಯಾಖ್ಯಾನಿಸುತ್ತಾ ಸಾಗುತ್ತವೆ. ಸಿದ್ಧಲಿಂಗಯ್ಯ "ಲೋಕವನ್ನು ಬುದ್ಧಿ ಪ್ರಧಾನವಾಗಿ ಗ್ರಹಿಸುವ ಕ್ರಮ"ವೆಂದು ಗುರುತಿಸಿದರೆ, ಚೆನ್ನವೀರ ಕಣವಿ "ಭಾವನೆ ಮತ್ತು ಚಿಂತನೆಗಳ ಸಾಮರಸ್ಯವನ್ನು ಸಾಧಿಸುವ ಪ್ರಯತ್ನ" ಎನ್ನುತ್ತಾರೆ. "ಖಡ್ಗವಾಗಲಿ ಕಾವ್ಯ ಎಂಬ ಕರೆಯನ್ನು ಅವರು ಕೇಳಿದ್ದರಾದರೂ ಅದರ ಮೊಳಗು ಅವರ ಕಾವ್ಯ ವನ್ನು ರೂಪಿಸಲಿಲ್ಲ" ಎಂಬುದು ಜಿ.ಎಸ್. ಆಮೂರರ ಗ್ರಹಿಕೆ. ಹೀಗೆ ಚಿನ್ನಸ್ವಾಮಿಯವರ ಕಾವ್ಯ ಒಂದು ಪ್ರೌಢ ಮನಸ್ಥಿತಿಯ ಚಿಂತನೆಯ ಭಾಗವಾಗಿ ಒಡಮೂಡಿದರೆ, ಇನ್ನೊಂದೆಡೆ ವಿನಯದ ಮೂಲಕ ಕಂಡುಕೊಳ್ಳುವ ನವೀನ ದನಿಯಾಗಿ ಗೋಚರಿಸುತ್ತದೆ.

ನೆಲದ ಸಂಕಟಗಳಿಗೆ ಸೃಜನಶೀಲ ರೂಪಕವಾಗಿ "ಕೀವು ತುಂಬಿದ ಕಾಲಿಗೆ ಇರುವೆಗಳನ್ನು ಬಿಡುವ" ಶೋಷಕ ವ್ಯವಸ್ಥೆಯ ತುಳಿತದ ತಾರತಮ್ಯಗಳನ್ನು ಸಂಯಮದಿಂದ ಪ್ರತಿರೋಧಿಸುವುದರಿಂದ ಮೂಡ್ನಾಕೂಡು ಕನ್ನಡದ ಮುಖ್ಯ ದನಿಯೇ. ಚಿನ್ನಸ್ವಾಮಿಯವರ ಕಾವ್ಯದ ಒಳತೋಟಿಯ ಕ್ರಾಂತಿಯಾಗಲೀ, ಪುರಾಣ ಭಂಜನ ಕ್ರಿಯೆಯಾಗಲೀ ಯಾತನಾಮಯವಾದ ನೆನಪುಗಳನ್ನು ವಿಶಿಷ್ಟ ಧಾಟಿಯಲ್ಲಿ ಓದುಗರಿಗೆ ತಲುಪಿಸುವ ಹೊಸ ದೊಂದು ಕ್ರಮವೇ ಸರಿ. "ನಾನೊಂದು ಮರವಾಗಿದ್ದರೆ ಸಂಕಲನದ ಕವಿತೆ ಜಾತಿ ವ್ಯವಸ್ಥೆಯನ್ನು ಅನುಭಾವದ ನೆಲೆಯಲ್ಲಿ ನಿರಾಕರಿಸುತ್ತವೆ. ತಮ್ಮ ಸಿಟ್ಟು, ಆಕ್ರೋಶಗಳನ್ನು ಕೆಳಕ್ಕೆ ತಳ್ಳಿ, ವಿಸ್ತಾರವಾದ ಪ್ರೀತಿಯ ಕಡೆಗೆ ತುಡಿಯುತ್ತದೆ" ಎಂದು ಐ.ಜಿ. ಮ್ಯಾಗೇರಿ ವಸ್ತುನಿಷ್ಠವಾಗಿ ಗುರುತಿಸಿದ್ದಾರೆ. "ಆರೋಪ ಪ್ರತ್ಯಾರೋಪಗಳ ಹಂಗು ಹರಕೊಂಡಾಗ ಹುಟ್ಟುವ ವಿವೇಕ ಇಲ್ಲಿಯ ಕವಿತೆಗಳ ಒಡಲಾಗಿದೆ" ಎನ್ನುವ ಡಾ. ವಿನಯಾ ಕೋಮುವಾದವು ಜಾಗತೀಕರಣದ ಚುಂಗು ಹಿಡಿದು ಬೆಳೆಯುತ್ತಿರುವ ಗಳಿಗೆಗಳಲ್ಲಿ ಸೃಜನ ಶೀಲತೆ ಸಾಮಾಜಿಕ ವಿವೇಕವನ್ನು ಕಾಯ್ದುಕೊಳ್ಳುವ ಎಚ್ಚರ ವನ್ನು ನೆನಪಿಸುತ್ತಾರೆ. ಮಲ್ಲೇಪುರಂ ಜಿ. ವೆಂಕಟೇಶ್ "ಇಲ್ಲಿನ ಕವಿತೆಯ ಸೌಂದರ್ಯಾತ್ಮಕ ಭಾಷಿಕ ಲಯಗಳ ಅನುಕರಣ, ಯಾರಿಗಾದರೂ ಸಂತೋಷವನ್ನು ತಂದೀಯ ಬಲ್ಲವು. ಈ ಭಾಷಿಕ ಲಯಗಳು ಸಂಭ್ರಮದಿಂದ ಹುಟ್ಟಿಕೊಂಡವಲ್ಲ; ಆ ವಸ್ತು ಜಗತ್ತಿನ ಪ್ರತಿಮೆಗಳಿಂದ ಮೈದಾಳಿ ರೂಪಿತಗೊಂಡವು. ಇಲ್ಲಿನ ಕವಿತೆಗಳಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಧ್ಯಾನ ಒದಗಿದೆ. ಇಲ್ಲಿ ನಾದಲಯವು ವೈಚಾರಿಕ ಮತ್ತು ಸಾಂಸ್ಕೃತಿಕ ಅನು ಸಂಧಾನದಲ್ಲಿ ಮಾತ್ರ ಬೇರು ಬಿಟ್ಟಿವೆ" ಎನ್ನುವ ವಿಶ್ಲೇಷಣೆ. ಚಿನ್ನಸ್ವಾಮಿಯವರ ಕಾವ್ಯದ ಘನತೆಯ ಮಗ್ಗಲುಗಳನ್ನು ಸುಸಂಬದ್ಧವಾಗಿ ಚಿತ್ರಿಸುತ್ತದೆ.

"ಮೋಹದ ದೀಪ" ಕಥೆಗಳು ಹೇಳುವುದು ಹೊಸ ಕಾನೂನು, ಹೊಸ ವ್ಯವಸ್ಥೆಯ ಸಂಕೀರ್ಣತೆಯನ್ನು. ಇಲ್ಲಿಯ ಕಥೆಗಳು ಒಂದು ರೀತಿಯಲ್ಲಿ "ಸಾಂಸ್ಕೃತಿಕ ದಾಖಲಾತಿಗಳು" ಎನ್ನುವ ಅರಿವನ್ನು ನೀಡುವ ಈ ಕೃತಿ, ಮಾನವೀಯ ತೊಳಲಾಟವನ್ನು ಬಿಂಬಿಸುತ್ತಿರುವ ಕಾರಣಕ್ಕಾಗಿ ಮೋಹದ ದೀಪ ಏಕಕಾಲಕ್ಕೆ, ಒಂದು ದಲಿತ ಸಮುದಾಯದ ಆತ್ಮಕಥೆಯೂ ಆಗಬಹು ದೆಂಬುದು ನಮ್ಮ ಸದ್ಯದ ದೃಷ್ಟಿಯನ್ನು ಗಟ್ಟಿಗೊಳಿಸುತ್ತದೆ.

'ಬಯಲ ಬೆಳಕು' ಕೃತಿಯ ಸಮಗ್ರತೆ ಯಲ್ಲಡಗಿದ ಸೂಕ್ಷ್ಮಗಳನ್ನು ಗಮನಿಸಿದಾಗ ಕೆಲವು ಸ್ಪಷ್ಟ ಅಪಖ್ಯಾನಗಳು ಗೋಚರಿಸುತ್ತವೆ. ಇವು ನಮ್ಮ ಸಾಹಿತ್ಯಕ ವಲಯದ ಪರಿಚಿತವಿರುವ ಅವಗುಣಗಳೇ. ಪ್ರಜ್ಞೆಯಲ್ಲಿ ಎಚ್ಚರವಿದ್ದರೂ, ಅಪ್ರಜ್ಞೆಯಲ್ಲಾದರೂ ಉಳಿದಿರಬಹುದಾದ ವೈದಿಕ ದೃಷ್ಟಿಕೋನಗಳು ಇಲ್ಲಿವೆ. 'ಬಹುರೂಪಿ-ದಲಿತ ಭಗವದ್ಗೀತೆ' ಕುಸುಮಬಾಲೆ ದಲಿತ ಉಪನಿಷತ್ತು' ಎನ್ನುವ ಬ್ರಾಹ್ಮಣ್ಯದ ತಂತ್ರಗಳಿಗೇನು ಹೇಳುವುದು? ಬಹುರೂಪಿ ಯನ್ನು ಬಹುರೂಪಿಯಾಗಿ, ಕುಸುಮ ಬಾಲೆಯನ್ನು ಕುಸುಮಬಾಲೆಯಾಗಿ ನಮಗೆ ನೋಡಲು ಸಾಧ್ಯವಾಗುವು ದಿಲ್ಲವಾದರೆ ಇದು ಈ ಕಾಲದ ಜಾಡ್ಯಮನಸ್ಸುಗಳು ತಂದೊಡ್ಡಿರುವ ಅವಿವೇಕ, ವೈದಿಕತೆಯ ಆಚೆಗೆ ಯೋಚಿಸದ ಬಲಹೀನತೆ.

ಎಪ್ಪತ್ತರ ನಂತರದ ಕಾಲಘಟ್ಟ ಬ್ರಾಹ್ಮಣ್ಯಕ್ಕೆ, ಪೌರೋಹಿತ್ಯಕ್ಕೆ, ಪ್ರಭುತ್ವಕ್ಕೆ, ಅತ್ಯಂತ ತೀವ್ರತರವಾಗಿ ಸವಾಲೊಡ್ಡಿದ ಸಂಘರ್ಷಕ್ಕಿಂತ ದೌರ್ಜನ್ಯವನ್ನು ಬಹಿರಂಗವಾಗಿ ಎದುರಿಸಿದ ಹಿಂದಿನೆಲ್ಲ ಸಾಹಿತ್ಯಕ ಕಾಲಾವಧಿಗಿಂತ ಜನಪರವಾದ, ಜನರ ಬದುಕನ್ನೊಳಗೊಂಡ ಮಹತ್ವಪೂರ್ಣ ಕಾಲಘಟ್ಟ. 'ಸಮಷ್ಟಿ ಪ್ರಜ್ಞೆ'ಯೇ ಈ ಕಾಲಘಟ್ಟದ ಅಂತಸ್ಥರೂಪ. ಇಲ್ಲಿ ವ್ಯಕ್ತಿಶ್ರೇಷ್ಠತೆ ಎಂದಿಗೂ ಮುಖ್ಯವಾಗಲೇ ಇಲ್ಲ, ಮುಖ್ಯವಾಗಲೂ ಬಾರದು. ಆದರೆ ಈ ಆಲೋಚನೆಗೆ ವ್ಯತಿರಿಕ್ತವಾಗಿ 'ವ್ಯಕ್ತಿಶ್ರೇಷ್ಠತೆ'ಯನ್ನು ಹುಟ್ಟುಹಾಕುವ ಬ್ರಾಹ್ಮಣ್ಯದ ತಂತ್ರವನ್ನು ನಾಜೂಕಾಗಿ ಬಳಸುವ ಕೆಲಸ ನಡೆಯುತ್ತಲೇ ಇರುತ್ತದೆ. ಇಂಥ ಒಂದು ಅಪಮೌಲ್ಯೀಕರಣ ಕಥಾಭಾಷೆಯನ್ನು ನೆಪವಾಗಿಟ್ಟುಕೊಂಡು ದೇವನೂರು ಪಂಪ ಮತ್ತು ಮೂಡ್ನಾಕೂಡು ಚಿನ್ನಸ್ವಾಮಿ ಕುಮಾರವ್ಯಾಸ ಎನ್ನುವಲ್ಲಿಗೆ ಬರುತ್ತದೆ. ದೇವನೂರರ ಅನನ್ಯತೆ ಮತ್ತು ಚಿನ್ನಸ್ವಾಮಿಯವರ ಅನನ್ಯತೆ ತುಂಬ ಭಿನ್ನವಾದದ್ದು, ಅವರನ್ನು ಅವರಾಗಿಯೇ ನೋಡಬೇಕೇ ಹೊರತು ಅತಿಶಯದ ಗುಣಗಾನದಿಂದಲ್ಲ.

'ಸಮಷ್ಟಿ ಪ್ರಜ್ಞೆ'ಯೇ ಈ ಕಾಲಘಟ್ಟದ ಅಂತಸ್ಥರೂಪ. ಇಲ್ಲಿ ವ್ಯಕ್ತಿಶ್ರೇಷ್ಠತೆ ಎಂದಿಗೂ ಮುಖ್ಯವಾಗಲೇ ಇಲ್ಲ, ಮುಖ್ಯವಾಗಲೂ ಬಾರದು. ಆದರೆ ಈ ಆಲೋಚನೆಗೆ ವ್ಯತಿರಿಕ್ತವಾಗಿ 'ವ್ಯಕ್ತಿಶ್ರೇಷ್ಠತೆ'ಯನ್ನು ಹುಟ್ಟುಹಾಕುವ ಬ್ರಾಹ್ಮಣ್ಯದ ತಂತ್ರವನ್ನು ನಾಜೂಕಾಗಿ ಬಳಸುವ ಕೆಲಸ ನಡೆಯುತ್ತಲೇ ಇರುತ್ತದೆ. ಇಂಥ ಒಂದು ಅಪಮೌಲ್ಯೀಕರಣ ಕಥಾಭಾಷೆಯನ್ನು ನೆಪವಾಗಿಟ್ಟುಕೊಂಡು ದೇವನೂರು ಪಂಪ ಮತ್ತು ಮೂಡ್ನಾಕೂಡು ಚಿನ್ನಸ್ವಾಮಿ ಕುಮಾರವ್ಯಾಸ ಎನ್ನುವಲ್ಲಿಗೆ ಬರುತ್ತದೆ. ದೇವನೂರರ ಅನನ್ಯತೆ ಮತ್ತು ಚಿನ್ನಸ್ವಾಮಿಯವರ ಅನನ್ಯತೆ ತುಂಬ ಭಿನ್ನವಾದದ್ದು. ಅವರನ್ನು ಅವರಾಗಿಯೇ ನೋಡಬೇಕೇ ಹೊರತು ಅತಿಶಯದ ಗುಣಗಾನದಿಂದಲ್ಲ.

ಚಿನ್ನಸ್ವಾಮಿಯವರ 'ಮೂಗನ ಪಾಡು' ಮತ್ತು ಕುಂ.ವೀ.ಯವರ 'ದೇವರ ಹೆಣ' ಕಥೆಗಳನ್ನು ಹೋಲಿಸಿ ವಿಶ್ಲೇಷಿಸುತ್ತಾ ಒಂದು ಕಥೆ ತುಂಬ ಅನನ್ಯವಾದದ್ದು, ಇನ್ನೊಂದು ಅಸಂಬದ್ಧ ಪ್ರಲಾಪನೆ ಎನ್ನುವಷ್ಟರಮಟ್ಟಿಗೆ ಈ ಲೇಖನ ಹರಿಹಾಯುತ್ತದೆ. ಅಲ್ಲದೇ ಒಂದು ದಲಿತ ಸಂವೇದನೆ ಮತ್ತೊಂದು ಶೂದ್ರ ಸಂವೇದನೆ ಎನ್ನುವ ಅಂತಿಮ ಸಮರ್ಥನೆ ಬೇರೆ. ಈ ರೀತಿ ಒಬ್ಬರನ್ನು ಅತಿಶ್ರೇಷ್ಠರಾಗಿಸುತ್ತಾ, ಮತ್ತೊಬ್ಬರನ್ನು ಅಪಖ್ಯಾನಿಸುವ ಪರಿ ಇತ್ತೀಚೆಗೆ ಬೇರೆ ಬೇರೆ ನೆಲೆಗಳಲ್ಲಿ, ವಿಧಗಳಲ್ಲಿ ನಡೆಯುತ್ತಿರುವುದು ದುರಂತದ ಸಂಗತಿ. ಇದರಿಂದ ಯಾರನ್ನು ಕೂಡ ವಸ್ತುನಿಷ್ಠವಾಗಿ ಅವಲೋಕಿಸಲು ಸಾಧ್ಯವಾಗದೇ ನವಪೀಳಿಗೆ ಪರಂಪರೆಯನ್ನು ಗುಮಾನಿಯಿಂದ ನೋಡಲು ಪ್ರೇರೇಪಿಸುತ್ತವೆ.

ಆಹಾರ ಸಂಸ್ಕೃತಿಯ ಕುರಿತು ನಮ್ಮಲ್ಲಿಂದು ಸ್ಪಷ್ಟತೆಗಳ ಅಗತ್ಯವಿದೆ. "ತಾನು ಪ್ರೀತಿಯಿಂದ ಸಾಕಿದ ಎತ್ತನ್ನು ನೆಲ ಬಗೆದಾದರೂ ತಿನ್ನುವ ರೊಣ್ಣಿಗೂ, ತನ್ನ ಪ್ರೀತಿಯ ಎತ್ತಿನ ಮಾಂಸದ ಸಾರನ್ನು ಗಂಗಳಕ್ಕೆ ಸುರಿದರೂ ತಿನ್ನದ ಮೂಗ ಬಸವನಿಗೂ ಬಹಳಷ್ಟು ಅಂತರವಿದೆ" ಎನ್ನುವ ವಿಶ್ಲೇಷಣೆ ಸ್ಪಷ್ಟ ವೈದಿಕತೆಯ ವಿಶ್ಲೇಷಣೆ. ಮೂಗಬಸವನಿಗೂ, ಅವನ ಎತ್ತಿಗೂ ತದಾತ್ಮ್ಯ ಅಂಶವೆಂದರೆ ಇಬ್ಬರೂ ಬಾಯಿ ಕಳೆದುಕೊಂಡವರು. ಇದೆಲ್ಲೋ ಅವನನ್ನು ತಿನ್ನಲು ನಿರಾಕರಿಸುವಂತೆ ಮಾಡಿರಬಹುದು. ಇದೊಂದು ಮನೋ ವಿಶ್ಲೇಷಣಾ ಸಂಗತಿ. ವಿಸ್ತೃತ ಚರ್ಚೆ ಅಗತ್ಯ. ಎತ್ತೇ ಆಗಲೀ, ಕುರಿಯೇ ಆಗಲಿ ಎಷ್ಟು ಪ್ರೀತಿಯಿಂದ ಸಾಕಿರುತ್ತೇವೆಯೋ, ನಮಗೆ ಅಗತ್ಯವೆನಿಸಿದಾಗ ಅಷ್ಟೇ ಪ್ರೀತಿಯಿಂದ ತಿನ್ನುವುದು ಕೂಡ ನಮ್ಮ ಜಗತ್ತಿನಲ್ಲಿ ಸರ್ವ ಒಪ್ಪಿತ. ಬಂಜಗೆರೆ ಜಯಪ್ರಕಾಶ್ ಈ ಕಥೆಯನ್ನು ನಿಜವಾದ ನೆಲೆಯಲ್ಲಿ ಗ್ರಹಿಸುತ್ತಾರೆ. "ನಾವು ಗಮನಿಸಬೇಕಾದ್ದು, ಆ ಬಾಡೂಟದ ಸುದ್ದಿ ಹೊರಟಾಗಿನಿಂದ, ಆ ಬಾಡೂಟ ಮುಗಿಯುವವರೆಗಿನ ಆಚರಣೆ ಹಾಗೂ ಈ ಕತೆಯಲ್ಲಿ ದಲಿತರು ಹಸಿವಿನ ಪರಿಸ್ಥಿತಿಯಲ್ಲಿ ಹೋರಿ ಸತ್ತ ಕಾರಣಕ್ಕಾಗಿ ಎಷ್ಟು ಸಂಭ್ರಮಪಡುತ್ತಾರೆ ಎಂಬ ದಾರುಣ ಸತ್ಯದ ಅರಿವನ್ನು." ನಾವು 'ಮೂಗನ ಪಾಡ'ನ್ನು ಹೀಗೆಯೇ ತೆಗೆದುಕೊಳ್ಳುವುದು ಉಚಿತ.

"ಬಿ.ಸಿ.ಸ್ವಾಮಿ, ಬಿ. ಚಿನ್ನಸ್ವಾಮಿ, ಮೂಡ್ನಾಕೂಡು ಚಿನ್ನಸ್ವಾಮಿ ಎಂಬ ಹೆಸರಲ್ಲಾಗಿರುವ ಬದಲಾವಣೆ, ಚಿನ್ನಸ್ವಾಮಿಯವರ ಕವನಗಳ ಮತ್ತು ವಿಚಾರಗಳಲ್ಲಾಗಿರುವ ಪ್ರಗತಿ ಹಾಗೂ ಬೆಳವಣಿಗೆಯನ್ನು ಸೂಚಿಸುವಂತಿದೆ" ಎನ್ನುವ ಬಾಲಿಶ ವಿವರ "ದಲಿತೇತರ ಔಟ್‌ಲುಕ್ಕಿನ, ಕೆ.ಎಸ್.ಆರ್.ಟಿ.ಸಿ.ಯ ಅತ್ಯುನ್ನತ ಹುದ್ದೆಯ, ಫ್ರೆಂಚ್ ಬೇರ್ಡಿನ ಚಿನ್ನಸ್ವಾಮಿ ನೋಡಲು ತುಂಬ ಸೋಫಿಸ್ಟಿಕೇಟೆಡ್" ಹಾಗೂ "ಅಪಾರ ಸಂಬಳದಿಂದ ಯದ್ವಾತದ್ವಾ ಮಜಾ ಉಡಾಯಿಸುವ ಮೂಲಕ ಜೀವನ ಸಾಗಿಸಬೇಕಿದ್ದ ಚಿನ್ನಸ್ವಾಮಿ ಅದಕ್ಕೆ ತದ್ವಿರುದ್ಧವಾಗಿ ಸಾಹಿತ್ಯವನ್ನು ಆಯ್ದುಕೊಂಡದ್ದು ನನಗೆ ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯ ಎಂಬ ವಚನ ನೆನಪಿಗೆ ತರುತ್ತದೆ" ಎನ್ನುವ ವಿಕ್ಷಿಪ್ತ ವೈಭವೀಕರಣ ಒಂದೆಡೆಯಾದರೆ, "ಕೆಲವು ಕವಿತೆಗಳು ನಮಗೆ ಸ್ವಾತಂತ್ರ್ಯ ಕೊಡಿ, ಸಮಾನತೆ ಕೊಡಿ, ಮಾನವೀಯತೆ ತೋರಿಸಿ ಎಂದು ಅಂಗಲಾಚುವಂತಿದೆ" ಎನ್ನುವ ಪೂರ್ವಾಗ್ರಹಿತತೆ ಓದುಗನ ದ್ವಂದ್ವದ ವಿಸ್ತರಣೆಯ ಜೊತೆಗೆ ಚಿನ್ನ ಸ್ವಾಮಿಯವರ ವ್ಯಕ್ತಿತ್ವವನ್ನು ಅಪಾರ್ಥಗೊಳಿಸುವುದೇ ಹೆಚ್ಚು.

'ಕೆಂಡಮಂಡಲ' ನಾಟಕದ ಕುರಿತು "ಪಟ್ಟಣಕ್ಕೆ ಹೋದರೆ ಎಲ್ಲಾ ಅವಮಾನಗಳನ್ನು ಕಳಕೊಳ್ಳಬಹುದೇನೋ ಎನ್ನುವ ಆಸೆಯಿಂದ ದಲಿತ ಯುವಕ ಪಟ್ಟಣಕ್ಕೆ ಹೋಗ್ತಾನೆ" "ಆತ ನಿಜಕ್ಕೂ ತನ್ನ ಜಾತಿಯನ್ನು ಮರೆಮಾಚಿಕೊಂಡು ಬದುಕಬೇಕಾಗಿರುವ ಸಂಗತಿಯನ್ನು ಚಿತ್ರಿಸಿದ್ದಾರೆ" ಎನ್ನುವ ಅಪಓದುಗಳು ದಾಖಲಾಗಿವೆ. ಈ ರೀತಿಯ ಗ್ರಹಿಕೆ 'ಕೆಂಡಮಂಡಲದ ಸರಿಯಾದ ಓದಲ್ಲ' ಕೆಂಡಮಂಡಲ್ಲ ಸೃಜಿಸುವುದು ಅಸ್ಪೃಶ್ಯತೆಯನ್ನು ನೀಗಲು ವಿದ್ಯಾವಂತರಾಗಬೇಕು ಎಂಬುದನ್ನೇ ಹೊರತು, ಮರೆಮಾಚುವಿಕೆಯನ್ನಲ್ಲ.

ಕೆಲವು ದಶಕಗಳನ್ನು ತುಂಬಾ ಸೌಜನ್ಯಯುತವಾಗಿ, ಮಾನವೀಯ ಘನತೆಯಿಂದ ಕಳೆದಿರುವ ಮೂಡ್ನಾಕೂಡು ಚಿನ್ನಸ್ವಾಮಿ ತಮ್ಮ ಸಾಹಿತ್ಯದಿಂದ ಸಾರ್ವತ್ರಿಕ ಬದುಕಿನ ತೊಡಕನ್ನು ನಿವಾರಿಸುವ ಪ್ರಾಮಾಣಿಕ ಯತ್ನ ಮಾಡಿದ್ದಾರೆ. ವ್ಯವಸ್ಥೆಯ ಭಾಗವಾಗಿದ್ದುಕೊಂಡೂ, ದಕ್ಷ ಅಧಿಕಾರಿಯಾಗಿ ಮಾಡಬಹುದಾದ ಜನಪರ ಕಾಳಜಿ ಮತ್ತು ಕಾರ್ಯದಿಂದ ಜನರ ಮನಸ್ಸಲ್ಲಿ ನೆಲೆನಿಂತಿದ್ದಾರೆ. ತಮ್ಮದೇ ಆದ ಭಿನ್ನ ರೀತಿಯ ಪ್ರತಿರೋಧವನ್ನೊಡ್ಡಿದ ಚಿನ್ನಸ್ವಾಮಿ "ಅನಂತಸುಬ್ಬರಾವ್ ಸೇರಿದಂತೆ ಅವರ ಟ್ರೇಡ್ ಯೂನಿಯನ್ನನ್ನು ಮಟ್ಟಹಾಕಿದರು" ಎನ್ನುವ ಹೇಳಿಕೆಯನ್ನು ಪರಿಶೀಲಿಸಬೇಕಾಗಿದೆ. ಚಿನ್ನಸ್ವಾಮಿ ತಮ್ಮ ಆಡಳಿತ ವ್ಯವಹಾರವನ್ನು ಪಾರದರ್ಶಕವಾಗಿ ನಿಭಾಯಿಸುತ್ತಾರೆ ಎಂದು ತಿಳಿಸುವ ಲೇಖನದ ಭಾಗವನ್ನು ಯಥಾವತ್ತಾಗಿ ಎರಡು ಬಾರಿ ಮುದ್ರಿಸಲಾಗಿದೆ.

'ಬಯಲ ಬೆಳಕು' ಈ ಸಂದರ್ಭದ ಮೌಲಿಕ ಕೃತಿ. ಹೊಸ ಪೀಳಿಗೆಗೆ ಪರಂಪರೆಯ ಅರಿವನ್ನು ವಸ್ತುನಿಷ್ಠವಾಗಿ ಕಟ್ಟಿಕೊಡುತ್ತದೆ. ಎಲ್ಲಾ ಆಯಾಮಗಳ ವಿಶಿಷ್ಟ ಬರವಣಿಗೆ, ಆಳ ವಿಸ್ತಾರದ ಸ್ಪಷ್ಟ ಚಿಂತನೆಗಳು, ನವಪೀಳಿಗೆ ನಡೆಯಬೇಕಿರುವ ದಾರಿಯನ್ನು ನಿರ್ದೇಶಿಸುವ ಕೃತಿ. ದಲಿತತ್ವದಿಂದ ಬುದ್ಧತ್ವದೆಡೆಗೆ ಎಂಬುದು ಮತ್ತೊಂದು ರೀತಿಯ ವಿಮುಖ ಚಲನೆಯೆ. ಈ ಕುರಿತ ಹೊಸಸಾಧ್ಯತೆಗಳನ್ನು, ಅವಶ್ಯಕ ಬದಲಾವಣೆ ಗಳನ್ನು ಬಯಸುವ ಬುದ್ಧತ್ವ ಕುರಿತ ವ್ಯಾಪಕ ಸಂವಾದ ಗಳು ಇಂದಿನ ಅಗತ್ಯ. ಆ ನಿಟ್ಟಿನಲ್ಲಿ ನಾವೆಲ್ಲ ಮುಕ್ತ ರಾಗಿರುವುದು, ಭವಿಷ್ಯವನ್ನು ನಮ್ಮಂತೆ ಕಟ್ಟಿಕೊಳ್ಳಲು ಸಾಧ್ಯ. ಇಲ್ಲವಾದರೆ ಕೋಮುವಾದ, ಮತಾಂತರದ ವಿನಾಶಕಾರಿ ಕಾಲಘಟ್ಟದಲ್ಲಿ ನಮ್ಮ ಇರುವಿಕೆಗೆ ಅರ್ಥವಿರುವುದಿಲ್ಲ.

'ಬಯಲ ಬೆಳಕು' ಕೃತಿಯ ಮುಖಪುಟದ ಕಲಾಕೃತಿ ಎಂ.ಎಸ್.ಮೂರ್ತಿಯವರ ಹೊಸ ಪ್ರಯೋಗ ದೃಶ್ಯ ಕಾವ್ಯದಲ್ಲಿ ಅಡಿಗರ ಕಾವ್ಯಕ್ಕೆ ಬಳಸಿ ಕೊಂಡದ್ದು. ■

ಕರಾವಳಿಯ ಹೊಸ ಮಾನವ ತಳಿ:

‘ಭಜರಂಗಿ ಕ್ರಿಮಿನಲ್ ಪತ್ರಕರ್ತ!’

■ ಜಿ. ರಾಜಶೇಖರ

ಧಾರ್ಮಿಕ ಕೇಂದ್ರ, ಶಿಕ್ಷಣ ಕೇಂದ್ರ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ ಮತ್ತು ಇನ್ನೂ ಏನೇನೋ ಆಗಿರುವ ಉಡುಪಿಯಂತಹ ಉಡುಪಿಯಲ್ಲಿ ‘ಅಸಹಾಯಕ’ರನ್ನು ಹೊಡೆಯುವುದು ತಪ್ಪು; ಬಟ್ಟೆ ಬಿಚ್ಚಿ ಹೊಡೆಯುವುದು ಇನ್ನೂ ದೊಡ್ಡ ತಪ್ಪು ಎಂದು ಹೇಳಬೇಕಾದ ಪರಿಸ್ಥಿತಿ ಇದೆ; ಗುಜರಾತ್‌ನ ಪರಿಸ್ಥಿತಿ ಇನ್ನೂ ಭೀಕರವಾಗಿದೆ.

ವೈಪರೀತ್ಯವೇ ಸಹಜ ಸ್ಥಿತಿಯಾಗಿ ಬಿಟ್ಟರೆ ಅದನ್ನು ...ವರಿಸಲು ಶಬ್ದಗಳೇ ಇರುವುದಿಲ್ಲ. ಭಾಷೆಗೆ ಬರಬಹು...ದ ಆತ್ಯಂತಿಕ ಮರವನ್ನೆ ಅದು. ಉದಾಹರಣೆಗೆ ಧಾರ್ಮಿಕ ...ದ್ರ, ಶಿಕ್ಷಣ ಕೇಂದ್ರ, ಸಾಂಸ್ಕೃತಿಕ ಚಟುವಟಿಕೆಗಳ ...ದ್ರ ಮತ್ತು ಇನ್ನೂ ಏನೇನೋ ಆಗಿರುವ ...ಪಿಯಂತಹ ಉಡುಪಿಯಲ್ಲಿ ‘ಅಸಹಾಯಕ’ರನ್ನು ...ಡೆಯುವುದು ತಪ್ಪು; ಬಟ್ಟೆ ಬಿಚ್ಚಿ ಹೊಡೆಯುವುದು ...ನ್ನೂ ದೊಡ್ಡ ತಪ್ಪು ಎಂದು ಹೇಳಬೇಕಾದ ಪರಿಸ್ಥಿತಿ ...ದೆ; ಗುಜರಾತ್‌ನ ಪರಿಸ್ಥಿತಿ ಇನ್ನೂ ಭೀಕರ...ಗಿದೆ. ಅಸಹಾಯಕ ಹೆಂಗಸರ ಮೇಲೆ ...ತ್ಯಾಚಾರ ಮಾಡುವುದು ತಪ್ಪು; ಹೆತ್ತವರ ...ದುರು ಮಕ್ಕಳನ್ನು ಹೊಡೆದುಕೊಲ್ಲುವುದು ...ಪ್ಪು ಎಂದು ಹೇಳಿದರೆ ಅಲ್ಲಿ ನಿಮ್ಮ ದೇಶ...ಯೇ ಶಂಕೆಗೆ ಒಳಗಾಗುತ್ತದೆ. ಆದರೆ ಇದೇ ...ಮ್ಮ ಭಾಷೆ ಮತ್ತು ನೈತಿಕಕತೆಗಳ ...ತ್ಯಮಜಲು’ ಎಂದು ಭಾವಿಸಬೇಡಿ. ...ಡುಪಿಯಲ್ಲಿ ಅಸಹಾಯಕರನ್ನು ಬಟ್ಟೆಬಿಚ್ಚಿ ...ಡೆದವರು ಮತ್ತು ಗುಜರಾತಿನಲ್ಲಿ ಮಾತೇ ...ತ್ನಿಸಲು ನಾಚಿಕೊಳ್ಳುವ ಕೃತ್ಯಗಳನ್ನು ...ಸಿದವರು, ಪ್ರಜೆಗಳನ್ನು ಆಳುವವರೂ ...ದ್ದಾರೆ. ಈ ಸನ್ನಿವೇಶವನ್ನು ಯಾವ ಶಬ್ದಗಳಲ್ಲಿ ...ಣಿಸುವುದು? ಇದು ಕೇವಲ ಅನುಭವ ...ತ್ತು ಅದರ ನಿರೂಪಣೆಗಳ ನಡುವಿನ ತಾತ್ವಿಕ ...ಟ್ಟಿನ ಸಮಸ್ಯೆ ಅಲ್ಲ. ನ್ಯಾಯದ ಪ್ರಶ್ನೆಗೂ ...ಬಂಧಿಸಿದ್ದಾಗಿದೆ; ಮತ್ತು ಈಗೀಗ ನಮ್ಮ ...ವಳಿಯ ಊರುಗಳಲ್ಲಂತೂ ಬದುಕುವ ...ಕ್ಕಿನ ಹಕ್ಕಿನ ಜೊತೆಗೂ ತಳಕು ಹಾಕಿಕೊಂಡಿದೆ. ...ಗಳ ವಿತ್ತ, ಸೊತ್ತು ಮತ್ತು ಪ್ರಾಣಗಳನ್ನು ರಕ್ಷಿಸುವುದಕ್ಕಾಗಿ ...ವ ಪೊಲೀಸರೇ ಕಳ್ಳರ ಹಾಗೆ– ಸಾಲದ್ದಕ್ಕೆ ಗೂಂಡಾಗಳ ...ಗೆ ಕೂಡ ವರ್ತಿಸಿದರೆ ಪ್ರಜೆಗಳು ಯಾರ ಬಳಿ ...ಮಕ್ಕೆ ಮೊರೆ ಇಡುವುದು? ಎರಡು ವರ್ಷಗಳ ಕೆಳಗೆ ...ಲೀಸರೇ ಮಂಗಳೂರಿನ ಬಂದರ್, ಉಳ್ಳಾಲ ಮತ್ತು ...ಸ್ವಾಳದ ಗೂಡಿನ ಬಳಿಗಳಲ್ಲಿ ಮುಸ್ಲಿಮರ ಮನೆಗಳಿಗೆ ...ಮನೆಯಲ್ಲಿದ್ದವರನ್ನು ಹೊಡೆದು ಬಡಿದು ಸಾಮಾನು ...ಜಾಮುಗಳನ್ನು ಧ್ವಂಸ ಮಾಡಿ ನಗನಾಣ್ಯಗಳನ್ನೂ ...ೀಚಿದರು. ಈ ಮುಸ್ಲಿಮರಿಗೆ ದೂರು ಹೇಳಿಕೊಳ್ಳಲು ...ವರು ಬಿಟ್ಟರೆ ಯಾರೂ ಇರಲಿಲ್ಲ. ‘ವಾರ್ತಾ ...ರತಿ’ಯನ್ನು ಹೊರತುಪಡಿಸಿ ಕರ್ನಾಟಕದ ಯಾವ ...ದ/ಇಂಗ್ಲಿಷ್ ಪತ್ರಿಕೆಯೂ ಈ ಘಟನೆಯ ಬಗ್ಗೆ ಒಂದು ...ೂ ವರದಿ ಮಾಡಲಿಲ್ಲ. ಪತ್ರಿಕೆಗಳ ಈ ಮೌನವನ್ನು ...ವ ಮಾತಿನಲ್ಲಿ ಬಣ್ಣಿಸುವುದು? ಆ ಘಟನೆಗಳೆಲ್ಲ ...ದು ಈಗ ಎರಡು ವರ್ಷಗಳ ನಂತರ ಮಂಗಳೂರಿನಲ್ಲಿ ...ತಹದ್ದೇ ಒಂದು ವೈಪರೀತ್ಯದ ಸ್ಥಿತಿ ಮರುಕಳಿಸಿದೆ. ...ನ ಜಿಲ್ಲಾ ಸಬ್‌ಜೈಲು ಇತ್ತೀಚಿನ ದಿನಗಳಲ್ಲಿ ...ರಂಗಿಗಳ ಅಡ್ಡೆಯಾಗಿ ಮಾರ್ಪಟ್ಟದ್ದು ಈ ಪಾತಕಿಗಳ ...ತೆ ಪೊಲೀಸರಲ್ಲೂ ಕೆಲವರು ಶಾಮೀಲಾಗಿದ್ದಾರೆ. ...ಲೀಸರು ಕೊಲೆಗಳನ್ನೇ ‘ಎನ್‌ಕೌಂಟರ್’ ಎಂದು ...ದು ಬಚಾವಾಗುತ್ತಿರುವಾಗ ಇದೇನು ಮಹಾ ಎಂದು ...ನಬಹುದು. ವೈಪರೀತ್ಯ ಎಂದರೆ ಇದೇ. ಕೆಳಗಿನ ...ದಾಹರಣೆಗಳನ್ನೇ ನೋಡಿ.

ಮಂಗಳೂರಿನ ಜಿಲ್ಲಾ ಸಬ್‌ಜೈಲಿನಲ್ಲಿ ಕಳೆದ ಒಂದು ...ಳ ಅವಧಿಯಲ್ಲಿ ಭಜರಂಗಿಗಳು ವಿಚಾರಣಾಪೂರ್ವ ...ಗಳ ಮೇಲೆ ಆರು ಬಾರಿ ಹಲ್ಲೆ ನಡೆಸಿದ್ದಾರೆ. ಸೆಪ್ಟೆಂಬರ್ ...ರಂದು ಮಂಗಳೂರು ಮತ್ತು ಇತರ ಊರುಗಳಲ್ಲಿ ... ಧಾರ್ಮಿಕ ಕೇಂದ್ರಗಳ ಮೇಲೆ ನಡೆದ ದಾಳಿಯ ...ಂಧ ಬಂಧನಕ್ಕೆ ಒಳಗಾಗಿದ್ದ ಈ ಭಜರಂಗಿಗಳು ...ತ್ತು ಅವರ ನಾಯಕ ಮಹೇಂದ್ರಕುಮಾರ್‌ನಿಗೆ ಜೈಲಿನ ...ದಿ ಹೆಚ್ಚುಕಡಿಮೆ ಪೂರ್ಣ ಶರಣಾಗತರಾಗಿದ್ದರು. ...ಬರ್ 23ರಂದು ಜಲಾಲುದ್ದೀನ್ ಎಂಬ ಕೈದಿ ...ನಿಂದ ಬಿಡುಗಡೆಯಾಗಬೇಕಿತ್ತು, ಆವತ್ತು ಸುಮಾರು ... ಜನ ಬಂಧಿತ ಭಜರಂಗಿಗಳ ಬಟ್ಟೆ ಒಗೆದುಕೊಡಲಿಲ್ಲ ...ಬ ಕಾರಣಕ್ಕೆ ಜಲಾಲುದ್ದೀನ್ ಮೇಲೆ ಹಲ್ಲೆ ನಡೆಯಿತು. ...ೀರವಾಗಿ ಗಾಯಗೊಂಡ ಜಲಾಲುದ್ದೀನ್ ಮನೆಗೆ ...ಗುವ ಬದಲು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ...ಹುದಿನ ಒಳರೋಗಿಯಾಗಿ ಮಲಗಿದರು. ಅಕ್ಟೋಬರ್ ...ರಂದು ಫರೂಕ್ ಎಂಬ ಕೋಟಾಗೋಟಿನ ಆರೋಪಿ...ನ್ನು ಭಜರಂಗಿಗಳು ಹೊಡೆದರು. ಫರೂಕ್ ತನ್ನ ...ಸ್ವಂತ ಸಂಬಂಧಿಕರಿಂದ ಭಜರಂಗಿಗಳಿಗೆ ಹಣ ಕೊಡಿಸಲು ನಿರಾಕರಿಸಿದ್ದಕ್ಕೆ ನಡೆದ ಹಲ್ಲೆ ಇದು! ಇದನ್ನು ತಡೆಯಲು ಯತ್ನಿಸಿದ ಜೈಲು ವಾರ್ಡನ್ ಜವರಯ್ಯ ಎಂಬುವರನ್ನೂ ಭಜರಂಗಿಗಳು ಹೊಡೆದರು. ದುಡ್ಡಿನ ಮಟ್ಟಿಗೆ ಭಜರಂಗಿಗಳು ನೂರಕ್ಕೆ ನೂರು ಸೆಕ್ಯುಲರಿಸ್ಟರು, ಅವರು ಧರ್ಮಗಳ ನಡುವೆ ಭೇದ ಎಣಿಸುವುದೇ ಇಲ್ಲ.

ಅಕ್ಟೋಬರ್ 15ರಂದು ದಾವೂದ್ ಎಂಬ ಕೈದಿಗೆ ಅಸಹ್ಯ ಲೈಂಗಿಕ ಕ್ರಿಯೆಗಳಲ್ಲಿ ತಮ್ಮೊಟ್ಟಿಗೆ ಸಹಕರಿಸಬೇಕು ಎಂದು ಭಜರಂಗಿಗಳು ಒತ್ತಾಯಿಸಿದರು. ದಾವೂದ್ ನಿರಾಕರಿಸಿದಾಗ ಅವನನ್ನು ಥಳಿಸಿದರು. ದಾವೂದ್ ಜೈಲು ಅಧಿಕಾರಿಗಳಿಗೆ ದೂರು ಸಲ್ಲಿಸಿದರೂ ಭಜರಂಗಿಗಳಿಗೆ ಯಾವ ಶಿಕ್ಷೆಯೂ ಆಗಲಿಲ್ಲ. ಆದರೆ ದಾವೂದ್‌ನನ್ನು ಬಳ್ಳಾರಿ ಜೈಲಿಗೆ ವರ್ಗಾಯಿಸಲಾಯಿತು. ಮತ್ತು ಇತರ ಕಡೆಗಳಲ್ಲಿ ಕ್ರೈಸ್ತ ಪ್ರಾರ್ಥನಾ ಮಂದಿರಗಳ ಮೇಲೆ– ದಾಳಿ ನಡೆದ ಹಲವು ದಿನಗಳ ನಂತರ– ಅದೂ ಸಾರ್ವಜನಿಕರ ಒತ್ತಾಯ ಬಂದ ಮೇಲೆ ಮಹೇಂದ್ರಕುಮಾರ್‌ನ ಬಂಧನವಾದಾಗ ಆತನನ್ನು ಇದೇ ಜೈಲಿನಲ್ಲಿ ಇರಿಸಲಾಯಿತು. ಮಹೇಂದ್ರಕುಮಾರ್‌ನನ್ನು ಬಳ್ಳಾರಿ ಜೈಲಿಗೆ ವರ್ಗಾಯಿಸಬೇಕು ಎಂದು ಜಿಲ್ಲೆಯ ಮುಸ್ಲಿಂ, ಕ್ರೈಸ್ತ ಸಂಘಟನೆಗಳು ಹಾಗೂ ಕೋಮುಸೌಹಾರ್ದ ವೇದಿಕೆ ಸರಕಾರವನ್ನು ಒತ್ತಾಯಿಸಿದ್ದವು. ಆದರೆ ಆತನಿಗೆ ಜಾಮೀನಿನ ಮೇಲೆ ಬಿಡುಗಡೆಯಾಗುವವರೆಗೆ ಮಂಗಳೂರು ಜೈಲಿನಲ್ಲಿಯೇ ಇರಿಸಿ ಮನೆ ಅಳಿಯನ ಥರಹ ನೋಡಿಕೊಳ್ಳಲಾಯಿತು. ಜೈಲಿನ ಒಳಹೊರಗೂ ಆತನಿಗೆ ಓಡಾಡುವ ಸ್ವಾತಂತ್ರ್ಯವಿತ್ತು. ಜೈಲು ಸೂಪರಿಂಟೆಂಡೆಂಟ್‌ನ ಕೋಣೆಯಲ್ಲಿಯೇ ಕೂತು ಆತ ಬೈಠಕ್ ನಡೆಸುತ್ತಿದ್ದ. ಅವನ ಕುಮ್ಮಕ್ಕಿನ ಮೇಲೆ, ಮುಸ್ಲಿಂ ಕೈದಿಗಳಿಗೆ ರಕ್ಷಣೆ ಕೊಡಲು ಹೋದ ಜೈಲು ವಾರ್ಡನ್ ಸಂಜೀವ ಶೆಟ್ಟಿ ಎಂಬುವವರ ಮೇಲೂ ಭಜರಂಗಿಗಳು ಹಲ್ಲೆ ನಡೆಸಿದರು. ಅಕ್ಟೋಬರ್ 19ರಂದು ಭಜರಂಗಿಗಳು ಹತ್ತು ಜನ ಒಟ್ಟಾಗಿ ನಾರಾಯಣಗೌಡ ಎಂಬ ಕೈದಿಯ ಮೇಲೆ ಹಲ್ಲೆ ನಡೆಸಿದರು. ಈ ನಾರಾಯಣಗೌಡ ಬಿಜೆಪಿ ನಾಯಕರೊಬ್ಬರ ಮೇಲೆ ಆ್ಯಸಿಡ್ ಚೆಲ್ಲಿದ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿದ್ದರು. ಅದೂ ಅಲ್ಲದೆ ಓರ್ವ ಜೈಲು ಸಿಬ್ಬಂದಿಯ ಪ್ರಕಾರ ನಾರಾಯಣಗೌಡ ‘ಕಮ್ಯೂನಿಸ್ಟ್’ ಪರವಾಗಿದ್ದರು ಮತ್ತು ಮುಸ್ಲಿಂರ ಬಗ್ಗೆ ಸಹಾನುಭೂತಿ ಹೊಂದಿದ್ದರು. ಜೈಲಿನ ಕೈದಿಗಳು ಮತ್ತು ಕೆಲವು ಸಿಬ್ಬಂದಿಗಳೇ ಹೇಳುವ ಪ್ರಕಾರ, ಸಬ್‌ಜೈಲಿನಲ್ಲಿ ಭಜರಂಗಿ ಕೈದಿಗಳ ಗೂಂಡಾಗಿರಿಗೆ ಜೈಲು ಸೂಪರಿಂಟೆಂಡೆಂಟ್ ಈಶ್ವರ ನಾಯಕನ ಸಂಪೂರ್ಣ ಸಹಕಾರವಿತ್ತು. ಈಗ ಬೆಂಗಳೂರಿಗೆ ವರ್ಗಾವಣೆಗೊಂಡಿರುವ (ಅದೇನೂ ಪನಿಶ್‌ಮೆಂಟ್ ಟ್ರಾನ್ಸ್‌ಫರ್ ಆಗಿರಲಿಕ್ಕಿಲ್ಲ) ಈಶ್ವರ ನಾಯಕ ಪತ್ರಕರ್ತರ ಎದುರೇ “ನಾನು ಈ ಅಪಾದನೆಗಳಿಗೆಲ್ಲ ಕೇರ್ ಮಾಡುವುದಿಲ್ಲ; ಜೈಲಿನೊಳಗೆ ಎಲ್ಲ ಕೈದಿಗಳನ್ನೂ ಒಂದೇ ಥರಹ ನೋಡಲು ಆಗುವುದಿಲ್ಲ” ಎಂದು ತನ್ನ ಭಜರಂಗಿ ನಿಷ್ಠೆಯನ್ನು ಸಮರ್ಥಿಸಿಕೊಂಡವ!

ಮಂಗಳೂರು ಸಬ್‌ಜೈಲಿನಲ್ಲಿ ಭಜರಂಗಿಗಳು ನಡೆಸಿದ ಈ ಸರಣಿ ಹಲ್ಲೆಗಳಲ್ಲಿ ಅತ್ಯಂತ ಗಂಭೀರವಾದದ್ದು ಅಕ್ಟೋಬರ್ 30ರಂದು ಫಕೀರ್ ಬಾವಾ ಮತ್ತು ರಫೀಕ್ ಎಂಬ ಕೈದಿಗಳ ಮೇಲೆ ನಡೆದ ಹಲ್ಲೆ. ಈ ಕೈದಿಗಳನ್ನು ಇರಿಸಲಾಗಿದ್ದ ಸೆಲ್‌ನ ಬೀಗದ ಕೈಯನ್ನು ಜೈಲು ಸಿಬ್ಬಂದಿಯಿಂದ ಬಲಾತ್ಕಾರದಲ್ಲಿ ಕಿತ್ತುಕೊಂಡು ಸುಮಾರು 10 ಜನ ಭಜರಂಗಿಗಳು ಫಕೀರ್ ಮತ್ತು ರಫೀಕ್‌ರನ್ನು ಕಲ್ಲು ಮತ್ತು ರಾಡುಗಳಿಂದ ಜಜ್ಜಿದರು. ಫಕೀರ ಬಾವಾನಿಗೆ ತಲೆಯಲ್ಲಿ ಗಂಭೀರವಾದ ಗಾಯವಾಗಿದೆ. ಇಬ್ಬರಿಗೂ ಮೈಮೇಲೆಲ್ಲ ಹೊಡೆತ ಬಿದ್ದಿದೆ. ಈ ಹಲ್ಲೆ ಮಹೇಂದ್ರಕುಮಾರ್ ನಿರ್ದೇಶನದ ಪ್ರಕಾರ ನಡೆದಿತ್ತು. ಇದಕ್ಕೆ ಎರಡು ದಿನಗಳ ಮೊದಲು ಮಹೇಂದ್ರಕುಮಾರ್ ಪ್ರಾಯೋಜಕತ್ವದಲ್ಲಿ ಜೈಲಿನ ಸಿಬ್ಬಂದಿ ಹಾಗೂ ಕೈದಿಗಳಿಗೆ ಒಂದು “ಸೌಹಾರ್ದ ಕಬಡ್ಡಿ ಪಂದ್ಯ”ವನ್ನು ಏರ್ಪಡಿಸಲಾಗಿತ್ತು. ಈ ಪಂದ್ಯಕ್ಕೆ ಜೈಲಿನ ಹೊರಗಿದ್ದ ಕೆಲವು ಭಜರಂಗಿ ನಾಯಕರನ್ನೂ, ಪತ್ರಕರ್ತರನ್ನೂ ಆಹ್ವಾನಿಸಲಾಗಿತ್ತು. ಕರಾವಳಿಯ ಪತ್ರಿಕೆಗಳು ಈ ಕಾನೂನುಬಾಹಿರ ಪಂದ್ಯವನ್ನು ಅದೊಂದು ಮಾಮೂಲಿ ಘಟನೆ ಎಂಬಂತೆ ವರದಿ ಮಾಡಿದವು. ಈ ಪಂದ್ಯಕ್ಕೆ ಅವಕಾಶ ಮಾಡಿಕೊಟ್ಟ ಜೈಲು ಸೂಪರಿಂಟೆಂಡೆಂಟ್ ಈಶ್ವರ ನಾಯಕ ಮತ್ತು ಅದನ್ನು ವರದಿ ಮಾಡಿದ ಕರಾವಳಿಯ ಪತ್ರಕರ್ತರಿಗೆ ನ್ಯಾಯನೀತಿಗಳ ಪರಿಕಲ್ಪನೆ ಹೇಗೂ ಇಲ್ಲ; ಕಾನೂನಿನ ಪರಿವೆಯಾದರೂ ಬೇಡವೆ?

ಮಂಗಳೂರು ಸಬ್‌ಜೈಲಿನಲ್ಲಿ ಭಜರಂಗಿಗಳಿಂದ ವಿನಾಕಾರಣ ಹೊಡೆತ ತಿಂದವರಲ್ಲಿ ಪೂರ್ತ ಗ್ರಹಚಾರ ಕೆಟ್ಟವರೆಂದರೆ ಫಕೀರ್‌ಬಾವಾ ಮತ್ತು ರಫೀಕ್. ಅವರಿಬ್ಬರೂ “ಶಂಕಿತ ಉಗ್ರ”ರಾಗಿ ಜೈಲು ಸೇರಿದವರು. ಕರಾವಳಿಯ ಪತ್ರಿಕೆಗಳ ಮಟ್ಟಿಗೆ ಮುಸ್ಲಿಂ ಉಗ್ರರು ಮತ್ತು ಶಂಕಿತ ಮುಸ್ಲಿಂ ಉಗ್ರರ ನಡುವೆ ವ್ಯತ್ಯಾಸವೇ ಇಲ್ಲ. ಈಗೀಗ ಈ ಪತ್ರಿಕೆಗಳು ವಿಚಾರಣಾಪೂರ್ವ ಮುಸ್ಲಿಂ ಕೈದಿಗಳನ್ನು “ಶಂಕಿತ” ಎಂದು ಕರೆಯುವ ತೊಂದರೆ ಕೂಡ ತೆಗೆದುಕೊಳ್ಳುವುದಿಲ್ಲ. ಆ ರಿಯಾಯತಿ ಸಾಧ್ವಿ ಪ್ರಜ್ಞಾ ಮತ್ತಿತರ ‘ಶಂಕಿತ’ ಹಿಂದೂ ಭಯೋತ್ಪಾದಕರಿಗೆ ಮಾತ್ರ ಮೀಸಲು! ಅದು ಹೇಗೂ ಇರಲಿ, ಮಂಗಳೂರಿನ ಶಂಕಿತ ಭಯೋತ್ಪಾದಕ ಫಕೀರ್ ಬಾವಾರನ್ನು ಪೊಲೀಸರು ಅಕ್ಟೋಬರ್ 14ರಂದು ಕಸ್ಟಡಿಗೆ ತೆಗೆದುಕೊಂಡರು. ಅಕ್ಟೋಬರ್ 4ರಂದು ಮಂಗಳೂರಿನಲ್ಲಿ ಪೊಲೀಸರು ಹಿಡಿದಿದ್ದ 4 ಶಂಕಿತ ಉಗ್ರರಲ್ಲಿ ಒಬ್ಬರ ಜೊತೆ ಫಕೀರ್ ಬಾವಾರಿಗೆ ಸಂಬಂಧವಿದೆಯೆಂದೂ, ಅವರು ಇಂಡೋನೇಷಿಯಾಕ್ಕೆ ಪಲಾಯನ ಮಾಡುವ ಸಂಚು ನಡೆಸಿದ್ದರು ಎಂದೂ ಪಶ್ಚಿಮವಲಯ ಐಜಿಪಿ ಎ.ಎಂ. ಪ್ರಸಾದ್ ಅಕ್ಟೋಬರ್ 17ರಂದು ಪತ್ರಕರ್ತರಿಗೆ ತಿಳಿಸಿದರು. ವಾಸ್ತವವಾಗಿ ಇಂಡೋನೇಷಿಯಾದಲ್ಲೇ ಕಳೆದ ಕೆಲವು ವರ್ಷಗಳಿಂದ ನೆಲೆಸಿರುವ, ಸಾಕಷ್ಟು ಸ್ಥಿತಿವಂತರೂ ಆಗಿರುವ ಫಕೀರ್‌ಬಾವಾ ತನ್ನ ತಮ್ಮಂದಿರ ಮದುವೆಯ ಪ್ರಯುಕ್ತ ಮಂಗಳೂರಿಗೆ ಬಂದಿದ್ದರು.

ಮಂಗಳೂರಿನಲ್ಲಿ ಅಕ್ಟೋಬರ್ 4ರಂದು ಶಂಕಿತ ಉಗ್ರರ ಬಂಧನವಾದ ಸುದ್ದಿ ತಿಳಿದದ್ದೇ ಸ್ವತಃ ಫಕೀರ್ ಬಾವಾ ಅವರು ಪೊಲೀಸರನ್ನು ಸಂಪರ್ಕಿಸಿ ಮಂಗಳೂರಿನಲ್ಲಿ ತನ್ನ ವಾಸ್ತವ್ಯದ ವಿವರಗಳನ್ನು ತಿಳಿಸಿದರು. ಪೊಲೀಸ್ ತನಿಖೆ ಮುಗಿಯುವವರೆಗೂ ತಾನು ಮಂಗಳೂರಿನಲ್ಲಿ ಉಳಿದುಕೊಳ್ಳುವುದಾಗಿಯೂ ಇಂಡೋನೇಷಿಯಾಕ್ಕೆ ತಾನು ಬುಕ್ ಮಾಡಿದ್ದ ವಿಮಾನದ ರಿಟರ್ನ್ ಟಿಕೇಟ್ ಅನ್ನು ಕ್ಯಾನ್ಸಲ್ ಮಾಡುವುದಾಗಿಯೂ ಫಕೀರ್‌ಬಾವಾ ಪೊಲೀಸರಿಗೆ ತಿಳಿಸಿದ್ದರು. ಬಂಧಿತನಾಗಿದ್ದ 4 ಜನ ಶಂಕಿತ ಉಗ್ರರಲ್ಲಿ ಒಬ್ಬನಾದ ಅಹ್ಮದ್‌ಬಾವಾನಿಗೆ ಫಕೀರ್ ಕೊಪ್ಪದ ಬಳಿ ಇದ್ದ ತನ್ನ ಜಮೀನನ್ನು ಗುತ್ತಿಗೆ ಕೊಟ್ಟಿದ್ದರು. ಬಂಧಿತ “ಉಗ್ರರಿ”ಗೂ ಇವರಿಗೂ ಇದ್ದ ಸಂಬಂಧ ಅಷ್ಟು ಮಾತ್ರ. ಅಷ್ಟಾಗಿಯೂ ಫಕೀರ್‌ಬಾವಾ, ಡಿವೈಎಸ್ಪಿ ಮಲ್ಲಿಕಾರ್ಜುನ ಅವರಿಗೆ ಈ ಗುತ್ತಿಗೆಯ ಕಾಗದ ಪತ್ರಗಳನ್ನೂ ತೋರಿಸಿದ್ದರು. ಅವರು ಇದೊಂದು ಮಾಮೂಲಿ ತನಿಖೆ; ನೀವೇನೂ ಭಯಪಡಬೇಕಾದ್ದಿಲ್ಲ ಎಂದು ಫಕೀರ್‌ಬಾವಾರಿಗೆ ತಿಳಿಸಿದ್ದರು.

ಅಕ್ಟೋಬರ್ 7ರಂದು ಅವರ ತಮ್ಮಂದಿರ ಮದುವೆ ನಡೆಯಿತು. ಅಕ್ಟೋಬರ್ 8 ಮತ್ತು 13ರಂದು ಜಿಲ್ಲಾ ಅಪರಾಧ ತನಿಖೆ ವಿಭಾಗದ ವೆಂಕಟೇಶ್ ಪ್ರಸನ್ನ ಫಕೀರ್ ಬಾವಾ ಅವರ ತನಿಖೆ ನಡೆಸಿದರು. ಆದರೆ ಅಕ್ಟೋಬರ್ 14ರಂದು ಅವರನ್ನು ಕಸ್ಟಡಿಗೆ ತೆಗೆದುಕೊಳ್ಳಲಾಯಿತು. ಪಶ್ಚಿಮವಲಯ ಐಜಿಪಿ ಪ್ರಸಾದ್ ಅವರನ್ನು ಬಂಧಿಸಿದ್ದು ಅಕ್ಟೋಬರ್ 16ರಂದು ಎಂದು ಪತ್ರಕರ್ತರಿಗೆ ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ಕೊಟ್ಟರು. ಫಕೀರ್ ಬಾವಾ ಜೆಹಾದಿಗಳಿಗೆ ಹಣ ಸಂಗ್ರಹಿಸುವುದರಲ್ಲಿ ತೊಡಗಿದ್ದಾರೆ ಎಂದೂ ಪ್ರಸಾದ್ ಅಪಾದಿಸಿದ್ದರು. ಆದರೆ ಫಕೀರ್ ಬಾವಾ ‘ತಾನು ಅನೇಕ ವರ್ಷಗಳ ಕಾಲ ಗಲ್ಫ್ ದೇಶಗಳಲ್ಲಿ ದುಡಿದಿದ್ದು ಈಗ ಸ್ವಯಂನಿವೃತ್ತನಾಗಿ ಇಂಡೋನೇಷಿಯಾದ ತ್ಸುನಾಮಿ ಸಂತ್ರಸ್ತರಿಗೆ ನೆರವಾಗುತ್ತಿರುವ ಕಿಂಡರ್ ಹಟ್ ಎಂಬ ಸ್ವಯಂ ಸೇವಾ ಸಂಸ್ಥೆಯಲ್ಲಿ ದುಡಿಯುತ್ತಿದ್ದೇನೆ. ತನಗೆ ಪಲಾಯನ ಮಾಡುವ ಉದ್ದೇಶವಿದ್ದರೆ, ತಾನಾಗಿಯೇ ಯಾಕೆ ಪೊಲೀಸರಿಗೆ ತನ್ನ ಮಂಗಳೂರಿನ ವಾಸ್ತವ್ಯದ ಬಗ್ಗೆ ತಿಳಿಸುತ್ತಿದ್ದೆ? ಪಲಾಯನ ಮಾಡಲು ಪೂರ್ತ ಹತ್ತುದಿನಗಳ ಕಾಲಾವಕಾಶವಿತ್ತು’ ಎಂದು ಹೇಳುತ್ತಾರೆ. (ದಿ ಹಿಂದು ಪತ್ರಿಕೆಯಲ್ಲಿ ಸುದ್ದಿ ಪ್ರೊ. ಮೊಂಡಲ್ ವರದಿ ಮಾಡಿದಂತೆ ಅಕ್ಟೋಬರ್ 24ರ ಸಂಚಿಕೆ ಪುಟ 5ರಲ್ಲಿ ಪ್ರಕಟ) ಮಂಗಳೂರು ಪೊಲೀಸರಿಂದ ಆದದ್ದೇ ಸಾಲದು ಎಂಬಂತೆ ಈಗ ಅವರಿಗೆ ಜೈಲಿನೊಳಗೆ ಭಜರಂಗಿಗಳು ಹೊಡೆದಿದ್ದಾರೆ!

ಮಂಗಳೂರು ಪೊಲೀಸರ ಕ್ರಿಮಿನಲ್ ವರ್ತನೆಯ ಇನ್ನೊಂದು ಪ್ರಕರಣ ನಡೆದದ್ದು ಅಕ್ಟೋಬರ್ 27 ರಂದು. ಆ ದಿನ ರಾತ್ರಿ ಸುಮಾರು ಒಂದು ಗಂಟೆಯ ಹೊತ್ತಿಗೆ ಉಳ್ಳಾಲ ಪೊಲೀಸರು, ಕಬೀರ್ ಉಳ್ಳಾಲ ಎಂಬುವವರ ಮನೆಗೆ ನುಗ್ಗಿ ಮನೆಯವರ ಎದುರೇ ಹೊಡೆದು ಬಡಿದು ಠಾಣೆಗೂ ಕರೆಸಿಕೊಂಡರು. ಒಂದು ಸುಳ್ಳು ಆರೋಪ ತನಿಖೆಯ ನೆಪದಲ್ಲಿ ಆ ಅಪರಾತ್ರಿಯಲ್ಲಿ ಅವರನ್ನು ಉಳ್ಳಾಲ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಶಿವಪ್ರಕಾಶ್ “ವಿಚಾರಿಸಿಕೊಂಡರು” ಈ ಕಬೀರ್ ಉಳ್ಳಾಲ ನನಗೆ ಚೆನ್ನಾಗಿ ಪರಿಚಿತರು. ನಡುವಯಸ್ಸಿನ ಈತ ಸಂಕೋಚ ಸ್ವಭಾವದ ಸಾಧು ಪ್ರವೃತ್ತಿಯ ವ್ಯಕ್ತಿ; ಕೋಮುಸೌಹಾರ್ದವೇದಿಕೆಯ ಜೊತೆಗೆ ಮೊದಲಿನಿಂದಲೂ ಗುರುತಿಸಿಕೊಂಡವರು. ಮಂಗಳೂರಿನ ನಾಗರಿಕ ಹಕ್ಕುಗಳ ರಕ್ಷಣೆಗಾಗಿ ಇರುವ ಸಂಘಟನೆ ಪಿಯುಸಿಎಲ್‌ನಲ್ಲೂ ಅವರು ಸಕ್ರಿಯವಾಗಿ ಕೆಲಸ ಮಾಡುತ್ತಿರು ವವರು ಕಬೀರ್ ಉಳ್ಳಾಲ ಇನ್ಸ್‌ಪೆಕ್ಟರ್ ಜಯಂತ್ ಶೆಟ್ಟಿ ಮತ್ತು ಶಿವಪ್ರಕಾಶ್ ತನ್ನನ್ನು ವಿನಾಕಾರಣ ಹಿಂಸಿಸುತ್ತಿದ್ದಾರೆ ಎಂದು ಈ ಹಿಂದೆಯೇ ಕೋರ್ಟ್‌ನಲ್ಲಿ ದೂರು ದಾಖಲಿಸಿದ್ದರು. ಈ ನಿಟ್ಟನಲ್ಲಿ ಶಿವಪ್ರಕಾಶ್ ಕಬೀರರನ್ನು ಠಾಣೆಗೆ ಕರೆಸಿ, ಬಟ್ಟೆಬಿಚ್ಚಿಸಿ, ಅವರ ಮೇಲೆ ಪೊಲೀಸ್ ಬೇದೆಗಳಿಂದ ವಾಕ್ ಮಾಡಿಸಿ ಮೈಮೇಲೆಲ್ಲಾ ಬಾಸುಂಡೆ ಬರುವಂತೆ ಹೊಡೆದಿದ್ದಾರೆ. ಎನ್‌ಕೌಂಟರ್ ಮಾಡಿ ನಿನ್ನನ್ನು ತೆಗೆಯುತ್ತೇನೆ ಎಂದು ಬೆದರಿಕೆ ಕೂಡಾ ಹಾಕಿದ್ದಾರೆ. ಅಕ್ಟೋಬರ್ 30ರಂದು ಅಂದರೆ ಈ ಘಟನೆ ನಡೆದ ಮೂರು ದಿನಗಳ ನಂತರ ನಾನು ಅವರನ್ನು ನೋಡಿದಾಗಲೂ ಅವರ ಒಂದು ಕೈ ಬಾತು ಕೊಂಡಿತ್ತು. ಯಥಾಪ್ರಕಾರ ಮಂಗಳೂರು ಉಡುಪಿಗಳ ಮುಖ್ಯಧಾರೆಯ ಪತ್ರಿಕೆಗಳಲ್ಲಿ ಇದೂ ಸಹ ಸುದ್ದಿಯಾಗಲಿಲ್ಲ.

ಇಲ್ಲಿ ಭಜರಂಗಿಗಳು, ಪೊಲೀಸರು, ಕ್ರಿಮಿನಲ್‌ಗಳು ಮತ್ತು ಪತ್ರಕರ್ತರ ನಡುವೆ ಏನು ವ್ಯತ್ಯಾಸವಿದೆ ಹೇಳಿ? ■


ಲಾಕಪ್ ದೌರ್ಜನ್ಯ: ಉಳ್ಳಾಲ ಎಸ್‌ಐ ವಿರುದ್ಧ ಕ್ರಮಕ್ಕೆ ಪಿಯುಸಿಎಲ್ ಒತ್ತಾಯ

ಪೊಲೀಸರು ಮಾಡಿದ್ದು

ಕಾಂಗ್ರೇಸಿನವು ಯಾಕಿ ರಾಜಕಾರಣ ಮಾಡ್ತವಪ್ಪ?

ತೊಲ ಕುಯ್ಲಿಗೆ ಬಂದು ನಿಂತಿದ್ದವು. ಅವಧಿಗೆ ಮುನ್ನವೇ ಬಂದು ಆವರಿಸಿಕೊಂಡ ಚಳಿಯ ದೆಸೆಯಿಂದ ಮುಂಜಾನೆಯ ಎಳೆಬಿಸಿಲು ಹಿತವಾಗಿತ್ತು. ಸರಿಯಾದ ಸಮಯಕ್ಕೆ ಹೊಲ ಕುಯ್ಯದಿದ್ದರೆ ರಾಗಿ ಉದುರಿ ಹೋಗುತ್ತವೆ ಎಂದು ಚಿಂತಾಕ್ರಾಂತನಾಗಿದ್ದ ಕಾಳಮಾವ,

"ಅಲ್ಲಾ ಈ ವಲಕುಯ್ಯಾಕೆ ಬರೋ ಆಳು ಆಟೊಂತರ ಕೂಲಿ ಕೇಳಿದ್ರೆ ಎಲ್ಲಿಂದ ತಂದು ಕೊಡನಾ?" ಎಂದು ಗೊಣಗಿದ.

ಬಯಲು ಸೀಮೆಯ ಕಟ್ಟೆಪುರಾಣ
ಬಿ. ಚಂದ್ರೇಗೌಡ

"ಕರದೇಟಗೆ ಕೂಲಿಯಾಳು ಬರೋ ಕಾಲ ಹೋಯ್ತು ಕಣಮಾವ" ಎಂದಳು ಜುಮ್ಮಿ.

"ನಾವೆ ಯಂಗೋ ಕುಯ್ಕಳದು" ಎಂದ ಸೀರ.

"ನಾವು ಕುಯ್ಯೋ ಕಾಲ ಹೋಯ್ತು ಕಂಡ್ಯ. ಒಂದು ಮುಂಬು ಕುಯ್ಯಕ್ಕಾದತೆಯೀಗ? ವಲ ಕುಯ್ಯಬೇಕಾದ್ರೆ ತ್ವಡೆಲಿ ಸತುಮಾನಿರಬೇಕು. ರಟ್ಟೆ ಬಿಗಿಯಾಗಿರಬೇಕು. ಆಗಿನ ಕಾಲ್ದಲ್ಲಿ ನಾನು ವತ್ತರೆಲೆ ಎದ್ದೊಗಿ ಒತ್ತು ಆಳುದ್ದ ಬರೋವತ್ತಿಗೆ ಒಂದುತುಂಡು ವಲ ಕುಯ್ತಿದ್ದೆ" ಎಂದ ಕಾಳಮಾವ.

"ನಾನೂ ಕೂದಿದ್ದಿನಿ ಕಣೊ ಮಾವ. ವಲ ಕೂದ ದುಡ್ಡಲ್ಲೆ ಒಂದಂಗಿ ವಲಸಿಕೊಂಡಿದ್ದಿನಿ. ಅದೇ ದುಡ್ಡಲ್ಲಿ ಸಿನುಮ ನೋಡಿದ್ದಿನಿ. ಆದ್ರೆ ಇವತ್ತು ನನ್ನ ಕೈಲೂ ಆಯ್ತಾಯಿಲ್ಲ" ಎಂದ ಉಗ್ರಿ.

"ಅದ್ಕೆ ಮಿಸೀನ್ ಬತ್ತವೆ ತಗೊ" ಎಂದಳು ಜುಮ್ಮಿ.

"ಬರ್ಲಿ ಬುಡೆ. ಈ ಕೂಲಿಮಾಡೋರ ಗೋಗರಿಯದಕಿಂತ ಮಿಸೀನೆ ವಾಸಿ."

"ಯಲ್ಲಾ ಕ್ಯಲಸಕೂ ಮಿಸೀನು ಬಂದ್ರೆ ಜನ ಏನು ಮಾಡಬೇಕು ಅಂತ?"

"ಜನ ಹಿಂಗೆ ತಿರುಗಾಡಿಕಂಡು ಇರತರಕಣ ಮಾವ."

"ಇದು ಭಾಳದಿನ ನ್ಯಡಿಯದಿಲ್ಲ ಬುಡ್ಡು. ಇವುರ್ಯಲ್ಲ ಹಿಟ್ಟುಬಟ್ಟಿಲ್ಲದಂಗೆ ಹಾಳಾಗೋಗದ ನಾನ್ನೊಡದಿಲವೆ" ಎಂದ ಕಾಳಮಾವ ಸಿಟ್ಟನಿಂದ.

"ಅಂಗ್ಯಾಕಂದಿ ಬುಡುಮಾವ?" ಎಂದಳು ಜುಮ್ಮಿ.

"ಮತ್ತೆ ಇನ್ನೆನ್ಲೆ? ಕೂಲಿ ಕೊಡ್ತಿವಿ ಬನ್ನಿರ್ಲಾ ಅಂದ್ರುವೆ ತಿಗ ತಿರಿಕಂಡು ಹೋಯ್ತರಲ್ಲಾ ಅದೇಟದಿನ ನ್ಯಡದತೂ ಅಂತ?"

"ಯಾರಿಗಾರ ಮುಯ್ಯಾಳಿಗೋಗಿ ನಿಮ್ಮನೆಲೇಸು ಜನವುರಲ್ಲಾ? ಈಗಂಗೆ ಮಾಡಬೇಕಾಗ್ಯದೆ, ಮುಯ್ಯಾಳಲ್ಲು ಒಂದು ಜಗಳದೆ ಕಣೈ ನಮ್ಮ ವಲಮದ್ಲು ಕುಯ್ಯದೊ, ನಿಮ್ಮ ವಲ ಮದ್ಲು ಕುಯ್ಯದೊ ಅಂತ ಆದೊಂಜಗಳ ಆತ್ತಿಗ್ತದೆ" ಎಂದ ಕಾಳಮಾವ.

"ಅವುರದೊಂದಿನ, ಇವುರದೊಂದಿನ ಕುಯ್ಯೊಡ್ರಾಯ್ತಪ್ಪ" ಎಂದಳು ಜುಮ್ಮಿ.

"ಅದು ನೀನೇಳವೋಟು ಸುಲಬಲ್ಲ ಕಣೇ. ಹಾಳು ಜನ ರಾಜಕಾರಣ ಮಾತಾಡಿ ಮಾತಾಡಿ ಎಷ್ಟು ಕಟ್ಟೊಗ್ಯವುರೆ ಅಂದ್ರೆ, ಮದ್ಲು ವಲ ಕುಯ್ಯುವಾಗ ಕತೆ ಹೇಳೋರು, ಅನುಭವ ಹೇಳೋರು, ಗಾದಿ ಯೇಳೋರು. ಇವತ್ತಿನ ಜನ ಏನಾಗ್ಯವುರೆ ಅಂತೀ?"


"ಅದೇನಾಗಿದ್ದರ್ಲ ನಾನು ಕಾಣದಂಗೆ?"

"ಅಯ್ಯೋ, ಇನ್ನೊಂದು ಸ್ವಲ್ಪ ಹೊತ್ತಿಗೆ ನಿನ್ನೆ ತಗೊ. ಎಡೂರಪ್ಪ ಏನು ಮಾಡ್ತ ಅವುನೆ, ಶೋಬ ಕರಂದ್ಲಾಜೆ ಎಲ್ಲವುಳೆ ಅಂತಿ" ಎಂದ ಉಗ್ರಿ ನಕ್ಕ.

"ಇನ್ನಾರ ಸುದ್ದಿ ಮಾತಾಡನ್ಲ?"

"ಕಾಳಮಾವನ ಕಾಲ್ದಲ್ಲೀ ಯಾವ ರಾಜಕಾರಣಿ ಸುದ್ದಿನೂ ಮಾತಾಡತಿರಲಿಲ್ಲ ಕಣೆ. ವ್ಯವಸಾಯ, ಹಬ್ಬ ಮದುವೆ, ಸಂತೆ ಸುದ್ದಿ ಬುಟ್ರೆ ಇನ್ನೇನು ಮಾತಾಡತಿರಲಿಲ್ಲ. ಅದೇ ಇವತ್ತು ನೋಡು, ರಾಜಕೀಯ ಏನಾಗ್ಯದೆ ಅಂದ್ರೆ ವಲಕುಯ್ಯಕ್ಕೆ ಜನಸಿಕ್ಕದಂಗಾಗ್ಯದೆ" ಎಂದ ಉಗ್ರಿ.

"ಆಗ್ಲೆ ಹೇಳಿದ್ನಲ್ಲ ಅಂಗೆ ಮುಯ್ಯಾಳು ಮಾಡಿ



ಕಂಡು ಕುಯ್ಯಕ್ಕಾಗದಿಲವೇ?"

"ಮುಯ್ಯಾಳ ಕತೆ, ಜೆಡಿಎಸ್ಸು ಕಾಂಗ್ರೆಸ್ಸಿನ ಕತೆಯಾಗ್ಯದೆ ಕಣೆ."

"ಅವುರದೇನು ಕತೇ?"

"ಹೊಂದಾಣಿಕಾಗದಿಲವಂತೆ. ಅಂಗಂತ ದ್ಯಾವೇಗೌಡ ಕದ್ದಿಮುರದಂಗೆ ಹೇಳ್ತವುನೆ. ಆದ್ರು ಕಾಂಗ್ರೆಸ್ ಬಡ್ಡೆತ್ತವು ಒಂದಾಗನಾ ಅಂದವಂತೆ."

"ಗತಿಗೆಟ್ಟವು ಅಂದ್ರೆ ಆ ಕಾಂಗ್ರೆಸ್ಸಿನವೆ ಏನಪ್ಪ" ಎಂದ ಸೀರ.

"ಅಂಗೆ ಆಗ್ಯದೆ ಕಣಮಾವ. ಆಗ ಅವುರು ಇಷ್ಟ ಕುತಗಂಡು ಐದು ಸುತ್ತಿನ ಮಾತುಕತೆ ಮಾಡಿ ಸಕಾ... ಮಾಡಿದ್ರು. ಬಟ್ಟು ಹೋಗಬೇಕಾದ್ರೆ ಒಂದು ಸ... ಮಾತುಕತೆನೂ ಮಾಡಲಿಲ್ಲ, ಕುಮಾರಸ್ವಾಮಿ ಕೊ... ಕಾರಣ ಏನಪ್ಪಾ ಅಂದ್ರೆ ಈ ಕಾಂಗ್ರೆಸ್ಸಿನೋರು ಜೆಡಿ... ವಡದು ನಮ್ಮುನ್ನ ಮುಗುಸಕ್ಕೆ ಮಾಡಿದ್ರು ಅಂದ."

"ಅಂಗಂದಿದ್ನೇನ್ಲ?"

"ಊ ಕಣೇ. ಆದ್ರೆ ಆ ಕಾಂಗ್ರೆಸ್ ಬಡ್ಡೆತ್ತ... ವಬ್ರೂ ಬಾಯಿ ಬುಡ್ತಿಲ್ಲ, ಅಲ್ಲಿಗೆ ಕುಮಾರಸ್ವಾ... ಹೇಳಿದ ಮಾತು ನಿಜ ಅಂತ ಆಯ್ತು ತಾನೆ?"

"ಅವುನ ಮಾತಿಗೆ ಜವಾಬು ಬರ್ಲಿಲ್ಲ ಅಂದ್ರೆ ಅ... ನಿಜ" ಎಂದ ಕಾಳಮಾವ.

"ಸರಿಯಪ್ಪ, ಆಗ ಅಧಿಕಾರ ಕಳಕಂಡು ಅ... ಕುಂತಿದ್ದ ಕಾಂಗ್ರೆಸ್ಸಿನವು ಈಗ ನಾವು ನೀವು ಒಂದ... ಬಜೆಪಿ ಸೋಲಸನ ಅಂತವಲ್ಲಾ ಅವುಕೇನಾರ ಮ... ಮರಿಯಾದಿ ಇದ್ದತೋ ಅಂತ?"

"ಅವುರಿಗಿರ್ಲಿ, ಇವುರಿಗೆ ಮಾನ ಮರಿಯಾ... ಇದಿಯೇನೊ ಉಗ್ರಿ?" ಎಂದುಕೊಂಡು ವಾಟಸ್ಸೆ ಬ...

"ಯಾರಿಗಲಾ?"

"ಈ ಅಪ್ಪ ಮಕ್ಕಳಿಗೆ ಕಣಕ್ಕ. ಇವತ್ತು ಇ... ಬಾಯಿಲಿ ಸೆಕ್ಯುಲರ್ ಅಂದ್ರೆ ಜಾತ್ಯತೀತ ಅನ್ನೊ ... ಬತ್ತಾ ಅದೆ. ಇದೇ ಬಜೆಪಿಗಳ ಜೊತೆ ಹೋದೋ... ಇವುರೆಯ. ಅವುರ ತಂದುಕೂರಿಸಿರದೂ ಇವುರೆಯ... ಈಗ ಆ ಮುದಿಯಮ್ಮ ತರದ ಕಾಂಗ್ರೆಸ್ ಮ... ಸವಾರಿ ಮಾಡಕ್ಕೆ ವಂಟರೋರು ಇವುರೆಯಾ. ಯಂಗ... ಅಪ್ಪ ಮಕ್ಳೈಡಿಯಾ?"

"ಅಂಗರೆ ಕುಮಾರಸ್ವಾಮಿಗೆ ಸೆಕ್ಯುಲರ್ ... ಅರ್ಥಾಯ್ತು ಅನ್ನು?" ಎಂದ ಉಗ್ರಿ.

"ಪದ ಬಳುಸ್ತಾ ಅವುನಪ್ಪ, ಅರ್ಥಾಗ್ಯದೆ ಅ... ಯಂಗೋ ಹೇಳದು. ಅಂತೂ ಅಪ್ಪ ಜಾತ್ಯತೀತ ಅ... ಮಗ ಸೆಕ್ಯುಲರ್ ಅಂತನೆ. ಆದ್ರೆ ಕಾಂಗ್ರೆಸ್‌ನವು ಒಂದ...

ಹಲವು ಬಾರಿ 'ಆಮರಣ ಉಪವಾಸ' ಮಾಡಿದ್ದರಂತೆ

ಮತ್ತೆ ನವೆಂಬರ್ ಒಂದು ಬಂತು.

ಹಿಂದಿನ ದಿನವೇ ಪತ್ರಿಕೆಗಳನ್ನು ಬಂದ್ ಮಾಡಿದ್ದೆ. ಯಾರೂ ಟಿವಿ ಹಾಕದಂತೆ ಆಜ್ಞಾಪಿಸಿದ್ದೆ. 'ಇದೇನು ಹುಚ್ಚಾಟ' ಅಂದಳು ಮನೆಯಾಕೆ. "ಕಳೆದ ವರ್ಷದ ನವೆಂಬರ್ ತಿಂಗಳ ಪತ್ರಿಕೆ ಓದು. ಅದೇ ಈ ಸಲಾನು ಮರುಕಳಿಸುತ್ತೆ. ವೃಥಾ ಪತ್ರಿಕೆಗೆ ಹಣದಂಡ: ಮೂರು ದಿನದ ನಂತರ ತರಿಸೋಣವಂತೆ" ಅಂದೆ. ಅವಳಿಗೂ ಸರಿ ಅನ್ನಿಸಿತು. ನನ್ನ ಪ್ರಚಂಡ ಬುದ್ಧಿವಂತಿಕೆಗೆ ತಲೆದೂಗಿದಳು.

ಆ ದಯಾಮಯನಾದ ಪರಮಾತ್ಮನಿಗೆ ಹೆಂಡತಿ ಹೀಗೆ ಗಂಡನ ತಲೆಯನ್ನು ಮೆಚ್ಚುವುದು ಸರಿತೋರಲಿಲ್ಲವೇನೋ. ಸಂಜೆ ಆಗುತ್ತಿದ್ದಂತೆ ನಗರವೇ ಎಗರಿಹೋಗುವಂತೆ ಢಂಢಮಾರ್ ಶಬ್ಧ ಕೇಳಿಸಿತು. ಹಿಂದೂತ್ವವಾದಿಗಳಿಗೆಲ್ಲ ಮಂತ್ರಿ ಪದವಿ ನೀಡಬೇಕು ಅಂತ ಮುಖ್ಯಮಂತ್ರಿಯವರಿಗೆ ಮನಸ್ಸು ಇತ್ತು ನಿಜ. ಆದರೆ ಕಾನೂನು ಎಂಬುದು ಅಡ್ಡಬರ್ತಿತ್ತು. ಅದಕ್ಕೆ ಎಂತೆಂತಹವೋ ಹುದ್ದೆ ಸೃಷ್ಟಿಸಿ, ಅದಕ್ಕೆ ಮಂತ್ರಿಸ್ಥಾನಮಾನ ನೀಡಿ, ಅವರನ್ನು ಅಲ್ಲಿ ಪ್ರತಿಷ್ಠಾಪಿಸುವ ವಿನೂತನ ಸಂಪ್ರದಾಯವನ್ನು ಜಾರಿಗೆ ತಂದಿದ್ದರು. ಇಂತಹ ಹಲವು ಗಂಜಿ ಕೇಂದ್ರಗಳು ಆಗಲೇ ಕಾರ್ಯ ನಿರ್ವಹಿಸುತ್ತಿದ್ದವು. ನಮ್ಮ ಊರಿನಲ್ಲೂ ಅಂತಹ ಗಂಜಿ ಕೇಂದ್ರ ಸ್ಥಾಪನೆಯಾಗಿರಬೇಕು ಅದಕ್ಕೆ ಯಾವ್ದೋ ಪಟಾಕಿ ಹಚ್ಚಿ ಸಂಭ್ರಮಿಸುತ್ತಿವೆ ಎಂದು ಭಾವಿಸಿದೆ. 'ಇದು ಗಂಜಿ ಕೇಂದ್ರದ ಸಮಾಚಾರ ಅಲ್ಲ, ಕೇಂದ್ರ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡಿದೆ ಅದಕ್ಕೆ ಇದು' ಎಂದು ಯಾರೋ ತಿಳಿಸಿದರು. ಕನ್ನಡದ ಉದ್ಧಾರಕ್ಕಿಂತ ವರ್ಷಕ್ಕೆ ನೂರು ಕೋಟಿ ಗಂಜಿ ಕೇಂದ್ರಗಳು ಸೃಷ್ಟಿಯಾಗುವ ಸಾಧ್ಯತೆಗಳೇ ಕಂಡವು ನನ್ನ ಕಾಮಾಲೆ ಕಣ್ಣಿಗೆ!

ಪಾಪ ಯಡಿಯೂರಪ್ಪನವರಿಗೆ ಬಲೇ ಮೋಸ ಆಗಿತ್ತು, ದೆಹಲಿಗೆ ಸರ್ವಪಕ್ಷಗಳ ನಿಯೋಗ ಅನ್ನುವ ಹೆಸರಿನಲ್ಲಿ ಭಾಜಪ ಶಾಸಕ ಸಂಸದರ ಹಿಂಡನ್ನು ಎತ್ತಾಕಿಕೊಂಡು ಹೋಗಿ ರಾಜಘಾಟ್‌ನಲ್ಲಿ ಗಲಭೆ ಎಬ್ಬಿಸಿ ಸುದ್ದಿ ಮಾಡಬೇಕು ಅಂತ ಇದ್ದರು. ಅದಕ್ಕೆ ಪೂರಕ ಸಿದ್ಧತೆಗಳನ್ನೂ ನಡೆಸಿದ್ದರು. ಪ್ರಧಾನಿ ನಿಯೋಗ ಮಾತ್ರ ಬರಲಿ ಅಂದರೆ ಹೋಗಲ್ಲ, ಎಲ್ಲರಿಗೂ ಸಂದರ್ಶನ ನೀಡಬೇಕು ಅಂತ ಸಾರಿದ್ದರು. ದೇಶದ ಪ್ರಧಾನಿ ಭೇಟಿ ಅಂದರೆ ಅದೇನು ಮುಳುಕಟ್ಟುಚಿಮ್ಮನ ಜಾತ್ರೇನಾ, ಎಲ್ಲರು ಸಾರಾಸಗಟಾಗಿ ನುಗ್ಗೋಕೆ. ಅದು ಮುಖ್ಯಮಂತ್ರಿಗೂ ಗೊತ್ತಿತ್ತು. ದೆಹಲಿಯಲ್ಲಿ ಸುದ್ದಿ ಮಾಡಿ 'ಕನ್ನಡದ ಕಲಿ ಯಡ್ಯೂರಿ' ಅನ್ನಿಸಿಕೊಳ್ಳುವ ಸಂಚು ಹೂಡಿದ್ದರು. ಹಾಳಾದ ಸಿಂಗ್‌ಜೀ ಮೊದಲೇ ನಿರ್ಧಾರ ಪ್ರಕಟಿಸಿ ಮಂಗ್‌ಜೀ ಮಾಡಿ ಹಾಕಿದ್ದರು! ಈಗ ಕನ್ನಡದ ಕೈಬಿಟ್ಟು ಹೈದರಾಬಾದ್ ಕರ್ನಾಟಕಕ್ಕೆ ಸಂವಿಧಾನವ 371 ವಿಧಿಯ ಅನ್ವಯ ಸ್ಥಾನಮಾನ ನೀಡಿ ಅಂತ ಅರಚಬೇಕು. ಕನ್ನಡದ ಜೊತೆ ಮುನ್ನೂರ ಎಪ್ಪತ್ತೊಂದನ್ನೂ ತಗುಲಾಕಿ ರಾಜಘಾಟ್‌ಗೆ ಹೋಗ್ತೀವಿ ಅಂದಾಗಲೇ ತಾರಮ್ಮಯ್ಯ ಆಡಿದ ವಿಪಕ್ಷಗಳು ಇದೊಂದನ್ನೇ ಹಿಡ್ಕಂಡ್ರೆ ಅವರಿರಲಿ ಹಳೇ ಮೈಸೂರಿನ



ಭಾಜಪಗಳೂ ತಲೆಬಗೀತಾವೆ..... ಧರ್ಮ, ಭಾಷೆಯಂತ ಭಾವನಾತ್ಮಕ ವಿಷಯಗಳ ಮೇಲೆ ರಾಜ್ಯದ ಜನರನ್ನು ಒಡೆದು ಆಡಳಿತ ಖಾತರಿಗೊಳಿಸಿಕೊಳ್ಳಬೇಕು ಅಂತಿದ್ದ ಯಡ್ಯೂರಪ್ಪಗೆ ಬಲೇ ನಿರಾಶೆ ಆಯಿತು!

ಆಡಳಿತ, ವಿರೋಧ ಪಕ್ಷಗಳ ನಾಯಕರು, ಕನ್ನಡದ ಅಸಲಿ, ನಕಲಿ ಹೋರಾಟಗಾರರು ಇಂತಹವರೆಲ್ಲರ ಅಭಿಪ್ರಾಯ ತಿಳಿಯುವ ಕುತೂಹಲ ಕೆರಳಿತು. ವ್ರತ ಮುರಿದು ಟಿವಿ ಆನ್ ಮಾಡಿದೆ. ನ್ಯೂಸ್ ಬರ್‍ತಾ ಇತ್ತು, ಅದೇ ಸುದ್ದಿ-ಶಾಸ್ತ್ರೀಯ ಸ್ಥಾನದ ಸುದ್ದಿ. ಹಲವರ ಸಂದರ್ಶನ. ಟಿವಿ ನಿರೂಪಕಿ ಇದರಿಂದ ಆಗುವ ಉಪಯೋಗಗಳನ್ನು ಕೊರೆದಳು. 'ಈಗ ಬನ್ನಿ, ಕನ್ನಡಕ್ಕೆ ಶಾಸ್ತ್ರಿಯ ಭಾಷೆಯಸ್ಥಾನ ದೊರಕಬೇಕೆಂದು ಪಟ್ಟುಹಿಡಿದು ಹಲವು ಬಾರಿ 'ಆಮರಣಾಂತ ಉಪವಾಸ' ಕೈಗೊಂಡಿದ್ದ ಮೈಸೂರಿನ ಹಿರಿಯ ಸಾಹಿತಿ...... ಅವರ ಅಭಿಪ್ರಾಯವನ್ನು ಕೇಳೋಣ' ಅಂದಳು! ಅವರೇನೋ ಹಲವು ಬಾರಿ 'ಆಮರಣಾಂತ ಉಪವಾಸ' ಕುಂತಿದ್ದರು ನಿಜ. ಆದರೆ ಈ ರೀತಿ ಅವಮಾನ ಮಾಡಬಾರದಿತ್ತು!

ಮುಖ್ಯಮಂತ್ರಿ ಚಂದ್ರು ಉರಿಮುಖದಲ್ಲೇ ಬಂದ್ರು. ಪಾಪ ಅವರಿಗೆ ಶಾಸ್ತ್ರೀಯ ಭಾಷೆಗಿಂತಲೂ ತಮ್ಮ ಸ್ಥಾನದ ಘನತೆ ಕಾಡುತ್ತಾ ಇತ್ತು. ಯಾಕೋ ಅವರ ಗ್ರಹಗತಿ ಸರಿ ಇದ್ದಂತಿಲ್ಲ. ವಿಶ್ವಕನ್ನಡ ಸಮ್ಮೇಳನ ನಡೆಯುತ್ತಲ್ಲಾ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ನಾನು ಹೋಗದಿದ್ದರೆ ಹೇಗೆ, ಕನ್ನಡ ಅಭಿವೃದ್ಧಿ ಮಾಡಬೇಕಲ್ಲ ಎಂದೆಲ್ಲ ಯೋಚಿಸಿ ಲಂಡನ್ನಿಗೆ ದಯ ಮಾಡಿಸಿದ್ದರಂತೆ. ಪರದೇಶಿ ಕನ್ನಡದೋವು ಇಂತಹ ಸಮ್ಮೇಳನಗಳನ್ನು ನಡೆಸೋದು ತಮ್ಮ ಮೆಹೇಗಾರಿಕೆ ತೋರ್‍ಸೋಕೆ ಪರಂತು ಕನ್ನಡದ ಮೇಲಿನ ಪ್ರೀತಿಯಿಂದ ಅಲ್ಲ. ಹಂಗಿದ್ದಿದ್ದರೆ ಕನ್ನಡದ ದುಡ್ಡಿನಲ್ಲಿ ಓದಿದ ಅವು ಪರದೇಶದ ಗುಲಾಮಗಿರಿ ಯಾಕೆ ಮಾಡ್ತಿದ್ರೂ ಅನ್ನೋ ವಿಚಾರ ಅವರ ತಲೇಗೇ ಬರಲಿಲ್ಲ, ಸಭೆಯಲ್ಲಿದ್ದರೂ ಯಾರೂ ಇವರನ್ನು ಗುರುತಿಸಲೇ ಇಲ್ಲವಂತೆ. ಇನ್ನು ವೇದಿಕೆಗೆ ಆಹ್ವಾನಿಸುವುದು ಎಲ್ಲಿಂದ ಬಂತು. 'ಅಲ್ಲಾ ಪ್ರಾಧಿಕಾರದ ಅಧ್ಯಕ್ಷ ಅಂತಬೇಡ. ನನ್ನ ಸಿನಿಮಾ ನೋಡಾದರೂ ಗುರುತು ಹಿಡಿಯಬಾರದಿತ್ತಾ ಮುಂಡೇವು' ಎಂದು ಮಾಮೂಲಿ ಸಿನಿಮಾ ಶೈಲಿಯಲ್ಲಿ ಡೈಲಾಗ್ ಹೊಡೆದಿರಬಹುದು. ಅಲ್ಲಿ ನೋಡಿದರೆ ಹಂಗಾಯಿತು. ಇಲ್ಲಿ ನೋಡಿದರೆ ಕನ್ನಡ ರಾಜ್ಯೋತ್ಸವದ ಆಹ್ವಾನ ಪತ್ರಿಕೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಹೆಸರೇ ಇಲ್ಲ! ಇಲ್ಲೂ ಹಾಳಾಗಲಿ. ಹಂಪಿ ಉತ್ಸವಕ್ಕೆ? ಅಲ್ಲೂ ನಹಿ! ಎಲ್ಲೆಲ್ಲೂ ಮುಖ್ಯಮಂತ್ರಿ ಚಂದ್ರುಗೆ ಚಂದ್ರ! ಅದಕ್ಕೇ ಕಿಡಿಕಾರಿದರು. ಇವರದ್ದೇ ಅಪರಾಧ. ಹೀಗೆಲ್ಲ ಗೌರವ ನಿರೀಕ್ಷಿಸುವುದು ಸಲ್ಲ. ಯಡ್ಯೂರಪ್ಪನವರ ದಕ್ಷ ಆಡಳಿತದಲ್ಲಿ ಯಾವುದೇ ಪ್ರಾಧಿಕಾರ ಅಂದರೆ ರಾಜಕೀಯ ನಿರಾಶ್ರಿತರ ಗಂಜಿಕೇಂದ್ರ ಅಂತ ತಿಳ್ಕೋಬೇಕಿತ್ತು! ಭಿಕ್ಷುಕರಿಗೆ ಆಯ್ಕೆ ಪ್ರಶ್ನೆ ಇಲ್ಲ!

ಮುಂದೆ ಟಿವಿ ನೋಡುವ ಹುಮ್ಮಸ್ಸೇ ಇಲ್ಲದಾಯ್ತು, ಆಫ್ ಮಾಡಿದೆ.

ಈ ಸಲದ ರಾಜ್ಯೋತ್ಸವ ಪ್ರಶಸ್ತಿಯನ್ನು ಐವತ್ತೆರಡು ಜನರಿಗೆ ಮಾತ್ರ ಪ್ರಧಾನ ಮಾಡಲಾಗುತ್ತದೆ ಎಂದಿದ್ದರು ಶೋಭಾ ಕರಂದ್ಲಾಜೆ. ಅವರ ಮಾತು ಅಂದರೆ ಸರ್ಕಾರ... ಆಜ್ಞೆ ಅಲ್ಲವಾ. ಇರಬಹುದೇನೋ ಅಂದುಕೊಂಡಿ... ಯಡ್ಯೂರಪ್ಪನವರು ಯಾವುದೇ ಕಾರಣಕ್ಕೂ ಎಂಭ... ಮೀರಲ್ಲ ಅಂದಿದ್ದರು. ಎಲ್ಲೋ ಇಬ್ಬರಿಗೂ ಯಡವಟ್ಟಾಗ... ಅಂದ್ಕೊಂಡೆ. ಫೋಟೋದಲ್ಲೂ ಮಂತ್ರಿಯ ತರಹ, ಕಾಣ... ಮಂತ್ರಿ (ಇಲ್ಲೊಂದು ಸ್ವಲ್ಪ ವಿವರಣೆ. ಪೊಲೀಸ್ ಇಲಾಖೆ... ಗೆಳೆಯನೊಬ್ಬ ಸಿಕ್ಕಿದ್ದ. 'ಈ ಸರ್ಕಾರದ ಕಾರ್ಯವೈ... ನೋಡಿದರೆ ಯಾರೂ ಮಂತ್ರಿಗಳಾಗಲು ಲಾಯಕ...

ಅಣಕ
ಎಚ್.ಎಲ್. ಕೇಶವಮೂರ್ತಿ

ಅನ್ನುಸ್ತೆ. ನೋಡೋಕಾದ್ರೂ ಮಂತ್ರಿಗಳ ಹಾಗೆ ಕಾಣ... ಅಂದರೆ ಅದೂ ಇಲ್ಲ, ನಿಜವಾಗ್ಲೂ ಬ್ಯಾಡ. ಫೋಟೋ... ಲ್ಲಾರ ಮಂತ್ರಿಗಳಂಗೆ ಕಂಡಾರ ಅಂದ್ರೆ ಅದೂ ಇ... ಎಂದಿದ್ದ! ಅದು ನೆನಪಾಯ್ತು) ಬಿ.ಎಸ್. ಆಚಾಯ... ಎಂಬತ್ತ ಒಂಬತ್ತು ಜನರ ಹೆಸರು ಪ್ರಕಟಿಸಿದರು. ಮಾರ... ಬೆಳಗ್ಗೆ ಅದು ತೊಂಬತ್ತೆರಡಾಯಿತು!

ಸರ್ಕಾರದ ಪ್ರಶಸ್ತಿಗಳ ಕುರಿತು ಒಂದು ಮಾತಿ... 'ಇವರು ರಾಜ್ಯ ಪ್ರಶಸ್ತಿ ವಿಜೇತರು' ಎಂದು ಯಾರಾದರ... ಪರಿಚಯಿಸಿದರೆ ಅದು ಅಭಿಮಾನದ ಸಂಗತಿಯೇ ಅಥ... ವ್ಯಂಗ್ಯವೋ ಅನ್ನುವ ಸಂಶಯ ಬರುತ್ತಂತೆ. ಅಷ... ಪಸಂದಾಗಿರುತ್ತಂತೆ ವಿಜೇತರ ಆಯ್ಕೆ. ಯಡ್ಡಿ ಮ... ಸರ್ಕಾರ ಅಂತ ಇಲ್ಲ, ಯಾವಾಗಲೂ ಇಂತಹ ತೂ... ಎದ್ದು ಕಾಣುತ್ತೆ.

ಈ ಹಿಂದೆ ಪ್ರಶಸ್ತಿ ಪಡೆದವರು 'ಹಾಳಾದ್ದು ಆವಾ... ಸಿಕ್ಕಿದ್ದು ಈಗಲಾದರೂ ಸಿಕ್ಕಬಾರದಾಗಿತ್ತೆ' ಅಂತ ಕೈ... ಹಿಸುಕಿಕೊಳ್ತಿದಾರಂತೆ. ಆವಾಗ ಅವರಿಗೆ ಸಿಕ್ಕಿದ್ದು ಬ... ಹತ್ತು ಸಾವಿರ ರೂಪಾಯಿ, ಈಗಲಾದರೆ ಒಂದು ಲ... ಸಿಗ್ತಿತ್ತಲ್ಲಾ ಅಂತಾವ. ಪಡಕೊಂಡೋರು ಈ ರೀತಿ ಗೋ... ಡೋದು ಸರಿ. ಮಳೆ ಬತ್ತು ಅಂತ ಉಪ್ಪಿನವನ್ನು ಅತ್ತ... ತೆಂಗಿನ ಕಾಯವನೂ ಅತ್ನಂತೆ ಅನ್ನೊ ಹಂಗೆ ಹೊಡ್ಕೊ... ಡೋರು ಅಳುಮುಂಜಿ ಮಾಡಿದರೆ ಹೇಗೆ, ರಾಜ್ಯ ಪ್ರ... ವಿಜೇತ ಅನ್ನೋ ಹೆಸರೂ ಇರ್ತಿರ್ಲಿಲ್ವಲ್ಲ ಅಂತ ಸಮಾಧಾ... ಮಾಡಿಕೊಂಡವರೂ ಇದ್ದಿರಬಹುದು! ಪ್ರಶಸ್ತಿಗಾ... ಹರಸಾಹಸ ಮಾಡಿದವರು ಯಡ್ಯೂರಿಗೆ ಹಿಡಿಶಾಪ ಹಾ...

ರಾದವನ ಅಂತವೆ. ಈ ನನಮಕ್ಕಳ ಬುಟ್ಟೇನಾರ ಆ ದ್ಯಾವೇಗೌಡನ ಕೈಗೆ ತ್ತೆ ಬುದ್ಧನೇನೊ?"

"ನಿಜ ಕಣೊ. ದ್ಯಾವೇಗೌಡನ ತಲೆಯೇನೊ ನುಣ್ಣಗದೆ. ಆದ್ರೆ ಆ ರಾಮಯ್ಯ, ಪ್ರಕಾಶ, ಮಾದೇವಪ್ಪ ಇವುರ ತಲೆಲ್ಲಲ್ಲ ಕೂದ್ಲವೆ. ಅವು ನ್ನೆ ದ್ಯಾವೇಗೌಡ ಗುಂಜಿ ದೂರ ಯಸಿತನೆ. ಆಗ ಅವು ಎಲ್ಲಿಗೋಗಬೇಕು ಣ?"

"ಅದೋಗ್ಲಿ ಕಣೊ ಉಗ್ಗಿ, ಹಾಸನದಲ್ಲಿ ಕಾಲಾದಿಂದ ದ್ಯಾವೇಗೌಡುನ್ನ ಣ್ ಮಾದಿಕಂಡು ಬಂದಿರೊ ಜನವುರಲ್ಲಾ, ಅವುರ ಪಾಡೇನಾಗಬೇಕು ಸಿ?"

"ನಿಜ ಕಣೊ. ಪಾಪ ಗಂಡಸಿ ಶಿವರಾಮ ಅವುರ್ನಲ್ಲ ವಳ್ಳೆ ರಾಜಕಾ ಗಳು. ಅಂಥೋರು ಕಾಂಗ್ರೆಸಿನಲ್ಲೇ ಕಾಲ ದೂಡದು ಕಷ್ಟ ಅನ್ನದಾದ್ರೆ, ಈ ಗ್ರೆಸ್ಸಿನವು ಯಾಕಪ್ಪ ರಾಜಕಾರಣ ಮಾಡಬೇಕು? ಆ ದ್ಯಾವೇಗೌಡ ನೂರಾರು ಟಿ ಖರ್ಚು ಮಾದಿ ಇಪ್ಪತ್ತೆಂಟು ಸೀಟಿಗೆ ಬಂದು ನಿಂತೋಗಿದ್ದ. ನ್ನೊಂದು ಚುನಾವಣೆ ಆದ್ರೆ ಹದುಮೂರು ಸೀಟಿಗೆ ಬತ್ತನೆ."

"ಅಂಗಂತಿಯಾ?"

"ವ್ಯವನೆಟ್ಟ ಕಣೊ. ಅದು ಈ ಕಾಂಗ್ರೆಸ್ಸಿನವುಕೆ ಗೊತ್ತಾಗದು ಬ್ಯಾಡ ಊ?"

"ದುಡ್ಡು ತಗಂಡು ತಿಕೀಟು ಕೊಡೋ ಪಾರ್ಟಿಗೆ ಯಂಗೆ ಗೊತ್ತಾಗ ಳು?"

"ಯಾರ್ಲ ದುಡ್ಡು ತಗಂಡೋರು?"

"ಕಾಂಗ್ರೆಸ್ಸಿನವು ಕಣಕ್ಕ. ದ್ಯಾವೇಗೌಡು, ಪಾರ್ಟಿ ಟಿಕೆಟ್ ಕೊಡಬೇಕಾದ್ರೆ ದುಡ್ಡು ಕೊಟ್ಟು ತಿಕೀಟನೂ ಕೊಟ್ರಂತೆ. ಇನ್ನ ಬಿಜೆಪಿಗಳೂ ಅಷ್ಟೆ. ಗ್ಯೆಲಿ ಟಿಕೆಟ್ಟು, ಯಡಗ್ಯೆಲಿ ಜನಾರ್ದನ ರೆಡ್ಡಿ ದುಡ್ಡು ಕೊಟ್ಟು ತಿಕೀಟ್ ಟ್ರು."

"ಆದ್ರೆ ಸದಾನಂದಗೌಡ ಅಂಗೆ ಕೊಟ್ಟಿಲ್ಲವಂತಲ್ಲೊ?"

"ಅವುನು ಯಾರತ್ರಲೋ ವಳ ಯವಾರ ಮಾಡಿರಬೇಕು ಕಣೊ. ಅದಕ್ಕೆ ತಿ ಪರಸೆಂಟು ಬಿಜೆಪಿ ಟಿಕೇಟ್ ವಿತ್‌ಮನಿ ಸಮೇತ ಸಿಕ್ಕವೆ. ಅದೇ ಗ್ರೆಸ್ಸಿನೋರು ಕೊಟ್ಯಾಂತ್ರುರುಪಾಯಿ ಕೊಟ್ಟು ಟಿಕೆಟ್ ತಗಂಡು ಸೋತು ವೆ. ಗೆದ್ದ ಜಗ್ಗೇಶ ಬಿಜೆಪಿಗೆ ಮಾರಿಕಂಡು ಆ ಸಾಲ ತೀರಿಸಿದನಂತೆ ?"

"ನಿಜವೇನ್ಲ?"

"ನಂತಾಯಾಣೆ ನಿಜ ಕಣಕ್ಕ."

"ಅದ್ನ ಜಗ್ಗೇಸನಂಗೆ ಹೇಳ್ತಿಯಲ್ಲಾ?!"

■

ಪಡೆದವರಲ್ಲಿ ಶೇ. ಐವತ್ತು ಭಾಗ ಸಂಘ ಪರಿವಾರಿಗಳೇ ಇದ್ದಾರೆ ದೂಷಿಸುತ್ತಿದ್ದಾರೆ. ಹೀಗೆ ಆಕ್ಷೇಪಿಸುವುದರಲ್ಲಿ ಅರ್ಥ ಇಲ್ಲ. ಭಾಜಪ ಾರಕ್ಕೆ ಬಂದ ರಾಜ್ಯ ಹಾಗೂ ದೇಶದಲ್ಲಿ ತಮ್ಮನ್ನು ಅಧಿಕಾರದ ಗದ್ದುಗೆಗೆ ಲು ಸಹಕರಿಸಿದವರಿಗೆ ಸಹಾಯ ಮಾಡುವುದು ಲಾಗಾಯ್ತಿನಿಂದಲೂ ರುವ ಪದ್ಧತಿ. ಇಲ್ಲೂ ಅದನ್ನೇ ಅನುಸರಿಸಿದ್ದಾರೆ. ಪ್ರಶಸ್ತಿ ನೀಡುವುದರ ಲಕ ಸಹಾಯ ಮಾಡುವುದೂ ಒಂದು ವಿಧಾನ. ಪ್ರಶಸ್ತಿ ಹಣವನ್ನು ು ಲಕ್ಷಕ್ಕೆ ಏರಿಸಲೂ ಇದೇ ಪ್ರಮುಖ ಕಾರಣ. ಪ್ರಶಸ್ತಿ ವಿಜೇತರೆಲ್ಲರೂ ಪರಿವಾರಿಗಳೇ ಆಗಿಲ್ಲವಲ್ಲ ಅದಕ್ಕೆ ಸಂತೋಷ ಪಡಿ.

ಪ್ರಶಸ್ತಿ ನೀಡುವುದರಲ್ಲಿ ಒಂದು ದೋಷ ಇದ್ದಂತಿದೆ. ಸಮಾಜದ ವಿವಿಧ ಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ರ್ಮಿಕ ಕ್ಷೇತ್ರದ ಯಾವ ಮಹಾಸ್ವಾಮಿಗಳ ಹೆಸರೂ ಇದ್ದಂತಿಲ್ಲ. ಇಂತಹ ನಡುವೆ ತಾವು ಕಾಣಿಸಿಕೊಳ್ಳುವುದು ತರವಲ್ಲ ಎಂದೇನಾದರೂ ು ಭಾವಿಸಿದರೆ? ಧಾರ್ಮಿಕ ಕ್ಷೇತ್ರಕ್ಕೂ ಕನ್ನಡಕ್ಕೂ ಯಾವುದೇ ಸಂಬಂಧ ಎಂದು ಪರಿಗಣಿಸಿದರೆ? ಕೋಟಿಗಟ್ಟಲೆ ಕೊಡುವ ದಾನಶೂರ ಕರ್ಣನೇ ್ಯಮಂತ್ರಿಯಾಗಿರುವಾಗ ಜುಜುಬಿ ಒಂದು ಲಕ್ಷಕ್ಕೆ ಆಸೆ ಪಡುವುದು ಲ್ಲ ಎಂದು ತಿಳಿದಿರುವರೆ? ಏನಾದರಾಗಲಿ ಇದೊಂದು ಲೋಪವೆಂದೇ ಣಿಸಬೇಕಾಗುತ್ತದೆ!

ಧ್ವಂಸ ಸೇವೆ!

ಕನ್ನಡಮ್ಮನ ಸೇವೆ ಮಾಡುವ ರೀತಿ ಅನನ್ಯ!

ನವೆಂಬರ್ ಒಂದರಂದು ಕನ್ನಡಮ್ಮನಿಗೆ 'ಧ್ವಂಸ ಸೇವೆ!'

ಯಾರಿಂದ? ಕರವೇ ಕಾರ್ಯಕರ್ತರಿಂದ!

ರಾಜ್ಯೋತ್ಸವದ ದಿನ ಹಿಂದಿ ಹಾಡುಪ್ರಸಾರ ಮಾಡುವುದು ಎಂದರೇನು?

ಇದು ನಡೆದಿತ್ತು ಮೈಸೂರಿನ ಎಫ್.ಎಂ. ನಿಲಯದಲ್ಲಿ!

ಕೆರಳಿತು ಕನ್ನಡಮ್ಮನ ಧೀರ ಪಡೆ. ನಡೆಯಿತು ಆ ಕಚೇರಿಗೆ. ಧ್ವಂಸ ಾತು ಹೀಠೋಪಕರಣಗಳನ್ನ.

ಶಿಕ್ಷೆ ಆಯಿತೆ ಧ್ವಂಸ ಪಡೆಗೆ?

ಟಿವಿಯಲ್ಲಿ ವೀರಪಡೆಯ ಕೃತ್ಯ ಚಿತ್ರ ಸಮೇತ ವರದಿಯಾದಾಗಲೇ

ಹೌದು ಈ ಟಿವಿ ಕ್ಯಾಮೆರಾದವರೇನು ದೇವಾಂಶ ಸಂಭೂತರಾ? ಹೀಗೆ ನಡೆಯುತ್ತದೆಂದು ಅವರಿಗೆ ಮುಂಚೆಯೇ ಹೇಗೆ ತಿಳಿಯಿತು?

ಧ್ವಂಸವೀರರೇ ಕರೆಸಿದ್ದರು!

ಆಮೇಲೆ ಏನಾಯಿತು ಈ ವೀರಪಡೆ?

'ಸೊಗತ' ಆಯಿತು!

ಎರಡು ದಿವಸಗಳ ನಂತರ ಪೊಲೀಸರಿಗೆ ಸಿಕ್ಕಿದರಂತೆ)


ಅಲ್ಲ, ಕನ್ನಡ ರಾಜ್ಯೋತ್ಸವದ ದಿವಸ ಹಿಂದಿ ಹಾಡು ಪ್ರಸಾರ ಮಾಡಬೇಡಿ ು ತಿಳಿಸಿದ್ದರೆ ಅವರು ಕೇಳುತ್ತಿರಲಿಲ್ಲವಾ, ಖಂಡಿತ ಕೇಳುತ್ತಿದ್ದರು. ಆದರೆ ಸ ಪಡೆಯುತ್ತಿತ್ತೇ ಈ ವೀರಧೀರಪಡೆ?

ಆಹಾ, ಎಂತಹ ಕನ್ನಡ ಸೇವೆ! ■

"ಒಳ್ಳೆಯವರು-ಆದರೆ ಅಸಹ್ಯ ಜನ"



ಇತ್ತೀಚೆಗೆ ಇಂಗ್ಲೆಂಡಿನಲ್ಲಿ ನಡೆದಿರುವ ಒಂದು ಮುಖ್ಯ ಚಳವಳಿ-ಹೊಗೆಸೊಪ್ಪಿನ ವಿರುದ್ಧ. ಇಂಗ್ಲೆಂಡಿನ ಡಾಕ್ಟರುಗಳು, ಅಧ್ಯಾಪಕರು, ನಮ್ಮ ಬಾಬಾ ಆಮ್ಟೆ ತರಹದವರು ಸಿಗರೇಟ್, ನಶ್ಯ ಚುಟ್ಟಾ ಮುಂತಾದ್ದರ ವಿರುದ್ಧ ದೊಡ್ಡ ಹೋರಾಟವನ್ನೇ ನಡೆಸಿದ್ದಾರೆ. ಜೆಫ್ರಿ ಬರ್ನಾರ್ಡ್ ಎಂಬ ಪತ್ರಕರ್ತ ಮತ್ತು ಅಂಕಣಕಾರ ಸಿಗರೇಟ್, ಹೆಂಡದ ಪರವಾಗಿ ನಾಟಕ ಬರೆದು ಇಂಗ್ಲೆಂಡಿನ ಟೊಬ್ಯಾಕೋ ವಿರೋಧಿಗಳಿಗೆ ಕಿಚ್ಚು ಹಚ್ಚಿದ್ದರೂ ಇಂಗ್ಲೆಂಡಿನಲ್ಲಿ ಈ ಸಿಗರೇಟ್ ವಿರೋಧಿ ಚಳವಳಿ ದೊಡ್ಡದಾಗಿ ಬೆಳೆದಿದೆ.



ಇಂಗ್ಲೆಂಡಿನಲ್ಲಿ ವರ್ಷಕ್ಕೆ ಒಂದು ಲಕ್ಷ ಜನ ಸಿಗರೇಟ್, ಚುಟ್ಟಾ ವಗೈರೆಗೆ ಸಂಬಂಧಿಸಿದ ಕಾಯಿಲೆಯಿಂದ ಸಾಯುತ್ತಿರುವುದಾಗಿ ಹೇಳಲಾಗುತ್ತಿದೆ.

ಆದರೆ ಸಿಗರೇಟ್, ಚುಟ್ಟಾ ಸೇದುವವರ ವಾದ ಕೂಡ ಜೋರಾಗಿದೆ. ಇಂಗ್ಲೆಂಡಿನ ಸುಪ್ರಸಿದ್ಧ ಟ್ರಫಾಲ್ಗರ್ ಹೀರೋ ನೆಲ್ಸನ್ ಧೂಮಪಾನಿಯಾಗಿದ್ದ; ಆತನೇ ಇಂಗ್ಲೆಂಡಿನ ಅರಮನೆ ಮತ್ತು ಪಾರ್ಲಿಮೆಂಟಿನಲ್ಲಿ ಧೂಮಪಾನದ ಪರಂಪರೆ ಆರಂಭಿಸಿದ. ಚರ್ಚಿಲ್ ತನ್ನ ತೊಂಭತ್ತು ವರ್ಷ ಮೀರಿದ ಜೀವನದಲ್ಲಿ ಎಪ್ಪತ್ತು ವರ್ಷ ಸೇದಿದ. ಅಲ್ಲದೆ ಚೈನ್ ಸ್ಮೋಕ್ ಮಾಡುವ ನೂರು ಜನರಲ್ಲಿ ಕೇವಲ ಏಳು ಜನಕ್ಕೆ ಕ್ಯಾನ್ಸರ್ ಬರುತ್ತದೆ. ಹಾಗೆ ನೋಡಿದರೆ, ಮೊಲೆಯುಳ್ಳ ಅಮೆರಿಕಾದ ಎಲ್ಲ ಹೆಂಗಸರಲ್ಲಿ ನೂರರಲ್ಲಿ ಹತ್ತು ಜನಕ್ಕೆ ಮೊಲೆಯ ಕ್ಯಾನ್ಸರ್ ಬರುತ್ತದೆ.


ಮೊನ್ನೆ ಖ್ಯಾತ ಬ್ರಿಟಿಷ್ ಕಾದಂಬರಿಕಾರ ಆಂಟೋನಿ ಬರ್ಜೆಸ್‌ನನ್ನು ಕೇಳಿದರು: "ಈ ಧೂಮಪಾನ ವಿರೋಧಿಗಳ ಬಗ್ಗೆ ನಿಮಗೇನೆನ್ನಿಸುತ್ತೆ?"

"ಒಳ್ಳೆಯವರು-ಆದರೆ ಅಸಹ್ಯ ಜನ ಅಷ್ಟೆ" ಅಂದ.

"ಯಾಕೆ?"

"ಯಾಕೆಂದರೆ, ಮನುಷ್ಯ ತಲುಬನ್ನು ಇಟ್ಟುಕೊಳ್ಳುತ್ತಾನೆ, ಆದರಿಂದ ಪಡೆದ ಸುಖಕ್ಕೆ ಶಿಕ್ಷೆಯನ್ನೂ ಅನುಭವಿಸುತ್ತಾನೆ. ಅದು ಅವನ ಸ್ವಾತಂತ್ರ್ಯ, ಸಂತೋಷ ಮತ್ತು ಪರಿತಾಪಕ್ಕೆ ಸಂಬಂಧಿಸಿದ್ದು. ನಾನು ಸಿಗರೇಟ್ ಸಪ್ಪೆಯೆಂದು ಚುಟ್ಟಾ ಶುರುಮಾಡಿದೆ- ಇದನ್ನು ನಿಲ್ಲಿಸುವ ಹಕ್ಕು ಯಾವ ಅಸಹ್ಯ ಮನುಷ್ಯನಿಗೂ ಇರಕೂಡದು!"


ಇರಾಕ್‌ನ ತಾಯಿ



ನಿನ್ನೆ ಇರಾಕ್‌ನಲ್ಲಿ ಭೂಯುದ್ಧ ಶುರುವಾಗಿದೆ. ಈ ಕದನದಲ್ಲಿ ಗಮನ ಸೆಳೆವ ಅನೇಕ ವಿಷಯಗಳಿವೆ. ಒಂದು ದೇಶದ ವಿರುದ್ಧ ಎರಡು ಡಜನ್ ರಾಷ್ಟ್ರಗಳು; ಅಮೆರಿಕಾದ ಸೈನ್ಯದಲ್ಲಿ ಬಹುಪಾಲು ಜನ ವರ್ಣೀಯರು; ಈಗಾಗಲೇ ಅರವತ್ತು ಸಾವಿರ ಬಾರಿಯ ಮಿತ್ರರಾಷ್ಟ್ರಗಳ ವಿಮಾನ ದಾಳಿಯಲ್ಲಿ ಕನಿಷ್ಠ ಎರಡು ಲಕ್ಷ ಜನ ಸತ್ತಿರುವ ಸಂಭವ. ಆಧುನಿಕ ಯುದ್ಧ ಕ್ರೂರವಾದದ್ದು, ನಿರರ್ಥಕವಾದದ್ದು, ಯಾವುದೇ ಶೌರ್ಯ, ಧೈರ್ಯಕ್ಕೆ ಅವಕಾಶ ನೀಡದ್ದು. ಅಲ್ಲದೆ ಇರಾಕ್‌ನ ಅಮಾಯಕ ಜನ ಈ ಸದ್ದಾಂನನ್ನು ಚುನಾವಣೆಯಲ್ಲಿ ಆರಿಸಿಲ್ಲ. ಆತ ಸರ್ವಾಧಿಕಾರಿ. ಇವೆಲ್ಲದಕ್ಕಿಂತ ಭೂಯುದ್ಧ ಶುರುವಾದ್ದರ ಬಗ್ಗೆ ಕೇಳಿದ ಇರಾಕ್‌ನ ತಾಯಿಯೊಬ್ಬಳು ಪತ್ರಕರ್ತರಿಗೆ ಹೇಳಿದ್ದು ಮನಕರಗಿಸುತ್ತದೆ; "ಬೇಡ-ಯುದ್ಧ ಬೇಡ. ನನ್ನ ಮಗ ಸಾಯುವುದು ಬೇಡ. ಅಮೆರಿಕಾದ ಮಕ್ಕಳೂ ಸಾಯುವುದು ಬೇಡ... ಯುದ್ಧ ಮಾಡಬೇಡಿ!"

ಈ ತಾಯಿಯ ಒಡಲಿನ ನೋವು ಯಾವನಿಗೆ ಕೇಳಿಸುತ್ತದೆ?

ನಾಯಕನೋ; ಸಾಮಾನ್ಯನೋ?



ರೋಮ್ ಚಕ್ರಾಧಿಪತ್ಯ ನಶಿಸುತ್ತಾ ಹೋದ ವೇಳೆಯಲ್ಲಿ ಒಂದು ಘಟನೆ ನಡೆಯಿತು. ಅದನ್ನು ಶೇಕ್ಸ್‌ಪಿಯರ್ ನಾಟಕವನ್ನಾಗಿ ಮಾಡಿದ್ದಾನೆ. ಅದರ ಹೆಸರು 'ಕೋರಿಯೋಲ್ಯಾನಸ್'. ಈ ನಾಟಕವನ್ನು ಮೊನ್ನೆ ಬ್ರಿಟಿಷ್ ತಂಡವೊಂದು ಬೆಂಗಳೂರಲ್ಲಿ ಆಡಿತು.

ಅದು ರೋಮ್‌ನ ಒಂದು ಘಟನೆಯನ್ನು ಕುರಿತದ್ದು; ಇಂಗ್ಲೆಂಡಿನಲ್ಲಿ ಶೇಕ್ಸ್‌ಪಿಯರ್ ಕಾಲದಲ್ಲಿ ನಡೆಯುತ್ತಿದ್ದ ಸಂಗತಿ ಆಧರಿಸಿದ್ದು. ಇವತ್ತಿಗೂ ಇಂಥದು ಆಗುತ್ತಲೇ ಇದೆ. ಒಂದು ಮುಖ್ಯ ಪ್ರಶ್ನೆಯನ್ನು ಈ ನಾಟಕ ಕೇಳುತ್ತದೆ- ಆ ಪ್ರಶ್ನೆ ಶತಮಾನಗಳಿಂದ ಪ್ರಜಾಪ್ರಭುತ್ವಗಳಲ್ಲಿ, ಸರ್ವಾಧಿಕಾರಿಗಳ ಮೂಲಕ, ಕಮ್ಯುನಿಸ್ಟ್ ಕೇಂದ್ರೀಕರಣದಲ್ಲಿ ಪ್ರತಿಧ್ವನಿಸುತ್ತಲೇ ಇದೆ. ಪ್ರಶ್ನೆ: ದೇಶಕ್ಕೆ ನಾಯಕ ಮುಖ್ಯವೋ, ಜನಸಾಮಾನ್ಯರು ಮುಖ್ಯವೋ? ಎಲ್ಲದಕ್ಕೂ ಜನಸಾಮಾನ್ಯರ ಮಾತನ್ನ ಕೇಳಿ ಮಾಡುವುದು ಒಳ್ಳೆಯದೋ, ನಾಯಕನ ಅಂತರ್ದೃಷ್ಟಿಯನ್ನು ಅವಲಂಬಿಸುವುದು ಒಳ್ಳೆಯದೋ?

ನಾಯಕ ಕೋರಿಯೋಲ್ಯಾನಸ್ ಪ್ರಕಾರ-ಜನಸಾಮಾನ್ಯರು ಮೂರ್ಖರು, ಹೇಡಿಗಳು, ಹೊಟ್ಟೆಪಾಡಿಗಾಗಿ ಜೀವಿಸುವವರು. ಯುದ್ಧ ಮಾಡುವ ಸ್ಫೂರ್ತಿಯನ್ನು ಕೂಡ ನಾಯಕ ಕೊಡುತ್ತಾನೆ, ಇಲ್ಲದಿದ್ದರೆ ಅವರು ಮಣ್ಣಿನ ಗೊಂಬೆಗಳಂತೆ ಬಿದ್ದಿರುತ್ತಾರೆ. ಜನಸಾಮಾನ್ಯರನ್ನು ಕಂಡರೆ ತಾತ್ಸಾರ ಬಿಟ್ಟರೆ ಬೇರೆ ಭಾವನೆಯೇ ಅವನಲ್ಲಿಲ್ಲ.

ಹಾಗೆಯೇ ಜನಸಾಮಾನ್ಯರಿಗೆ ಈ ನಾಯಕನೆನ್ನಿಸಿಕೊಂಡವನ ದುರಹಂಕಾರ, ಏಕಪಕ್ಷೀಯ ತೀರ್ಮಾನ, ವ್ಯಕ್ತಿಗತ ನೀಚತನ ದೇಶಕ್ಕೆ ಅಪಾಯಕಾರಿ.

ನಾಯಕ ಕೋರಿಯೋಲ್ಯಾನಸ್ ಜನಸಾಮಾನ್ಯರ ತೀರ್ಪನ್ನು ಉಲ್ಲಂಘಿಸಿ ದೇಶದಿಂದ ಹೊರಟುಹೋಗಿ ತನ್ನ ಶತ್ರುಗಳೊಂದಿಗೆ ರಾಜಿ ಮಾಡಿಕೊಂಡು ಸ್ವದೇಶಕ್ಕೆ ಹಿಂತಿರುಗಿ ಎಲ್ಲರನ್ನೂ ಸದೆಬಡಿಯುತ್ತಾನೆ; ನಾಶವಾಗುತ್ತಾನೆ.

ಎಂಥ ಅದ್ಭುತ ನಾಟಕ! ಬಂಡವಾಳಶಾಹಿ ನಿರ್ದೇಶಕರು ಇದನ್ನು ಜನಸಾಮಾನ್ಯರ ವಿರುದ್ಧ ಅಂದರೆ, ಬ್ರೆಕ್ಟ್ ತರಹದವರು ಇದನ್ನು ನಾಯಕನ ವಿರುದ್ಧ ಎಂದು ವಿಶ್ಲೇಷಿಸಿದ್ದಾರೆ.

ಪ್ರಜಾಪ್ರಭುತ್ವದ ಮಿತಿ ಮತ್ತು ಶಕ್ತಿ ಅರಿಯಲು ಇವತ್ತಿಗೂ ಈ ನಾಟಕ ಸಹಾಯಕ. ಅಂದಹಾಗೆ ಶೇಕ್ಸ್‌ಪಿಯರ್ ತನ್ನ ಕಾಲದ ಎಲ್ಲ ಬಂಡವಾಳಶಾಹಿಗಳಂತೆ, ನಾಯಕರಂತೆ ಸಾರ್ವಜನಿಕ ಜಾಗ ಆಕ್ರಮಿಸಿಕೊಂಡು ಪ್ರತಿಭಟನೆಗೊಳಗಾಗಿದ್ದವನು!

ಬುದ್ಧ ಮತ್ತು ನನ್ನಕ್ಕ

ಬುದ್ಧಾ, ನೀನು
ನಿರ್ವಾಣನಾಗಿ
ಬೆತ್ತಲಾಗಿ ಎದ್ದು ಹೋದಾಗ
ನಕ್ಕವರು ಎಷ್ಟೋ ಮಂದಿ
ಹಾಡಿ ಅಪಹಾಸ್ಯಕ್ಕೀಡು ಮಾಡಿ
ವ್ಯಂಗ್ಯವಾಡಿದವರು
ಲೆಕ್ಕವಿಲ್ಲದಷ್ಟು ಮಂದಿ

ನಿಮ್ಮ ಬೆತ್ತಲು
ಜಗದ ಕತ್ತಲನು
ಬೆಳಗಲು
ನೆಪವಾಗಿತ್ತಷ್ಟೇ
ಆದರೂ,
ಅದು ನಿಮ್ಮ ಬೆತ್ತಲು
ಅಲ್ಲವೇ?

ನನ್ನಕ್ಕಾ, ನೀ
'ಓ ಚನ್ನಮಲ್ಲಿಕಾರ್ಜುನ'
ಎನ್ನುತ್ತಲೇ
ಕಾಡು - ನಾಡಲ್ಲಿ
ಬೆತ್ತಲ ಹೆಜ್ಜೆಗಳನ್ನಿಟ್ಟಾಗ
ನಕ್ಕು, ಆನಂದಿಸಿ, 'ಛೀ - ಥೂ
ಸುಚ್ಛೀ' ಎಂದು ನಿಂದಿಸಿದವರು
ನಿತ್ಯ ಸ್ಮರಿಸುತಿಹರು,
ಪೂಜಿಸುತಿಹರು ನಿನ್ನನು

ಕದಲೀವನ ನೆನಪಾದಾಗಲೆಲ್ಲಾ
ಉಡುತಡಿಯ ಜೀವ
ಕಡಲ ತಾಳ್ಮೆಯ ಹೃದಯದ
ನನ್ನಕ್ಕ, ಮನದ ಪಿಸು ಮಾತಾಗುತ್ತಾಳೆ

ಬುದ್ಧ ನಗಲಿಲ್ಲ,
ನನ್ನಕ್ಕ ಹುಡುಕುವುದು
ಬಿಡಲಿಲ್ಲ
ನಾವರೂ ಅಷ್ಟೇ,

ಹಣ, ಗೌರವ, ಕೀರ್ತಿ, ಪ್ರತಿಷ್ಠೆಗಳನ್ನು
ಬಿಟ್ಟು ಬದುಕಲು ತಯಾರಿಲ್ಲ

ಅದಕ್ಕೇ
ಇಲ್ಲಿ ನೆಮ್ಮದಿ ಮನೆ ಮಾಡಿಲ್ಲ
ನಮ್ಮವರ ಹುಡುಕಾಟಗಳೂ
ಕೊನೆ ಕಾಣುತ್ತಿಲ್ಲ



■ಎಚ್.ಎಂ. ಮಹೇಂದ್ರಕುಮಾರ್

ಪೇಜಾವರ ಮಠಾಧೀಶರಿಗೆ ಬಹಿರಂಗ ಸವಾಲು



ಮಾನ್ಯ ಯತಿವರೇಣ್ಯ ಪೇಜಾವರ ಮಠಾಧೀಶರೆ,

ದಿನಾಂಕ 7-11-08ರ ಶುಕ್ರವಾರ ಬೆಂಗಳೂರಿನಲ್ಲಿ ನಾವು ನಡೆಸಿದ ಪತ್ರಿಕಾಗೋಷ್ಠಿಯ ವಿವರ ಈಗಾಗಲೇ ತಮ್ಮ ಗಮನಕ್ಕೆ ಬಂದಿರುತ್ತದೆ ಎಂದು ನಾವು ಭಾವಿಸಿದ್ದೇವೆ.

ಆದಾಗ್ಯೂ ಕರ್ನಾಟಕದ ಜನತೆಗೂ ಈ ವಿಚಾರ ಪೂರ್ಣವಾಗಿ ತಿಳಿಯಲಿ ಎಂಬ ಉದ್ದೇಶದಿಂದ ಈಗ ನಿಮಗೆ ಬಹಿರಂಗ ಪತ್ರ ಬರೆಯಲಾಗಿದೆ.

ಹಲವಾರು ದಶಕಗಳಿಂದ ತಾವು ಹಿಂದೂ ಧರ್ಮದ ಉದ್ಧಾರಕ್ಕಾಗಿ ಹಾಗೂ ಹಿಂದೂಗಳ ಐಕ್ಯತೆಗಾಗಿ ಶ್ರಮಿಸುತ್ತಾ ಬಂದಿದ್ದೀರಿ. ವಿಶ್ವ ಹಿಂದೂ ಪರಿಷತ್‌ನ ಮುಂಚೂಣಿಯಲ್ಲಿದ್ದುಕೊಂಡು ಸಂಘ ಪರಿವಾರದ ಚಟುವಟಿಕೆಗಳಲ್ಲಿ ಸದಾ ಸಕ್ರಿಯರಾಗಿದ್ದೀರಿ. ಅದೇರೀತಿ ಇತ್ತೀಚೆಗೆ ಮತಾಂತರ ಕುರಿತಂತೆ ತಾವು ಬಿಟ್ಟೂ ಬಿಡದೆ ನೀಡುತ್ತಿರುವ ಹೇಳಿಕೆಗಳನ್ನು ನಾವೆಲ್ಲಾ ಗಮನಿಸುತ್ತಿದ್ದೇವೆ. ಈ ನಾಡಿನ ಬಹುಸಂಖ್ಯಾತರಾದ ದಲಿತ ಹಾಗೂ ದಮನಿತ ಸಮುದಾಯದ ಜನ ಬೌದ್ಧ ಧರ್ಮ ಹಾಗೂ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುತ್ತಿರುವುದು ತಮಗೆ ಸಮ್ಮತವಾಗಿಲ್ಲ ಎಂಬುದು ನಿಮ್ಮ ಹೇಳಿಕೆಗಳಿಂದ ಸ್ಪಷ್ಟಪಟ್ಟಿದೆ. ದಲಿತ ಸಮುದಾಯದವರು ಹಿಂದೂ ಧಾರ್ಮಿಕ ಚೌಕಟ್ಟಿಗೆ ಒಳಪಟ್ಟಿರುವ ಸದಸ್ಯರೇ ಆಗಿದ್ದಾರೆ ಎಂಬ ಕಲ್ಪನೆ ನಿಮಗಿರುವುದರಿಂದ ಓರ್ವ ಹಿಂದೂ ಧಾರ್ಮಿಕ ಮುಖಂಡರಾಗಿ ನಿಮಗೆ ಕೆಲವು ಜವಾಬ್ದಾರಿಗಳೂ ಇವೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.

ಜಾತಿ ತಾರತಮ್ಯ ತೊಡೆದು ಹಾಕಬೇಕಿರುವುದು ಅದರಲ್ಲೊಂದು. ಹಿಂದೂಗಳ ಒಗ್ಗಟ್ಟಿಗೆ ಪ್ರಮುಖ ತೊಡಕಾಗಿರುವ ಈ ಜಾತಿ ಭೇದವನ್ನು ತಮ್ಮಂತಹ ಪ್ರಾಜ್ಞರು ಮುಂದೆ ನಿಂತು ನಿವಾರಿಸಿದ್ದಲ್ಲಿ ಬಹುಶಃ ನಿಮ್ಮ ಜೀವಿತಾವಧಿಯಲ್ಲೇ 'ನಾವೆಲ್ಲ ಹಿಂದೂ- ನಾವೆಲ್ಲಾ ಒಂದು' ಎಂಬ ನಿಮ್ಮ ಗುಂಪಿನ ಸ್ಲೋಗನ್‌ನ ಆಶಯ ಈಡೇರಲೂಬಹುದು.

ಇದಕ್ಕಾಗಿ ನಿಮ್ಮ ಮುಂದೆ ಬಹಿರಂಗ ಸವಾಲನ್ನು ಇಡುತ್ತಿದ್ದೇವೆ.

ಬಿಡಿ ಚಿತ್ರಗಳು

• ಈಶ

ಸವಾಲು ಒಂದು : ದಲಿತರೊಂದಿಗೆ ಸಹಪಂಕ್ತಿ ಭೋಜನ

ಮುಂದಿನ ಡಿಸೆಂಬರ್ 6ರಂದು ಡಾ. ಅಂಬೇಡ್ಕರ್ ಪರಿನಿರ್ವಾಣದ ದಿನ ಜಾತಿವಿನಾಶ ವೇದಿಕೆಯ ರಾಜ್ಯಾಧ್ಯಕ್ಷರಾದ ಕವಿ, ಸಾಹಿತಿ ಲಕ್ಷ್ಮಣ್‌ರವರ ಮನೆಗೆ ಪೇಜಾವರರು ಆಗಮಿಸಿ ದಲಿತರೊಂದಿಗೆ ಸಹಭೋಜನ ಮಾಡಬೇಕು.

ಕವಿ ಲಕ್ಷ್ಮಣ್ ಮಾದಿಗ ಜಾತಿಯವರು.

ಸವಾಲು ಎರಡು : ಡಿಸೆಂಬರ್ 6ರಂದು ಪೇಜಾವರರು ಮಾದಿಗ ಲಕ್ಷ್ಮಣ್‌ರ ಮನೆಗೆ ಸಹಭೋಜನಕ್ಕೆ ಬರುವ ಮುನ್ನ ಅತ್ತ ಉಡುಪಿಯ ತಮ್ಮ ಪೇಜಾವರ ಮಠದಲ್ಲೂ ಒಂದು ನೂರು ಜನ ಬ್ರಾಹ್ಮಣರು ಹಾಗೂ ಒಂದು ನೂರು ದಲಿತ-ಶೂದ್ರರಿಗೂ ಸಹಪಂಕ್ತಿ ಭೋಜನ ನಡೆಯುವಂತೆ ವ್ಯವಸ್ಥೆ ಮಾಡಿ ಬರಬೇಕು.

ಸವಾಲು ಮೂರು : ಉಡುಪಿಯ ಶ್ರೀಕೃಷ್ಣ ದೇವಾಲಯಕ್ಕೆ ಬರುವ ಹಿಂದೂ ಭಕ್ತರನ್ನು ಬ್ರಾಹ್ಮಣ-ಶೂದ್ರ ಎಂದು ವಿಭಜಿಸಿ ಪ್ರತ್ಯೇಕವಾಗಿ ಊಟ ಹಾಕಿಸುವ ಪದ್ಧತಿ ರದ್ದು ಮಾಡಿ ಎಲ್ಲಾ ಹಿಂದೂಗಳಿಗೆ ಒಂದೇ ಪಂಕ್ತಿಯಲ್ಲಿ ಭೋಜನ ವ್ಯವಸ್ಥೆ ಕಲ್ಪಿಸಬೇಕು.

ಸವಾಲು ನಾಲ್ಕು : ಹಿಂದೂ ಧರ್ಮೀಯರ ನಡುವೆ ಒಗ್ಗಟ್ಟು ಮೂಡಿಸುವ ಸಲುವಾಗಿ ಉಡುಪಿಯ ಶ್ರೀಕೃಷ್ಣ ದೇಗುಲವನ್ನು ಸಮಸ್ತ ಸಮಾಜಕ್ಕೆ ಬಿಟ್ಟುಕೊಡುವುದಾಗಿ ಬಹಿರಂಗ ಹೇಳಿಕೆ ನೀಡಬೇಕು. ಪ್ರಸ್ತುತ ಈ ದೇವಸ್ಥಾನವನ್ನು ಪೇಜಾವರರು ಒಂದು ನಿರ್ದಿಷ್ಟ ಜಾತಿಯ ಆಸ್ತಿ ಎಂದು ಪ್ರತಿಪಾದಿಸುತ್ತಿದ್ದಾರೆ.

ಸವಾಲು ಐದು : ಉಡುಪಿಯ ಅಷ್ಟಮಠಗಳಿಗೆ ಶೂದ್ರ-ದಲಿತರನ್ನು ಉತ್ತರಾಧಿಕಾರಿಗಳನ್ನಾಗಿ ಆರಿಸಬೇಕು. ಹಾಗೆ ಮಾಡುವ ಮೂಲಕ ಹಿಂದೂಗಳೆಲ್ಲಾ ಒಂದೇ ಎಂಬ ತಮ್ಮ ನಂಬಿಕೆಗೆ ಬದ್ಧತೆ ಪ್ರದರ್ಶಿಸಬೇಕು.

ಸವಾಲು ಆರು: ಪೇಜಾವರರ ಮಾಧ್ವ ಜಾತಿಯ ಮಠ, ಹಾಸ್ಟೆಲ್ ಹಾಗೂ ಶಾಲಾ ಕಾಲೇಜುಗಳಲ್ಲಿ ಎಲ್ಲಾ ಜಾತಿ-ಜನಾಂಗದವರಿಗೂ ಮುಕ್ತ ಪ್ರವೇಶಾವಕಾಶ ನೀಡಬೇಕು. ಕರ್ನಾಟಕದಲ್ಲಿರುವ ವೀರಶೈವ ಮಠಗಳು ಯಾವುದೇ ಜಾತಿ ಭೇದವಿಲ್ಲದೆ ಎಲ್ಲಾ ಜಾತಿಯ ವಿದ್ಯಾರ್ಥಿಗಳಿಗೂ ವಿದ್ಯಾದಾನ-ಅನ್ನದಾಸೋಹ ನಡೆಸುತ್ತಿದ್ದಾರೆ. ಈಗ ಹಿಂದೂ ಧರ್ಮೀಯರ ಒಗ್ಗಟ್ಟಿಗಾಗಿ ಪೇಜಾವರರೂ ಈ ಪರೋಪಕಾರದ ಕೆಲಸ ಪ್ರಾರಂಭಿಸುವುದಾಗಿ ಬಹಿರಂಗವಾಗಿ ಒಪ್ಪಿಕೊಳ್ಳಬೇಕು.

ಸವಾಲು ಏಳು : ದಲಿತರು ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುವ ಬದಲಾಗಿ ಆರ್ಯಸಮಾಜಕ್ಕೆ ಸೇರುವಂತೆ ಪೇಜಾವರರು ಕರೆ ನೀಡಿದ್ದಾರೆ.

ಇಲ್ಲಿ ನಮ್ಮ ಪ್ರಶ್ನೆ ಏನೆಂದರೆ ದಲಿತರು ಆರ್ಯ ಸಮಾಜಕ್ಕೆ ಏಕೆ ಸೇರಬೇಕು? ಅದರ ಬದಲಾಗಿ ಪೇಜಾವರರು ದಲಿತರನ್ನು ಮಾಧ್ವ ಸಮಾಜಕ್ಕೆ ಯಾಕೆ ಆಹ್ವಾನಿಸಬಾರದು?

ಮಾನ್ಯ ಪೇಜಾವರರೆ,

ಹಿಂದೂಗಳಲ್ಲಿ ಐಕ್ಯತೆ ಸಾಧಿಸಬೇಕೆಂಬ ನಿಮ್ಮ ಕಳಕಳಿ ನಮಗೆ ಅರ್ಥವಾಗುತ್ತದೆ. ಆದರೆ ಈ ನಿಮ್ಮ ಪ್ರಯತ್ನದಲ್ಲಿ ಕಿಂಚಿತ್ತಾದರೂ ಯಶಸ್ಸು ಕಾಣಬೇಕೆಂದರೆ, ಮುನ್ನಡೆಯಾಗಬೇಕೆಂದರೆ ಅದು ಕೆಲವು ತ್ಯಾಗಗಳನ್ನು ಬೇಡುತ್ತದೆ.

ನೀವು ನಿಮ್ಮ ಮೇಲ್ಜಾತಿ ಶ್ರೇಷ್ಠತೆಯ ದುರಹಂಕಾರವನ್ನು ತ್ಯಜಿಸಿ ಎಲ್ಲಾ ಹಿಂದೂಗಳೊಂದಿಗೂ ಜಾತಿ ಭೇದವಿಲ್ಲದೆ ಬೆರೆಯುವುದೂ ಅಂತಹ ತ್ಯಾಗಗಳಲ್ಲಿ ಒಂದಾಗಿದೆ.

ಡಿಸೆಂಬರ್ 6ರಂದು ಬೆಳಗ್ಗೆ 10 ಗಂಟೆಗೆ ತಾವು ತಮ್ಮ ಪರಿವಾರ ಸಮೇತರಾಗಿ ಮಾದಿಗ ಕವಿ ಲಕ್ಷ್ಮಣ್‌ರ ಮನೆಗೆ ಸಹಪಂಕ್ತಿಭೋಜನಕ್ಕೆ ಬರುವ ಮೂಲಕ ನೀವು ಹಿಂದೂ ಧರ್ಮ ಆಚರಿಸುವ ಎಲ್ಲಾ ಜೀವ ವಿರೋಧಿಯಾದ, ಅಲ್ಪತನದ ಮೌಲ್ಯಗಳನ್ನು ಧಿಕ್ಕರಿಸಬೇಕೆಂದು ನಮ್ಮ ಮನವಿ.

ಲಕ್ಷ್ಮಣ್ ಮನೆ ವಿಳಾಸ

ಲಕ್ಷ್ಮಣ್, ನಂ.7, 3ನೇ ಕ್ರಾಸ್, 2ನೇ ಮೈನ್ ರಾಮಾಂಜನೆಯ ಬಡಾವಣೆ, ನಂದಿನಿ ಲೇಔಟ್ 3ನೇ ಹಂತ ಬೆಂಗಳೂರು-560 096.


ನೆನಪಿರಲಿ, ಡಿಸೆಂಬರ್ 6ರಂದು ನೀವು ಎಲ್ಲಿರುತ್ತೀರಿ ಎಂಬುದು ನಿಮ್ಮ ಹಿಂದೂ ಪರ ಕಾಳಜಿಗಳ ಅಸಲಿತನ ಎಷ್ಟೆಂಬುದಕ್ಕೆ ಸಾಕ್ಷಿಯಾಗಲಿದೆ. ಅಂದು ನೀವು ದಲಿತರೊಂದಿಗೆ ಸಹಪಂಕ್ತಿ ಭೋಜನಕ್ಕೆ ಬರುವ ತೀರ್ಮಾನ ಮಾಡಿದಲ್ಲಿ ನಿಮಗೆ ಹೃತ್ಪೂರ್ವಕ ಸ್ವಾಗತವಿದೆ. ಆದರೆ ಹಾಗೆ ಹೊರಟು ಬರುವ ಮುನ್ನ ನಮ್ಮ ಉಳಿದ ಆರು ಷರತ್ತುಗಳಿಗೆ ನೀವು ಒಪ್ಪಿರಬೇಕೆಂಬುದೇ ನಮ್ಮ ಅಪೇಕ್ಷೆ, ಷರತ್ತು...

ಡಿಸೆಂಬರ್ 6ರಂದು ನಿಮ್ಮ ಆಗಮನಕ್ಕಾಗಿ ಜಾತಿವಿನಾಶ ವೇದಿಕೆ, ಡಾ. ರಾಮಮನೋಹರ ವಿಚಾರವೇದಿಕೆ ಹಾಗೂ ಇನ್ನಿತರ ಜನಪರ ಸಂಘಟನೆಗಳ ನೂರಾರು ಜನ ಕಾಯುತ್ತಿರುತ್ತೇವೆ.

ಪತ್ರಕರ್ತರೂ ಇರುತ್ತಾರೆ. ಶುಭಾಶಯಗಳೊಂದಿಗೆ ■

ಮತಾಂತರ ಮತ್ತು ವಿ.ಕ. ಪ್ರಾಯೋಜಿತ ಚರ್ಚಾ ವೇದಿಕೆ

ವಿಜಯ ✌ ಕರ್ನಾಟಕ



ಕೇವಲ ತನ್ನ ಯುಕ್ತಿ-ತಂತ್ರಗಾರಿಕೆಯಿಂದಲೇ ಇಡೀ ವ್ಯವಸ್ಥೆಯನ್ನು ಮುಷ್ಠಿಯಲ್ಲಿರಿಸಿಕೊಂಡು ಕುಣಿಸಿದ ಇತಿಹಾಸವುಳ್ಳ ಬ್ರಾಹ್ಮಣಿಕೆಯ ಬಗ್ಗೆ ತಿಳಿದಿದ್ದವರಿಗೆ ವಿಕ ಪ್ರಾಯೋಜಿತ ಭೈರಪ್ಪನ ಲೇಖನ ಅಚ್ಚರಿಯನ್ನೇನೂ ತರದು. ಅಷ್ಟಕ್ಕೂ ತನ್ನ ಪತ್ರಿಕೆಯ ಮುಖಪುಟದಲ್ಲೇ ತನ್ನ ಕೊಳಕನ್ನು ಕಾರಲು ಅವಕಾಶ ಮಾಡಿಕೊಟ್ಟ ಆ ಪತ್ರಿಕೆಯ 'ನಿಷ್ಠೆ'ಯನ್ನು ಮೆಚ್ಚಬೇಕಾದದ್ದೇ. ಒಟ್ಟಾರೆ ಇವನ್ನೆಲ್ಲ ನೋಡಿದಾಗ ಇಂದು ಪ್ರಮುಖವಾಗಿ ಚರ್ಚೆಗೆ ಗ್ರಾಸವಾಗುತ್ತಿರುವ ಮತಾಂತರದ ವಿಷಯ ವನ್ನ ಕೆಲ ಪ್ರಭಾವಿ ಮಾಧ್ಯಮಗಳು ತಮ್ಮ ಮೂಗಿನ ನೇರಕ್ಕೆ ಕೊಂಡೊಯ್ದು ಜನರನ್ನು ಉದ್ದೇಶಪೂರ್ವಕವಾಗಿಯೇ ಗಲಿಬಿಲಿಗೊಳಿಸುತ್ತಿವೆ ಎಂಬ ಸಂಗತಿ ಸ್ಪಷ್ಟವಾಗಿದೆ. ಒಟ್ಟಾರೆ ಇವುಗಳಿಗೆ ಮತಾಂತರದ ಮೂಲ ಕಾರಣ, ಸಾಧಕಬಾಧಕಗಳಿಗಿಂತ ಇದನ್ನೇ ನೆಪವನ್ನಾಗಿಸಿಕೊಂಡು ನಿರ್ದಿಷ್ಟ ಧರ್ಮ, ಸಮುದಾಯವನ್ನು ಹಣಿಯುವುದೇ ಮುಖ್ಯ ಉದ್ದೇಶವಿರುವಂತೆ ತೋರುತ್ತಿದೆ.

ಮುಖ್ಯವಾಗಿ ಭೈರಪ್ಪ ಆರಿಸಿಕೊಂಡಿರುವ "ಇಂಥ ಘಟನೆ ಬೇರೆ ಯಾವ ದೇಶದಲ್ಲಿ ನಡೆದೀತು?" ಎಂಬ ಶೀರ್ಷಿಕೆಯೇ ಹಾಸ್ಯಾಸ್ಪದವಾಗಿದೆ. ಬೇರೆಲ್ಲೂ ಘಟಿಸಲು ಸಾಧ್ಯವಿಲ್ಲದಂತಹ ಸಂಗತಿಗಳನ್ನು ಈತನಕ ನಮ್ಮ ಉದಾರ ಮನಸ್ಸಿನ ಹಿಂದೂಗಳು ಸಹಿಸಿಕೊಂಡಿದ್ದಾರಾದರೂ ಇನ್ನು ಮುಂದೆ ಸಾಧ್ಯವಿಲ್ಲ ಎನ್ನುವ ರೀತಿ ಮತಾಂಧ ಹಿಂದೂತ್ವವಾದಿಗಳ ಲೂಟಿ-ದೊಂಬಿ-ಅನಾಚಾರಗಳಿಗೆಲ್ಲ ತಮ್ಮದೇ ರೀತಿಯ ಪೊಳ್ಳು ಸಮರ್ಥನೆಗಳನ್ನು ಲೇಖನದುದ್ದಕ್ಕೂ ಭೈರಪ್ಪ ನೀಡುತ್ತಾ (ಕಳ್ಳನಿಗೆ ಸುಳ್ಳು ಸಾಕ್ಷಿ ಎಂಬಂತೆ ಅಂಬೇಡ್ಕರ್ ಕುರಿತು **worshiping falls god** ನಂತಹ ಕೀಳುಮಟ್ಟದ ಕೃತಿ ರಚಿಸಿದ ಅರುಣ್ ಶೌರಿಯಂಥವರ ಆಕರ ಗ್ರಂಥಗಳು ಇಂತವರಿಗಷ್ಟೇ ಲಾಯಕು) ಜತೆ-ಜೊತೆಗೆ ಕ್ರಿಶ್ಚಿಯಾನಿಟಿಯನ್ನು ಟೀಕಿಸುತ್ತಾ ಹೋಗುತ್ತಾರೆ.

ಒಂದು ಪತ್ರ

ಮೂಲತಃ ನಿರ್ದಿಷ್ಟ ಅಡಿಪಾಯವೇ ಇಲ್ಲವ ಹಿಂದೂಧರ್ಮವನ್ನು ಹೊಗಳುವ ಭರದಲ್ಲಿ ಭೈರಪ್ಪ-ಪ್ರವಾದಿಗಳಿಂದ ಸ್ಥಾಪಿತವಾದ ಮುಸ್ಲಿಂ-ಯಹೂದಿ-ಕ್ರಿಶ್ಚಿಯಾನಿಟಿಯಲ್ಲಿ ಪಾಪಿಗಳು-ನರಕದ ಭಯ ಮುಂತಾದವುಗಳಿಂದ ಜನರನ್ನು ಭೀತಗೊಳಿಸಲಾಗುತ್ತಿದೆ ಎಂದು ಹೀಯಾಳಿಸುತ್ತಾ ಹಿಂದೂ ಧರ್ಮಶಾಸ್ತ್ರದಲ್ಲಿ ಈ ರೀತಿ ಅಥವಾ ಇದಕ್ಕಿಂತಲೂ ಭೀಕರವಾಗಿ ಹೇಳಲ್ಪಟ್ಟಿರುವ ಬಗ್ಗೆ ಭೈರಪ್ಪ ತನ್ನ ಜಾಣ ಮೌನವನ್ನು ತೋರುತ್ತಾರೆ (ಮಾಹಿತಿಗಾಗಿ ಮನುಸ್ಮೃತಿಯ 8 ರಿಂದ 11 ನೇ ಅಧ್ಯಾಯವನ್ನು ನೋಡಬಹುದು).

ಇನ್ನು ಈ ವಿಚಾರಕ್ಕೆ ಸಂಬಂಧಿಸಿದಂತೆ ಅತ್ಯಂತ ನೋವಿನ ಸಂಗತಿಯೆಂದರೆ ಇದಕ್ಕೆ ನೇರವಾಗಿ ಸಂಬಂಧಪಟ್ಟೂ ಕೂಡ ಸಂಬಂಧಪಡದಂತೆ ವರ್ತಿಸುವವರದ್ದು. ಇದೀಗ ಆಗಾಗ ಸಾಮೂಹಿಕವಾಗಿ ದಲಿತರು ಬೌದ್ಧ ಮತಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಇನ್ನೊಂದು ಕಡೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದು ಪೇಜಾವರನಂಥವರ, ಹಿಂದೂತ್ವವಾದಿ ನಾಯಕರ, ಮಾಧ್ಯಮಗಳ ಒತ್ತಡವೂ ಕೂಡ ಮತಾಂತರ ನಿಷೇಧ ಕಾನೂನಿನ ಜಾರಿಯ ಕಡೆಗಿದೆ. ಇವೆಲ್ಲವೂ ದಲಿತರನ್ನು ಕಟ್ಟಿ ಹಾಕುವ ತಂತ್ರವಷ್ಟೆ.

ಒಂದು ವೇಳೆ ಈ ಕಾನೂನು ಜಾರಿಗೊಂಡರೆ ಸುಲಭದಲ್ಲಿ ಏನೂ ಮಾಡಲಾಗದು. ಮತಾಂತರ ಎಂದಾಕ್ಷಣ ಮುಗ್ಧ ದಲಿತರು-ಗಿರಿಜನರು (ಮುಗ್ಧ ದಲಿತರನ್ನು ಬಲಾತ್ಕಾರದಿಂದ ಮತಾಂತರಗೊಳಿಸಲಾಗುತ್ತಿದ್ದೆ ಇತ್ಯಾದಿ) ಎಂಬ ಮಾತು ಬರುತ್ತವೆ. ಆದರೆ ಶೋಷಣೆಯ ಸಮಯದಲ್ಲಿ ಈ ಮುಗ್ಧ ಎಂಬ ವಿಶೇಷಣ ಇವರಿಗೆ ಬೇಡ. ಮೊನ್ನೆ ಓರ್ವನಂತೂ ಮತಾಂತರಕ್ಕೂ ಅಸ್ಪೃಶ್ಯತೆಗೂ ತಳುಕು ಹಾಕಿ ನೋಡುವುದೇ ತಪ್ಪು ಎಂಬಂತೆ ಬರೆದಿದ್ದ (ವಿ.ಕ. 27.10.08) ಅಂದರೆ ಅಂಬೇಡ್ಕರ್‌ರಂಥವರು ಮತಾಂತರದ ಮನಸ್ಸು ಮಾಡಿದ್ದು **for a change** ಗೋಸ್ಕರ ಎಂದು ಅರ್ಥೈಸಬೇಕೆ? ಪ್ರತಾಪ ಸಿಂಹ, ಭೈರಪ್ಪ, ಚಿಮೂರಂಥವರನ್ನು ದತ್ತು ತೆಗೆದುಕೊಂಡಂತಿರುವ ವಿ.ಕ.ದಂತಹ ಪತ್ರಿಕೆಯಿಂದ ಒಂದು ವರ್ಗದ ನಿರೀಕ್ಷೆಗಳಷ್ಟೇ ಬಿಂಬಿಸಲ್ಪಟ್ಟಿರುತ್ತವೆಯೇ ವಿನಃ ಎಲ್ಲವಲ್ಲ. ಅಂದರೆ, ಮತಾಂತರದ ಬಗ್ಗೆ ಜನರಲ್ಲಿ ಈಗಿರುವ ನಂಬಿಕೆಗಳನ್ನು ಬದಲಿಸಲು ಹೊರಟಿರುವಂತಿದೆ ಈ ಲೇಖನ ಮಾಲೆ.

ಲೇಖನದಲ್ಲಿ ಭೈರಪ್ಪರೇ ಒಂದೆಡೆ ದಲಿತರು ಮತಾಂತರಗೊಳ್ಳಲು ಇರುವಂತಹ ಸಾಮಾಜಿಕ ಅಸಮಾನತೆ ಎಂಬ ನೈಜ ಕಾರಣವನ್ನು ಮುಚ್ಚಿಟ್ಟು-ದಲಿತರು ತಮ್ಮಲ್ಲಿರುವ ಬೆದರಿಕೆಯ ಈ ಅಸ್ತ್ರ ಕೈತಪ್ಪುವುದೋ ಎಂಬ ಭಯದ ಕಾರಣಕ್ಕೆ ಮತಾಂತರ ನಿಷೇಧ ಕಾನೂನಿನ ಜಾರಿಗೆ ವಿರೋಧ ತೋರುತ್ತಿದ್ದಾರೆ ಎಂದು ಅದನ್ನು ವಿರೋಧಿಸಿದ ದಲಿತ ನಾಯಕರನ್ನು ನೇರವಾಗಿ ಟೀಕಿಸುತ್ತಾರೆ. ದಲಿತರನ್ನು ಬಿಟ್ಟು ಬೇರೆ ಯಾರೇ ಆಗಿದ್ದರೆ ಭೈರಪ್ಪನನ್ನು ಹೊಡೆದು ಮುಖಕ್ಕೆ ಮಸಿ ಬಳಿಯುತ್ತಿದ್ದರು. ಆದರೆ ಮತಾಂತರದ ಬಗ್ಗೆ ಮಾತಾಡುವ ನೈತಿಕ ಹಕ್ಕಿಲ್ಲದಿದ್ದರೂ ಮಾತಾಡುವ ಭೈರಪ್ಪ-ಚಿ.ಮೂ. ಪೇಜಾವರಂಥವರ ಬಾಲ ಬಿಚ್ಚಲು ತಮ್ಮ 'ಮೌನ'ದ ಮೂಲಕ ಅನುವು ಮಾಡಿಕೊಟ್ಟ ದಲಿತ ನಾಯಕರು ಇನ್ನು ಮುಂತಾದರೂ ವಿಷಯವನ್ನು ಇಂಥವರು ಅತಿರೇಕಕ್ಕೆಳೆಯುವ ಮೊದಲೇ ಎಚ್ಚೆತ್ತುಕೊಳ್ಳುವುದೊಳ್ಳೆಯ

ಇತ್ತೀಚೆಗೆ ಕ್ರಿಶ್ಚಿಯಾನಿಟಿಗೆ ಮತಾಂತರಗೊಂಡ ದ ಕುಟುಂಬದ ಮೇಲೆ ಭಜರಂಗಿ ಪುಂಡರು ದಾಳಿ ಮಾಡಿ ದ ಮಹಿಳೆಯ ಮೇಲೆ ಗಂಜಲ ಸುರಿದ ಪ್ರಕರಣವನ್ನು ಟ ಮಾಧ್ಯಮವೊಂದು ವರದಿ ಮಾಡಿತ್ತು, ಈ ರೀತಿ ಬೆದರಿಸ ಮರು ಮತಾಂತರಕ್ಕೆ ಒತ್ತಡ ಹೇರುವ (ಮರು ಮತಾಂತರಗೊಂ ಬ್ರಾಹ್ಮಣ ಜಾತಿಗೆ ಸೇರಿಸುವಿರೋ? ಎಂಬ ಪ್ರಶ್ನೆ ಕೇಳುವ ಸೂಕ್ತ) ಈ ಹಿಂದೂತ್ವ ಗಳಿಗೆ ತೆರೇಸಾರ ಉತ್ತರ ಕಾರಿಯಾಗಿ ನೇಮಕಗೊ ಸಿಸ್ಟರ್ ನಿರ್ಮಲ ಬ್ರಾಹ್ ವರ್ಗಕ್ಕೆ ಸೇರಿದವರಾ ರೆಂಬುದು ನೆನಪಿನಲ್ಲಿರಲಿ.

ಊರಿನ ಕೆರೆಯ ನೀರನ್ನು ಮುಟ್ಟಲು ಬಿ ಅಷ್ಟೇ ಯಾಕೆ? ಮೊನ್ನೆ ಮೊನ್ನೆ ಜಾರಿಗೆ ಬಂದ ಅ ದಾಸೋಹ ಯೋಜನೆಯಡಿಯಲ್ಲಿ ಕೆಲವೆಡೆ ಅಡ ಯನ್ನು ದಲಿತರು ಮಾಡಿದರೆಂಬ ಕಾರಣಕ್ಕೆ ಮ ಹೆತ್ತವರು ಆಕ್ಷೇಪ ತೋರಿದ ಪ್ರಕರಣಗಳಾಗ ಅಡುಗೆಗೆ ಹಲ್ಲಿ ಬೀಳಿಸಿ ಆ ನೆಪದಿಂದ ಅವರ ವಜಾ ಮಾಡಿದಂತಹ ಸಂಗತಿಗಳಾಗಲಿ ಎ ನಡೆದಿಲ್ಲ? ಇಂತಹ ಅಸ್ಪೃಶ್ಯತೆಯು ಬ ಹಿಂದೂತ್ವವಾದಿಗಳಿಗೆ ಪ್ರಶ್ನೆ ಎದುರಾದರೆ ಅವರಿ ಬರುವ ಸಿದ್ಧ ಉತ್ತರವೆಂದರೆ ಧಾರ್ಮಿಕ ನಾಯಕ ಮಠಾಧೀಶರು ಈ ಬಗ್ಗೆ ಕೆಲಸ ಮಾಡುತ್ತಿದ್ದಾರೆನ್ನುವುದು. ಅಯ್ ಈ ಹಳಸಲು ಮಾತನ್ನು ಕೇಳಿಕೇಳಿ ಸಾಕಾಯ್ತು ಸ್ವಾಮಿ, ಮಾತಿಗೆ ಎಕ್ಸ್‌ಪೈರಿ ಡೇಟ್ ಎಂಬುದೇ ಇಲ್ಲವೇ? ಇತ್ತೀ ತನ್ನ 25 ನೇ ವರ್ಷವನ್ನು ಆಚರಿಸಿಕೊಂಡ ಮೀನಾಕ್ಷಿಪು ಮಾತಂತರ ಪ್ರಕರಣದಲ್ಲಿ ಮುಸ್ಲಿಮ್ ಧರ್ಮಾನುಯಾ ಯಾದವನನ್ನು ಹಿಂದೊಮ್ಮೆ ಪತ್ರಿಕೆಯೊಂದು ಸಂದರ್ಶಿಸಿ ಅದರಲ್ಲಿ ಆತ ಹೇಳಿದಂತಹ ಸಂಗತಿ ಅಸ್ಪೃಶ್ಯತೆ-ಶೋಷ ಎಂದರೇನೆಂಬುದನ್ನು ತೋರಿಸುವಂತಿತ್ತು, ಆ ನ್ನೊಮ್ಮೆ ಸವರ್ಣೀಯರು ನಾಯಿಗೆ ಬಡಿದ ಹಿಡಿದು ಬಡಿದರಂತೆ. ಕಾರಣ ಅವರೆದುರು ಚಪ್ಪಲಿ ಧರಿಸಿ ತಿರುಗಾಡಿದ್ದು. ಮೊನ್ನೆ ನ ಮಿತ್ರರೊಬ್ಬರು ಹೇಳಿದಂತೆ ನಂದಿಕೂರಿನ ದೇ ಲಯದ ಕೆಲಸಕ್ಕೆ ಮುಸಲ್ಮಾನನಿಗೆ ಅವಕಾಶವಿದ್ದ ದಲಿತನಿಗಿಲ್ಲವಂತೆ. ಇದು ಹಿಂದೂಗಳ ನೈಜ ದ ಪ್ರೇಮಕ್ಕೊಂದು ಉದಾಹರಣೆ. ಇಂಥವೆಲ್ಲ ಭೈರಪ್ಪನಿಗಾಗ ಚಿಮೂ ಇತ್ಯಾದಿಗಳಿಗಾಗಲಿ ಗೊತ್ತಿಲ್ಲವೆಂದಲ್ಲ, ಆದರವರಿಗ ಬೇಕಿಲ್ಲ ಅಷ್ಟೇ.

ಗಮನಿಸಿ, ನಾವೆಲ್ಲ ಗುರುಗಳೆನ್ನುವ ನಾರಾಯಣ ಗುರುಗ ಬ್ರಿಟಿಷರನ್ನು ತನ್ನ ಗುರುಗಳೆಂದು ಕರೆದಿದ್ದರು. ಬ್ರಾಹ್ಮಣೇತರ ಉದ್ದೇಶಪೂರ್ವಕವಾಗಿ ಶಿಕ್ಷಣದಿಂದ ದೂರವಿಟ್ಟ ಸಾಮಾ ಘಟ್ಟದಲ್ಲಿ ಬ್ರಿಟಿಷರ ಆಗಮನದ ದೆಸೆಯಿಂದಾಗಿ ನಾನು ಜ್ಞಾ ಸಂಪಾದಿಸಿದೆ ಎಂಬುದು ಈ ಮಾತಿನ ಅರ್ಥ. ಕ್ರಿಶ್ಚಿಯಾನಿ ಇಲ್ಲದಿರುತ್ತಿದ್ದರೆ ಎಲ್ಲೋ ಜೀತ ಮಾಡಿರುತ್ತಿದ್ದ ಮಹೇಂದ್ರ ಕುಮ ಮೊನ್ನೆ ಪ್ರಗತಿಪರ ಚಿಂತಕರಾದ ಅನಂತಮೂರ್ತಿ, ಕಾರ್ನಾ ಗೌರಿ ಲಂಕೇಶ್ ಮೊದಲಾದವರ ಬಗ್ಗೆ ಅಪಸ್ವರದ ಮಾತಾಡಿದ್ದಾ ಅಲ್ಲವೋ ಮಹೇಂದ್ರ ವರ್ಮನೇ ನೀನು, ನಿನ್ನ ಹಿಂದೂತ್ವವಾ ಗಳೀಗ ಕಿಡ್ನಾಪ್ ಮಾಡಿರುವ ನಾರಾಯಣ ಗುರುಗಳ ಅಂಬೇಡ್ಕರ್, ಬುದ್ಧ ವಿವೇಕಾನಂದ, ಬಸವಣ್ಣನಂಥವರೆಲ್ಲ ಆವ ಈ ನಿನ್ನ ಹಿಂದೂತ್ವವಾದಿಗಳ ಗೊಡ್ಡು ನಂಬಿಕೆಗಳ ವಿರು ತಮ್ಮದೇ ರೀತಿಯಲ್ಲಿ ತಿರುಗಿ ನಿಂತ ಪ್ರಗತಿಪರ ಚಿಂತಕ ಕಣಯ್ಯ, ಹಿಂದೆ, ಇವತ್ತು ಹಾಗೂ ಇನ್ನು ಮುಂದೆಯೂ ಇಂಥ ಅಗತ್ಯ ಸಮಾಜಕ್ಕೆ ಇದ್ದೇ ಇರುತ್ತದೆ.

ಅದೇ ರೀತಿ ಸತ್ಯದರ್ಶಿನಿಯಲ್ಲಿ ಹಿಂದೂ ದೇವತೆಗಳ ಅವಹೇಳನ ಮಾಡಲಾಗಿದೆ ಎಂದು ರೋದಿಸುವ ನೀವುಗ ನಿಮ್ಮ ಮುಂದಾಳು ಪೇಜಾವರರ ಕೃಷ್ಣ ಮಠದಲ್ಲಿ ಪ್ರತಿನಿ ಹಿಂದೂತ್ವವಾದಿಗಳ ಹೀರೋ ಶಂಕರಾಚಾರ್ಯರ ನಾಯಿ-ಕಪ್ಪೆ-ಮಂಗ ಎಂದು ಲೇವಡಿ ಮಾಡುವ ಸಂಪ್ರದಾಯ ಬಗ್ಗೆ ಚಕಾರವೆತ್ತದಿರಲು ಕಾರಣವೇನು? ಜೊತೆಗೆ ಇನ್ನೊಂದ ಸಂಗತಿ, ನೀವೆಲ್ಲ ಆರೋಪಿಸುವಂತೆ ದೇಶದಲ್ಲಿ ಮತಾಂತರ ಮಿಷನರಿಗಳೇ ಕಾರಣ ಎನ್ನುವ ಬದಲಿಗೆ ಇದೇ ಮಧ್ವ ಶಂಕರಾಚಾರ್ಯರೇ ಕಾರಣ ಎಂದು ತಿದ್ದುಪಡಿ ಮಾಡಿಕೊಳ್ಳುವುದು ಉತ್ತಮ. ಸಂಸ್ಕೃತ ಆಡಿದ ಶೂದ್ರರ ನಾಲಿಗೆ ಸೀಳಬೇಕು, ಕೇಳಿದ ಶೂದ್ರರ ಕಿವಿಗೆ ಕಾದ ಸೀಸ ಹುಯ್ಯಬೇಕೆನ್ನುವ ಶಂಕರಾಚಾರ್ಯ ಶೂದ್ರರನ್ನು ನಿತ್ಯನಾರಕಿಗಳೆಂದು' ಹೀಗಳೆದ ಮಧ್ವಾಚಾರ್ಯ ದೇಶದಲ್ಲಿ ಅಸ್ಪೃಶ್ಯತೆ-ಭೇದಭಾವ ಹೆಚ್ಚಲು ತಮ್ಮದೇ ಕೊಡುಗೆಯನ್ ಕೊಟ್ಟಿದ್ದಾರೆಂಬುದು ಗಮನದಲ್ಲಿರಲಿ. ತಮ್ಮವರ ತಟ್ಟೆಯಲ್ಲಿ ಕ ಸತ್ತು ಬಿದ್ದರೂ ಉಳಿದವರ ತಟ್ಟೆಯಲ್ಲಿ ಎಲ್ಲಿಂದಲೋ ನೊ ತಂದು ಹಾಕಿ ಮಜಾ ನೋಡುವ ಪ್ರವೃತ್ತಿ ನೀವೆಲ್ಲ ಬಿಟ್ಟರೆ ದೇಶಕ್ಕೆ ನೆಮ್ಮದಿ, ಇಲ್ಲಿನ ಜನರಿಗೂ ನೆಮ್ಮದಿ.

-ರವಿ ಪುತ್ತೂ

ದಕ್ಷಿಣ ಕನ್ನ

ಭೀಮಸೇನ್ ಮತ್ತು ನಾಗ್ ಸಹೋದರರು


ಪಂಡಿತ್ ಭೀಮಸೇನ್ ಜೋಷಿಯವರಿಗೆ ಭಾರತ ರತ್ನ ಪ್ರಶಸ್ತಿ ದೊರೆತಿರುವ ಈ ಸಂದರ್ಭದಲ್ಲಿ ಅವರ ಮತ್ತು ಗಾಂಧಿನಗರದ ನಂಟು ನೆನಪಾಗುತ್ತದೆ. ಅವರು ಕನ್ನಡದಲ್ಲಿ ಹಾಡಿದ್ದು ಎರಡೇ ಎರಡು ಹಾಡು. ಅದು ಆರತಿಗೊಂದು, ಕೀರುತಿಗೊಂದಲ್ಲ, ಎರಡೂ ಕೀರುತಿಗೇನೆ.

ಮೊದಲನೆಯದು ಕಪ್ಪು ಬಿಳುಪು ಯುಗದಲ್ಲಿ 'ಸಂಧ್ಯಾರಾಗ' ಚಿತ್ರಕ್ಕೆ ಹಾಡಿದ 'ನಂಬಿದೆ ನಿನ್ನ ನಾದ ದೇವತೆಯೆ...' ಹಾಡು. ಎರಡನೆಯದು ಸಿನಿಮಾ ಸ್ಕೋಪ್ ಯುಗದಲ್ಲಿ ಶಂಕರ್‌ನಾಗ್ ನಿರ್ದೇಶನದ 'ನೋಡಿ ಸ್ವಾಮಿ ನಾವಿರೋದು ಹೀಗೆ' ಚಿತ್ರಕ್ಕೆ ಹಾಡಿದ 'ಭಾಗ್ಯದಾ... ಲಕ್ಷ್ಮೀ ಬಾರಮ್ಮಾ' ಹಾಡು.



ಭೀಮಸೇನ್ ಜೋಷಿ ಎಂದಾಕ್ಷಣ ನಮಗೆ ಥಟ್ಟನೆ ನೆನಪಿಗೆ ಬರುವುದು ಚಿತ್ರರಂಗದ ನಾಗ್ ಸಹೋದರರು ಮಾತ್ರ. ಇಂದು ಕರ್ನಾಟಕದಲ್ಲಿ ನಾಗ್ ಸಹೋದರರಿಗೆ ಸಾವಿರಾರು ಅಭಿಮಾನಿಗಳಿರಬಹುದು. ಆದರೆ ಇವರಿಬ್ಬರೂ ಭೀಮಸೇನ್ ಜೋಷಿಯ ಕಟ್ಟಾ ಅಭಿಮಾನಿಗಳು ಎಂಬುದು ಅನೇಕರಿಗೆ ಗೊತ್ತಿಲ್ಲ. ಭೀಮಸೇನ್ ಜೋಷಿಯ ಅಭಂಗ, ಆಲಾಪಗಳನ್ನು ಕೇಳುತ್ತಾ ಈ ಸಹೋದರರು ಎಷ್ಟೋ ರಸ ರಾತ್ರಿಗಳನ್ನು ಕಳೆದ ಉದಾಹರಣೆಗಳಿವೆ.

ಈ ಹುಚ್ಚು ಅಭಿಮಾನದ ಫಲವಾಗಿಯೇ ಶಂಕರ್ ನಾಗ್ ತಮ್ಮ 'ನೋಡಿ ಸ್ವಾಮಿ....' ಚಿತ್ರದಲ್ಲಿ ಕಥೆಗೆ ಅಗತ್ಯವಿಲ್ಲದಿದ್ದರೂ, ಹಠ ಹಿಡಿದು ಜೋಷಿ ಅವರಿಂದ ಹಾಡೊಂದನ್ನು ಹಾಡಿಸಿದ್ದರು.



ಅನಂತ್ ನಾಗ್ ಕೂಡಾ ಸಹೋದರನ ಹುಚ್ಚುತನಕ್ಕೆ ಸಂಪೂರ್ಣ ಬೆಂಬಲ ನೀಡಿದ್ದರು ಎಂದು ಬೇರೆ ಹೇಳಬೇಕಿಲ್ಲ ತಾನೆ? ಜೋಷಿ ಹಾಡಿದ ಆ ಹಾಡಿಗೆ ಚಿತ್ರದಲ್ಲಿ ಶಂಕರ್‌ನಾಗ್ ತಬಲ ನುಡಿಸುತ್ತಾ ಅನಂತ್ ಹಾಡುತ್ತಾ ನಟಿಸಿದ್ದರು. ಆ ಹಾಡಿನ ವಿಡಿಯೋ ಕ್ಲಿಪಿಂಗ್‌ಅನ್ನು ನೀವೊಮ್ಮೆ ನೋಡಿ. ಅದರಲ್ಲಿ ಅವರಿಬ್ಬರು ನಟಿಸಿಲ್ಲ, ಬದಲಿಗೆ ಭಾವಪರವಶರಾಗಿ ತನ್ಮಯರಾಗಿ, ಜೋಷಿಯ ಗಾನಕ್ಕೆ ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದಾರೆ.

ಈ ಹಾಡಿನ ಬಗ್ಗೆ ಹಿಂದೊಮ್ಮೆ ಶಂಕರ್ ನಾಗ್ ಹೇಳಿದ್ದ ಮಾತುಗಳು ನೆನಪಿಗೆ ಬರುತ್ತಿದೆ. ಹಾಡಿನ ರೆಕಾರ್ಡಿಂಗ್ ಮುಗಿದ ನಂತರ ಸಂಜೆ ಅಂಜುತ್ತಲೇ ಶಂಕರ್ ನಾಗ್ ಜೋಷಿಯ ಬಳಿ "ನಮ್ಮ ತಾಯಿ ಕೂಡಾ ನಿಮ್ಮ ದೊಡ್ಡ ಅಭಿಮಾನಿ. ನಿಮ್ಮನ್ನು ನೋಡುವ ಆಸೆ ಅವರಿಗಿದೆ. ಆದರೆ ಅನಾರೋಗ್ಯದಿಂದ ಬರಲಾಗಲಿಲ್ಲ" ಎಂದರಂತೆ. ಆ ಕೂಡಲೇ ಭೀಮಸೇನ್ ಜೋಷಿ ತಮ್ಮ ವರ್ಚಸ್ಸಿನ ಹಮ್ಮುಬಿಮ್ಮು ತೋರದೆ, ಆ ರಾತ್ರಿಯೇ ಆ ನಾಗ್ ಸಹೋದರರ ಮಾತೃಶ್ರೀಯನ್ನು ನೋಡಲು ಅವರ ಮನೆಗೇ ತೆರಳಿದರು. ಒಂದೆರಡು ಮಾತುಗಳ ವಿನಿಮಯದ ನಂತರ ಜೋಷಿ ಆಕೆಗಾಗಿ ಒಂದು ಹಾಡು ಹಾಡಿದರು. ಅದಾದನಂತರ ಜೋಷಿಯವರ ಹಾಡು ಅವ್ಯಾಹತವಾಗಿ ಬೆಳಗಿನ ಜಾವದ ತನಕ ಮುಂದುವರೆಯುತ್ತಾ ಹೋಯಿತಂತೆ. ಜೋಷಿಯವರ ಸರಳತನ ಮತ್ತು ಹಾಡಿಗೆ ಮಾರುಹೋದ ಶಂಕರ್ ಮತ್ತು ಅನಂತ್ ಅಂದು ಸಂತೋಷದಿಂದ ಕುಣಿದು ಕುಪ್ಪಳಿಸಿದರಂತೆ. ಅವರ ತಾಯಿಗಂತೂ ತನ್ನ ಆರಾಧ್ಯ ದೈವವನ್ನು ಮನೆಗೆ ಕರೆತಂದ ಮಕ್ಕಳ ಬಗ್ಗೆ ಅಪಾರ ಹೆಮ್ಮೆ.



ತಮಗೆ ಅಭಿಮಾನಿಗಳ ಸಂಘ ಬೇಡ ಎಂದು ತಳ್ಳಿಹಾಕಿದ ಇಬ್ಬರು ನಟರೆಂದರೆ ನಾಗ್ ಸಹೋದರರು ಮಾತ್ರ. ಆದರೆ ಅಭಿಮಾನ ಮತ್ತು ಅಭಿಮಾನಿಗಳು ಹೇಗಿರಬೇಕು ಎಂಬುದನ್ನು ಈ ನಾಗ್ ಸಹೋದರರು ಮತ್ತು ಜೋಷಿಯವರ ಈ ಬಾಂಧವ್ಯ ನೋಡಿ ತಿಳಿಯಬೇಕು. ಆಗಲೇ ದೊಡ್ಡ ಹೆಸರು ಮಾಡಿದ್ದ ಭೀಮಸೇನ್ ಜೋಷಿ ತಮ್ಮ ಮೂವರು ಅಭಿಮಾನಿಗಳಿಗಾಗಿ ಅವರ ಮನೆಗೇ ಹೋಗಿ ಹಾಡು ಹಾಡಿದೆಂದರೆ, ಎಂತಹ ರೋಮಾಂಚಕ ವಿಷಯವಲ್ಲವೇ?

ಸಹೋದರ ಶಂಕರ್‌ನಾಗ್‌ಗಿಂತಲೂ ವಿಚಿತ್ರವಾದ ರೀತಿಯಲ್ಲಿ ಜೋಷಿಯವರ ಅಭಿಮಾನಿಯಾಗಿರುವವರು ಅನಂತ್ ನಾಗ್. ಒಮ್ಮೆ ಅನಂತ್ ರಾಜ್ಯ ಸರ್ಕಾರದ ಸಚಿವರಾಗಿದ್ದಾಗ ಅವರನ್ನು ಕಾರಿನಲ್ಲಿ ಸಂದರ್ಶಿಸುವ ಅವಕಾಶ ನನಗೆ ಒದಗಿಬಂತು. ಅಂದು ಬೆಳಗಿನ ಜಾವ ಎಂಟು ಗಂಟೆಗೆ ಅವರ ಮನೆಯಿಂದ ಸರ್ಕಾರಿ ಕಾರಿನಲ್ಲಿ ಹೊರಟ ತಕ್ಷಣ ಅವರ ಡ್ರೈವರ್ ಹಾಕಿದ್ದು ಭೀಮಸೇನ್ ಜೋಷಿ ಹಾಡಿದ್ದ 'ಭಾಗ್ಯದ ಲಕ್ಷ್ಮಿ ಬಾರಮ್ಮ' ಹಾಡಿನ ಕ್ಯಾಸೆಟ್. ಅನಂತ್ ನಾಗ್ ಡ್ರೈವರ್ ಕೂಡಾ ಜೋಷಿಯವರ ಅಭಿಮಾನಿಯಾಗಿರಬಹುದು ಎಂದು ಭಾವಿಸಿದ ನಾನು ಅದರ ಬಗ್ಗೆ ಆತನನ್ನು ಪ್ರಶ್ನಿಸಿದೆ. ಆತ "ಇಲ್ಲಾ ಸಾರ್, ಸಾಹೇಬರು ಬೆಳಿಗ್ಗೆ ಹೊರಡುವಾಗ ಮೊದಲ ಹಾಡನ್ನು ಇದೇ ಹಾಕಬೇಕು ಎಂದು ನನಗೆ ಆದೇಶ ನೀಡಿದ್ದಾರೆ. ನನಗಂತೂ ಈ ಹಾಡು ಕೇಳಿ ಕೇಳಿ ತಲೆ ಚಿಟ್ಟು ಹಿಡಿದುಹೋಗಿದೆ. ಇವರಿಗೇನು ಈ ಹಾಡಿನ ಬಗ್ಗೆ ಅಭಿಮಾನವೋ" ಎಂದು ಮುಗ್ಧವಾಗಿ ಹೇಳಿದ್ದ.

ಆನಂತರ ಬೆಂಗಳೂರಿನ ಉದ್ದಗಲಕ್ಕೂ ಕಾರಲ್ಲಿ ಸಂಚರಿಸುತ್ತಾ ಅನಂತ್ ಸಂದರ್ಶನ ನೀಡಿದ್ದರು. ಆನಂತರ ಅವರ ಒತ್ತಾಯಕ್ಕೆ ಮಣಿದು ಮಧ್ಯಾಹ್ನವೇ ನಾವಿಬ್ಬರೂ ಸ್ಟಾರ್ ಹೋಟೆಲೊಂದರಲ್ಲಿ 'ಗುಂಡು' ಹಾಕಿದೆವು. ಆನಂತರ ಮನೆಗೆ ವಾಪಸು ಹೊರಟಾಗ ಡ್ರೈವರ್ ಮತ್ತೆ ಅದೇ 'ಭಾಗ್ಯದ ಲಕ್ಷ್ಮಿ ಬಾರಮ್ಮ' ಕ್ಯಾಸೆಟ್ ಹಾಕಿದ. ಈ ಬಾರಿ ಕೂಡಲೇ ಅನಂತ್ ಅದನ್ನು ನಿಲ್ಲಿಸಿದರು. ಆನಂತರ ಸ್ವತಃ ತಾವೇ ಮೈಮರೆತು ಭೀಮಸೇನ್ ಜೋಷಿ ಶೈಲಿಯಲ್ಲಿ ಆ ಹಾಡನ್ನು — 'ಗುಂಡು' ಹಾಕಿದ್ದರೂ — ಸುಶ್ರಾವ್ಯವಾಗಿ ಹಾಡಿ ತನ್ನ ಅಭಿಮಾನದ ಮತ್ತೊಂದು ಮುಖವನ್ನು ಪ್ರದರ್ಶಿಸಿದರು.

ಭೀಮಸೇನ್ ಜೋಷಿ ಕುರಿತ ಇನ್ನೊಂದು ಪ್ರಕರಣ ನೆನಪಾಗುತ್ತಿದೆ: ಅವರನ್ನು ಯಾರೋ ಒಬ್ಬ ಶ್ರೀಮಂತರು ಸಮಾರಂಭವೊಂದಕ್ಕೆ ಕರೆಸಿದ್ದರಂತೆ. ಜೋಷಿ ಅವರು ಎರಡು ಹಾಡು ಹಾಡಿದಕೂಡಲೇ, ತನ್ನ ಶ್ರೀಮಂತಿಕೆಯನ್ನು ಪ್ರದರ್ಶಿಸಲು ಆತ ಚೀಟಿಯೊಂದನ್ನು ಬರೆದು 'ತನಗಾಗಿ ಈ ಹಾಡು ಹಾಡಿ' ಎಂದು ಕೇಳಿಕೊಂಡರಂತೆ. ಆ ಕೂಡಲೇ ಜೋಷಿ ಆ ಹಾಡನ್ನು ಹಾಡಿದರು ಮಾತ್ರವಲ್ಲ, ಅಲ್ಲಿಗೆ ಕಛೇರಿಯನ್ನು ಮುಕ್ತಾಯಗೊಳಿಸಿ ಎದ್ದು ಹೊರಟರಂತೆ. ಆಗ ಶ್ರೀಮಂತ ವ್ಯಕ್ತಿ "ಮೂರೇ ಹಾಡಿಗೆ ಕಛೇರಿ ಮುಗೀತಾ?" ಎಂದು ಸಣ್ಣಗೆ ಗದರಿದರಂತೆ. "ನೀವೇ ತಾನೆ ಭೈರವಿ ಹಾಡಿ ಎಂದು ಚೀಟಿ ಬರೆದು ಕಳಿಸಿದ್ದು. ಭೈರವಿ ಯಾವಾಗಲೂ ಕಛೇರಿಯ ಕೊನೆಯ ಹಾಡು ಎಂದು ನಿಮಗೆ ಗೊತ್ತಿಲ್ಲವೇ?" ಎಂದು ಉತ್ತರಿಸಿದ ಭೀಮಸೇನ್ ಜೋಷಿ ಹೊರಟೇ ಬಿಟ್ಟರಂತೆ. ಅಂದರೆ ಸಂಗೀತದ ಗಂಧ-ಗಾಳಿ ಗೊತ್ತಿಲ್ಲದ ಶ್ರೀಮಂತ ವ್ಯಕ್ತಿಯ ತಾಳಕ್ಕೆ ತಕ್ಕಂತೆ ಕುಣಿಯುವ ಕಲಾವಿದ ತಾನಲ್ಲ ಎಂಬುದನ್ನು ಜೋಷಿ ಸೂಕ್ಷ್ಮವಾಗಿ ಮನದಟ್ಟು ಮಾಡಿದ್ದರು.

ದೂರದರ್ಶನದಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾರುವ 'ಮಿಲೇ ಸುರ್ ಮೇರಾ ತುಮ್ಹಾರಾ' ಎಂಬ ಹಾಡು ಪರ್ಯಾಯ ರಾಷ್ಟ್ರ ಗೀತೆಯಂತೆ ನಾಡಿನಾದ್ಯಂತ ಜನಪ್ರಿಯವಾಗಿದ್ದು ನಿಮಗೆ ಗೊತ್ತೇ ಇದೆ. ಯಾವ ರಾಜಕಾರಣಿಗಳ ಭಾಷಣಗಳಿಂದ ಸಾಧಿಸಲಾಗದ ಭಾವೈಕ್ಯತಾ ಸಂದೇಶವನ್ನು ಜೋಷಿಯವರ ಕಂಠಕ್ಕಿರುವ ಸಮ್ಮೋಹನಾ ಶಕ್ತಿ ಸಾಧಿಸಿತ್ತು.

ಮೂರು ವರ್ಷಗಳ ಹಿಂದೆ ಜೋಷಿ ಅವರು ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ನೀಡಿದ್ದ ಕಾರ್ಯಕ್ರಮವನ್ನು ಕೇಳಲು ನಾವು ಕೆಲವು ಗೆಳೆಯರು ಹೋಗಿದ್ದೆವು. ವ್ಹೀಲ್ ಚೇರ್‌ನಲ್ಲಿ ಅಂದು ಜೋಷಿ ವೇದಿಕೆಗೆ ಆಗಮಿಸಿದಾಗ ಎಲ್ಲರ ಕಣ್ಣಂಚಿನಲ್ಲಿ ನೀರುಕ್ಕಿತ್ತು. ಆದರೂ ಮೂರು ಗಂಟೆಗಳ ಕಾಲ ವ್ಹೀಲ್ ಚೇರ್‌ನಲ್ಲೇ ಕುಳಿತು ತನ್ನ ಎಂದಿನ ಅಭಂಗ ಮತ್ತು ಆಲಾಪಗಳಿಂದ ಎಲ್ಲರನ್ನು ಅವರು ಮೋಡಿ ಮಾಡಿದ್ದರು. ಅಂದು ಬಹುಶಃ ಇದು ಅವರ ಕೊನೆಯ ಕಛೇರಿ ಆಗಬಹುದೇನೋ ಎಂಬ ಅನುಮಾನ ಅಲ್ಲಿದ್ದವರನೆಲ್ಲ ಕಾಡಿತ್ತು. ಆದರೆ ಇಂದು ಈ ರಾಷ್ಟ್ರದ ಅತ್ಯುನ್ನತ ಪ್ರಶಸ್ತಿಯಾದ 'ಭಾರತ ರತ್ನ'ವನ್ನು ಪಡೆದು ಕನ್ನಡಿಗರನ್ನೆಲ್ಲ ಮತ್ತೆ ಆನಂದದಲ್ಲಿ ಮುಳುಗಿಸಿದ್ದಾರೆ.

ಕವಿರತ್ನ ಕಾಳಿದಾಸದಲ್ಲಿ ಬಿಸ್ಮಿಲ್ಲಾ ಖಾನ್ ಅವರ ಶಹನಾಯ್ ಹೇಗೆ ಮರೆಯಲು ಸಾಧ್ಯವಿಲ್ಲವೋ ಹಾಗೆಯೇ ಕನ್ನಡ ಪ್ರೇಕ್ಷಕರು ಜೋಷಿಯವರ ಈ ಎರಡೇ ಎರಡು ಹಾಡುಗಳನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಇಬ್ಬರೂ ಭಾರತ ರತ್ನ ವಿಜೇತರು ಕನ್ನಡ ಚಿತ್ರರಂಗದಲ್ಲಿ ತಮ್ಮ ಕೈಚಳಕ ತೋರಿಸಿದ್ದು ನಮ್ಮ ನಿಮ್ಮ ಸೌಭಾಗ್ಯವಲ್ಲದೆ ಮತ್ತೇನು? ಅದರಲ್ಲೂ ಧಾರವಾಡದ ಗಂಡು ಮೆಟ್ಟಿದ ನಾಡಿನ ಈ ಗಾನ ಗಾರುಡಿಗನ ಧ್ವನಿಯಲ್ಲಿರುವ ಚಿಕಿತ್ಸಕ ಗುಣ ಸಂಗೀತಪ್ರೇಮಿಗಳನ್ನು ಉದ್ದೀಪನಗೊಳಿಸಿದೆ. ಇನ್ನಷ್ಟು ಕಾಲ ಇವರ ಗಾನಸುಧೆ ಹರಿಯುತ್ತಿರುವಂತಾಗಲಿ.

■ ಶೆಣೈ

ನಿರ್ದೇಶಕ ಪ್ರೇಮ್‌ಗೆ ಇನ್ನೂ ಪಬ್ಲಿಸಿಟಿಯ ಹುಚ್ಚು ಬಿಟ್ಟಿಲ್ಲ. ಹಾಗೆಯೇ ನಮ್ಮ ಚಾನಲ್‌ನವರಿಗೆ ಯಾವುದು ಸುದ್ದಿ? ಯಾವುದು ರದ್ದಿ? ಎಂಬುದೂ ಗೊತ್ತಿರುವಂತಿಲ್ಲ.

ಕಳೆದ ವಾರವೇ ನಾವು ರಕ್ಷಿತಾ ಅಮ್ಮನಾಗುವ ಶುಭ ಸುದ್ದಿಯನ್ನು ನೀಡಿದ್ದೆವು. ಅದಕ್ಕಾಗಿ ಟೀವಿಯವರು ಆಸ್ಪತ್ರೆಗೆ ಎಷ್ಟೆ ಹಚ್ಚಿಕೊಂಡು ನಿದ್ರೆ ಮಾಡದೆ ರಾತ್ರಿಹಗಲು ಕಾಯುತ್ತಾ ಕುಳಿತುಕೊಂಡಿದ್ದನ್ನು ತಿಳಿಸಿದ್ದೆವು. ನಮ್ಮ ನಿರೀಕ್ಷೆ ನಿಜವಾಯಿತು.


ನವೆಂಬರ್ ಮೂರರಂದು ರಕ್ಷಿತಾ ಗಂಡು ಮಗುವಿಗೆ ಜನ್ಮ ನೀಡಿದಳು. ಆ ಸುದ್ದಿ ಗೊತ್ತಾದ ತಕ್ಷಣ ಟೀವಿ ಚಾನೆಲ್‌ನವರು ಎದ್ದು ಬಿದ್ದು ನಾಮುಂದು, ತಾಮುಂದು ಎಂದು ಆಸ್ಪತ್ರೆಗೆ ದೌಡಾಯಿಸಿದರು. ಅಲ್ಲಿ ... ರಕ್ಷಿತಾ ಮತ್ತು ಪತಿ ಪ್ರೇಮ್ ಮಗು ಜೊತೆ ಮಾಧ್ಯಮಗಳಿಗೆ ಪೋಸು ಕೊಡಲು ರೆಡಿಯಾಗಿ ... ಮಾಧ್ಯಮಗಳಿಗೂ ಇಂತಹ ಸುದ್ದಿಗಳು ಬೇಕಿರುವುದರಿಂದ ಅದು ತಪ್ಪಲ್ಲ ಬಿಡಿ. ಆದರೆ ತನ್ನ ಮಗುವನ್ನೆತ್ತಿಕೊಂಡ ಪ್ರೇಮ್ "ಈ ಮಗು ಮುಂದಿನ ಮರಿ ಗಂಡು. ಇದು ಕನ್ನಡ ಜನತೆಯಿಂದ ಆಗಿದ್ದು. ... ನಮಗೆ ಸಲ್ಲಬೇಕು" ಎಂದು ಹೇಳಿದ್ದು ಮಾತ್ರ ಅವಿವೇಕತನದ ಪರಮಾವಧಿಯಾಗಿತ್ತು. ಪ್ರೇಮ್ ... ಗಿಮಿಕ್ಕುಗಳನ್ನು ಬಿಟ್ಟು ಸಿನಿಮಾ ಬಗ್ಗೆ ಗಂಭೀರವಾಗಿ ಕೆಲಸ ಮಾಡುವತ್ತ ಗಮನಹರಿಸಬೇಕು. ... ಆಗಲಿ, ಪ್ರೀತಿಸಿ ಮದುವೆಯಾದ ಈ ತಾರಾ ಜೋಡಿ ಈಗ ಪುಟ್ಟ ಕಂದಮ್ಮನ ಜೊತೆ ... ಆಗಿರಲಿ.



ಸಿನಿ Bits

■ ಅರುಣ್.ಜಿ

'ಒರಟ ಐ ಲವ್ ಯೂ' ಚಿತ್ರದ ಮೂಲಕ ಚಿತ್ರರಂಗದಲ್ಲಿ ಭರವಸೆ ಮೂಡಿಸಿದ ಪ್ರಶಾಂತ್ ನಟಿಸಿರುವ ಎರಡನೇ ಚಿತ್ರ 'ಮಹರ್ಷಿ' ಮುಂದಿನ ವಾರ ಬಿಡುಗಡೆಯಾಗುತ್ತಿದೆ.



ಪ್ರಶಾಂತ್

ಆದರೆ ಪ್ರಶಾಂತ್ ನಟಿಸಿರುವ ಎರಡನೇ ಚಿತ್ರ ಬಿಡುಗಡೆ ಮುನ್ನವೇ 'ಹೃದಯಗಳಾ ವಿಷಯ', 'ಜೆಂಕಿ', 'ಅಂಜದಿರು' ಚಿತ್ರಗಳೂ ಸಿದ್ಧವಾಗಿವೆ. ಒಂದು ವೇಳೆ 'ಮಹರ್ಷಿ' ಕೈಕೊಟ್ಟರೆ ಪ್ರಶಾಂತ್‌ನ ಮಾರ್ಕೆಟ್ ಕುಸಿಯುವ ಅಪಾಯವಿರುವುದರಿಂದ 'ಮಹರ್ಷಿ' ಗೆಲ್ಲಲೇಕಾದ ಅನಿವಾರ್ಯವಿದೆ.

*****

ದೀಪಕ್ ನಾಯಕನಾಗಿ ಅಭಿನಯಿಸಿದ್ದ 'ಚಿನ್ನ' ಚಿತ್ರವನ್ನು ನಿರ್ಮಿಸಿದ್ದ ಸಂಪತ್‌ಕುಮಾರ್ ಅದರಿಂದಾಗಿ ಚೆಂಬು ಹಿಡಿದರೂ ಚಿತ್ರರಂಗದ ಸಹವಾಸವನ್ನು ಮಾತ್ರ ಬಿಡುತ್ತಿಲ್ಲ. ಅವರೀಗ ಕನ್ನಡ ಚಿತ್ರರಂಗದಲ್ಲಿ ಮೈಲಿಗಲ್ಲು ಸೃಷ್ಟಿಸಿದ್ದ 'ಗೆಜ್ಜೆ ಪೂಜೆ'ಯಂಥಾ ಚಿತ್ರವನ್ನೇ ಮತ್ತೊಮ್ಮೆ ನಿರ್ಮಿಸಲು ಮುಂದಾಗಿದ್ದಾರೆ. ಅವರ ಕಣ್ಣು ಆ ಚಿತ್ರದ ಮೇಲೆ ಬಿದ್ದಿರುವುದು ಆಘಾತಕಾರಿ ಬೆಳವಣಿಗೆ ಎನ್ನಬಹುದು.



ಸಂಪತ್

ಒಂದು ವೇಳೆ ಸಂಪತ್‌ಕುಮಾರ್ 'ಗೆಜ್ಜೆಪೂಜೆ' ಆರಂಭಿಸಿದ್ದೇ ಆದಲ್ಲಿ, ಬೇರೆ ನಿರ್ಮಾಪಕರು 'ಗಂಧದಗುಡಿ', 'ಬೇಡರಕಣ್ಣಪ್ಪ'ದಂಥ ಐತಿಹಾಸಿಕ ಚಿತ್ರಗಳನ್ನೇ ಪುನರ್‌ನಿರ್ಮಾಣ ಮಾಡಿ ಅವುಗಳನ್ನೆಲ್ಲ ಎಕ್ಕುಡಿಸುವುದರಲ್ಲಿ ಸಂದೇಹವೇ ಇಲ್ಲ.

*****

ಸುನಿಲ್‌ಕುಮಾರ್ ದೇಸಾಯಿಯನ್ನು ಬಿಟ್ಟರೆ ಕನ್ನಡದಲ್ಲಿ ಪ್ರಯೋಗಾತ್ಮಕ ಚಿತ್ರಗಳನ್ನು ನಿರ್ಮಿಸುವವರು ಬಹಳ ವಿರಳ. ಆದರೆ ನಾಗ್ತಿಹಳ್ಳಿ ಗರಡಿಯಿಂದ ಬಂದಿರುವ ಯುವ ನಿರ್ದೇಶಕ ಮಂಜು ಸ್ವರಾಜ್ 'ಶಿಶಿರ' ಚಿತ್ರದ ಮೂಲಕ ಹೊಸ ಪ್ರಯೋಗವೊಂದನ್ನು ಮಾಡಲು ಮುಂದಾಗಿದ್ದಾರೆ. ಈ ಚಿತ್ರದ ನಾಯಕ ಹುಣ್ಣಿಮೆ ಯಂದು ಪೂರ್ಣಚಂದ್ರನಂತೆ ಕಂಡರೆ, ಅಮಾವಾಸ್ಯೆಯ ದಿನ ಕಾರ್ಮುಗಿಲಿನಂತೆ ಕಾಣುತ್ತಾನಂತೆ. ಅವನ ನಡವಳಿಕೆಯಲ್ಲಿ ಚಂದಿರನ ಛಾಯೆ ಎದ್ದು ಕಾಣುತ್ತಂತೆ. ಈ ಕಾರಣಕ್ಕಾಗಿ ಚಿತ್ರಕ್ಕೆ 'ಶಿಶಿರ' (ಪೂರ್ಣಚಂದ್ರ) ಎಂಬ ಹೆಸರನ್ನಿಟ್ಟಿದ್ದಾರೆ. 'ಯುಗಯುಗಗಳೆ ಸಾಗಲಿ' ಚಿತ್ರದಿಂದ ನಾಯಕನಟನಾಗಿರುವ ಮುದ್ದುಮುಖದ ಯಶಸ್ ಈ ಚಿತ್ರದಲ್ಲಿ ಮತ್ತೊಮ್ಮೆ ಹೀರೋ ಆಗಿದ್ದಾನೆ.



ಇಡೀ ಚಿತ್ರದಲ್ಲಿ ವಿಭಿನ್ನವಾದ ನೆರಳು ಬೆಳಕಿನ ಆಟವಿರುತ್ತದಂತೆ. ಅಲ್ಲದೆ ಕಲೆಗೂ ಹೆಚ್ಚಿನ ಆದ್ಯತೆಯಿರುವ 'ಶಿಶಿರ' ಚಿತ್ರಕ್ಕಾಗಿ ಕಲಾನಿರ್ದೇಶಕ ಹೊಸ್ಮನೆ ಮೂರ್ತಿ ಅಪರೂಪದ ಮನೆಯೊಂದರ ಸೆಟ್ ನಿರ್ಮಿಸುತ್ತಿದ್ದಾರೆ.



ಹೊಸ್ಮನೆ ಮೂರ್ತಿ

ಹೊಡಿ-ಬಡಿ ಚಿತ್ರಗಳ ಮೂಲಕ ರಕ್ತ ಹರಿಸುವ ಇಂದಿನ ದಿನಗಳಲ್ಲಿ ಬಿಸಿಲು, ನೆರಳು, ಬೆಳಕನ್ನೂ ಪಾತ್ರವನ್ನಾಗಿಸಲು ಹೊರಟಿರುವ 'ಶಿಶಿರ' ಏನಾಗುತ್ತದೋ? ನೋಡೋಣ.

*****

ಅತ್ತ ಸುದೀಪ್ ರಾಮ್‌ಗೋಪಾಲ್ ವರ್ಮಾರ ಬೆನ್ನೇರಿ ಎರಡನೆ ಹಿಂದಿ ಚಿತ್ರದಲ್ಲಿ ನಟಿಸುತ್ತಿದ್ದರೆ, ಇತ್ತ ಸುದೀಪ್‌ನ ಸಾಂಪ್ರದಾಯಿಕ ಎದುರಾಳಿ ದರ್ಶನ್ ಮಾತ್ರ ಕನ್ನಡ ಚಿತ್ರದಲ್ಲೇ ಹಿಂದಿ ಮಾತನಾಡಲು ಶುರು ಮಾಡಿದ್ದಾರೆ.



ಅವರದ್ದೇ ಹೋಂ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾಗಿರುವ 'ನವಗ್ರಹ' ಚಿತ್ರದ ಆರಂಭದಿಂದ ಅಂತ್ಯದವರೆಗೂ ಅಗತ್ಯವಿಲ್ಲದಿದ್ದರೂ ಸಾಕಷ್ಟು ಹಿಂದಿ ಮಾತನಾಡಿರುವ ದರ್ಶನ್ 'ಕಿಚ್ಚನಿಗಿಂತ ನಾನೇನು ಕಮ್ಮಿ' ಎಂದು ಬೀಗುತ್ತಿದ್ದಾರೆ.

ಇದು ದರ್ಶನ್‌ನ ಭಾಷಾ ಪ್ರೇಮವೋ ಅಥವಾ ಕಿಚ್ಚನ ಬಗೆಗಿನ ಕಿಚ್ಚೋ? ತಿಳಿಯುತ್ತಿಲ್ಲ.

*****

ಮಾಡೆಲಿಂಗ್ ಲೋಕದ ಒಳಮರ್ಮವನ್ನು ಬಿಚ್ಚಿಡುವಂತಹ 'ಫ್ಯಾಷನ್' ಚಿತ್ರದಲ್ಲಿ ಮನೋಜ್ಞ ಅಭಿನಯ ನೀಡುವ ಮೂಲಕ ಮನೆಮಾತಾಗಿರುವ ಬಾಲಿವುಡ್ ಬೆಡಗಿ ಪ್ರಿಯಾಂಕಾ ಛೋಪ್ರಾ ಈಗ ಮತ್ತೊಮ್ಮೆ ಎಲ್ಲರನ್ನೂ ಅಚ್ಚರಿಗೊಳಿಸಿದ್ದಾಳೆ.



'ನನಗೆ ಸಲಿಂಗ ಕಾಮಿ (ಲೆಸ್ಬಿಯನ್) ಪಾತ್ರದಲ್ಲಿ ನಟಿಸಬೇಕೆಂದು ಬಹಳ ಬಯಕೆ. ಯಾವ ನಿರ್ದೇಶಕರೇ ಆದರೂ ಕರೆದು ಆ ಪಾತ್ರವನ್ನು ನೀಡಿದರೆ, ಯಾವುದೇ ಅಂಜಿಕೆಯಿಲ್ಲದೆ ನಿರ್ವಹಿಸುತ್ತೇನೆ' ಎಂದು ಬಹಿರಂಗವಾಗೇ ಹೇಳಿಕೆ ನೀಡಿದ್ದಾಳೆ. ಒಂದೆರಡು ವರ್ಷಗಳ ಹಿಂದಷ್ಟೇ ಬಂದು, ವಿವಾದಕ್ಕೊಳಗಾಗಿದ್ದ 'ಗರ್ಲ್ ಫ್ರೆಂಡ್' ಚಿತ್ರ ಮರೆಯುವ ಮುನ್ನವೇ ಪ್ರಿಯಾಂಕಾಳ ಈ ರೀತಿ ಬೋಲ್ಡ್ ಮಾತುಗಳು ಬಾಲಿವುಡ್‌ನಲ್ಲಿ 'ಬಿಸಿಬಿಸಿ' ಹವಾ ಸೃಷ್ಟಿಸಿದೆ. ■

R B P LANKESH, Kannada Weekly Price Rs. 12/- 19-11-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi,

'ಫ್ರೂಂಕ್'ನಿಂದ 'ರಣ್' ಕಡೆಗೆ!





ರಾಮ್‌ಗೋಪಾಲ್ ವರ್ಮಾ ನಿರ್ದೇಶನದ 'ಫ್ರೂಂಕ್' ಚಿತ್ರದಲ್ಲಿ ನಟಿಸಿದಾಗ ಪತ್ರಕರ್ತರೊಂದಿಗೆ ಬೆರೆತಿದ್ದ ಸುದೀಪ್ ಆನಂತರ ತೆರೆಮರೆಗೆ ಸರಿದಿದ್ದರು. ಆದರೆ ಈಗ ಮತ್ತೆ ಅದೇ ರಾಮ್‌ಗೋಪಾಲ್ ವರ್ಮಾರ ಇನ್ನೊಂದು ಚಿತ್ರದಲ್ಲಿ ನಟಿಸುವ ಮೂಲಕ ಸುದೀಪ್ ಮತ್ತೆ ಸುದ್ದಿ ಮಾಡಿದ್ದಾರೆ. ವರ್ಮಾ ನಿರ್ದೇಶನದ ಹೊಸ ಚಿತ್ರ 'ರಣ್' ನಲ್ಲಿ ಸುದೀಪ್‌ಗೆ ಮುಖ್ಯಪಾತ್ರ ಇದೆಯಂತೆ.

ಈ ಚಿತ್ರದ ನಾಯಕನಟ ಅಮಿತಾಭ್ ಬಚ್ಚನ್. ಆತನ ಮಗನ ಪಾತ್ರದಲ್ಲಿ ಸುದೀಪ್ ಕಾಣಿಸಿಕೊಳ್ಳುತ್ತಿದ್ದಾರೆ. ಇದು ಎನ್‌ಡಿಟಿವಿಯ ಪ್ರಣಯ್ ರಾಯ್ ಜೀವನ ಕಥೆಯನ್ನು ಹೋಲುವ ಕಥೆಯಂತೆ. ರಾಯ್ ಆಗಿ ಬಚ್ಚನ್ ಕಾಣಿಸಿಕೊಂಡರೆ, ರಾಯ್ ಮಗನಾಗಿ ನಮ್ಮ ಕಿಚ್ಚ.

ಇತ್ತೀಚೆಗೆ ನಿರ್ಮಾಣ ಮತ್ತು ನಿರ್ದೇಶನ ಕೆಲಸವನ್ನು ಮುಗಿಸಿದ ನಂತರ ಸುದೀಪ್‌ಗೆ ಯಾಕೋ ಏನೋ ಕನ್ನಡ ಚಿತ್ರರಂಗದಲ್ಲಿ ಅಷ್ಟೊಂದು ಆಸಕ್ತಿ ಕಾಣಿಸುತ್ತಿಲ್ಲ. ಆತ ನಾಯಕನಾಗಿ ನಟಿಸಿರುವ 'ಮಸ್ತ್ ಮಜಾ ಮಾಡಿ' ಚಿತ್ರದ ಯಾವುದೇ ಪತ್ರಿಕಾಗೋಷ್ಠಿಗಳಲ್ಲಿ ಕೂಡಾ ಸುದೀಪ್ ಹಾಜರಾಗಿರಲಿಲ್ಲ. ಏನಿದ್ದರೂ ಹಿಂದಿಯಲ್ಲಿ ಹೆಸರು ಮಾಡಬೇಕು, ಹಣ ಮಾಡಬೇಕು ಎಂಬ ತವಕದಲ್ಲಿದ್ದಂತೆ ಕಾಣುತ್ತಿದೆ. ಹೀಗಾಗಿ ವರ್ಮಾ ಜೊತೆ ಸುದೀಪ್ ಒಳ್ಳೆಯ ನಂಟು ಇಟ್ಟುಕೊಂಡಿದ್ದಾರೆ. ಇದರ ಫಲವಾಗಿಯೇ ಎರಡನೇ ಹಿಂದಿ ಚಿತ್ರದಲ್ಲಿ ಸುದೀಪ್ ಕಾಣಿಸಿಕೊಳ್ಳುತ್ತಿದ್ದಾರೆ.

ನಿಜ, ಈಗಿರುವ ಯುವ ನಟರುಗಳಲ್ಲಿ ಸುದೀಪ್ ಅತ್ಯಂತ ಮಹತ್ವಾಕಾಂಕ್ಷಿ. ಕನ್ನಡದಿಂದ ಹಿಂದಿಗೆ ಲಾಂಗ್‌ಜಂಪ್ ಹಾರಲು ಹೊರಟಿರುವ ಸುದೀಪ್ ಪ್ರಯತ್ನದ ಬಗ್ಗೆ ಗಾಂಧಿನಗರದಲ್ಲಿ ಮಿಶ್ರ ಪ್ರತಿಕ್ರಿಯೆ ಇದೆ. "ಈತ ಪ್ರತಿಭಾವಂತ. ಇಲ್ಲೇ ವರ್ಷಕ್ಕೆ ಎರಡು ಮೂರು ಸಿನಿಮಾ ಮಾಡಬಹುದು" ಎಂಬುದು ಕೆಲವರ ಮಾತು. ಇನ್ನು ಕೆಲವರು "ಹಿಂದಿಯಲ್ಲಿ ಟ್ರೈ ಮಾಡಿದರೆ ತಪ್ಪೇನಿದೆ?" ಎಂದು ಸುದೀಪ್‌ಗೆ ಬೆಂಬಲಿಸುತ್ತಿದ್ದಾರೆ. ಅವರವರ ಭಾವಕ್ಕೆ ಅವರವರ ಭಕುತಿ! ಈ ಬಗ್ಗೆ ನಾವು ನೀವು ಏನು ತಾನೆ ಹೇಳಲು ಸಾಧ್ಯ?

■

ದಿನಕರ್ 'ಗ್ರಹ'ಚಾರ!



ತೂಗುದೀಪ ಶ್ರೀನಿವಾಸ್ ಅವರ ಮಕ್ಕಳಾದ ದಿನಕರ್ ಮತ್ತು ದರ್ಶನ್ ಗ್ರಹಗತಿ ಸರಿ ಇಲ್ಲ ಎಂದು ಕಾಣಿಸುತ್ತದೆ. ಹಾಗೆ ಕಾಣಿಸಲು ದಿನಕರ್ ನಿರ್ದೇಶನದ, ದರ್ಶನ್ ಅಭಿನಯದ 'ನವಗ್ರಹ' ಚಿತ್ರವೇ ಕಾರಣ.

ಈ ಚಿತ್ರದ ಬಗ್ಗೆ ಒಂದು ವಿಚಿತ್ರವಾದ ಕುತೂಹಲವಿತ್ತು, ಅದಕ್ಕೆ ಕಾರಣ ಇಷ್ಟೇ. ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ತನ್ನದೇ ಆದ ಛಾಪನ್ನು ಒತ್ತಿ, ಪ್ರೇಕ್ಷಕರ ಹೃದಯವನ್ನು ಗೆದ್ದ ಖಳನಾಯಕರ ಮಕ್ಕಳುಗಳನ್ನು ದಿನಕರ್ ಈ ಚಿತ್ರದಲ್ಲಿ ನಾಯಕರನ್ನಾಗಿ ಮಾಡಿದ್ದು. ಇದರ ಫಲವಾಗಿಯೇ ದರ್ಶನ್ ಜೊತೆಗೆ ತರುಣ್ ಸುಧೀರ್, ನಾಗೇಂದ್ರ ಅರಸ್, ವಿನೋದ್ ಪ್ರಭಾಕರ್, ಸೃಜನ್ ಲೋಕೇಶ್, ಗಿರಿ ದಿನೇಶ್ ಹಾಗೂ ಧರ್ಮ ಕೀರ್ತಿರಾಜ್ ಈ ಚಿತ್ರದಲ್ಲಿ ನಾಯಕರು. ಜಾಹೀರಾತಿನಲ್ಲಿ ಇವರ ಜೊತೆಗೆ ಇವರ ಅಪ್ಪಂದಿರ ಫೋಟೋಗಳನ್ನು ಕೂಡಾ ಹಾಕಿದ್ದರಿಂದ ಒಂದು ರೀತಿಯ ಕುತೂಹಲ ಸೃಷ್ಟಿಯಾಗಿತ್ತು.



ದಿನಕರ್

ಇಷ್ಟು ಜನ ಕಲಾವಿದರಿಗೆ ಹೊಂದುವ ಯಾವ ಕಥಾವಸ್ತುವನ್ನು ದಿನಕರ್ ಹೆಣೆದಿದ್ದಾರೆ? ಎಲ್ಲರ ಪಾತ್ರಗಳಿಗೆ ಯಾವ ರೀತಿ ನ್ಯಾಯ ಒದಗಿಸಿದ್ದಾರೆ? ಎಂಬಿತ್ಯಾದಿ ಕುತೂಹಲಗಳು ಚಿತ್ರ ಆರಂಭವಾದ ಕೂಡಲೇ ಕರಗಿಹೋಗುತ್ತವೆ.

ಒಂದು ಸಾಮಾನ್ಯ ಕಥೆ ಕೈಗೆತ್ತಿಗೊಂಡಿರುವ ದಿನಕರ್ ಯಾವ ಪಾತ್ರಕ್ಕೂ ನ್ಯಾಯ ಒದಗಿಸಲಾರದೇ ಇಡೀ ಸಿನಿಮಾವನ್ನು ಬೋರು ಹೊಡೆಸುತ್ತಾರೆ. ಅದರಲ್ಲೂ ಇಬ್ಬರು ನಾಯಕಿಯರಿಗಂತೂ ಹಲ್ಲು ಕಿಸಿಯುವುದು ಬಿಟ್ಟರೆ ಬೇರೆ ಕೆಲಸವೇ ಇಲ್ಲ. ಇಡೀ ಚಿತ್ರದಲ್ಲಿ ದರ್ಶನ್ ಪಾತ್ರಕ್ಕೆ ಮಾತ್ರ ನ್ಯಾಯ ಸಿಕ್ಕಿದೆ. ಆ ಮಟ್ಟಿಗೆ ದರ್ಶನ್ ತನ್ನ ಕೆಲಸವನ್ನು ನೀಟಾಗಿ ನಿರ್ವಹಿಸಿದ್ದಾರೆ.

ಮೈಸೂರು ಅರಮನೆಯ ಚಿನ್ನದ ಅಂಬಾರಿಯನ್ನು ಕದಿಯಲು ದರ್ಶನ್‌ಗೆ ಯಾರೋ ಸುಪಾರಿ ಕೊಟ್ಟಿರುತ್ತಾರೆ. ಜೈಲಿನಲ್ಲಿ ತನ್ನೊಂದಿಗಿದ್ದ ನಾಲ್ಕು ಜನ ಕೈದಿಗಳು ಮತ್ತು ತನ್ನ ಗೆಳೆಯನ ಸಹಾಯದಿಂದ ಈತ ಅಂಬಾರಿಯನ್ನು ಕದಿಯುವುದರಲ್ಲಿ ಯಶಸ್ಸು ಕಾಣುತ್ತಾನೆ.... ಹೀಗೆ ಅರ್ಥ, ತರ್ಕಗಳಿಲ್ಲದೆ, ಇನ್ನೊಂದೆಡೆ ಪ್ರೇಕ್ಷಕರನ್ನು ರಂಜಿಸಲೂ ಸಾಧ್ಯವಾಗದೆ, ಮತ್ತೊಂದೆಡೆ ಯಾವುದೇ ಥ್ರಿಲ್ ಮತ್ತು ಸಸ್ಪೆನ್ಸುಗಳೂ ಇಲ್ಲದೆ ಕಥೆ ಗೊಂದಲಮಯವಾಗಿ ಸಾಗುತ್ತದೆ. ತನ್ನ ಚೊಚ್ಚಲ ಚಿತ್ರದಲ್ಲಿ ತೋರಿಸಿದ ಲವಲವಿಕೆಯ ನಿರೂಪಣೆ ಮತ್ತು ಬಿಗಿಯಾದ ಚಿತ್ರಕತೆಯನ್ನು ದಿನಕರ್ ಇಲ್ಲಿ ಗಾಳಿಗೆ ತೂರಿಬಿಟ್ಟಂತೆ ಕಾಣುತ್ತದೆ. ಅತ್ತ ಹಾಲಿವುಡ್ ಶೈಲಿಗೂ ಸೇರದ, ಇತ್ತ ಬಾಲಿವುಡ್ಡಿನ ಮ್ಯಾಜಿಕ್ಕೂ ಇಲ್ಲದ, ಕೊನೆಗೆ ಸ್ಯಾಂಡಲ್‌ವುಡ್ ಸ್ಟಾಂಡರ್ಡ್‌ಗೂ 'ನವಗ್ರಹ' ನಿಲುಕದ್ದು ಬೇಸರ ತರಿಸುವ ಸಂಗತಿ.

■ ಶೆಣೈ



ದೀನ ಚಿತ್ರದಲ್ಲಿ ದೀಪಕ್, ಸ್ಮಿತಾ

ಬ್ಯಾಡ್ ಬಾಯ್ ಬಾಲ!



ಸಮಾಜ ಕಂಟಕನಾದ ಪುಡಿ ರೌಡಿಯೊಬ್ಬ ತನ್ನ ವೃತ್ತಿಯಲ್ಲಿ ನೈಪುಣ್ಯತೆಯ ಪಡೆದು ಮುಂದುವರೆಯಬೇಕಾದರೆ ಏನೆಲ್ಲಾ ಮಾಡಬೇಕು ಅಂತ ಸ ಮಾಡಬೇಕಾದರೆ 'ಸ್ಲಂ ಬಾಲ' ಅನ್ನೋ ರೌಡಿ ಡಾಕ್ಯುಮೆಂಟರಿಯನ್ನೊ ನೋಡಬಹುದು. ಯಾಕೆಂದರೆ ಈ ಡಾಕ್ಯುಮೆಂಟರಿಯಿಂದ ರೌಡಿಸಂ ಎ ಪ್ರೊಫೆಷನ್ನಿನ ಸಾಧಕ-ಬಾಧಕಗಳನ್ನು ತಿಳಿಯಬಹುದಲ್ಲದೆ, ಕೊಲೆ ಮಾಡಿಯ ಕಾನೂನಿಗೆ ಮಂಕು ಬೂದಿ ಎರಚುವ ಬಗ್ಗೆ, ಹಡಬೆ ಹಣ ಸಂಪಾದಿಸು ದಾರಿಯ ಬಗ್ಗೆಯೂ ಟ್ರೈನಿಂಗ್ ಪಡೆಯಬಹುದಾಗಿದೆ. ಜೊತೆಗೆ ಇವ ರೌಡಿಗಳ ವೃತ್ತಿಯಾದ ರಿಯಲ್ ಎಸ್ಟೇಟ್ ದಂಧೆ ಬಗ್ಗೆಯೂ ಲೆಸೆನ್ಸ್‌ಗಳ

2005ರಲ್ಲಿ ನಡೆದ ವಿನಾಯಕ ಬಾಲ ಮತ್ತು ಕುಖ್ಯಾತ ರೌ ರಜಾಕ್‌ನ ಜೀವನನ್ನಾಧರಿಸಿದ ಕಥೆಯಂತೆ 'ಸ್ಲಂ ಬಾಲ'. ಒಬ್ಬ ಪೊಲೀ ಮತ್ತು ರಾಜಕಾರಣಿ ಸೇರಿ ಮತ್ತೊಬ್ಬ ರೌಡಿಯನ್ನು ಮರ್ಡ ಮಾಡುವ ಉದ್ದೇಶದಿಂದ ಬಾಲನನ್ನು ಬೆಳೆಸುತ್ತಾರೆ. ಪೊಲೀ ಮತ್ತು ರಾಜಕಾರಣಿಯ ಅಣತಿಯಂತೆ ಕೇಬಲ್ ಮಂಜನ ಜೀ ತೆಗೆಯುವ ಬಾಲನ ನಸೀಬೇ ಬದಲಾಗುತ್ತೆ, ಕೈತುಂಬ ಕಾಸು, ಕಾರು, ಕುತ್ತಿ ತುಂಬ ಚೈನು, ಕೈಬೆರಳುಗಳಿಗೆ ಒಂದಷ್ಟು ಉಂಗುರ, ಬ್ರೇಸ್‌ಲೆಟ್ಟು ಕೊಲೆಯಂತಾ ಘನಕಾರ್ಯ ಮಾಡಿದ ಬಾಲನಿಗೆ ದೊರೆಯುವ ಫಾಯಿದಾ

ಹೀಗೆ ಪುಡಿಗಾಸಿನ ಆಸೆಗೆಬಿದ್ದು ಕೊಲೆಮಾಡುವ ಬಾಲಾ ತನಗೆ ಕಾಸು ಕೊಟ್ಟು ಕೊಲೆ ಮಾಡಿಸಿ 'ಖ್ಯಾತಿ' ತಂದುಕೊಟ್ಟ ರಾಜಕಾರಣಿ ತನ್ನ ಸ್ಲಂ ಅನ್ನೇ ನುಂಗಲು ಯತ್ನಿಸಿದಾಗ, ಆತನ ವಿರುದ್ಧ ತಿರುಗಿ ಬಿದ್ದು, 'ತುಕ್ಕುಹಿಡಿದ ಮಚ್ಚಿನಲ್ಲಿ ಕಚಾಕಚಾ ಎಂದು ಕೊಚ್ಚುವ' ಮಾತುಗಳನ್ನಾಡುತ್ತಾನೆ. ಬಾಲನ ಈ ಮಾತುಗಳನ್ನು ಅವನ ಹುಡುಗನೇ ಮೊಬೈಲ್ ಮೂಲಕ ರಾಜಕಾರಣಿ ಪ್ರಸಾದ್ ನಾಯಕನ ಕಿವಿಗೆ ಹಾಕಿ ಆಟಾಟ ಕೆಲಸ ಮಾಡುತ್ತಾನೆ.



ಸುಮನಾ ಕಿತ್ತೂರು

ಅಲ್ಲಿಗೆ ಬಾಲನ ಬದುಕು ಮುಗಿಯುತ್ತದೆ. ಇದ್ದಕ್ಕಿದ್ದ ಹಾಗೆ ಶುರುವಾದ ಆತನ ಪ್ರೀತಿಯೂ ಸಾಯುತ್ತದೆ.

ರಾಜಕಾರಣಿ ಮತ್ತು ಪೊಲೀಸರ ರಕ್ತದಾಹ ವಾಸ್ತವವೇ ಆದರೂ, ಅದ ನಡುವೆ ಸಮಾಜ ವಿರೋಧಿ ಚಟುವಟಿಕೆ ನಡೆಸುವ ಕ್ರಿಮಿಯೊಬ್ಬ ಹೀರೋನಂ ಬಿಂಬಿಸಲ್ಪಡುತ್ತಾನೆ. ರೌಡಿಯಾದರೂ ಸಂತನಂತೆ ವರ್ಣಿಸಿ ಸಿಂಪತಿ ಗಿಟ್ಟಿಸಿಕೊಳ್ಳುತ್ತಾ ಯಾಕೆಂದರೆ ಇದು ರೌಡಿಗಳಿಂದ, ರೌಡಿಗಳಿಗಾಗಿ, ...ಗಳೇ ಮಾಡಿರುವ ಚಿತ್ರ

ಇನ್ನು ತಾಂತ್ರಿಕತೆಯ ಬಗ್ಗೆ ಹೇಳುವುದಾದರೆ ಎ.ಸಿ. ಮಹೇಂದ್ರನ್‌ರ ಕ್ಯಾಮೆರ ಕೆಲಸ ಪರವಾಗಿಲ್ಲ, ಅರ್ಜುನ್ ಸಂಗೀತ ಸುಮಾರಾಗಿದೆ. ಕಥೆಗಾರನ ಮನಸ್ಸಿನಲ್ಲಿರು 'ಇಂಟಲಿಜೆಂಟ್ ಕ್ರಿಮಿನಲ್' ಬುದ್ಧಿಯನ್ನು ಸೂಕ್ಷ್ಮವಾಗಿ ಮತ್ತು ನಿಖರವಾಗಿ ಗುರುತಿಸಬಹುದು. ನಿರ್ದೇಶಕಿ ಡಿ. ಸುಮನಾ ಕಿತ್ತೂರು ಮೊದಲ ಪ್ರಯತ್ನದಲ್ಲಿ ಚಿತ್ರವನ್ನು ಚೂಯಿಂಗಮ್‌ನಂತೆ ಎಳೆದಿದ್ದರೂ ರೌಡಿಯೊಬ್ಬನ ಬಯೋಗ್ರಫಿಯನ್ನು ಡಾಕ್ಯುಮೆಂಟರಿ ಶೈಲಿಯಲ್ಲಿ ರೂಪಿಸುವಲ್ಲಿ ಸಫಲರಾಗಿದ್ದಾರೆ.

■

ಕಾಣೆಯಾ ಕನಸುಗಾರ


ಕ್ರೇಜಿ ಸ್ಟಾರ್ ರವಿಚಂದ್ರನ್ ಸುದ್ದಿ ಮಾಡಿ ವರ್ಷಗಳೇ ಸಂದುಹೋಗಿವೆ. ಆದರೆ ಗಾಂಧಿನಗರದಲ್ಲಿ ಈಗ ಸುದ್ದಿ ಮಾಡುತ್ತಿರುವವರೆಲ ರವಿ ಶಿಷ್ಯಂದಿರು ಎಂದರೆ ನಿಮಗೆ ಆಶ್ಚರ್ಯವಾಗಬಹುದು.

ಉದಾಹರಣೆಗೆ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ದಾಖಲೆಗಳ ಸುರಿಮಳೆಯನ್ನು ಮಾಡಿದ 'ಮುಂಗಾರು ಮಳೆ'ಯ ನಿರ್ದೇಶ ಯೋಗರಾಜ್ ಭಟ್ ರವಿ ಶಿಷ್ಯ. ಅಷ್ಟೇ ಯಾಕೆ, ಮೊನ್ನೆ ತಾನೆ ಬಿಡುಗಡೆಯಾದ 'ಸೈಕೋ' ಚಿತ್ರದ ನಿರ್ದೇಶಕ ದೇವದತ್ತ ಕೂಡಾ ರವಿಯ ರೈಟ್ ಹ್ಯಾಂಡ್ ಆಗಿದ್ದವರು. ಇನ್ನೊಂದೆಡೆ ರವಿ ಬಳಿ ಕೆಲಸ ಕಲಿತ ಬಿ. ಸುರೇಶ್ ಇಂದು ಕಿರುತೆರೆ ಮತ್ತು ಬೆಳ್ಳಿತೆರೆಯಲ್ಲಿ ದೊಡ್ಡ ಹೆಸರು ಮಾಡಿದ್ದಾರೆ. ಹಾಗೆಯೇ ಇದೀಗ 'ಕೃಷ್ಣ ನೀ ಲೇಟಾಗಿ ಬಾರೋ' ಚಿತ್ರದ ಮೂಲಕ ನಿರ್ದೇಶನಕ್ಕೆ ಕಾಲಿಟ್ಟಿರುವ ಮೋಹನ್ ಕೂಡ ರವಿಚಂದ್ರನ್ ಪಟ್ಟದ ಶಿಷ್ಯರಲ್ಲಿ ಒಬ್ಬರು.

ಇನ್ನೊಂದೆಡೆ ಪ್ರಪಂಚದ ಏಳು ಹೊಸ ಅದ್ಭುತಗಳ ನಡುವೆ ಚಿತ್ರಕತೆ ಹೆಣೆದು ಆಕಾಶಕ್ಕೆ ಏಣಿ ಹಾಕಲು ನಿರ್ದೇಶಕ ರಘುರಾಮ್‌ಗೆ ಸಾಧ್ಯವಾಗಿದ್ದು ರವಿಚಂದ್ರನ್ ಸಹವಾಸದಿಂದ ಮಾತ್ರ. ಯಾವಾಗಲೂ ದೊಡ್ಡ ದೊಡ್ಡ ಕನಸುಗಳನ್ನು ಕಾಣುವ ರವಿಚಂದ್ರನ್ ಸ್ಕೂಲ್‌ನಲ್ಲೇ ಈ ರಘುರಾಮ್ ಪಾಠವನ್ನು ಕಲಿತದ್ದು ಎಂಬುದು ವಿಶೇಷ. ಮತ್ತೊಂದೆಡೆ ಕುತೂಹಲ ಹುಟ್ಟಿಸುವ ಜಾಹೀರಾತುಗಳಿಂದ ಗಮನ ಸೆಳೆದಿರುವ ಚಿತ್ರ 'ಅಂಬಾರಿ'ಯ ನಿರ್ದೇಶಕ ಎ.ಪಿ. ಅರ್ಜುನ್ ಕೂಡಾ ರವಿ ಶಾಲೆಯ ವಿದ್ಯಾರ್ಥಿ.

ಒಂದು ಕಾಲದಲ್ಲಿ ಕಾಶಿನಾಥ್ ಸ್ಕೂಲ್ ಮಾತ್ರ ಈ ಥರದ ವಿದ್ಯಾರ್ಥಿಗಳನ್ನು ಸೃಷ್ಟಿಸಿತ್ತು. ಆದರೆ ಈಗ ರವಿಚಂದ್ರನ್ ಮೌನವಾಗಿದ್ದರೂ ಚಿತ್ರರಂಗದಲ್ಲಿ ಅವರ ಶಿಷ್ಯಂದಿರು ಸಾಕಷ್ಟು ಕಲರವಗಳನ್ನು ಹುಟ್ಟುಹಾಕುತ್ತಿದ್ದಾರೆ. ರವಿಚಂದ್ರನ್ ಸ್ಕೂಲಿನಲ್ಲಿ ಕಲಿತವರು ತಮ್ಮ ಗುರುವಿನಂತೆ ದೊಡ್ಡ ಕನಸು ಕಾಣುತ್ತಾ, ಆಕಾಶಕ್ಕೆ ಏಣಿ ಹಾಕುತ್ತಾ, ಶೃಂಗಾರವನ್ನು ಆರಾಧಿಸುತ್ತಾ ಕನ್ನಡ ಚಿತ್ರರಂಗಕ್ಕೆ ಹೊಸ ಉತ್ಸಾಹ ತುಂಬುತ್ತಿದ್ದಾರೆ.

ಕನಸುಗಾರ ರವಿ ಈಗಲಾದರೂ ಎಚ್ಚೆತ್ತುಕೊಳ್ಳದಿದ್ದರೆ ಶಿಷ್ಯರು ಗುರುವನ್ನು ಮೀರಿಸುವ ದಿನಗಳು ದೂರವಿಲ್ಲ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44